ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್, ೨೦೧೯ । ವಾರ್ಷಿಕ ವಿಶೇಷ ಸಂಚಿಕೆ



ಅದ್ವೈತದ ಹೆಜ್ಜೆ ಗುರುತುಗಳು:

ಬುದ್ಧನಿಂದ ಮಧ್ವರವರೆಗೆ

ಗಾಂಧಿ, ಮಾರ್ಕ್ಸ್ ಮತ್ತು ಪರಕೀಯತೆಯಿಂದ ಮುಕ್ತವಾದ ಬದುಕಿನ ಆದರ್ಶ

ಕುಮಾರವ್ಯಾಸನ ಕೋಳಿವಾಡಕ್ಕೊಂದು ಭೇಟಿ

ಬೆಲೆ
ರೂ.೨೫

ಪುಸ್ತಕ ಪ್ರಕಾಶನ
ನಂ. 91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು -570 009
ಫೋನ್: 0821-2545 774

ಪುಸ್ತಕ ಪ್ರಕಾಶನ
ಬುಕ್‌ಪೋಸ್ಟ್ ಸರ್ವಿಸ್, ಪಿ.ಬಿ.ನಂ. 58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ – 577 132
ಮೊಬೈಲ್/ವ್ಯಾಟ್ಸ್‌ಆ್ಯಪ್: +91 94482 03730

ಪುಸ್ತಕ ಬೆಲೆ ಪಟ್ಟಿ – ೨೦೧೯*

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಕಿರಗೂರಿನ ಗಯ್ಯಾಳಿಗಳು	...೯೦.೦೦
ಕರ್ವಾಲೊ	...೧೦೫.೦೦
ಚಿದಂಬರ ರಹಸ್ಯ	...೨೧೬.೦೦
ಸಹಜ ಕೃಷಿ	...೬೦.೦೦
ಪರಿಸರದ ಕತೆ	...೧೦೫.೦೦
ಮಿಸ್ಸಿಂಗ್ ಲಿಂಕ್	...೯೦.೦೦
ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್	...೧೧೪.೦೦
ಜುಗಾರಿ ಕ್ರಾಸ್	...೨೧೬.೦೦
ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು	...೮೭.೦೦
ಫ್ಲೈಯಿಂಗ್ ಸಾಸರ್(೧)	...೮೭.೦೦
ಫ್ಲೈಯಿಂಗ್ ಸಾಸರ್(೨)	...೮೭.೦೦
ಕಾಡಿನ ಕತೆಗಳು(೧) – ಬೆಳ್ಳಂದೂರಿನ ನರಭಕ್ಷಕ	...೭೫.೦೦
ಕಾಡಿನ ಕತೆಗಳು(೨) – ಪೆದ್ದಚೆರುವಿನ ರಾಕ್ಷಸ	...೭೫.೦೦
ಕಾಡಿನ ಕತೆಗಳು(೩) – ಜಾಲಹಳ್ಳಿಯ ಕುರ್ಕ	...೭೫.೦೦
ಕಾಡಿನ ಕತೆಗಳು(೪) – ಮುನಿಶಾಮಿ ಮತ್ತು ಮಾಗಡಿ ಚಿರತೆ	...೭೫.೦೦
ರುದ್ರಪ್ರಯಾಗದ ಭಯಾನಕ ನರಭಕ್ಷಕ	...೧೦೫.೦೦
ಕನ್ನಡನಾಡಿನ ಹಕ್ಕಿಗಳು(೧)–ಮಿಂಚುಳ್ಳಿ	...೧೦೩.೦೦
ಕನ್ನಡನಾಡಿನ ಹಕ್ಕಿಗಳು(೨)– ಹೆಜ್ಜೆ ಮೂಡದ ಹಾದಿ	...೯೬.೦೦
ಪಕ್ಕಿ – ಪುಕ್ಕ	...೪೧೧.೦೦
ಅಣ್ಣನ ನೆನಪುಗಳು	...೨೨೫.೦೦
ಹುಲಿಯೂರಿನ ಸರಹದ್ದು	...೧೦೫.೦೦
ಅಬಚೂರಿನ ಪೋಸ್ಟಾಫೀಸು	...೯೦.೦೦
ಮಿಲನಿಯಮ್(೧) – ಹುಡುಕಾಟ	...೮೭.೦೦
ಮಿಲನಿಯಮ್(೨) – ಜೀವನ ಸಂಗ್ರಾಮ	...೮೭.೦೦
ಮಿಲನಿಯಮ್(೩) – ಪೆಸಿಫಿಕ್ ದ್ವೀಪಗಳು	...೮೭.೦೦
ಮಿಲನಿಯಮ್(೪) – ಚಂದ್ರನ ಚೂರು	...೮೭.೦೦
ಮಿಲನಿಯಮ್(೫) – ನೆರೆಹೊರೆಯ ಗೆಳೆಯರು	...೮೭.೦೦
ಮಿಲನಿಯಮ್(೬) – ಮಹಾಯುದ್ಧ(೧)	...೮೭.೦೦
ಮಿಲನಿಯಮ್(೭) – ಮಹಾಯುದ್ಧ(೨)	...೮೭.೦೦
ಮಿಲನಿಯಮ್(೮) – ಮಹಾಯುದ್ಧ(೩)	...೮೭.೦೦
ಮಿಲನಿಯಮ್(೯) – ದೇಶ ವಿದೇಶ(೧)	...೮೭.೦೦
ಮಿಲನಿಯಮ್(೧೦) – ದೇಶ ವಿದೇಶ(೨)	...೮೭.೦೦
ಮಿಲನಿಯಮ್(೧೧) – ದೇಶ ವಿದೇಶ(೩)	...೮೭.೦೦
ಮಿಲನಿಯಮ್(೧೨) – ದೇಶ ವಿದೇಶ(೪)	...೮೭.೦೦
ಮಿಲನಿಯಮ್(೧೩) – ವಿಸ್ಮಯ ವಿಶ್ವ(೧)	...೮೭.೦೦
ಮಿಲನಿಯಮ್(೧೪) – ಮಹಾ ಪಲಾಯನ	...೮೭.೦೦
ಮಿಲನಿಯಮ್(೧೫) – ವಿಸ್ಮಯ ವಿಶ್ವ(೨)	...೮೭.೦೦
ಮಿಲನಿಯಮ್(೧೬) – ಅಡ್ವೆಂಚರ್	...೮೭.೦೦
ಮಾಯಾಲೋಕ–೧	...೨೧೬.೦೦
ಪಾಕ ಕ್ರಾಂತಿ ಮತ್ತು ಇತರ ಕತೆಗಳು	...೮೭.೦೦
ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ	...೬೦.೦೦
ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು	...೬೦.೦೦
ವಿಮರ್ಶೆಯ ವಿಮರ್ಶೆ	...೧೮೩.೦೦
ಮಾಯೆಯ ಮುಖಗಳು(ಚಿತ್ರ–ಲೇಖನ)	...೬೯೦.೦೦
ಹೊಸ ವಿಚಾರಗಳು	...೪೮೦.೦೦
ಕಾಡು ಮತ್ತು ಕ್ರೌರ್ಯ	...೧೨೦.೦೦

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:

ವಿಸ್ಮಯ(೧), (೨), (೩) ಪ್ರತಿಯೊಂದು	...೮೭.೦೦
ಪ್ಯಾಪಿಲಾನ್(೧), (೨), (೩) ಪ್ರತಿಯೊಂದು	...೧೬೨.೦೦

ಶ್ರೀಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಡಾ. ವಿ.ವಿ.ಬೆಳವಾಡಿ:

ನೆಡೆಯುವ ಕಡ್ಡಿ ಹಾರುವ ಎಲೆ!	...೮೭.೦೦
ಶ್ರೀ ಪ್ರದೀಪ ಕೆಂಜಿಗೆ: ಬರ್ಮುಡಾ ಟ್ರ್ಯಾಂಗಲ್	...೮೭.೦೦
ಅದ್ಭುತ ಯಾನ	...೧೦೮.೦೦
ಹೆಬ್ಬಾವಿನೊಡನೆ ಹೋರಾಟ	...೧೨೦.೦೦

ಶ್ರೀ ಎಮ್.ಶಿವಕುಮಾರ್:

ಕಂಪ್ಯೂಟರ್ ಕಲಿಯಿರಿ	...೧೪೭.೦೦
ಗಣಿಯಾದ ವಿಕಾಸದ ಹಾದಿಯಲ್ಲಿ	...೬೬.೦೦

ವಿದ್ವಾನ್ ಶ್ರೀ ಕೊಳಂಬೆ ಪುಟ್ಟಣ್ಣ ಗೌಡರು:

ಅಚ್ಚಗನ್ನಡ ನುಡಿಕೋಶ	...೩೬೦.೦೦
ಶ್ರೀ ನರೇಂದ್ರ ರೈ ದೇರ್ಲ: ಸಾವಯವ ಕೃಷಿ	...೬೦.೦೦
ತೇಜಸ್ವಿ ಪತ್ರಗಳು	...೪೫೦.೦೦

ಶ್ರೀ ಕೃಪಾಕರ – ಸೇನಾನಿ:

ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು	...೧೦೮.೦೦
ಕಿನ್ನರಿಯಾ ಜಾಡಿನಲ್ಲಿ	...೧೬೨.೦೦

ಡಾ.ಎಸ್.ಎಂ.ವೃಷಭೇಂದ್ರಸ್ವಾಮಿ:

ತರಂಗಿಣಿಗಳಲ್ಲಿ ಕುವೆಂಪು	...೧೯೮.೦೦
ಶ್ರೀ ದೇವನೂರು ಮಹಾದೇವ: ಕುಸುಮಬಾಲೆ	...೯೦.೦೦
ದ್ಯಾವನೂರು ಹಾಗೂ ಒಡಲಾಳ	...೯೬.೦೦

ಶ್ರೀಮತಿ ತಾರಿಣಿ ಚಿದಾನಂದ:



ಮಗಳು ಕಂಡ ಕುವೆಂಪು	...೩೬೦.೦೦


ಶ್ರೀಮತಿ ಪದ್ಮಾ ಶ್ರೀರಾಮ:


ಗಿಡಗಂಟೆಯಾ ಕೊರಳು	...೭೮.೦೦

ಡಾ. ಕೆ.ಚಿದಾನಂದ ಗೌಡ:

ಬದುಕು.. ಬೆಳಕು... ಚುಟುಕು....! ಭಾಗ೧	...೮೯.೦೦
ಬದುಕು.. ಬೆಳಕು... ಚುಟುಕು....! ಭಾಗ೨	...೯೦.೦೦
ಶ್ರೀಮತಿ ರಾಜೇಶ್ವರಿ ತೇಜಸ್ವಿ: ನನ್ನ ತೇಜಸ್ವಿ	...೩೬೯.೦೦












*ಹೊಸ ಆವೃತಿ (Edition)
ಬಿಡುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರುವುದು.

ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೭

ಚಂದಾ ರೂ. ೩೦೦/- (೨೦೧೯ರ ಆಗಸ್ಟ್‌ನಿಂದ ಸೆಪ್ಟಂಬರ್, ೨೦೨೦ರವರೆಗೆ) ಬೆಲೆ : ವಿಶೇಷಾಂಕ: ರೂ. ೭೫/- ಪುಟ: ೫೬

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,



'ಹೊಸ ಮನುಷ್ಯ' ಎಂಟನೇ ವರ್ಷದ ಅರ್ಧ ದಾರಿ ಸವೆಸಿದ್ದು ಈ ಮೂಲಕ ತನ್ನ ಏಳನೇ ವಾರ್ಷಿಕ ವಿಶೇಷಾಂಕವನ್ನು ನಿಮ್ಮ ಮುಂದಿಡುತ್ತಿದೆ. ಒಂದು ವರ್ಷದ ಹಿಂದೆ ಅನಿವಾರ್ಯ ಕಾರಣಗಳಿಂದಾಗಿ ಪತ್ರಿಕೆ ಆರು ತಿಂಗಳ ಕಾಲ ಸ್ಥಗಿತಗೊಂಡಿದ್ದುದೇ ಈ ವ್ಯತ್ಯಾಸಕ್ಕೆ ಕಾರಣ. ಇರಲಿ. ಈ ವಿಶೇಷಾಂಕವನ್ನೂ ನಾವು ಈ ಹಿಂದಿನ ವಿಶೇಷಾಂಕಗಳಂತೆಯೇ ಶ್ರದ್ಧೆಯಿಂದ ಸಾಕಷ್ಟು ಸಮೃದ್ಧವಾಗಿ ಸಿದ್ಧಗೊಳಿಸಿದ್ದೇವೆ. ಹೇಳಿ ಕೇಳಿ ನಮ್ಮದು ಘೋಷಿತ ಸಮಾಜವಾದಿ ಪತ್ರಿಕೆಯಾದ್ದರಿಂದ ಸಹಜವಾಗಿಯೇ ಈ ರಾಜಕೀಯ ದೃಷ್ಟಿಕೋನದ ಸುತ್ತಮುತ್ತಲೇ ವಿಶೇಷಾಂಕದ ಬರಹಗಳು ಮೂಡಿವೆ. ಅಂದ ಮಾತ್ರಕ್ಕೆ ಇವು ಯಾವುದೇ ಕಟ್ಟುನಿಟ್ಟಾದ ಒಂದು ರಾಜಕೀಯ ಸೂತ್ರಕ್ಕೆ ಕಟ್ಟಿಬಿದ್ದವಲ್ಲ. ಈ ಮೊದಲು ಹಲವು ಬಾರಿ ವಿವರಿಸಿದಂತೆ ಮತ್ತು ಪತ್ರಿಕೆಯ ಈವರೆಗಿನ ಸಂಚಿಕೆಗಳ ಪುಟಗಳೂ ಸೂಚಿಸುವಂತೆ ನಮ್ಮ ಪತ್ರಿಕೆಯ ಸಮಾಜವಾದ ಯಾವುದೇ ಸಿದ್ಧ ಮಾದರಿಗೆ ಬದ್ಧವಾದುದಲ್ಲ. ನಮ್ಮ ಪ್ರಕಾರ ಅದು ಕಾಲದ ಅಗತ್ಯಗಳು ಮತ್ತು ಸವಾಲುಗಳಿಗೆ ಸ್ಪಂದಿಸುತ್ತಾ ಬೆಳೆಯುವ ತತ್ವ.

ಮೊನ್ನೆ ನಮ್ಮ ಪತ್ರಿಕೆಯನ್ನು ಅದರ ಆರಂಭದಿಂದಲೂ ಓದುತ್ತಾ ಬಂದಿರುವ ನನ್ನ ಹಿರಿಯ ಸಮಾಜವಾದಿ ಗೆಳೆಯರೋರ್ವರು ಪತ್ರಿಕೆಯ ಬಗ್ಗೆ ತಮ್ಮದೊಂದು ಅತೃಪ್ತಿಯನ್ನು ಹೇಳುತ್ತಾ, 'ಇದರಲ್ಲಿ ಸಮಾಜವಾದಿ ಹೊಳಹು ಕಾಣುತ್ತಿಲ್ಲ' ಎಂದರು. ಅದಕ್ಕೆ ನಾನು ಹಾಗೆಂದರೇನು ಎಂದು ಕೇಳಿದೆ. ಅವರ ಪ್ರಕಾರ ಸಮಾಜವಾದಿ ಹೊಳಹು ಎಂದರೆ ಜೆಪಿ-ಲೋಹಿಯಾ ಇತ್ಯಾದಿಗಳ ವಿಚಾರಗಳು. ನಾನು ಹೇಳಿದೆ, ಅವನ್ನೇ ನಾವು ಅದೇ ಭಾಷೆಯಲ್ಲಿ ಮತ್ತೆ ಮತ್ತೆ ಹೇಳಿದರೆ ಅದು ವಿಚಾರ ಪ್ರಚಾರವಾಗುತ್ತದೆಯೇ ಹೊರತು ವಿಚಾರ ಪ್ರಚೋದನೆ ಆಗುವುದಿಲ್ಲ. ಜೊತೆಗೆ ಪತ್ರಿಕೆ ಮುಖವಾಣಿಯಾಗಬಲ್ಲ ಯಾವುದೇ ಸಮಾಜವಾದಿ ಪಕ್ಷವೆಂಬುದು ಇಲ್ಲ. ಹಾಗಾಗಿ ಸಮಾಜವಾದ ಎಂಬುದು ಅದರಲ್ಲಿ ಇನ್ನೂ ನಂಬಿಕೆ ಇಟ್ಟವರಿಗೆ ಒಂದು ಹಿನ್ನೋಟದ, ವಿಮರ್ಶೆಯ ಮತ್ತು ಆತ್ಮಾವಲೋಕನದ ವಿಷಯವಾಗಬೇಕು. ಅದು ಸಾಧ್ಯವಾಗುವುದು ಅದು ತನ್ನೆಲ್ಲ ಕಾಲ-ದೇಶಗಳ ಮಿತಿಗಳನ್ನು ಮುರಿದುಕೊಂಡು ಹೊಸ ಚಿಗುರುಗಳಾಗಿ ಬೆಳೆಯುವ ತುಡಿತ ತೋರಿದಾಗ ಮಾತ್ರ. ಆ ತುಡಿತ ಕೇವಲ ರಾಜಕೀಯ ಪರಿಭಾಷೆಯಲ್ಲಿ ಮಾತ್ರ ವ್ಯಕ್ತವಾಗದೆ, ಸಾಹಿತ್ಯ-ಸಂಸ್ಕೃತಿ-ಕಲೆ ಇತ್ಯಾದಿ ವಲಯಗಳಲ್ಲೂ ವಿನ್ಯಾಸಗೊಳ್ಳಬೇಕು. ಹಾಗೆ ನೋಡಿದರೆ ಲೋಹಿಯಾ ಎರಕದ ಸಮಾಜವಾದ ಒಂದು ಕಾಲದಲ್ಲಿ ಜನರ ಪ್ರೀತಿಗೆ ಪಾತ್ರವಾಗಿದ್ದುದು ಆ ತನ್ನ ಆವ್ಯತತೆಯ ಕಾರಣದಿಂದಲೇ.. ಅದೇ ದಾರಿಯಲ್ಲಿ ನಡೆಯುವ ಪ್ರಯತ್ನ ನಮ್ಮದು.

ಮನಮೋಹನ ಸಿಂಗ್-ಮೋದಿಯವರ ಸಮಾಜವಾದ!

ಸಮಾಜವಾದಕ್ಕಿದು ಕಷ್ಟದ ಕಾಲ. ಆ ಕಷ್ಟದ ಮೂಲ ಅದರ ಹುಟ್ಟಿನಲ್ಲೇ ಇತ್ತು. ಅದೇಂದರೆ ಅದು ತನ್ನ ಆರಂಭದ ಅವಸ್ಥೆಯಲ್ಲೇ, ವಿಶೇಷವಾಗಿ ಭಾರತದಲ್ಲಿ, ವಿವಿಧ ಆವೃತ್ತಿಗಳಾಗಿ ಟಿಸಿಲೊಡೆಯಿತು. ಇದನ್ನೇ ಸ್ಥೂಲವಾಗಿ, ಸಮಾಜವಾದದ ಚರಿತ್ರೆಕಾರರು ಸಮಾಜವಾದ ಎಂದರೆ 'ಗಾಂಧಿ ಟೋಪಿ ಇದ್ದಂತೆ, ಅದು ಅದನ್ನು ಹಾಕಿಕೊಂಡವರ ತಲೆಗಳ ಆಕಾರ ಪಡೆಯುವುದು' ಎಂದದ್ದು. ಸಮಾಜವಾದ ಕುರಿತ ಇಂತಹ ಸ್ಥೂಲ ಕಲ್ಪನೆಯ ಭಾಗವಾಗಿಯೇ ನಮ್ಮ ಗೆಳೆಯರು, ಜಗತ್ತಿನ ಮೊದಲ ಸಮಾಜವಾದಿ ಎಂದು, ಕೆಲವರು ಬಸವಣ್ಣನವರನ್ನೂ, ಇನ್ನು ಕೆಲವರು ಬುದ್ಧನನ್ನೂ ಗುರುತಿಸುತ್ತಾರೆ. ಇದು ಸಮಾಜವಾದದ ಜನಪ್ರಿಯತೆಯನ್ನು ಹೇಗೋ ಅದರ ಸ್ಥೂಲತೆಯನ್ನೂ, ಆ ಮೂಲಕ ಅದರ ದೌರ್ಬಲ್ಯವನ್ನೂ ಸೂಚಿಸುತ್ತದೆ. ಭಾರತದಲ್ಲಿ ಸಮಾಜವಾದವೆಂಬುದು ಒಂದು ಘನವಾದ ರಾಜಕೀಯ ತತ್ವವಾಗಿ ಮತ್ತು ವಿಶ್ವಾಸಾರ್ಹ ರಾಜಕಾರಣವಾಗಿ ಬೆಳೆಯದೆ ಹರಿದು ಹಂಚಿಹೋಗಿ ದಿಗಂತದಂಚಿಗೆ ಸರಿಯಲು ಕಾರಣವಾಗಿರುವುದು. ಆದರೆ ಅದು ನಿರ್ನಾಮವಾಗಿಲ್ಲ ಎಂಬುದೂ ಇಲ್ಲಿ ಗಮನಾರ್ಹ. ಹಾಗಾಗಿಯೇ ಇಂದು "ಮುಕ್ತ' ಮಾರುಕಟ್ಟೆ ಮತ್ತು ಆರ್ಥಿಕ 'ಸುಧಾರಣೆ'ಗಳ ಪ್ರತಿಪಾದಕರೆನಿಸಿದ ಮನಮೋಹನ ಸಿಂಗ್‌ರಾಗಲೀ ಅಥವಾ ಹಾಲಿ ಪ್ರಧಾನಿ ಮೋದಿಯವರಾಗಲೀ ತಮ್ಮ ಬಲಪಂಥೀಯ ರಾಜಕಾರಣದ ಜನವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಅವಲಂಬಿಸಿರುವುದು ಸಮಾಜವಾದದ ಕೇಂದ್ರ ಆಶಯವನ್ನೇ. ಮನಮೋಹನ ಸಿಂಗ್ ಅವರು ಹೇಳುತ್ತಿದ್ದ 'ಆವೃತ(Inclusive) ಅಭಿವೃದ್ಧಿ'ಯ ಮಾತಾಗಲೀ ಅಥವಾ ಈಗ ಮೋದಿಯವರು ಮಾಡುತ್ತಿರುವ; 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್' ಎಂಬ ಘೋಷಣೆಯಾಗಲೀ, ಅವುಗಳ ಸ್ಫೂರ್ತಿ ಮೂಲ ಇದೇ. ಮನಮೋಹನ ಸಿಂಗ್ ಅವರ ಬಹು ಮಹತ್ವಾಕಾಂಕ್ಷೆಯ ಮಹಾತ್ಮ ಗಾಂಧಿ ಗ್ರಾಮೀಣ ರೋಜ್‌ಗಾರ್ ಯೋಜನಾ ಅಥವಾ ಮೋದಿಯವರ ಉಜ್ವಲಾ, ಜನಧನ್, ಪ್ರಧಾನಮಂತ್ರಿ ಆವಾಸ್ ಯೋಜನಾ, ಮೇಕ್ ಇನ್ ಇಂಡಿಯಾ ಇತ್ಯಾದಿಗಳೆಲ್ಲವೂ ಅವುಗಳ ಉದ್ದೇಶಗಳ ಮಟ್ಟಿಗೆ ಸಮಾಜವಾದಿ ಕಾರ್ಯಕ್ರಮಗಳೇ.

ಸಮಾಜವಾದಕ್ಕೆ ಲೋಹಿಯಾ ನೀಡಿದ ಗಾಂಧಿ ದೀಕ್ಷೆ

ಆದರೆ ಮನಮೋಹನ ಸಿಂಗ್ ಅಥವಾ ಮೋದಿಯವರ ಈ ಸಮಾಜವಾದಿ ಕಾರ್ಯಕ್ರಮಗಳ ತೊಂದರೆ ಎಂದರೆ ಅವು ಕೇವಲ ಬಿಡಿ ಕಾರ್ಯಕ್ರಮಗಳಾಗಿದ್ದು ಸಮಾಜವಾದಿ ತತ್ವದ ಅವಿಭಾಜ್ಯ ಅಂಗವಾಗಿರದೆ, ಬಲಪಂಥೀಯ ರಾಜಕಾರಣದ ಸ್ಥಾಪಿತ ಹಿತಾಸಕ್ತಿಗಳ ರಕ್ಷಣೆಯ ಕಾರ್ಯಕ್ರಮಗಳನ್ನು ಮರೆಮಾಚುವ ಪರಿಕರಗಳಾಗಿರುವುದು. ಹೀಗೆ ಸಮಾಜವಾದವನ್ನು ಸಾಧನವಾಗಿ ಬಳಸುವುದು ಅದನ್ನು ಕೊಲ್ಲುವ ಪ್ರಯತ್ನವೇ ಸರಿ. ಏಕೆಂದರೆ ಸಮಾಜವಾದ ಎಂಬುದು ಒಂದು ಗುರಿ; ಕೇವಲ ಮಾರ್ಗವಲ್ಲ. ಅದೊಂದು ಗುರಿ-ಮಾರ್ಗಗಳ ಅಭಿನ್ನತೆಯ ರಾಜಕೀಯ ಚಿಂತನೆ. ಸಮಾಜವಾದಕ್ಕೆ ಈ ಚಾರಿತ್ರ್ಯವನ್ನು ಪ್ರದಾನ ಮಾಡಿದವರು, ಮೂಲತಃ ಪಶ್ಚಿಮದ ಚಿಂತನೆಯಾದ ಸಮಾಜವಾದಕ್ಕೆ ಮಹಾತ್ಮ ಗಾಂಧಿಯವರ ಚಿಂತನೆಯ ಸ್ಫೂರ್ತಿಯಲ್ಲಿ ಭಾರತೀಯ ರೂಪ ನೀಡಿದ ಲೋಹಿಯಾ ಅವರು.

ಪಶ್ಚಿಮದ ಚಿಂತನೆಯಾದ ಸಮಾಜವಾದಕ್ಕೆ ಲೋಹಿಯಾ ಅವರು ಗಾಂಧಿ ಚಿಂತನೆಯ ಸ್ಫೂರ್ತಿಯಲ್ಲಿ ಭಾರತೀಯ ರೂಪ ನೀಡಿದರು ಎಂದೆ. ಹಾಗೆ ನೋಡಿದರೆ ಗಾಂಧಿಯವರ ಚಿಂತನೆಯೂ ಸ್ಫೂರ್ತಿಗೊಂಡದ್ದು ಎಮರ್ಸನ್, ರಸ್ಕಿನ್, ಟಾಲ್‌ಸ್ಟಾಯ್ ಮುಂತಾದ ಪಶ್ಚಿಮದ ಚಿಂತಕರಿಂದಲೇ. ಆದರೆ ಆ ಚಿಂತಕರು ಸ್ಫೂರ್ತಿಗೊಂಡಿದ್ದುದು ಪೂರ್ವದ ಬುದ್ಧ ಮತ್ತು ವೇದೋಪನಿಷತ್ತುಗಳ ಚಿಂತನೆಗಳಿಂದಲೇ. ಹಾಗಾಗಿ ಈ ಪೂರ್ವ ಪಶ್ಚಿಮಗಳೆಂಬ ವಿಂಗಡಣೆ ಭಾವುಕ ನೆಲೆಯದಾಗಿರದೆ ವಾಸ್ತವಗಳ ಸಂದರ್ಭ ಸೂಚಕಗಳಾಗಿರಬೇಕು. ಹಾಗೆ ನೋಡಿದಾಗ ಲೋಹಿಯಾ ಅವರು ಸಮಾಜವಾದಕ್ಕೆ ಭಾರತೀಯ ರೂಪ ನೀಡಿದ್ದು, ಅದು ಯಾವುದರ ಉತ್ಪನ್ನವಾಗಿತ್ತೋ ಆ ಪಶ್ಚಿಮದ ಆಧುನಿಕತೆಗೆ ಭಾರತದ ಸತ್ವದೊಂದಿಗೆ ಸ್ಪಂದಿಸಿದ್ದು. ಇದಕ್ಕೆ ಅವರಿಗೆ ನೆರವಾದದ್ದು, ಪಶ್ಚಿಮದ ಆಧುನಿಕ ನಾಗರೀಕತೆ ಕುರಿತ ಗಾಂಧಿಯವರ ವಿಮರ್ಶೆ. ಈ ವಿಮರ್ಶೆಯ ಎಲ್ಲ ಆಯಾಮಗಳನ್ನೂ

ಲೋಹಿಯಾ ಒಪ್ಪಲಿಲ್ಲವಾದರೂ, ಆಧುನಿಕ ನಾಗರೀಕತೆ ಮನುಷ್ಯನ ಆತ್ಮಕ್ಕೆ ಮಾಡುವ ಆಘಾತದ ವಿಷಯದಲ್ಲಿ ಗಾಂಧಿ ಮಾಡಿದ ಮುಖ್ಯ ಟೀಕೆಯನ್ನು ತಮ್ಮ ಸಮಾಜವಾದದ ಕೇಂದ್ರ ಕಳಕಳಿಯನ್ನಾಗಿ ಮಾಡಿಕೊಂಡಿದ್ದರು ಎಂಬುದು ಇಲ್ಲಿ ಮುಖ್ಯ.

ಗಾಂಧಿ ಪಶ್ಚಿಮದ ನಾಗರೀಕತೆಯನ್ನು 'ಅಧರ್ಮ' ಎಂದು ಕರೆದರೆ, ಲೋಹಿಯಾ ಅದನ್ನು ಅದರ ಆಕ್ರಮಣಕಾರಿ ರೂಪದಲ್ಲಿ ಏಕಮುಖಿ ಮನಸ್ಸಿನ (monotonic mind) ಚಿಂತನಾ ಸಂಸ್ಕೃತಿ ಎಂದು ಗುರುತಿಸಿದರು. ಇದೇ ಅವರ ಸಮಾಜವಾದದ ವಿಶಿಷ್ಟತೆ, ಅನನ್ಯತೆ ಮತ್ತು ಸೃಜನಶೀಲತೆಗಳಿಗೂ ಕಾರಣವಾದದ್ದು. ಇದೇ ಅವರ ಮಧ್ಯಮ ತಂತ್ರಜ್ಞಾನ, ವಿಕೇಂದ್ರೀಕೃತ ಚತುಸ್ತಂಭ ರಾಷ್ಟ್ರ, ಸರಳ ಸಭ್ಯ ಜೀವನ ಮಟ್ಟ, ಜಾತಿ ತಾರತಮ್ಯ ಮುಕ್ತ ಮತ್ತು ಸಹನಶೀಲ ಉದಾರವಾದಿ ಹಿಂದೂ ಧರ್ಮ ಮತ್ತು ಭಾರತೀಯ ಭಾಷಾ ಶಿಕ್ಷಣ ಮತ್ತು ಆಡಳಿತಗಳ ಕಲ್ಪನೆಗೆ ಕಾರಣವಾದದ್ದು. ಇವೆಲ್ಲ ಒಂದೇ ಸ್ಫೂರ್ತಿ ಮೂಲದಿಂದ ಹೊರಹೊಮ್ಮಿದವಾದ್ದರಿಂದ ಒಂದನ್ನು ಬಿಟ್ಟು ಒಂದಿರಲಾರದು ಎಂಬುದೂ ಇಲ್ಲಿ ಮುಖ್ಯ. ಆದರೆ ಇವಾವ ಪರಿಕಲ್ಪನೆಗಳೂ ಇಲ್ಲದ ಮನಮೋಹನ್ ಸಿಂಗ್ ಅರ್ಥಾತ್ ಕಾಂಗ್ರೆಸ್ ರಾಜಕಾರಣವಾಗಲೀ, ಮೋದಿ ಅರ್ಥಾತ್ ಸಂಘ ಪರಿವಾರದ ರಾಜಕಾರಣವಾಗಲೀ ಸಹಜವಾಗಿ ಮುಖ ಮಾಡಿರುವುದು ಪಶ್ಚಿಮದತ್ತಲೇ. ಕಳೆದ ಶತಮಾನದ ಗಾಂಧಿ ಪ್ರಣೀತ ವಸಾಹತುಶಾಹಿ ವಿರೋಧಿ ರಾಜಕಾರಣವನ್ನು ವಿಫಲಗೊಳಿಸುವ, ಪಶ್ಚಿಮದ ನವವಸಾಹತುಶಾಹಿ ರಾಜಕಾರಣವೆನಿಸಿರುವ ಜಾಗತೀಕರಣದ ಅವಿಭಾಜ್ಯ ಅಂಗವಾಗುವತ್ತಲೇ.

ಗಾಂಧಿಯತ್ತ ಮರುನೋಟದ ಅಗತ್ಯ

ಈ ದೃಷ್ಟಿಯಿಂದ ಇಂದು ಗಾಂಧಿಯತ್ತ ನಾವು ಮರುನೋಟವನ್ನು ಬೀರಬೇಕಾಗಿದೆ. ವಿಶೇಷವಾಗಿ ಪಶ್ಚಿಮದ ಅಭಿವೃದ್ಧಿ ಮಾದರಿಯ ಸ್ಫೂರ್ತಿಯಲ್ಲಿ ನಡೆದ ದಾರಿಯಲ್ಲಿ ಎದುರಾಗುತ್ತಿರುವ ರಾಜಕೀಯ–ಸಾಮಾಜಿಕ–ಮತೀಯ ಹಿಂಸೆ ಮತ್ತು ಮಾನವಕುಲದ ಅಸ್ತಿತ್ವಕ್ಕೇ ಕುತ್ತು ತಂದಿರುವ ಪರಿಸರನಾಶದ ಆತಂಕಗಳ ಹಿನ್ನೆಲೆಯಲ್ಲಿ ಗಾಂಧಿಯವರನ್ನು ಕೇವಲ ಸತ್ಯ–ಅಹಿಂಸೆಗಳ ಭಜನಾಮೂರ್ತಿಯನ್ನಾಗಿ ನೋಡದೆ ಅಥವಾ ಉಡಾಫೆಯಲ್ಲಿ ಅವನ್ನು ಭೋಳೆಯೆಂದು ಟೀಕಿಸದೆ, ಆಧುನಿಕ ಜಗತ್ತು ಅಪರಿಮಿತ ಸುಖ ಸೌಲಭ್ಯಗಳ ದುರಾಸೆಯ ಸರಪಳಿಗೆ ಬಂಧಿತವಾಗಿ ಅಪರಿಮಿತ ಹಿಂಸೆ ಮತ್ತು ಸಂಪೂರ್ಣ ವಿನಾಶದ ದಾರಿ ಹಿಡಿದಿರುವುದನ್ನು ಬಹು ಮುಂಚೆಯೇ ಮುನ್ನೋಡಿದ ದ್ರಷ್ಟಾರನಾಗಿ ಅದಕ್ಕೆ ಒಂದು ಪರ್ಯಾಯ ದಾರಿಯನ್ನು ಸೂಚಿಸಿದ ನಮ್ಮ ಯುಗದ ಮಹಾ ದಾರ್ಶನಿಕನಂತೆ ಅರಿಯುವ ಪ್ರಯತ್ನ ಇಂದು ನಡೆಯಬೇಕಿದೆ. ಇದಕ್ಕೆ ಲೋಹಿಯಾ ಅಥವಾ ಅಂಬೇಡ್ಕರ್ ಚಿಂತನೆಗಳು ಸಾಲದಾಗುತ್ತವೆ ಎಂದು ನಾನು ನಂಬಿದ್ದೇನೆ. ಏಕೆಂದರೆ ಈ ಇಬ್ಬರೂ ಒಂದೊಂದು ಅಳತೆಯಲ್ಲಿ ಪಶ್ಚಿಮದ ಸಂಘರ್ಷಮಯ ಚರಿತ್ರಾ ಮೀಮಾಂಸೆಯ ವಿದ್ಯಾರ್ಥಿಗಳಾಗಿ ಹಕ್ಕು ಕೇಂದ್ರಿತ ಹೋರಾಟ ಮಾರ್ಗಗಳಲ್ಲಿ ನಂಬಿಕೆ ಇಟ್ಟವರಾಗಿದ್ದರು. ವಿಶೇಷವಾಗಿ ಅಂಬೇಡ್ಕರ್. ರಾಷ್ಟ್ರ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ನಮ್ಮ ಪತ್ರಿಕೆ ಈ ಇಡಿ ವರ್ಷ ಗಾಂಧಿಯವರ ಚಿಂತನೆ ಮತ್ತು ಹೋರಾಟಗಳ ಮೇಲೆ ಹೊಸ ಬೆಳಕು ಚೆಲ್ಲುವ ಲೇಖನಗಳನ್ನು ಪ್ರಕಟಿಸುತ್ತಾ ಬಂದಿರುವುದನ್ನು ಓದುಗರು ಗಮನಿಸಿರಬಹುದು. ಈ ವಿಶೇಷಾಂಕವೂ ಅದರ ಮುಂದುವರಿಕೆಯೇ ಆಗಿದೆ. ಕೇವಲ ಗಾಂಧಿ ಕೇಂದ್ರಿತ ಬರಹಗಳ ಮೂಲಕ ಅಲ್ಲ. ಕಥೆ, ಕವನ, ಸಾಹಿತ್ಯ–ಸಂಸ್ಕೃತಿ ಚಿಂತನೆ, ವಿಮರ್ಶೆಗಳಲ್ಲೂ ಇದು ಹಾಸುಹೊಕ್ಕಾಗಿರುವುದನ್ನು ಓದುಗರು ಗಮನಿಸಬಹುದು.

ಕಾಂಗ್ರೆಸ್ ಮುಕ್ತ ಭಾರತವೋ? ಗಾಂಧಿಮುಕ್ತ ಭಾರತವೋ?

ಆದರೆ ಇಂದು ಮುನ್ನೆಲೆಗೆ ಬಂದಿರುವ ರಾಜಕಾರಣದ ಮುಖ್ಯ ಉದ್ದೇಶವೇ ಗಾಂಧಿಮುಕ್ತ ಭಾರತವನ್ನು ನಿರ್ಮಿಸುವುದೇ ಆಗಿರುವಂತೆ ತೋರುತ್ತಿದೆ. ಗಾಂಧಿಯವರ ೧೫೦ನೇ ಜನ್ಮೋತ್ಸವ ಆಚರಣೆಗಾಗಿ ಒಂದು ಸಮಿತಿ ರಚನೆಯಾಗಿ ಒಂದು ವರ್ಷವೇ ಕಳೆದರೂ, ಯಾವುದೇ ಪ್ರಭಾವಶಾಲಿ ಕಾರ್ಯಕ್ರಮಗಳ ಆಚರಣೆಯ ಸುದ್ದಿಯಿಲ್ಲ. ಈ ಸಮಿತಿಯ ಸಭೆಯೊಂದರಲ್ಲಿ ಒರಿಸ್ಸಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು, 'ನಾವು ಇಂದು ಗಾಂಧಿ ನೆನಪಿಗೆ ಸಲ್ಲಿಸಬಹುದಾದ ಅತ್ಯುತ್ತಮ ಕೊಡುಗೆ ಎಂದರೆ ಅವರು ತಮ್ಮ ದರ್ಶನದ ಕೇಂದ್ರದಲ್ಲಿಟ್ಟುಕೊಂಡಿದ್ದ ಅಹಿಂಸೆಯನ್ನು ನಮ್ಮ ಸಂವಿಧಾನದ ಆಧಾರ ಮೌಲ್ಯಗಳನ್ನೊಂದಾಗಿ ಅಳವಡಿಸುವುದು' ಎಂಬ ಮಾತು ಚರ್ಚೆಗೂ ಒಳಗಾಗಿಲ್ಲ. ಬದಲಿಗೆ ಗಾಂಧಿಯನ್ನು ಕೊಂದ ಗೋಡ್ಸೆ ದೇಶಭಕ್ತ ಎನ್ನುವ ಮತ್ತು ಅದನ್ನು ಅನುಮೋದಿಸುವ ಜನರೇ ಇಂದು ನಮ್ಮ ಕಾನೂನು ನಿರ್ಮಾಪಕರಾಗಿ ಆಯ್ಕೆಯಾಗುತ್ತಿದ್ದಾರೆ. ಹಾಗೆ ನೋಡಿದರೆ ಇವರು ಹೇಳುವುದು ಸತ್ಯವೇ. ಏಕೆಂದರೆ ಗೋಡ್ಸೆಯು ಯಾವ ಕಲ್ಪನೆಯ ಭಾರತಕ್ಕೆ ಗಾಂಧಿ ಅಡ್ಡಿಯಾಗಿದ್ದಾರೆಂದು ಅವರನ್ನು ಕೊಂದನೋ ಆ ಕಲ್ಪನೆಯ ಭಾರತ, ಮೋದಿಯವರು ಹೇಳಿದ ಹಾಗೆ (ಆರೆಸ್ಸೆಸ್ ಹುಟ್ಟಿದಾಗಿನಿಂದ ಆಗಿ ಹೋದ) 'ಐದು ತಲೆಮಾರುಗಳ ತ್ಯಾಗದ ಫಲವಾಗಿ' ಈಗ ಉದಯವಾಗಿರುವುದರಿಂದ, ಈ ಉದಯಕ್ಕೆ ದುಡಿದ ಎಲ್ಲರ ಕಣ್ಣಿನಲ್ಲಿ ಅವನೀಗ ದೇಶಭಕ್ತನೇ ಆಗಿ ಕಾಣುವುದು ಸಹಜವೇ ಆಗಿದೆ. ಹಾಗಾಗಿಯೇ ಗೋಡ್ಸೆ ಕುರಿತ ಹೇಳಿಕೆಯ ಬಗ್ಗೆ ಪ್ರಧಾನಿ ಮೋದಿಯವರ ಒಂದು ಜಾಣ ಅಸಮಾಧಾನದ ಮಾತಿನ ಹೊರತಾಗಿ ಯಾವ ಮೂಲೆಯಿಂದಲೂ ಒಂದು ಗಾಬರಿ–ಆತಂಕದ ಮಾತಿಲ್ಲ! ಗಾಂಧಿ ಮೌಲ್ಯ ಪರಂಪರೆಯ ವಾರಸುದಾರಿಕೆಯ ಕಾಂಗ್ರೆಸ್‌ನಿಂದಲೂ ಇಲ್ಲ!

ಈ ದೇಶದ ಇಂದಿನ ರಾಜಕಾರಣದ ದುರಂತದ ಮೂಲ ಇಲ್ಲೇ ಇದೆ. ಕಾಂಗ್ರೆಸ್ ಚಿಂತಾಜನಕ ಸ್ಥಿತಿ ತಲುಪಿದೆ. ಅದು ತನ್ನ ಹುಟ್ಟನ್ನೇ, ಚರಿತ್ರೆಯನ್ನೇ ಮರೆತಿದೆ. ಗಾಂಧಿಯನ್ನು ರಾಷ್ಟ್ರಪಿತನೆಂದು ಕರೆದ ಅದು, ಅವರನ್ನು ಕೈಬಿಟ್ಟು ಬಹಳ ವರ್ಷಗಳೇ ಆಗಿವೆ. ಅದು ಇತ್ತೀಚೆಗೆ ಸರ್ದಾರ್ ಪಟೇಲ್, ಲಾಲಬಹಾದ್ದೂರ್ ಶಾಸ್ತ್ರಿ ಮತ್ತು ಸುಭಾಷ್ ಚಂದ್ರ ಬೋಸ್‌ರೊಂದಿಗೆ ಗಾಂಧಿಯವರನ್ನೂ ಮೋದಿಯವರಿಗೆ ಬಳುವಳಿಯಾಗಿ ಕೊಟ್ಟುಬಿಟ್ಟಿದೆ. ದ್ದಾರೆ. . ಒಂದು ರಾಜಕೀಯ ಪಕ್ಷಕ್ಕೆ ಇರಬೇಕಾದ ಒಂದು ಆದರ್ಶ ಮೂರ್ತಿ, ಸುಸ್ಪಷ್ಟ ತತ್ವ, ಶಿಸ್ತುಬದ್ಧ ಸಂಘಟನೆ ಮತ್ತು ಆಂತರಿಕ ಪ್ರಜಾಪ್ರಭುತ್ವ ಈ ಯಾವ ಗುಣಗಳೂ ಇಲ್ಲದೆ ಅಧಿಕಾರ ಲಾಲಸೆಯ ಅವಕಾಶವಾದಿಗಳ ಗುಂಪೊಂದರ ಮಟ್ಟಕ್ಕೆ ಅದು ಇಳಿದಿದ್ದರಿಂದಲೇ ಅದು ನಮ್ಮ ರಾಜ್ಯದಲ್ಲಿ ಸರ್ಕಾರವನ್ನು ಕಳೆದುಕೊಂಡಾಗ ಯಾರಿಂದಲೂ ಒಂದು ಹನಿ ಕಣ್ಣೀರು ಉದುರಲಿಲ್ಲ. ಉದುರಿದ್ದರೆ ಅದು ಮತ್ತೆ ಈ ಯಡಿಯೂರಪ್ಪ ಮುಖ್ಯಮಂತ್ರಿಯಾದರಲ್ಲ! ಎಂಬ ಕಾರಣಕ್ಕಾಗಿಯಷ್ಟೆ!

ಯಡಿಯೂರಪ್ಪನವರ ಮತ್ತೊಂದು ಅಭಿವೃದ್ಧಿ ಪರ್ವದ ಆರಂಭ!

ಅದಕ್ಕೆ ತಕ್ಕಂತೆ ಯಡಿಯೂರಪ್ಪನವರೂ 'ಅಭಿವೃದ್ಧಿ'ಯ ಹೊಸ ಪರ್ವ ಆರಂಭವಾಗಲಿದೆ ಎಂದು ಘೋಷಿಸಿದ್ದಾರೆ! ಇಲ್ಲಿ ಹೊಸ ಎಂದರೆ ಕಂಟ್ರ್ಯಾಕ್ಟರುಗಳ ಸಮೂಹ ಹೊಸದಾಗಿರುತ್ತದೆ ಎಂದಷ್ಟೇ ಅರ್ಥ. ಏಕೆಂದರೆ ಯಡಿಯೂರಪ್ಪನವರಿಗಾಗಲೀ ಅಥವಾ ಅವರ ಪಕ್ಷಕ್ಕಾಗಲೀ ಅಭಿವೃದ್ಧಿಯ ಅರ್ಥ ಬದಲಾಗಬೇಕಾದ ಇಂದಿನ ಜಾಗತಿಕ ಸಂದರ್ಭದ ಅರಿವು ಉಂಟಾಗಿರುವ ಯಾವ ಸೂಚನೆಯೂ ಕಾಣುತ್ತಿಲ್ಲ. ಈ ಬಾರಿಯ ಸಚಿವ ಸಂಪುಟದಲ್ಲಿ ಜಲಸಂಪನ್ಮೂಲ ಖಾತೆಗೆ 'ಜಲಶಕ್ತಿ' ಖಾತೆ ಎಂದು ಮರುನಾಮಕರಣದ ಗಿಲೀಟು ಕೆಲಸ ಮಾಡಿ ಕೇಂದ್ರ ಬಜೆಟ್‌ನಲ್ಲಿ ಜಲ ಸಂರಕ್ಷಣೆಯ ಘನ ಉದ್ದೇಶವನ್ನು ಪ್ರಕಟಿಸಲಾಗಿದೆಯಾದರೂ, ಜಗತ್ತನ್ನು ಈಗ ಬಾಧಿಸಲಾಗುತ್ತಿರುವ ಜಲಕ್ಷಾಮದ ಮೂಲವನ್ನು ತಡಕುವ ಯಾವ ಪ್ರಯತ್ನದ ಯಾವ ಸುಳಿವೂ ಕಾಣುತ್ತಿಲ್ಲ. ಅಂತಹ ಪ್ರಯತ್ನವೇನಾದರೂ ನಡೆದಿದ್ದಲ್ಲಿ ಮೋದಿ, ಅಭಿವೃದ್ಧಿ ಎಂದರೆ ೫ ಟ್ರಿಲಿಯನ್ ಡಾಲರ್‌ಗಳ ಆರ್ಥಿಕತೆ ಎಂಬ ಗಾತ್ರ ಮಾತ್ರವಿರುವ ಏಕಾಯಾಮದ ಕನಸನ್ನು ದೇಶದ ಮುಂದೆ ಮಂಡಿಸುತ್ತಿರಲಿಲ್ಲ. ಬುದ್ಧಿ, ವಿವೇಕ, ಸಂಯಮಗಳೆಂಬುವು ಎಲ್ಲ ಕಡೆ ದುರಾಶೆ, ಬಲಿಷ್ಠತೆ ಮತ್ತು ಸ್ಪರ್ಧೆಗಳಿಗೆ ಜಾಗ ಮಾಡಿಕೊಟ್ಟು ಕಾಣೆಯಾಗಿವೆ.

ಇಂತಹ ಸಂದರ್ಭದಲ್ಲಿ ಹೊರಬೀಳುತ್ತಿರುವ ಈ ವಿಶೇಷಾಂಕಕ್ಕೆ ನೆರವಾದವರು ಹಲವರು. ಕಳೆದ ಬಾರಿಯ ವಿಶೇಷಾಂಕದಲ್ಲಿ ಜಾಹೀರಾತುಗಳಿಗೆ ನೀಡಿದ್ದ ಸ್ಥಳಾವಕಾಶದಿಂದಾಗಿ ಆದ ಕಾಗದದ ವ್ಯರ್ಥ ಖರ್ಚಿನ ಬಗ್ಗೆ ಬೇಸರ ವ್ಯಕ್ತಪಡಿಸಿದ ಗೆಳೆಯರ ಸಲಹೆಯಂತೆ ಈ ಬಾರಿ ಅನಿವಾರ್ಯ ಸಂದರ್ಭದ ಜಾಹೀರಾತುಗಳನ್ನು ಮಾತ್ರ ಪ್ರಕಟಿಸಿ, ಪತ್ರಿಕೆಗೆ ಪ್ರೀತಿಯಿಂದ ಧನ ಸಹಾಯ ಮಾಡಿದವರ ಹೆಸರುಗಳನ್ನು ಒಂದು ಪುಟದಲ್ಲಿ ಪಟ್ಟಿ ರೂಪದಲ್ಲಿ ನೀಡಿದ್ದೇವೆ. ಈ ಸಂಚಿಕೆಗೆ ನಾನು ಕೇಳಿದ್ದಕ್ಕೆ ಮರುಮಾತಾಡದೆ ಕನ್ನಡದ ಹಲವು ಶ್ರೇಷ್ಠ ಮನಸ್ಸುಗಳು ತಮ್ಮ ಬರಹಗಳನ್ನು ಕಳಿಸಿ ಮತ್ತು ಅನುವಾದ ಮಾಡಿಕೊಟ್ಟು, ಸಣ್ಣಪುಟ್ಟ ಡಿಟಿಪಿ ಕೆಲಸ ನಿರ್ವಹಿಸಿ, ಕರಡು ತಿದ್ದಿ ಪತ್ರಿಕೆಯನ್ನು ಕುರಿತ ತಮ್ಮ ಪ್ರೀತಿಯನ್ನು ತೋರಿದ್ದಾರೆ.. ಅವರೆಲ್ಲರಿಗೂ ಪತ್ರಿಕೆಯ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

–ಸಂಪಾದಕ

ಈ ಸಂಚಿಕೆ

ರಕ್ಷಾಪುಟ ವಿನ್ಯಾಸ: : **ರವಿಪ್ರಸಾದ್ ಎಚ್,ಆರ್**

ಮುಖಪುಟ ಕಲೆಯ ಸೌಜನ್ಯ: **ಜನತಾ**

ರೇಖಾ ಚಿತ್ರಗಳು: **ಬಿ.ಜಿ. ಗುಜ್ಜಾರಪ್ಪ** ಮತ್ತು **ವಿಜಯಶ್ರೀ ಹಾಲಾಡಿ**

ಪುಟ ವಿನ್ಯಾಸ ಮತ್ತು ಸಂಪಾದನೆ

ಡಿ. ಎಸ್. ನಾಗಭೂಷಣ

ನಿಮ್ಮ ಪತ್ರ

ಪತ್ರಿಕೆಯ ಏಳನೇ ವಿಶೇಷಾಂಕವನ್ನು ಹೊರತರುತ್ತಿರುವ ಸಂದರ್ಭದಲ್ಲಿ ಪತ್ರಿಕೆಯ ಒಟ್ಟಾರೆ ಸಾರ್ಥಕತೆಯ ಬಗ್ಗೆ ನಮ್ಮ ಕೆಲ ಆಯ್ದ ಓದುಗರ ಅಭಿಪ್ರಾಯಗಳನ್ನು ಆಹ್ವಾನಿಸಿದೆವು.. ಅವು ಮತ್ತು ಇತರ ಕೆಲ ಪತ್ರಗಳು ಇಲ್ಲಿವೆ-ಸಂ.

ಪ್ರಿಯ, ಸಂಪಾದಕರೇ,

ಪತ್ರಿಕೆ ನಮ್ಮ ಓದಿನ ಅವಿಭಾಜ್ಯ ಅಂಗವಾಗಿ ಹೋಗಿದೆ

ಹೊಸಮನುಷ್ಯ ಪತ್ರಿಕೆ ಇವತ್ತಿನ ಅಗತ್ಯ. ನಾವು ಬದುಕುವ ಲೋಕ, ನಮ್ಮ ಸಮಾಜ, ನಮ್ಮ ವರ್ತಮಾನ ಎತ್ತ ಸಾಗುತ್ತಿದೆ ಎಂಬುದರ ಸೂಕ್ಷ್ಮ ವಿಮರ್ಶಾತ್ಮಕ ಅವಲೋಕನ ಒಂದೆಡೆ. ಎಲ್ಲೆಲ್ಲಿಂದ ತಂದು ಅನುವಾದಿಸಿ ಪ್ರಕಟಿಸುವ ನಮ್ಮೊಳಗನ್ನು ಜಾಗೃತಗೊಳಿಸುವ ಬೆಳೆಸುವ ಪ್ರಾಜ್ಞ ಲೇಖಕರ ಚಿಂತನಾ ಬರಹಗಳು ಇನ್ನೊಂದೆಡೆ. ಇವೆರಡೂ ಪರಸ್ಪರ ತೂಕ ತಪ್ಪದಂತೆ ಮೇಳೈಸಿ ಪ್ರಕಟವಾಗುವ ಈ ಪತ್ರಿಕೆ ನಮ್ಮ ಓದಿನ ಅವಿಭಾಜ್ಯ ಅಂಗವೇ ಆಗಿ ಹೋಗಿದೆ. ಇವುಗಳಲ್ಲಿ ಗಾಂಧಿ ಮತ್ತು ಲೋಹಿಯಾ ಕುರಿತ ಬರಹಗಳು ನನಗೆ ತುಂಬ ಇಷ್ಟವಾದವು. ಜೋಪಾನ ತೆಗೆದಿರಿಸುವಷ್ಟು ಅಮೂಲ್ಯ ಬರಹಗಳು ಅವು. ಈ ಪತ್ರಿಕೆ ಅರ್ಧ ಗೆದ್ದಿರುವುದೇ ತನ್ನ ಬರಹಗಾರರ ಆಯ್ಕೆಯಲ್ಲಿ. ಇಂಥ ಆಯ್ಕೆಯ ಮನೋಭಾವವನ್ನು ಥಕ್ಕನೆ ನೋಡಿದರೆ ಉಡಾಫು ಎಂದು ಕಾಣುವ ಅಪಾಯವಿದ್ದರೂ ಅದು ಹಾಗಲ್ಲ. ಪತ್ರಿಕೆಗೆ ಅದರದೇ ಆದೊಂದು ನಿಲುವು ಇದೆ. ಅದು ಇವತ್ತಿನವರೆಗೂ ಅಚಲವಾಗಿದೆ. ಅದಕ್ಕೆ ಹೊಂದುವ ಮತ್ತು ಅದನ್ನು ವಿಸ್ತರಿಸುವ ಬರಹಗಳಿಗೆ ಇಲ್ಲಿ ಪ್ರಾಧಾನ್ಯ ನೀಡುವುದು ಒಂದು ಸಹಜ ನಡೆ ಎಂದೇ ನನಗನಿಸುವುದು. ಪತ್ರಿಕೆಯ ಮನೋಧರ್ಮವನ್ನು ಸತತವಾಗಿ ಕಾಪಾಡಿಕೊಳ್ಳುವಲ್ಲಿ ಇದೆಲ್ಲ ಬೇಕೇ ಬೇಕು. ಒಂದು ವಿಚಾರವನ್ನೋ ತರ್ಕವನ್ನೋ ತಾವು ಒಪ್ಪಲಿ ಒಪ್ಪದೆ ಇರಲಿ, ಮೊದಲು ಬರಹಗಳನ್ನು ಓದತೊಡಗುವಲ್ಲಿ ಬರಹ ಮತ್ತು ಬರಹಗಾರನ ಕುರಿತ ವಿಶ್ವಾಸವೂ ಮುಖ್ಯವಷ್ಟೆ?

ಪತ್ರಿಕೆಯ ಇನ್ನೊಂದು ಉತ್ತಮ ಅಂಶ ಅಂದರೆ ಅದರ ಸಂಪಾದಕೀಯ. ಇಲ್ಲಿನ ಲೇಖನಗಳಲ್ಲಿ ಕಾಣುವ ಅಪ್ಪಟ ಸ್ವಂತಿಕೆ ಮತ್ತು ಪ್ರಾಮಾಣಿಕತೆ. ರಾಜಕೀಯವೇ ಇರಲಿ ಸಾಮಾಜಿಕ ಸಮಸ್ಯೆಗಳೇ ಇರಲಿ, ಅವುಗಳ ಕುರಿತು ತರ್ಕವನ್ನೋ ಅಭಿಪ್ರಾಯವನ್ನೋ ಟೀಕೆಯನ್ನೋ ವ್ಯಕ್ತಪಡಿಸುವಲ್ಲಿ ಸಂಪಾದಕರ ಅಪೂರ್ವ ನೇರತನ ಮತ್ತು ದಿಟ್ಟತನ ಎದ್ದು ಕಾಣುತ್ತದೆ. ಇವೆರಡೂ ಒಂದೇ ನಾಣ್ಯದ ಮುಖಗಳು ಎಂದರೂ ಎಷ್ಟೋ ಸಲ ಇವುಗಳಲ್ಲಿ ಒಂದು ಮುಖ ಮಸುಕಾಗುವುದಿದೆ. ಇಲ್ಲಿ ನಾ ಕಂಡಂತೆ ಹಾಗೆ ಆಗಿಯೇ ಇಲ್ಲ. ನೇರತನ ಮತ್ತು ದಿಟ್ಟತನ, ಹರಿತ ವಿಶ್ಲೇಷಣಾತ್ಮಕ ದೃಷ್ಟಿ ಒಟ್ಟೊಟ್ಟಿಗೇ ಇರುತ್ತವೆ.

ಕವನಗಳು, ಅಲ್ಲಲ್ಲಿ ಒಮ್ಮೆ ಕಥೆ–ಕಥನಗಳು, ಪುಸ್ತಕ ಹಾಗೂ ನಾಟಕ ವಿಮರ್ಶೆಗಳು, ಹೊಸ ಕೃತಿಯ ಆಗಮನದ ಸುದ್ದಿ, ಧಾರ್ಮಿಕ ವಿಚಾರಗಳು, ನಾವು ಓದಿರದ ಇನ್ನೊಂದು ಧರ್ಮದ ಸಂಗ್ರಹಿತ ಚುಟುಕು ಸಾರವಾಕ್ಯಗಳು, ವ್ಯಕ್ತಿಚಿತ್ರಗಳು, ಇವೆಲ್ಲವೂ ಒಂದು ಗಂಭೀರ ಪತ್ರಿಕೆಯಲ್ಲೂ ಇರಬೇಕಾದ ಲವಲವಿಕೆಯನ್ನು ಕಾಯುವ ಇನ್ನೊಂದು ಭಾಗವಾಗಿದೆ. ಅಂದರೆ ಒಂದು ಕಮರ್ಶಿಯಲ್ ಪತ್ರಿಕೆಯ ಎಲ್ಲ ಭಾಗಗಳಿದ್ದೂ ಕಮರ್ಶಿಯಲ್ ಲಕ್ಷಣವನ್ನು ಮೀರಿ, ಹೊಣೆಗಾರಿಕೆಯಿಂದ ಪ್ರಕಟವಾಗುವುದು, ಆ ಮೂಲಕ ಬೌದ್ಧಿಕ ಉಣಿಸನ್ನು ನೀಡುತ್ತಿರುವುದು 'ಹೊಸಮನುಷ್ಯ'ದಲ್ಲಿ ನಾ ಕಂಡ ಗಮನಾರ್ಹ ಅಂಶ. ಕವನ ವಿಭಾಗದಲ್ಲಿ ಹೊಸಬರನ್ನು ಕೇಳುವಾಗ ಏನೋ ಭರವಸೆ.

ಜೂನ್ ತಿಂಗಳ, ಲೋಕಸಭಾ ಚುನಾವಣೆಯ ಸಂದರ್ಭದ, ಹೊಸಮನುಷ್ಯ ಸಂಚಿಕೆ ಇತ್ತೀಚಿನ ನನ್ನ ಹೆಚ್ಚು ಮೆಚ್ಚಿಗೆಯ ಸಂಚಿಕೆ. ಅದರಲ್ಲಿ ಅನೇಕ ಆಹ್ವಾನಿತ ಲೇಖಕರು ತಮ್ಮತಮ್ಮ ಅಂತರಂಗದ ನುಡಿಗಳನ್ನು ಕೆಲವೇ ಸಾಲುಗಳಲ್ಲಿ ಅಡಕವಾಗಿ ನುಡಿದದ್ದು, ಆತಂಕದ ಆ ಪುಟ್ಟಪುಟ್ಟ ಬರಹಗಳನ್ನು ಒಟ್ಟು ಓದುವಾಗ ಎಲ್ಲವೂ ಸೇರಿ ದೊಡ್ಡದನಿಯಾಗಿ ಓದಿಗಷ್ಟೇ ಅಲ್ಲ ಕಿವಿಗೂ ತಲುಪುವಂತಾಗಿದ್ದು, ಇತ್ಯಾದಿಗಳೆಲ್ಲ ಹೊಸಮನುಷ್ಯ ಕುರಿತು ವಿಶ್ವಾಸವನ್ನು ಹೆಚ್ಚಿಸಿದೆ. ಮಬ್ಬು ಮುಸುಕುತ್ತಿರುವ ಮಾತಾಡಲೂ ಆಗದ ಮೌನವಿರಲೂ ಆಗದ ಇಂದಿನ ಸನ್ನಿವೇಶದಲ್ಲಿ ಹೊಸಮನುಷ್ಯ ಪತ್ರಿಕೆ ದುಡ್ಡಿನ ಯಾವ ಅಬ್ಬರವಿಲ್ಲದೆ ತನ್ನದೇ ಅಕ್ಷರವೇದಿಕೆಯನ್ನು ಸೃಷ್ಟಿಸಿಕೊಂಡಿದೆ; ಮಾತಾಡುತ್ತಿದೆ, ಮಾತಾಡಿಸುತ್ತಿದೆ ಮತ್ತು ಮಾತು ಕೇಳಿಸುತ್ತಿದೆ ಎಂಬುದೇ ಹೆಮ್ಮೆಯ ಸಂಗತಿ.

–ವೈದೇಹಿ, ಮಣಿಪಾಲ
(ಕನ್ನಡದ ಹಿರಿಯ ಲೇಖಕಿ)

ಸೊಗಸಾದ ತಂಡ

'ಹೊಸ ಮನುಷ್ಯ' ಹಲವು ಕಾರಣಕ್ಕೆ ಇಂದು ಅವಶ್ಯಕವಾಗಿರುವ ಪತ್ರಿಕೆ. ಅದರ ಸಂಪಾದಕೀಯವನ್ನು ನೋಡುತ್ತಾ ಹೋದರೆ ಬಹು ಸಲ ನಮಗೆ ತುರ್ತಾಗಿ ಬೇಕಾದ ಒಳನೋಟ ದಕ್ಕುತ್ತದೆ. ಅದರ ಒಳಪುಟಗಳಲ್ಲಿ ಕೆಲವೊಮ್ಮೆ ಚಿಂತನೆಗೆ ಮೂಲ ಸಾಮಗ್ರಿ ಸಿಗುತ್ತದೆ. ಅದು ಕೆಲವೊಮ್ಮೆ ಆ ನಿಲುವಿನಿಂದ ಭಿನ್ನವಾಗಿ ಒಡೆದು ನಿಂತು ನಮ್ಮ ಚಿಂತನೆಯನ್ನು ಹರಿತಗೊಳಿಸಿಕೊಳ್ಳುವುದಕ್ಕೂ ಅವಕಾಶ ಮಾಡಿಕೊಡುತ್ತದೆ. ಸಂಪಾದಕರ ಟಿಪ್ಪಣಿಗಳಲ್ಲಿ ಗಾಂಧೀಜಿಯ ಪಾದ ಮುಟ್ಟಿ ಅವರನ್ನು ಕೊಲ್ಲುವ ಜಾಣ ನಡೆಯನಿಟ್ಟ ಗೋಡ್ಸೆಯ ಮೊದಲ ಹೆಜ್ಜೆಯಿಂದ ಪ್ರಾರಂಭವಾಗಿ ಇಂದು ಅದಕ್ಕೆ ಪರ್ಯಾಯವೇ ಇಲ್ಲದ ಸ್ಥಿತಿಗೆ ಬಿಜೆಪಿ ಬೆಳೆಯುತ್ತಿರುವ ಬಗ್ಗೆ, ಅದರ ಜೊತೆಗೆ ಹುಟ್ಟಿಕೊಳ್ಳುತ್ತಿರುವ ಆತಂಕಗಳ ಬಗ್ಗೆ, ರಾಷ್ಟ್ರೀಯತೆ ಹಾಗೂ ದೇಶಪ್ರೇಮ ತಮ್ಮ ಮಿತಿಗಳನ್ನು ಮೀರಿ ಬೆಳೆದರೆ ಆಗುವ ಅನಾಹುತಗಳ ಬಗ್ಗೆ, ನಮ್ಮ ಸುತ್ತಮುತ್ತಲ ಎಷ್ಟೊ ಜನರ ಡೋಂಗಿತನಗಳ ಬಗ್ಗೆ, ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಒಳ್ಳೆಯ ಚರ್ಚೆ ಇರುತ್ತದೆ.

ನಾವು ಗಮನಿಸಲೇಬೇಕಾದ ಡಾ. ಆನಂದ್ ತೇಲ್ತುಂಬ್ಡೆ, ಯೋಗೇಂದ್ರ ಯಾದವ್, ಚಿಮಮಂಡಾ ನ್ಗೋಝಿ ಅಡಿಚೆ ಮೊದಲಾದವರ ಚಿಂತನೆಗಳನ್ನು ಕನ್ನಡದಲ್ಲಿ ಪರಿಚಯಿಸುವ ಕೆಲಸ ನಡೆಯುತ್ತಿದೆ. ಅದನ್ನು ಅನುವಾದಿಸುವುದಕ್ಕೆ ಒಂದು ಸೊಗಸಾದ ತಂಡ ತಯಾರಾಗಿದೆ.

ಹಾಗೆಯೇ ನಮ್ಮ ನಡುವಿನ ಪ್ರಮುಖ ಚಿಂತಕರಾದ ಜಿ ರಾಜಶೇಖರ್, ಲಕ್ಷ್ಮೀಶ ತೋಳ್ಪಾಡಿ, ರಾಜೇಂದ್ರ ಚೆನ್ನಿ, ರಾಜಾರಾಂ ತೋಳ್ಪಾಡಿ, ಎಚ್ ಎಸ್ ರಾಘವೇಂದ್ರ ರಾವ್ ಇಂಥವರಿಂದ ಲೇಖನಗಳನ್ನು ಬರೆಸುವ ಕಾಯಕವನ್ನು ಮಾಡುತ್ತಿದ್ದಾರೆ.

ಹಾಗೆಯೇ 'ನಮ್ಮ ವಿವಾಹ ಸಂಸ್ಥೆ ಬಿಕ್ಕಟ್ಟಿನಲ್ಲಿದೆಯೇ,' 'ಇವೊತ್ತಿಗೆ ಗಾಂಧಿ ಎಷ್ಟು ಬೇಕು,' ಹೀಗೆ ನಾವು ಮನಸ್ಸಿಗೆ ತೆಗೆದುಕೊಳ್ಳಲೇಬೇಕಾದ ವಿಷಯಗಳ ಬಗ್ಗೆ ಹಲವರ ಅಭಿಪ್ರಾಯಗಳನ್ನು ಪ್ರಕಟಿಸುತ್ತಿದ್ದಾರೆ. ಅದರಲ್ಲಿ ಕೆಲವರು ಹೊಸಬರನ್ನು ಪರಿಚಯಿಸಿದ್ದಾರೆ. ಮುಖ್ಯವಾಹಿನಿಯ ಪತ್ರಿಕೆಗಳು ಗುರುತಿಸದೇ ಹೋಗಿರುವ ಮತ್ತು ಗಮನಿಸಲೇಬೇಕಾಗಿರುವ ಹಲವು ಕೃತಿಗಳನ್ನು ಪರಿಚಯಿಸುತ್ತಿದ್ದಾರೆ.

ಡಿಎಸ್‌ಎನ್ ಅವರ ಚಿಂತನೆಗೆ ತಕ್ಕಂತೆ 'ಇಂದಿನ ಧರ್ಮಸಂಕಟದ ಸಂದರ್ಭದಲ್ಲಿ ದಾರಿದೀಪ ಆಗಬಹುದೆಂಬ ಉದ್ದೇಶದಿಂದ ಧರ್ಮ ವಿಚಾರಗಳ' ಬಗ್ಗೆಯೂ ಲೇಖನಗಳು ಬರುತ್ತಿವೆ.

ಹೀಗೆ ಹಲವು ಕಾರಣಕ್ಕೆ ಸಮಾಜವಾದೀ ಮಾಸಿಕ 'ಹೊಸಮನುಷ್ಯ' ನನ್ನ ಮಟ್ಟಿಗೆ ತುಂಬಾ ಅವಶ್ಯಕ.

ಇದರ ನಿಲುವು ಸದ್ಯದ ದೃಷ್ಟಿಯಿಂದ ಆರೋಗ್ಯಕಾರಿಯಾದ ನಿಲುವು. ಬಲಪಂಥೀಯ ಚಿಂತನೆಯನ್ನು ಕುರಿತಂತೆ ನಿಷ್ಠೂರವಾಗಿ ಇದ್ದುಕೊಂಡು, ವಿರೋಧ ಪಕ್ಷಗಳನ್ನು ಅಷ್ಟೇ ಜವಾಬ್ದಾರಿಯಿಂದ ಎಚ್ಚರಿಸುವ ಕೆಲಸವನ್ನು ಪತ್ರಿಕೆ ಮಾಡುತ್ತಿದೆ. ಮೂಲಭೂತವಾಗಿ ಸಮಾಜವಾದಿ ಪತ್ರಿಕೆಯಾಗಿರುವುದರಿಂದ ಅದು ಇಲ್ಲಿ ಪ್ರಧಾನವಾಗಿ ಕಾಣುವುದು ಸ್ವಾಭಾವಿಕ. ಇಲ್ಲಿ ಗಾಂಧಿ, ಅಂಬೇಡ್ಕರ್ ಜೊತೆ ಲೋಹಿಯಾ ಹದವಾಗಿ ಬೆರೆತುಕೊಂಡಿದ್ದಾರೆ. ಹಾಗೆಯೇ ರಮಣರಂಥವರಿಗೂ ಇಲ್ಲಿ ಧಾರಾಳವಾಗಿ ಅವಕಾಶವಿದೆ. ಯಾವುದೇ ಕೆಲಸ ಮೊದಲು ನಮಗೆ ಸಂತೋಷಕೊಡಬೇಕು. ಆ ಸಂತೋಷ (ರಾಜೀವ್ ತಾರಾನಾಥ್ ಅವರು ಅದನ್ನು ರೆಲಿಷ್ ಎನ್ನುತ್ತಾರೆ) ಬೇರೆಯವರಿಗೂ ಟ್ರಾನ್ಸಫರ್ ಆಗಿ ಅವರಿಗೂ ಆ ಖುಷಿ ಸಿಗುತ್ತದೆ. ನಾನಂತೂ ಈ ಪತ್ರಿಕೆಯನ್ನು ಖುಷಿಯಾಗಿಯೇ ಓದುತ್ತಿದ್ದೇನೆ. ಹಾಗಾಗಿ ಈ ಸಂತೋಷ ಡಿಎಸ್‌ಎನ್ ಮತ್ತು ತಂಡಕ್ಕೆ ಸಿಕ್ಕಿದೆ ಅಂದುಕೊಂಡಿದ್ದೇನೆ. ಸಲಹೆ ಕೊಡಲೇಬೇಕು ಎಂದೇನಿಲ್ಲ, ಆದರೆ ಒಂದಿಷ್ಟು ಅರ್ಥಶಾಸ್ತ್ರದ ಬಗ್ಗೆ ಚಿಂತನೆಗಳಿದ್ದರೆ ಚೆನ್ನಾಗಿರುತ್ತಿತ್ತು. ಪಾಪ ಅದೊಂದಕ್ಕೆ ತುಂಬಾ ಕಡೆ ಸ್ಥಾನ ಸಿಗೋಲ್ಲ. ನೀವೇ ಬರೆಯಿರಿ ಅನ್ನೋದು ಬೇಡ! ಡಿ ಎಸ್ ನಾಗಭೂಷಣ್ ನೈತಿಕತೆಯನ್ನು ಕಾಪಾಡಿಕೊಂಡು, ನೈತಿಕತೆಯ ಅವಶ್ಯಕತೆಯನ್ನು ಒತ್ತಿಹೇಳುತ್ತಾ, ಅದಕ್ಕಾಗಿ ಒತ್ತಾಯಿಸುತ್ತಾ ಪತ್ರಿಕೆಯನ್ನು ತರುತ್ತಿದ್ದಾರೆ. ಹತಾಶೆಯಾದರೂ ಮೀರಿಕೊಂಡು, ಕೋಪಬಂದರೂ ಪ್ರೀತಿ ಕಳೆದುಕೊಳ್ಳದೆ ಸಾಗುತ್ತಿದ್ದಾರೆ. ಇದು ಇಂದಿನ ಸಂದರ್ಭದಲ್ಲಿ ತುಂಬಾ ಅವಶ್ಯಕವಾಗಿರುವ ಮನಃಸ್ಥಿತಿ.

ಪತ್ರಿಕೆಗೆ, ಸಂಪಾದಕರಿಗೆ ಒಳ್ಳೆಯದಾಗಲಿ. ಅವರ ಕೆಲಸವನ್ನು ಹಗುರಮಾಡುತ್ತಿರುವ ಪತ್ರಿಕೆಯ ತಂಡಕ್ಕೆ ವಂದನೆಗಳು.

–ಟಿ ಎಸ್ ವೇಣುಗೋಪಾಲ್, ಮೈಸೂರು
(ನಿವೃತ್ತ ಸಂಖ್ಯಾಶಾಸ್ತ್ರ ಅಧ್ಯಾಪಕರು ಮತ್ತು ಲೇಖಕರು)

ಪ್ರತಿ ತಿಂಗಳ ತವಕ

ಹೊಸ ಮನುಷ್ಯ' ಮಾಸಿಕವನ್ನು ನಾನು ಕಳೆದ ಎರಡು ವರ್ಷಗಳಿಂದ ಆಪ್ತವಾಗಿ ಓದುತ್ತಿದ್ದೇನೆ. ಈ ಪತ್ರಿಕೆಯಲ್ಲಿ ನಾನು ಗಮನಿಸಿದ ಮುಖ್ಯವಾದ ಒಂದೆರಡು ಸಂಗತಿಗಳೆಂದರೆ ಡಿ.ಎಸ್.ನಾ. ಅವರು ಒಂದು ಬಗೆಯ ತಪೋನಿಷ್ಠೆಯಿಂದ ಪತ್ರಿಕೆಯನ್ನು ಸಂಪಾದಿಸುತ್ತಿರುವುದು ಯಾವುದೇ ಬಗೆಯ ಸ್ವಲಾಭಗಳಿಲ್ಲದೆ ಒಂದು ಆರೋಗ್ಯಕರ ಸುಂದರ ಸಮಾಜ ನಿರ್ಮಾಣಕ್ಕಾಗಿ ಈ ಮಾನವತಾವಾದಿ ಮಾಡುತ್ತಿರುವ ಕೆಲಸ ಎಷ್ಟೋ ದೊಡ್ಡ ಪತ್ರಿಕೆಗಳಿಗಿಂತ ದೊಡ್ಡದು. ನಾಗಭೂಷಣ ಅವರ ಸಂಪಾದಕೀಯ ಮತ್ತು ಪುಸ್ತಕಾವಲೋಕನಗಳು ಓದುಗನನ್ನು ಹೊಸ ಮನುಷ್ಯನನ್ನಾಗಿ ಪರಿವರ್ತಿಸುವಷ್ಟು ಶಕ್ತಿಯುತವಾಗಿರುತ್ತವೆ. ತಿಂಗಳು ತುಂಬುತ್ತಿದ್ದಂತೆಯೇ ಹೊಸ ಮನುಷ್ಯನಿಗಾಗಿ ಮನಸ್ಸು ತವಕ ಪಡುತ್ತಿರುತ್ತದೆ, ಕೂಡಾ. ಇದು ಪತ್ರಿಕೆಯ ಸಾಮಾನ್ಯ ಗೆಲುವೇನಲ್ಲ.

ಸಂಪಾದಕ ಡಿ.ಎಸ್.ನಾ. ಅವರು ತಮ್ಮ 'ಹೊಸ ಮನುಷ್ಯ' ಪತ್ರಿಕೆಯನ್ನು ಗಾಂಧಿ, ಲೋಹಿಯಾ, ಅಂಬೇಡ್ಕರ್, ಕುವೆಂಪು ಅವರ ಜತೆಜತೆಗೆ ರಮಣ ಮಹರ್ಷಿ ಮುಂತಾದ ಸಂತರ ಮೂಲಕವೂ ಅತ್ಯಾಧುನಿಕಗೊಳಿಸಲು ಮಾಡುತ್ತಿರುವ ಪ್ರಯತ್ನ ಕೂಡ ಅಪೂರ್ವ ಎಂದೇ ಹೇಳಬೇಕು. ಗಾಂಧಿಯುಗ ಮುಗಿದು ಹೋಗಿರುವಂತೆ ಭಾವಿಸಿರುವವರೆದುರಿಗೆ ಡಿ.ಎಸ್.ನಾ. 'ಗಾಂಧಿಯುಗ ಆರಂಭವಾಗಿದ್ದರಲ್ಲವೆ ಅದು ಮುಗಿಯುವುದು ಇಡೀ ಜಗತ್ತು ಅದರ ಆರಂಭಕ್ಕಾಗಿ ಪರಿತಪಿಸುತ್ತಿದೆ' ಎಂಬಂಥ ಸಶಕ್ತ ಧೋರಣೆಯನ್ನೇ ಈ ಪತ್ರಿಕೆಯ ಧ್ಯೇಯವಾಗಿಸಿರುವುದು ಅದರ ಪ್ರಸ್ತುತತೆಗೆ ಸಾಕ್ಷಿ.

ದುರಾದೃಷ್ಟವೆಂದರೆ ಯಾರ ಅಭ್ಯುದಯಕ್ಕಾಗಿ ಹಗಲು ರಾತ್ರಿ ವೈಯಕ್ತಿಕ ಹಣಕಾಸಿನ ನಷ್ಟವನ್ನು ಬದಿಗಿಟ್ಟು ಪತ್ರಿಕೆ ತಪಿಸುತ್ತಿದೆಯೋ ಆ ದಲಿತ-ರೈತ-ಮಹಿಳಾ ಕನ್ನಡಪರ ಸಂಘಟನೆಗಳು ಹೊಣೆ ಹೊತ್ತು ಆಭಾರಿಯಾಗಿ ಬೆಂಬಲಿಸದಿರುವುದು. ನಿರಾಭರಣ ಸುಂದರ 'ಹೊಸ ಮನುಷ್ಯ'ನಿಗೆ ನನ್ನ ಶುಭ ಹಾರೈಕೆಗಳು.

–ಎನ್. ಬೋರಲಿಂಗಯ್ಯ, ಮೈಸೂರು
(ನಿವೃತ್ತ ಪ್ರಾಧ್ಯಾಪಕರು ಮತ್ತು ಹಿರಿಯ ಲೇಖಕರು)

ಭರವಸೆಯ ಬೆಳಕು

ಪ್ರಾದೇಶಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿದ್ಯಮಾನಗಳು, ಮೂಲಭೂತ, ಸರ್ವಾಧಿಕಾರ, ಸಂಕುಚಿತ ವಿಚಾರಧಾರೆಗಳಿಂದ ವಿಕಾರವಾಗುತ್ತಿರುವ ಸಮಕಾಲೀನ ಸಂದರ್ಭದಲ್ಲಿ, ಪ್ರಜಾಪ್ರಭುತ್ವ, ಸಮಾನತೆ ಬಗೆಗೆ ಕಳಕಳಿಯಿರುವವರಿಗೆ ಆಘಾತ ಹಾಗೂ ತಲ್ಲಣಗಳನ್ನು ಉಂಟುಮಾಡುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ 'ಹೊಸಮನುಷ್ಯ' ಭರವಸೆಯ ಆಶಾಕಿರಣವಾಗಿ ಕಂಡುಬರುತ್ತಿದೆ. ಅಸಹಾಯಕ ಮನಸ್ಸುಗಳಿಗೆ ಉತ್ಸಾಹವನ್ನು ತುಂಬುವಲ್ಲಿ ಸಫಲವಾಗುತ್ತಿದೆ.

ಸಮಾಜವಾದಿ ನಿಲುವು ಕೇಂದ್ರ ಬಿಂದುವಾಗಿರುವ ಸ್ಪಷ್ಟ ತಾತ್ವಿಕತೆ ಇಡೀ ಪತ್ರಿಕೆಯ ಎಲ್ಲಾ ರೀತಿಯ ಬರಹಗಳಲ್ಲೂ ಪ್ರಧಾನವಾಗಿ ಕಾಣುತ್ತದೆ.

ಇತಿಹಾಸದ ಸಂಗತಿಗಳು ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತಗೊಳಿಸುವ ಲೇಖನಗಳು, ಪತ್ರಿಕೆಯ ಘನತೆಗೆ ಪೂರಕವಾಗಿವೆ.

ಸಂಪಾದಕರ ಟಿಪ್ಪಣಿಗಳಲ್ಲಿ ಕಂಡುಬರುವ ವೈಚಾರಿಕ ಆರೋಗ್ಯಕರ ವಿಶ್ಲೇಷಣೆಗಳು ಅರಿವನ್ನು ವಿಸ್ತರಿಸುವಂತಿರುತ್ತವೆ. ವೈಚಾರಿಕತೆಯ ಒಂಟಿತನ ಕಾಡುವವರಿಗೆ ಮಾನಸಿಕ ಸ್ವಸ್ಥತೆಯನ್ನು ಕಾಪಾಡುವಲ್ಲಿ ನೆರವಾಗಿದೆ. ಸಂಚಿಕೆಗಳ ಕಥೆ, ಕವನಗಳು ಮನಸ್ಸನ್ನು ಆಹ್ಲಾದಗೊಳಿಸುತ್ತದೆ. ಷ. ಶೆಟ್ಟರ್‌ರವರ 'ಪ್ರಾಕೃತ ಜಗದ್ವಲಯ'ದಂತ ಕೃತಿಯ ಅರ್ಥಪೂರ್ಣ ವಿಮರ್ಶೆ ವಿಶ್ಲೇಷಣೆಗಳು ಪ್ರಕಟವಾಗುತ್ತಿರುವುದು ವಿದ್ವತ್ ಪ್ರಪಂಚದವರನ್ನು ಆಕರ್ಷಿಸುವಂತಿದೆ. ಓದುಗರ ಎಲ್ಲಾ ಬಗೆಯ ದಾಹಗಳನ್ನು ತೃಪ್ತಿ ಪಡಿಸುವ ಪತ್ರಿಕೆಯಾಗಿದೆ. 'ರಾಷ್ಟ್ರೀಯತೆ' ಕುರಿತ ಲೇಖನಗಳು 'ನಾವು ಬದುಕಬೇಕಾದರೆ ಯೂರೋಪ್ ಸಾಯಬೇಕು' ಎಂಬಂತ ಲೇಖನಗಳನ್ನು ಎಂ. ಎ. ವಿದ್ಯಾರ್ಥಿಗಳ ವಿಚಾರ ಸಂಕೀರ್ಣಗಳಲ್ಲಿ ಚರ್ಚೆಯಾಗಿ ಪ್ರೌಢ ವಿದ್ಯಾರ್ಥಿ ಸಮೂಹವನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಬದ್ಧತೆ, ಪ್ರಾಮಾಣಿಕತೆ ಅಪರೂಪವಾಗುತ್ತಿರುವ ಈ ಸಂದರ್ಭದಲ್ಲಿ 'ಹೊಸ ಮನುಷ್ಯ' ಭರವಸೆಯ ಬೆಳಕಾಗಿದೆ.

–ಬಿ.ಪಿ. ವೀರೇಂದ್ರಕುಮಾರ್, ಬೆಂಗಳೂರು
(ಹಿರಿಯ ಕನ್ನಡ ಪ್ರಾಧ್ಯಾಪಕರು)

ಪರಿಹಾರಗಳ ಹುಡುಕಾಟ

'ಹೊಸ ಮನುಷ್ಯ' ನಾನು ಆಸಕ್ತಿಯಿಂದ ಓದುತ್ತಿರುವ ಪತ್ರಿಕೆ. ಕಲುಷಿತಗೊಂಡಿರುವ ಇಂದಿನ ಮಾಧ್ಯಮ ಕ್ಷೇತ್ರದಲ್ಲಿ ಈ ಪತ್ರಿಕೆ ಆರೋಗ್ಯಪೂರ್ಣ ವಿಚಾರಗಳನ್ನು ಹಂಚಿಕೊಳ್ಳುತ್ತಿದೆ. ಸಂಪಾದಕರ ನಿಲುವು ಕೂಡಾ ಇಂದಿನ ಗಂಡಾಂತರಕಾರಿ ವಿದ್ಯಮಾನಗಳನ್ನು ಎದುರಿಸಲು ಅಗತ್ಯವಾದ ವಿಷಯಗಳನ್ನು ಪ್ರಸ್ತುತ ಪಡಿಸುತ್ತಿರುವಂತೆ ಹಲವು ಕಡೆ ಕಂಡಿದೆ. ಹಿಂದೊಮ್ಮೆ ಹಲವು ಭಾರತೀಯ ಸಮಾಜವಾದಿಗಳಿಗೆ ಕಾಂಗ್ರೆಸ್-ನೆಹರೂ-ಕಮ್ಯೂನಿಸ್ಟರ ಬಗೆಗಿದ್ದ ಪೂರ್ವಾಗ್ರಹಗಳಿಂದ 'ಹೊಸ ಮನುಷ್ಯ' ಬಿಡಿಸಿಕೊಂಡಿದೆ.

ನಾಡಿನ, ದೇಶದ ಆರೋಗ್ಯಕರ ಮನಸ್ಸುಗಳ ಅಭಿಪ್ರಾಯಗಳಿಗಷ್ಟೇ ಸೀಮಿತಗೊಳ್ಳದೆ, ಜಗತ್ತಿನ ಹಲವು ಚಿಂತಕರ ವಿಚಾರಗಳನ್ನು ಈ ಪತ್ರಿಕೆ ಪ್ರಕಟಿಸುತ್ತಿರುವುದು ನನ್ನಂಥವರಿಗೆ ಇಷ್ಟವಾಗುವ ವಿದ್ಯಮಾನ. ಸಂಪಾದಕರ ಟಿಪ್ಪಣಿಗಳು ಎಲ್ಲ ಅರ್ಥಪೂರ್ಣ ಚಿಂತಕರ ವಿಚಾರಗಳನ್ನು ಮಂಥನ ಮಾಡಿ ಇಂದಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುತ್ತಿರುವಂತಿರುತ್ತವೆ. ಪರ್ಯಾಯಗಳನ್ನು ಸೂಚಿಸುವಂತೆ ಭಾಸವಾಗುತ್ತದೆ.

ಇಂಥ ಪತ್ರಿಕೆಗಳು ಹೆಚ್ಚಾಗಬೇಕು ಎನ್ನುವುದು ಆಶಯವಾಗಿ ಮಾತ್ರ ಉಳಿಯುತ್ತದೆಂದು ಗೊತ್ತಿದ್ದೂ, ಅಂಥ ಪತ್ರಿಕೆಗಳು ಮುನ್ನಡೆಯಲು ನನ್ನಂಥ ಹಲವಾರು ಜನರ ಸಹಕಾರ ಪ್ರೋತ್ಸಾಹಗಳು ಅತ್ಯವಶ್ಯಕವೆನ್ನುತ್ತೇನೆ. ಆದರೆ ಒಮ್ಮೊಮ್ಮೆ ಸಂಪಾದಕರು ಪತ್ರಿಕೆ ಮುಂದುವರಿಯುವ ಬಗ್ಗೆ ರಾಗವೆಳೆದಾಗ ಆತಂಕವಾಗುತ್ತದೆ. ಯಾವುದೂ ಶಾಶ್ವತವಲ್ಲವೆಂಬ ಅರಿವಿದ್ದೂ 'ಹೊಸ ಮನುಷ್ಯ' ದೀರ್ಘಕಾಲ ಉಳಿದು ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ತೊಡಗಿರಲೆಂದು ಬಯಸುತ್ತೇನೆ.

–ಎಸ್. ಚಂದ್ರಶೇಖರ್, ಬೆಂಗಳೂರು
(ಹಿರಿಯ ಇತಿಹಾಸ ತಜ್ಞರು ಮತ್ತು ಲೇಖಕರು)

ಹುಳುಕುಗಳನ್ನು ಸುಲಿದು ತೋರಿಸುವ ನೋಟ

ಎರಡು ನಾಲಗೆ ನುಡಿ ನಮ್ಮ ಕಾಲದ ದೊಡ್ಡ ಸಮಸ್ಯೆ. ಯಾವುದು ನಿಜ, ಯಾವುದು ಸುಳ್ಳು ಎಂಬುದನ್ನು ಬೇರ್ಪಡಿಸಿ ನೋಡುವುದು ಕಡು ಕಷ್ಟ. ಒಂದು ಸುಳ್ಳನ್ನು ನೂರು ಬಾರಿ ಹೇಳಿದರೆ ನಿಜವಾಗುತ್ತದೆ ಎಂಬುದನ್ನು ಪ್ರಭುತ್ವಗಳೇ ತುಂಬ ವ್ಯವಸ್ಥಿತವಾಗಿ ಪಾಲಿಸಿಕೊಂಡು ಬರುತ್ತಿವೆ. ಕಣ್ಣು, ಕಿವಿ, ಮೆದುಳನ್ನೂ ಸ್ವಾಧೀನಕ್ಕೆ ಪಡೆದು ವಿಜೃಂಭಿಸುತ್ತಿರುವ ವಿದ್ಯುನ್ಮಾನ ಮಾಧ್ಯಮಗಳು ಸತ್ಯಕ್ಕೆ ಪಾತಾಳಗರಡಿ ಹಾಕುವುದು, ಏನನ್ನೇ ಆಗಲು ಸುಲಿದು ನೋಡುವ ಶಕ್ತಿಯನ್ನು ಕಳೆದುಕೊಂಡಿವೆ. ಸರಕಾರ ಮತ್ತು ಕಾರ್ಪೊರೆಟ್ ಶಕ್ತಿಗಳ ವಕ್ತಾರರಂತೆ ವರ್ತಿಸುತ್ತಿವೆ. ಸತ್ಯವನ್ನು ಮಾತಾಡುವವರು, ಬರೆಯುವವರಿಗೆ ಕ್ರಿಮಿನಲ್ ಪಟ್ಟ ಕಟ್ಟಲಾಗುತ್ತಿದೆ. ಇಂಥ ವಾತಾವರಣದಲ್ಲಿ 'ಹೊಸ ಮನುಷ್ಯ'ದಂಥ ಮಾಸಿಕ ನಿಜಕ್ಕೂ ಜನತೆಯ ದನಿಯಾಗುವ, ಅವರಿಗೆ ನೈಜ ಅರಿವನ್ನು ನೀಡುವ ಸಾಹಸವನ್ನು ಮಾಡುತ್ತಿದೆ. ಬಿಜೆಪಿ ಜನಪ್ರಿಯತೆಗೆ ಕುರುಡಾಗದಿರುವ; ಆದರೆ ಆ ಪಕ್ಷದ ಆರ್ಥಿಕ, ಸಾಮಾಜಿಕ ನೀತಿಗಳ ಟೊಳ್ಳುತನವನ್ನು ಡಿಎಸ್‌ಎನ್ ಅವರ ಹಲವು ಬರಹಗಳು ತೆರೆದಿಟ್ಟಿವೆ. ಬಿಜೆಪಿಗೆ ಪರ್ಯಾಯವಾಗಿ ಅವರು ಕಾಂಗ್ರೆಸ್ ಹೇಗೆ ನವೀಕರಣಗೊಳ್ಳಬೇಕು, ತನ್ನ ಬೇರುಗಳತ್ತ ಹೇಗೆ ಸಾಗಬೇಕು, ಗಾಂಧಿಯಂಥವರು ಅದರ ಸ್ಫೂರ್ತಿ ಮೂಲಗಳಾಗಬೇಕು, ತುಕ್ಕು ಹಿಡಿದ ಮುಖಗಳು ಮತ್ತು ಚಿಂತನೆಯನ್ನು ನಿವಾರಿಸಿಕೊಳ್ಳಬೇಕು ಎನ್ನುವುದರತ್ತ ನಮ್ಮ ಗಮನ ಸೆಳೆಯುತ್ತಾರೆ.

'ಹೊಸ ಮನುಷ್ಯ'ದಲ್ಲಿ ೨೦ ಪುಟಗಳಲ್ಲಿ ಹತ್ತು ಹಲವು ಪ್ರಯೋಗಗಳನ್ನು ಸಂಪಾದಕರು ಮಾಡುತ್ತ ಬಂದಿದ್ದಾರೆ. ಹಲವು ಭಿನ್ನ ದನಿಗಳನ್ನು ಕೇಳಿಸುವ ಪ್ರಯತ್ನ ನಿರಂತರವಾಗಿ ಕಾಣಿಸುತ್ತದೆ. ಚಿಂತಕರಿಗೆ ಪ್ರಶ್ನೆಗಳನ್ನು ಕೇಳುವಾಗ ತಮಗೆ ಬೇಕಾದ ಉತ್ತರಗಳನ್ನು ಹೊರಡಿಸುವ ತಂತ್ರಗಳಿಗಿಂತ ತಿಳಿಯುವ, ಅರಿಯುವ ವಿನಯ ಕಾಣಿಸುತ್ತದೆ. ಜಿಎನ್ ದೇವಿ ಅವರೊಂದಿಗಿನ ಸಂದರ್ಶನ, ದೇವನೂರು ಜತೆಗಿನ ಮಾತುಕತೆಯನ್ನು ಈ ಮಾತಿಗೆ ಮಾದರಿಯಾಗಿ ನೋಡಬಹುದು. ಹಲವು ನಿಯತಕಾಲಿಕಗಳ ಅತ್ಯುತ್ತಮ ಬರಹಗಳ ಅನುವಾದ 'ಹೊಸ ಮನುಷ್ಯ'ದಲ್ಲಿ ಕಾಣಿಸುತ್ತದೆ.

ಭಾಷೆ, ಸಂಸ್ಕೃತಿ, ಸಮಾಜದ ಕುರಿತು ಕೆಲವೊಂದು ಹೊಸ ಆಲೋಚನೆ, ಹೊಳಹುಗಳನ್ನು ನೀಡುವ ಕೃತಿಗಳ ಅವಲೋಕನಕ್ಕಿಂತ ಒಂದು ವಾಗ್ವಾದ ಬೆಳೆಸುವುದು, ಚಿಂತನೆಯ ವಿಧಾನವನ್ನು ಬೆಳೆಸುವುದು ಹೆಚ್ಚು ಉಪಯುಕ್ತ. 'ಹೊಸ ಮನುಷ್ಯ'ದ ಪುಟ ವಿನ್ಯಾಸಕ್ಕೆ ಹೊಸತನದ ಅಗತ್ಯವಿದ್ದೇ ಇದೆ.

–ಕೆ.ವೆಂಕಟೇಶ್, ದೊಡ್ಡಬಳ್ಳಾಪುರ
(ಪತ್ರಕರ್ತರು ಮತ್ತು ವಿಮರ್ಶಕರು)

'ಹೊಸಮನುಷ್ಯ' ಪತ್ರಿಕೆಯ ಆಕಸ್ಮಿಕ ಸಂಪರ್ಕಕ್ಕೆ ಇದೇ ವರ್ಷ ಸಿಕ್ಕಿಕೊಂಡ ನಾನು ಇಲ್ಲಿಯ ಬರಹಗಳ ಆಶಯ, ಆಳಗಳನ್ನು ಅರಿತುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಪತ್ರಿಕೆಯ ಜುಲೈ ೨೦೧೯ ಸಂಚಿಕೆಯ ಎಲ್ಲ ಹತ್ತು ಆಯಾಮಗಳ ಸಂದೇಶವನ್ನು ಗ್ರಹಿಸಿಕೊಳ್ಳುವುದು ನನಗೆ ಸಂತೋಷವನ್ನು ನೀಡಿದೆ. ಪತ್ರಿಕೆಗೆ ನಿಧಾನವಾಗಿ ಬರೆಯಬೇಕು ಎನ್ನುತ್ತಿದ್ದ ನನಗೆ ಪತ್ರಿಕೆಯ ಕೊನೆಯ ಪುಟದಲ್ಲಿನ ಮಾರ್ಟಿನ್ ಲೂಥರ್ ಕಿಂಗ್(ಜೂ.) ಅವರ 'ತಿಂಗಳ ಸಾಲು' ಈ ಕ್ಷಣವೇ ಮಾಡು ಎಂದು ತಿವಿದೇ ಹೇಳಿತು. ಪಾರ್ಲಿಮೆಂಟಿನಲ್ಲಿ ಮೋದಿ ತಾಂತ್ರಿಕವಾಗಿ ಬಲಿಷ್ಟವಾಗಿದ್ದರೂ ಸರಕಾರದ ಘೋಷಣೆ ಮತ್ತು ಆಚರಣೆಗಳನ್ನು ದುರ್ಬೀನಿನ ಸೂಕ್ಷ್ಮ ಕಣ್ಣುಗಳಿಂದ ನೋಡಬಯಸುವ ಹೊಸಮನುಷ್ಯರು ಬೇಕು ಎಂಬ ಟಿಪ್ಪಣಿಯ ಮಾತು ಸಾಂದರ್ಭಿಕ ಸತ್ಯವೇ ಆಗಿದೆ.

ವಂದನಾ ಶಿವ, ರಾಮ ಪುನಿಯಾನಿ, ಲಕ್ಷ್ಮೀಶ ತೋಳ್ಪಾಡಿ ಅವರುಗಳ ಚಿಂತನಾ ಪದರಗಳು ಗಮನಿಸತಕ್ಕವುಗಳಾಗಿವೆ. ಸೈಫ್ ಜಾನ್ಸೆಯುವರ ಕವನ ಅರ್ಥಪೂರ್ಣವಾಗಿದೆ. ಪುರಾಣ ಮತ್ತು ಇತಿಹಾಸದ ಬೇರುಗಳಲ್ಲಿ ಆಧುನಿಕತೆಯ ಚಿಗುರುಗಳನ್ನು ಬೆಳೆಯಲೆತ್ನಿಸಿದ ಗಿರೀಶ ಕಾರ್ನಾಡರನ್ನು ಕುರಿತ ಡಿ ಎಸ್ ಎನ್ ಸ್ಮರಣೆ ಸಮಯೋಚಿತ. ದಲಿತರು ಮರೆತ ರಾಮಾನುಜರ ವಿಶಿಷ್ಟಾದ್ವೈತದ ತಿರುಳು ಜೀರ್ಣಿಸಿಕೊಳ್ಳುವಂತಿವೆ. ಪುಸ್ತಕಾವಲೋಕನದಲ್ಲಿ ಸಮಕಾಲೀನ ಸ್ಪಂದನೆಯೊಂದಿಗೆ ಒಂದಿಷ್ಟು ಶ್ರೇಷ್ಠಪುಸ್ತಕಗಳ ಪ್ರಸ್ತಾಪ–ಪರಿಚಯ ಇದ್ದರೆ ಒಳ್ಳೆಯದು.

ಶುಭಕಾಮನೆಗಳಿಂದ ಹೊಸಮನುಷ್ಯನ ಹಸಿವನ್ನು ಹಿಂಗದು, ನಿಜ.. ಆದರೆ ಇದರಿಂದ ಅದರ ಪರಿವಾರದ ಹೊಸಚಿಂತನೆಯ ಹೆಚ್ಚಳವಾದೀತೆಂಬ ಭರವಸೆ ನನ್ನದಾಗಿದೆ.

–ಶಿವಶಂಕರ ಹಿರೇಮಠ, ಹೊಸಪೇಟೆ

ಜುಲೈ ಸಂಚಿಕೆಯಲ್ಲಿನ ನಿಮ್ಮ ಸಾಂಸ್ಕೃತಿಕ ಟಿಪ್ಪಣಿಗಳ ಅಂಕಣದಲ್ಲಿ ಪ್ರಕಟವಾಗಿರುವ ಗಿರೀಶ್ ಕಾರ್ನಾಡ್ ಮತ್ತು ಅವರ ಸಾಹಿತ್ಯ ಕುರಿತು ತಮ್ಮ ವಿಮರ್ಶೆ ಬಹಳ ವಸ್ತುನಿಷ್ಠವಾಗಿದೆ. ಎಡಬಲ ಎನ್ನದೆ ಇಂಥ ಒಂದು ವಸ್ತು ನಿಷ್ಠ ಗ್ರಹಿಕೆ ಮತ್ತು ವಿಮರ್ಶೆ ಎಲ್ಲ ವಿಷಯಗಳಲ್ಲೂ ಬರಬೇಕು. ಪ್ರೊ. ಪುರುಷೋತ್ತಮ ಅಗರ್ವಾಲ್ ಅವರ ಲೇಖನವನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಹಿಂದೂ ಧರ್ಮ ಅಂದರೆ ಸಂತರ ಧರ್ಮ ಎಂಬ ಮಾತುಸರಿ. ಆದರೆ ಅಂಥ ಸಂತರು ಈಗೆಲ್ಲಿ.ವೇಷಭೂಷಣ ಬದಲಾಗಿವೆ. ಬಿ.ಟಿ.ಬೆಳಗಟ್ಟಿ ಕಥನ ಆಪ್ತ ವಾಗಿದೆ.

–ವೆಂಕಟೇಶ ಮಾಚಕನೂರ, ಧಾರವಾಡ

ಜುಲೈ ಸಂಚಿಕೆಯನ್ನು ಸಾಧ್ಯಂತ ಓದಿದೆ. 'ಹೊಸ ಮನುಷ್ಯ'ನ ಸಾಧ್ಯತೆ ಅದೇ ಅಲ್ಲವೆ? ನಿಮ್ಮ ಟಿಪ್ಪಣಿಗಳಿಂದ ಆರಂಭಿಸಿ ಪುಸ್ತಕಾವಲೋಕನದವರೆಗೂ ತೀವ್ರತೆ, ಬದ್ಧತೆ ಹಾಗೂ ಶ್ರದ್ಧೆ ಇರುವ ಕಾರಣವೇ ಅದು ನಮಗೆಲ್ಲ ಪ್ರಿಯವಾಗಿರುವುದು. ಪುನಿಯಾಣಿ, ಲಕ್ಷ್ಮೀಶ ತೋಳ್ಪಾಡಿ ಮತ್ತು ಗಿರೀಶ್ ಕಾರ್ನಾಡರನ್ನು ಕುರಿತ ನಿಮ್ಮ ಬರಹ ಹೊಸ ಅರಿವಿನತ್ತ ಕೊಂಡೊಯ್ಯುವಂಥವು. ಬಿ.ಟಿ. ಬೆಳಗಟ್ಟಿ ಅವರ 'ಒಂದಿಷ್ಟು ನನ್ನದು' ಮತ್ತು 'ಮಲೆಗಳಲ್ಲಿ ಮದುಮಗಳು' ಕುರಿತ ನಿಮ್ಮ ವಿಶ್ಲೇಷಣೆಗಳೂ ಚೆನ್ನಾಗಿವೆ. ಒಟ್ಟಿನಲ್ಲಿ ನಿಮ್ಮ ಶ್ರಮ ಸಾರ್ಥಕ ಎಂದರೆ ಅದು ಕ್ಲೀಷೆಯ ಮಾತಾದೀತೇನೋ.

–ಲೋಕೇಶ್ ಅಗಸನಕಟ್ಟೆ, ಚಿತ್ರದುರ್ಗ

ರಾಮ್ ಪುನಿಯಾನಿ ಅವರು 'ಸಾವರ್ಕರ್–ಗೋಲ್ವಾಲ್ಕರ್ ಮತ್ತು ಸ್ವಾತಂತ್ರ್ಯ ಆಂದೋಲನ ' ಎಂಬ ತಮ್ಮ ಲೇಖನದಲ್ಲಿ ಸಾವರ್ಕರ್ ಪುರಾಣ ಸೃಷ್ಟಿಯಾಗುತ್ತಿದೆ ಎಂದು ಬರೆದಿದ್ದಾರೆ. ಆದರೆ ಸೃಷ್ಟಿಯಾಗುತ್ತಿರುವುದು ಸಾವರ್ಕರ್ ಪುರಾಣ ಅಲ್ಲ, ಪ್ರಚಂಡ ಗಾಂಧಿ ಪುರಾಣ–ಎಲ್ಲ ಆಯಾಮಗಳಲ್ಲಿ. ಸಾವರ್ಕರ್ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಕ್ಷಮಾಪಣಾ ಪತ್ರಗಳನ್ನು ಬರೆದದ್ದನ್ನು ಒಂದು ಕಾಲೋಚಿತ 'ತಂತ್ರವೆಂದು ಏಕೆ ಪರಿಗಣಿಸಬಾರದು? ತಂತ್ರ ಪ್ರಯೋಗ ಕೇವಲ ಎಡಪಂಥೀಯರ ಹಕ್ಕೇ? ಗಾಂಧಿ ಕೊಲೆ ಖಟ್ಲೆಯಲ್ಲಿ ಸಾವರ್ಕರ್‌ರ ಪಾತ್ರದ ಬಗ್ಗೆ ಪದೇ ಪದೇ ಪ್ರಸ್ತಾಪ ಮಾಡುತಿದ್ದ ನೆಹರೂ ಅವರ ವರ್ತನೆಯನ್ನು ಆಗ ಕಾನೂನು ಮಂತ್ರಿಯಾಗಿದ್ದ ಅಂಬೇಡ್ಕರ್ ಅವರು ಸರಿಯಲ್ಲವೆಂದು ಟೀಕಿಸಿದ್ದು ಸುಳ್ಳೇ?

–ಎಂ. ಪ್ರಭಾಕರ ಜೋಷಿ, ಮಂಗಳೂರು

ಸ್ವಾತಂತ್ರ್ಯ ಆಂದೋಲನದ ಸಮಯದಲ್ಲಿ ಸಾವರ್ಕರ್ ಬ್ರಿಟಷ್ ಸರ್ಕಾರಕ್ಕೆ ಹ ಕ್ಷಮಾಪಣಾ ಪತ್ರ ಬರೆದುಕೊಟ್ಟು ಸೆರೆಮನೆಯಿಂದ ಹೊರಬಂದ ಹಾಗೇ ತುರ್ತು ಪರಿಸ್ಥಿತಿ ಕಾಲದಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕರಾಗಿದ್ದ ಬಾಳಾಸಾಹೇಬ್ ದೇವರಸ್ ಮತ್ತವರ ಅನೇಕ ಅನುಯಾಯಿಗಳು ಇಂದಿರಾ ಸರ್ಕಾರಕ್ಕೆ ಕ್ಷಮಾಪಣಾ ಪತ್ರಗಳನ್ನು ಬರೆದುಕೊಟ್ಟು ಸೆರಮನೆಗಳಿಂದ ಬಿಡುಗಡೆಯಾದರು. ಆದರೂ ಅವರು ದೇಶಭಕ್ತರು ಮತ್ತು ವೀರರು! ಇದು ಹೇಗೆಂದು ಕೇಳಿದರೆ ಸಂಘ ಪರಿವಾರಿಗಳು ಅದು ತಂತ್ರ ಎನ್ನುತ್ತಾರೆ! ಯಾವ ಉದ್ದೇಶಕ್ಕಾಗಿ ತಂತ್ರ? ಸಾವರ್ಕರ್ ಸೆರೆಮನೆಗಳಿಂದ ಹೊರಬಂದು ಏನು ಮಾಡಿದರು? ಸಾವರ್ಕರ್ ತಮ್ಮ ಕ್ಷಮಾಪತ್ರಕ್ಕನುಗುಣವಾಗಿಯೇ ಬ್ರಿಟಿಷ್ ಪ್ರಭುತ್ವದ ಬಾಲ ಬಡಿಯುತ್ತಾ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಬಾರದೆಂದು ತಮ್ಮ ಅನುಯಾಯಿಗಳಿಗೆ ಕರೆಕೊಟ್ಟದ್ದು ಸುಳ್ಳೇ?

–ಆರ್.ಎಂ. ಜನಾರ್ದನ, ಮೈಸೂರು

ತಿದ್ದುಪಡಿ: ಜುಲೈ ಸಂಚಿಕೆಯಲ್ಲಿ ಪುಸ್ತಕಾವಲೋಕನದಲ್ಲಿ ಪ್ರಕಟವಾದ ಡಾ. ಎಚ್.ಟಿ. ಕೃಷ್ಣಮೂರ್ತಿಯವರ ವಿಮರ್ಶೆ ಲೋಕೇಶ್ ಅಗಸನಕಟ್ಟೆಯವರ 'ನಾನು ದೇವರೂ ಅಲ್ಲ! ದೇವಮಾನವನೂ ಅಲ್ಲ!!' ಎಂಬ ಕೃತಿಯ ಬಗ್ಗೆ ಆಗಿತ್ತು. ಅಲ್ಲಿ ತಿಳಿಸಿದಂತೆ ಅವರ 'ಅತೀತ ಲೋಲದ ಮಹಾ ಮಾಂತ್ರಿಕ' ಕಾದಂಬರಿಯ ಬಗ್ಗೆ ಅಲ್ಲ. ವಿಮರ್ಶಕ ಮತ್ತು ಪತ್ರಿಕೆಯಸಂಪಾದಕರ ನಡುವಣ ಸಂವಹನದ ಗೊಂದಲದಿಂದಾದ ಈ ಲೋಪಕ್ಕಾಗಿ ಕ್ಷಮೆ ಕೋರುತ್ತೇವೆ.

ಇನ್ನು ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಲಕ್ಷ್ಮೀಶ ತೋಳ್ಪಾಡಿಯವರ ಲೇಖನವನ್ನು ಧ್ವನಿಯಿಂದ ಲಿಪಿಗೆ ತಂದವರು ಬಿ.ವಿ. ಸುರೇಂದ್ರ.. ಈ ಮಾಹಿತಿ ನಮ್ಮ ಕಣ್ತಪ್ಪಿನಿಂದಾಗಿ ಕೈಬಿಟ್ಟು ಹೋದುದಕ್ಕಾಗಿ ವಿಷಾದಿಸುತ್ತೇವೆ–ಸಂ.

'ಹೊಸ ಮನುಷ್ಯ'ದ
ವಾರ್ಷಿಕ ವಿಶೇಷಾಂಕ–೨೦೧೯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳನ್ನು ಕೋರುವವರು



ಶ್ರೀ ಜಯರಾ ಪಾಟೀಲ ಮತ್ತು ಕುಟುಂಬ, ಹದಜನ, ಮೈಸೂರು
ಶ್ರೀ ಎಚ್.ಎಂ. ಶಿವಾನಂದ ಮತ್ತು ಕುಟುಂಬ, ಹಂಸಗಾರು ಸಾಗರ ತಾ, ಶಿವಮೊಗ್ಗ ಜಿಲ್ಲೆ
ಅವಿರತ ಪ್ರತಿಷ್ಠಾನ, ಬೆಂಗಳೂರು
ಶ್ರೀಮತಿ ಸುಮನ ಸದಾನಂದ ಮತ್ತು ಕುಟುಂಬ, ಬಸವೇಶ್ವರ ನಗರ, ಬೆಂಗಳೂರು
ಶ್ರೀ ಕೆ.ಎನ್. ಮಂಜುನಾಥ್, ಯುನೀಕ್ ರಿಯಾಲಿಟೀಸ್, ಬೆಂಗಳೂಋುಲು
ಶ್ರೀ ಜಿ.ಡಿ. ಮಂಜುನಾಥ್, ನರ್ಮದಾ ಪೈಪ್ಸ್, ಬೆಂಗಳೂರು
ಶ್ರೀ ಎಸ್.ಎಸ್. ಲಕ್ಷ್ಮಣಗೌಡ ಮತ್ತು ಕುಟುಂಬ, ಕಾಫಿ ಬೆಳೆಗಾರರು, ಸಾರಗೋಡು ಗ್ರಾಮ, ಮೂಡಿಗೆರೆ, ತಾ.
ಶ್ರೀ ಚೆಂಗಪ್ಪ ಮತ್ತು ಕುಟುಂಬ, ಕಾಫಿ ಬೆಳೆಗಾರರು, ತಲ್ತಾರೆ ಶೆಟ್ಟಿಹಳ್ಳಿ, ಸೋಮವಾರಪೇಟೆ ತಾ. ಕೊಡಗು ಜಿ.
ಶ್ರೀ ಕೆ.ಜಿ. ಶ್ರೀನಿವಾಸ್, ಸಪ್ತಗಿರಿ ಡೆವಲಪರ್ಸ್, ಬೆಂಗಳೂರು
ಶ್ರೀ ಎಸ್. ಪಾಪಣ್ಣ, ಕೈಗಾರಿಕೋದ್ಯಮಿಗಳು, ಶ್ರೀರಾಮಕೃಷ್ಣ ಇಂಡಸ್ಟ್ರೀಸ್, ಬೆಂಗಳೂರು
ದೀನಬಂಧು ಟ್ರಸ್ಟ್, ಚಾಮರಾಜನಗರ
ಶ್ರೀ ಎನ್.ಆರ್. ಬಾಲಸುಬ್ರಮಣ್ಯ ಮತ್ತು ಕುಟುಂಬ, ನೆರಳೂರು
ಶ್ರೀ ವೈ. ಮಹೇಶ್ ಮತ್ತು ಕುಟುಂಬ, ಮೈಸೂರು
ಶ್ರೀ ಕೆ. ಅರ್ಕೇಶ್ ಮತ್ತು ಕುಟುಂಬ, ಮೈಸೂರು
ಶ್ರೀ ಚರಣರಾಜ, ಎಂ.ಜಿ. ಬೆಂಗಳೂರು
ಡಾ. ದಿನಕರ ದೇಸಾಯಿ ಪ್ರತಿಷ್ಠಾನ(ರಿ.), ಅಂಕೋಲಾ ಮತ್ತು ಡಾ. ಅಮ್ಮೆಂಬಳ ಬಾಳಪ್ಪ ಪ್ರತಿಷ್ಠಾನ, ಬಂಟ್ವಾಳ
ಶ್ರೀ ಟಿ.ಪಿ. ಬಾಲಸುಬ್ರಂಣ್ಯ ಮತ್ತು ಕುಟುಂಬ, ಸಾಗರ
ಶ್ರೀ ಎಲ್. ಕಾಳಪ್ಪ, ಕಾರ್ಯದರ್ಶಿ ಬಿ.ಎಂ.ವಿ. ವಿದ್ಯಾಸಂಸ್ಥೆ, ಭಕ್ತರಹಳ್ಳಿ, ಶಿಡ್ಲಘಟ್ಟ ತಾ., ಚಿಕ್ಕಬಳ್ಳಾಪುರ ಜಿ.
ಪ್ರೊ. ನಾಗರಾಜೇಗೌಡ, ಅಧ್ಯಕ್ಷರು, ಬಿ.ವಿ.ಪಿ. ವಿದ್ಯಾಸಂಸ್ಥೆ, ಮಳವಳ್ಳಿ
ಶ್ರೀಮತಿ ಸುವರ್ಣ ಕಾಡನಕುಪ್ಪೆ ಮತ್ತು ಕುಟುಂಬ, ಮೈಸೂರು
ಡಾ. ವಿಜಯಾನಂದ, ಓಜೋನ್ ಡಯೋಗ್ನಾಸ್ಟಿಕ್ ಹೆಲ್ತ್‌ಕೇರ್, ಮೈಸೂರು
ಪ್ರೊ. ಎಂ. ಚಂದ್ರಶೇಖರಯ್ಯ ಮತ್ತು ಕುಟುಂಬ, ಭದ್ರಾವತಿ
ಶ್ರೀ ಶ್ರೀಧರಮೂರ್ತಿ ಮತ್ತು ಕುಟುಂಬ, ಬೆಂಗಳೂರು
ಶ್ರೀ ಎಸ್.ಬಿ. ಸುರೇಶ ಮತ್ತು ಕುಟುಂಬ, ಬೆಂಗಳೂರು
ಶ್ರೀ ಎಸ್. ಬಿ .ರಮೇಶ್ ಮತ್ತು ಕುಟುಂಬ, ಶಿವಮೊಗ್ಗ
ಪ್ರೊ. ಜೆ.ಎಲ್. ಪದ್ಮನಾಭ ಮತ್ತು ಕುಟುಂಬ, ಶಿವಮೊಗ್ಗ
ಶ್ರೀ ರವಿ ಸಸಿತೋಟ ಮತ್ತು ಕುಟುಂಬ, ಶಿವಮೊಗ್ಗ
ಶ್ರೀಗುರುಕುಲ ಎಜುಕೇಷಲ್ ಚಾರಿಟಬಲ್ ಟ್ರಸ್ಟ್, ತಿಪಟೂರು
ಶ್ರೀ ಬಿ.ಎಸ್. ದಿವಾಕರ ಮತ್ತು ಕುಟುಂಬ ಆಲ್ಮೋರಾ, ಉತ್ತರಾಖಂಡ
ಪ್ರೊ. ಎಂ.ಜಿ. ಈಶ್ವರಪ್ಪ, ದಾವಣಗೆರೆ

'ಅರಿವಿನ ಕನ್ನಡ' : 'ಹೊಸ ಮನುಷ್ಯ'ದ ಒಂದು ವರ್ಷದ ಹಿನ್ನೋಟ

–ಗೀತಾ ವಸಂತ



ಸಮುದಾಯವೊಂದರ ಗ್ರಹಿಕೆಯ ಕ್ರಮವನ್ನು ರೂಪಿಸುವಂತಹ ಪತ್ರಿಕೆಗಳ ಕೊರತೆ ಬಹುವಾಗಿ ಕಾಡುತ್ತಿರುವ ಇಂದಿನ ಸನ್ನಿವೇಶದಲ್ಲಿ 'ಹೊಸಮನುಷ್ಯ' ಪತ್ರಿಕೆಯು ಆ ಕೊರತೆಯನ್ನು ನೀಗುತ್ತಿರುವುದು ಮಹತ್ವದ ವಿದ್ಯಮಾನ. ತಾತ್ವಿಕ ಒಳನೋಟವನ್ನು ರೂಪಿಸಬೇಕಾಗಿದ್ದ ಬೌದ್ಧಿಕ ಪರಿಸರವು ಇಂದು ಪೂರ್ವಗ್ರಹ ಪೀಡಿತವೂ, ಏಕಾಕೃತಿಯವೂ ಆದ ಆಲೋಚನೆಗಳನ್ನು ಹೇರುತ್ತಿದೆ. ಈ ಅಪಾಯದಿಂದ ತಪ್ಪಿಸಿಕೊಂಡು ಮುಕ್ತ ಗ್ರಹಿಕೆಯಲ್ಲಿ ಶೋಧಿತವಾಗುವ ಒಳನೋಟಗಳಿಗೆ ಪತ್ರಿಕೆಯ ಸಂಚಿಕೆಗಳು ಕನ್ನಡಿ ಹಿಡಿದಿವೆ.

ವಿಶೇಷ ಸಂಚಿಕೆಯಾಗಿ ರೂಪುಗೊಂಡ ೨೦೧೮ ಆಗಸ್ಟ್ ಸಂಚಿಕೆಯು ವೈವಿಧ್ಯಮಯ ಬರಹಗಳಿಂದ ಗಮನಸೆಳೆಯುತ್ತದೆ. ವರ್ತಮಾನದ ಬಿಕ್ಕಟ್ಟುಗಳನ್ನು ಸೂಕ್ಷ್ಮವಾಗಿ ವಿವೇಚಿಸುವ ಲೇಖನಗಳು ಪ್ರಖರವೂ ಆಗಿವೆ. ಕನ್ನಡದ ಸೃಜನಶೀಲ ಬರವಣಿಗೆಯ ಸತ್ವವನ್ನೂ ವೈವಿಧ್ಯವನ್ನೂ ಪರಿಚಯಿಸುವ ಪ್ರಯೋಗಶೀಲತೆ ಈ ಸಂಚಿಕೆಯನ್ನು ಸಂಗ್ರಹಯೋಗ್ಯವಾಗಿಸಿದೆ. ವಿಶೇಷ ಸಂಚಿಕೆಯಲ್ಲಿ ಸಂಪಾದಕರು ನಾನು ಓದಿದ ಕನ್ನಡದ ಅತ್ಯುತ್ತಮ ಪುಸ್ತಕ ಎಂಬ ಪರಿಕಲ್ಪನೆಯನ್ನು ಕೊಟ್ಟು ಕನ್ನಡದ ಪ್ರಮುಖ ಸೃಜನಶೀಲ ಮನಸ್ಸುಗಳನ್ನು ಮಾತನಾಡಿಸಿದ್ದಾರೆ. ಇದರಿಂದ ಭಿನ್ನ ಆಲೋಚನಾಕ್ರಮಗಳು ಹೊರಬಂದದ್ದಷ್ಟೇ ಅಲ್ಲ, ಕನ್ನಡದ ಅನೇಕ ಮಹತ್ವದ ಕೃತಿಗಳು ಚರ್ಚೆಗೊಳಪಟ್ಟವು. ಇಂಥ ಪ್ರಯೋಗಶೀಲ ಹುಡುಕಾಟ ಹಾಗೂ ಲೇಖಕರನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸುವಿಕೆ 'ಹೊಸಮನುಷ್ಯ'ದ ಮೌಲ್ಯವನ್ನು ಹೆಚ್ಚಿಸಿದೆ.

ನಮ್ಮ ಕಾಲವು ಧರ್ಮಸಂಕಟಗಳ ಕಾಲ. ಭಾರತದಲ್ಲಿ ಹಿಂದುತ್ವ ರಾಜಕಾರಣವು ಸೃಷ್ಟಿಸುತ್ತಿರುವ ಉದ್ವಿಗ್ನತೆ, ೨೦೧೮ರಲ್ಲಿ ಲಿಂಗಾಯತ/ವೀರಶೈವರು ಹಿಂದೂಗಳು ಹೌದೇ, ಅಲ್ಲವೇ ಎಂದು ಕರ್ನಾಟಕದಲ್ಲಿ ನಡೆದ ತಾತ್ವಿಕ ಜಿಜ್ಞಾಸೆಗಳು ಧರ್ಮದ ಪರಿಭಾವಿಸುವಿಕೆಯಲ್ಲಿರುವ ತೊಡಕುಗಳನ್ನು ಬಿಡಿಸಿಕೊಳ್ಳಬೇಕಾದ ಅಗತ್ಯವನ್ನು ಮನಗಾಣಿಸುತ್ತಿವೆ. ನಮ್ಮ ಕಾಲದ ಧರ್ಮಸಂಕಟಗಳು ಎಂಬ ಲಕ್ಷ್ಮೀಶ ತೋಳ್ಪಾಡಿಯವರ ಲೇಖನವು ಧರ್ಮಗ್ರಂಥಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಎಂಬ ಪ್ರಶ್ನೆಯನ್ನು ಮುಂದಿರಿಸಿಕೊಂಡು ನಮ್ಮ ದೇಶದ ಧಾರ್ಮಿಕ ಸಂದರ್ಭವನ್ನು ವಿಶ್ಲೇಷಿಸಿದೆ. ಹಿಂದೂಗಳು ಬಲಿಷ್ಠರಾಗಬೇಕೆಂಬ ಶಕ್ತಿರಾಜಕಾರಣವನ್ನು ಸೃಷ್ಟಿಸುತ್ತಿರುವ ಆರ್.ಎಸ್.ಎಸ್., ನಮ್ಮ ಧರ್ಮವು ಅಪಾಯದಲ್ಲಿದೆ ಎಂಬ ಉದ್ವಿಗ್ನತೆಯನ್ನು ಸೃಷ್ಟಿಸುವ ಮೂಲಕ ಬಲಗೊಳ್ಳುತ್ತಿದೆ. ಇಮೇಜುಗಳನ್ನು ಬೆಳೆಸಲು ಬಳಕೆಯಾಗುತ್ತಿರುವ ಧರ್ಮವು ನಿಜವಾದ ವ್ಯಕ್ತಿತ್ವವನ್ನು ಬೆಳೆಸುವ ದಾರಿಯಾಗಬೇಕಿತ್ತು ಎಂಬ ಒಳನೋಟ ತೋಳ್ಪಾಡಿಯವರಲ್ಲಿದೆ. ದರ್ಶನಶಾಸ್ತ್ರಗಳನ್ನು ನೋಡಿದಾಗ ಹಿಂದೂಧರ್ಮವೆಂಬುದೇ ಭಿನ್ನಮತೀಯರೊಂದಿಗೆ ನಡೆಸಿದ ನಿರಂತರ ಸಂವಾದ! ಇಂದಿನ ಪರ–ವಿರೋಧದಲ್ಲಿ ಕಳೆದ ಗುಂಪುರಾಜಕಾರಣದಲ್ಲಿ ಮುಚ್ಚಿ ಹೋದ ನಿಜ ಕಾಣ್ಕೆಗಳನ್ನು ಲಕ್ಷ್ಮೀಶ ತೋಳ್ಪಾಡಿಯವರ ಲೇಖನ ಹೊಳೆಯಿಸಿದ ಪರಿ ಅನನ್ಯವಾಗಿದೆ. 'ಬಹುಧರ್ಮ ಭಾರತ ಕಥನ' ಎಂಬ ಲೇಖನದಲ್ಲಿ ಎಚ್.ಎಸ್.ಶಿವಪ್ರಕಾಶಕರು ಹಿಂದೂ ಪದದ ಕುರಿತ ಸಂಕಥನಗಳನ್ನು ಬಿಚ್ಚಿಡುತ್ತ ಹೋಗುತ್ತಾರೆ. ಲಿಂಗಾಯತರು ಹಿಂದೂಗಳು ಹೌದೇ, ಅಲ್ಲವೇ ಎಂದು ಸಮಕಾಲೀನ ಸಂದರ್ಭದಲ್ಲಿ ಭುಗಿಲೆದ್ದ ಪ್ರಶ್ನೆಯನ್ನು ಬಹುವಿಸ್ತಾರವಾದ ತಾತ್ವಿಕ ಕ್ಯಾನ್‌ವಾಸ್‌ನಲ್ಲಿಟ್ಟು ನೋಡುತ್ತಾರೆ. ಧರ್ಮವನ್ನು ರಿಲಿಜನ್ ಎಂಬರ್ಥದ ಪಶ್ಚಿಮದ ಮಾದರಿಯಲ್ಲಿ ಅರ್ಥೈಸಹೊರಟಾಗ ತಲೆದೋರುವ ವೈಚಾರಿಕ ಎಡವಟ್ಟುಗಳ ಕುರಿತು ಅವರು ಪ್ರಸ್ತಾಪಿಸುತ್ತಾರೆ. ಹನ್ನೆರಡನೇಯ ಶತಮಾನವು ಬರಿಯ ಬಸವಯುಗವಲ್ಲ ಅದು ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸೂಳೆಸಂಕವ್ವೆಯರ ಯುಗವೂ ಹೌದು ಎನ್ನುವಲ್ಲಿ ಧರ್ಮವು ಒಳಗೊಳ್ಳಬೇಕಾದ ಬಹುತ್ವದ ನೆಲೆಗಳನ್ನು ಸೂಚಿಸುತ್ತಾರೆ.





'ಸಮುದಾಯ ಉಳಿದರೆ ಮಾತ್ರ ಭಾಷೆ ಉಳಿದಾವು' ಎನ್ನುವ ಭಾಷಾತಜ್ಞ ಜಿ.ಎನ್.ದೇವಿಯವರೊಂದಿಗಿನ ಮಹತ್ವದ ಸಂದರ್ಶನದಲ್ಲೂ ಸಮುದಾಯ ಕೇಂದ್ರಿತ ಧ್ವನಿ ಪ್ರಧಾನವಾಗಿದೆ. ಭಾಷೆಯೆಂಬುದು ಅಸ್ಮಿತೆಯ ಸಂಗತಿಯಾಗದೇ ಅಕ್ರಮಣಕಾರಿ ಶಕ್ತಿಯಾಗಿ ಬೆಳೆಯುತ್ತಿರುವ ಭಾಷಾ ರಾಜಕಾರಣದ ಬಗ್ಗೆ ಆತಂಕವನ್ನು ಅವರು ವ್ಯಕ್ತಪಡಿಸುತ್ತಾರೆ. ಕೆ.ಸತ್ಯನಾರಾಯಣ ಅವರ 'ಸಾಹಿತ್ಯ ಸಮಾಜ ಅಂದು – ಇಂದು' ಎಂಬ ಲೇಖನವು ಸಾಹಿತ್ಯದ ಸಂವೇದನೆಯು ಸಾಮಾಜಿಕ ರಚನೆ ಹಾಗೂ ಪ್ರಭುತ್ವದೊಡನೆಯ ಒಡನಾಟದಲ್ಲಿ ಹೇಗೆಲ್ಲಾ ರೂಪುಗೊಳ್ಳುತ್ತ ಹೋಗುತ್ತದೆಯೆಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿದೆ.


ಭಾರತದ ಸಂದರ್ಭದಲ್ಲಿ ಸಾಮಾಜಿಕ, ಆಧ್ಯಾತ್ಮಿಕ, ದಾರ್ಶನಿಕ, ರಾಜಕೀಯ ತಿಳಿವುಗಳನ್ನು ವಿಸ್ತರಿಸುವಲ್ಲಿ ಗಾಂಧಿ, ಲೋಹಿಯಾ, ಅಂಬೇಡ್ಕರ್ ಮುಂತಾದವರ ಪಾತ್ರ ಹಿರಿದಾದದ್ದು. ಅರಿವಿನ ಅನನ್ಯತೆಯನ್ನು ಸೈದ್ಧಾಂತಿಕ ಹಿನ್ನೆಲೆಯಿಂದ ಮಾತ್ರ ನೋಡದೇ ಸಮಗ್ರವಾಗಿ ಗ್ರಹಿಸಬೇಕೆಂಬ ನೋಟವೇ 'ಹೊಸಮನುಷ್ಯ'ದ ಬರಹಗಳನ್ನು ಸಿದ್ಧಮಾದರಿಯ ಮಾಮೂಲಿ ಜಾಡಿನಿಂದ ಹೊರತಾಗಿಸಿದೆ. ಹೊಸಮನುಷ್ಯದ ಅಕ್ಟೋಬರ್ ಸಂಚಿಕೆಯಲ್ಲಿ ಇವತ್ತಿಗೆ ಗಾಂಧಿ ಏಕೆ ಎಷ್ಟು ಬೇಕು? ಎಂಬ ಸಮೀಕ್ಷೆಯಿದೆ. ಕಡಿದಾಳು ಶಾಮಣ್ಣ, ರಾಜೇಂದ್ರ ಚೆನ್ನಿ, ಜಿ.ರಾಜಶೇಖರ, ಎಚ್.ಎಸ್.ರಾಘವೇಂದ್ರರಾವ್, ಶಾರದಾಗೋಪಾಲ ಮುಂತಾದವರು ಕಟ್ಟಿದ ಈ ಮಾಲಿಕೆ ಭಿನ್ನದಾರಿಗಳ ಮೂಲಕ ಗಾಂಧಿ ಎಂಬ ಸಮಗ್ರತೆಯನ್ನು ತಲುಪುವ ಕ್ರಮವಾಗಿ ಮಹತ್ವದ್ದೆನಿಸುತ್ತದೆ.


'ಹೊಸಮನುಷ್ಯ' ಪ್ರಬುದ್ಧವಾದ ರಾಜಕೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ಹಾಕುತ್ತಿರುವ ಹೆಜ್ಜೆಗಳು ಕುತೂಹಲಕಾರಿಯಾಗಿ ಕಾಣಿಸುತ್ತವೆ. ಸಮಕಾಲೀನ ರಾಜಕಾರಣದ ಆಗುಹೋಗುಗಳಿಗೆ ತೀವ್ರವಾಗಿಯೂ ತೀಕ್ಷ್ಣವಾಗಿಯೂ ಪ್ರತಿಕ್ರಿಯಿಸುವ ಬರಹಗಳು ಸಂಪಾದಕರ ಟಿಪ್ಪಣಿಗಳಲ್ಲಿ ನಿರಂತರವಾಗಿ ಮೂಡಿಬಂದಿದೆ. ಪಕ್ಷರಾಜಕಾರಣ ಮಾತ್ರವಲ್ಲ ಸಾಹಿತ್ಯ, ಸಂಸ್ಕೃತಿ ಕ್ಷೇತ್ರದ ಟೊಳ್ಳುತನಗಳೂ ಇಲ್ಲಿ ಮುಲಾಜಿಲ್ಲದೆ ಟೀಕೆಗೊಳಗಾಗಿವೆ. ಸರ್ಕಾರದ ಅಭಿವೃದ್ಧಿ ನೀತಿಗಳು, ಭಾಷಾನೀತಿಗಳು ಹಾಗೂ ಅವು ತಂದೊಡ್ಡುವ ಅಪಾಯಗಳನ್ನು ಕಾಣಿಸಿ ಎಚ್ಚರಿಸುವ ಕಾಳಜಿಯೊಂದು ಈ ಬರಹಗಳ ಹಿಂದಿದೆ. ಇವುಗಳನ್ನು ವಿರೋಧಿಸುವ ಪ್ರಾಮಾಣಿಕ ಜನಚಳವಳಿಗಳ ಕೊರತೆ• ಕಾಡುತ್ತಿರುವ ಸಂದರ್ಭದಲ್ಲಿ ಹುಟ್ಟಿಕೊಂಡ ಹುಸಿ ಹೋರಾಟಗಳ ಅಪ್ರಮಾಣಿಕತೆಯನ್ನೂ ಎತ್ತಿತೋರಿಸಲು ಈ ಬರಹಗಳು ಧೈರ್ಯತೋರಿವೆ. ವಿಶ್ವವಿದ್ಯಾನಿಲಯಗಳ ಬೌದ್ಧಿಕ ಬಳಲಿಕೆ, ಸಂಘ–ಸಂಸ್ಥೆಗಳ ಪ್ರಶಸ್ತಿ ರಾಜಕೀಯ ಹೀಗೆ ಪ್ರಸ್ತುತ ವಿದ್ಯಮಾನಗಳನ್ನು ಚೂಪುನೋಟದಲ್ಲಿ ವಿಶ್ಲೇಷಿಸುವ ಸಂಪಾದಕೀಯ ಬರಹಗಳು ಸಾಮಾಜಿಕ ಹಾಗೂ ನೈತಿಕ ಎಚ್ಚರವನ್ನು ಕಾಯ್ದುಕೊಳ್ಳುವಂತೆ ಪ್ರೇರೇಪಿಸುವ ಕಸುವು ಉಳಿಸಿಕೊಂಡಿವೆ.

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಗೆ ಐವತ್ತು ವರ್ಷವಾದ ಸಂದರ್ಭದಲ್ಲಿ ಅದನ್ನು ಮರುಓದಿಗೆ ಒಳಪಡಿಸಿದ ಸಂದರ್ಭವನ್ನು ಹೊಸಮನುಷ್ಯದ ಸಂಚಿಕೆಗಳು ದಾಖಲಿಸಿವೆ. ಕನ್ನಡದ ಸೃಜನಶೀಲತೆಗೆ ಹೊಸಮಜಲನ್ನು ಕಟ್ಟಿಕೊಟ್ಟ ಮಹತ್ವದ ಕಾದಂಬರಿಯೊಂದರ ವಿಶ್ಲೇಷಣೆಯ ಮೂಲಕ ನಡೆದ ಚರ್ಚೆಗಳು








ಆಸಕ್ತಿದಾಯಕವಾಗಿದೆ. ಇದಕ್ಕೆ 'ನುಡಿ ತೋರಣ'ವನ್ನು ಬರೆದ ಡಿ.ಎಸ್.ಎನ್. ಲೋಹಿಯಾ ಹಾಗೂ ಕುವೆಂಪು ವಿಚಾರಗಳಿಗಿರುವ ಸಾಮ್ಯವನ್ನು ಗುರುತಿಸುತ್ತಾರೆ. ಕಾದಂಬರಿಯ ಕುರಿತ ನಮ್ಮ ಮೂಲಭೂತ ಪರಿಕಲ್ಪನೆಗಳನ್ನೇ ಬದಲಿಸಿದ 'ಮಲೆಗಳಲ್ಲಿ ಮದುಮಗಳು' ಅದುವರೆಗಿನ ವಾಸ್ತವತಾವಾದಿ ನೆಲೆಗಳನ್ನು ದಾಟಿ ಕನ್ನಡದ ಹೊಸ ಭಾಷೆ ಮತ್ತು ಸಂಸ್ಕೃತಿಯ ಕೋಶಗಳನ್ನು ಹುಡುಕಿ ಸೃಜನಶೀಲವಾಗಿ ಮರುರೂಪಿಸಿದೆ. ಈ ಕಾದಂಬರಿಯ ಓದು ಚಾರಿತ್ರಿಕವಾಗಿಯೂ ಮಹತ್ವದ್ದು. ಡಿಸೆಂಬರ್ ಸಂಚಿಕೆಯಲ್ಲಿ ಈ ಕಾದಂಬರಿಯ ಕುರಿತು ಓ.ಎಲ್.ನಾಗಭೂಷಣ ಸ್ವಾಮಿಯವರ ಬರಹ ಮೌಲಿಕವಾಗಿದೆ. ಆಧುನಿಕ ಯುಗದಲ್ಲಿ ಮಹಾಕಾವ್ಯವು ಕಾದಂಬರಿ ರೂಪದಲ್ಲಿ ಮೈದಾಳುವದೆಂಬ ಗ್ರಹಿಕೆ ವಿಶಿಷ್ಟವಾದುದು. ಮಲೆಗಳಲ್ಲಿ ಮದುಮಗಳು ವರ್ತಮಾನದ ಗೋಜಲುಗಳನ್ನು ಗ್ರಹಿಸುವ ನೆಲೆಗೆ ಮಾತ್ರ ಸೀಮಿತವಾಗದೆ, ಮನುಷ್ಯನ ಆಧ್ಯಾತ್ಮಿಕ ಅನ್ವೇಷಣೆಯನ್ನು ಗಹನವಾಗಿ ಮಂಡಿಸುವ ಕೃತಿ ಎಂಬ ಒಳನೋಟವೊಂದು ಇಲ್ಲಿ ಮಂಡಿತವಾಗಿದೆ. ಸಬಿತಾ ಬನ್ನಾಡಿಯವರ ಲೇಖನವೂ ಈ ದೃಷ್ಟಿಯಿಂದ ಗಮನಾರ್ಹ..

ಸಾಹಿತ್ಯಿಕ ಚರ್ಚೆಗಳನ್ನು ಹುಟ್ಟುಹಾಕುವ ಹಾಗೂ ಮುನ್ನಡೆಸುವ ಸಂಯಮದ ದಾರಿಗಳನ್ನು 'ಹೊಸಮನುಷ್ಯದ ಬರಹಗಳು ಸೃಷ್ಟಿಸಿವೆ. ಇದನ್ನು ೨೦೧೮-೧೯ನೇ ಸಾಲಿನಲ್ಲಿ ಎಲ್ಲ ಸಂಚಿಕೆಗಳಲ್ಲಿ ಪ್ರಕಟವಾದ ಪುಸ್ತಕ ವಿಮರ್ಶೆಗಳ ಕುರಿತೂ ಹೇಳಬಹುದು. ಈ ಸಮಯದಲ್ಲಿ ಕನ್ನಡದಲ್ಲಿ ಬಂದ ಪ್ರಮುಖ ಪುಸ್ತಕಗಳನ್ನು ವಿಮರ್ಶೆಗೆ ಒಡ್ಡಿದ ಮಾದರಿಯು ನಿಜಕ್ಕೂ ಕನ್ನಡ ವಿಮರ್ಶೆಯ ದೃಷ್ಟಿಯಿಂದ ದಿಗ್ದರ್ಶಕವಾದುದು.

ಜನವರಿ ಸಂಚಿಕೆಯು ಸಂವಿಧಾನದ ಕುರಿತಾದ ಬಿಕ್ಕಟ್ಟುಗಳನ್ನು ಚರ್ಚಿಸಿದೆ. ಪ್ರಸ್ತುತ ಸಂದರ್ಭದಲ್ಲಿ ಸಂವಿಧಾನವನ್ನು ಬದಲಾಯಿಸುವ ಒತ್ತಡ ಒಂದು ಅತಿರೇಕವಾದರೆ, ಸಂವಿಧಾನದ ಬಲವಾದ ಸಮರ್ಥನೆಯೂ ವಿಮರ್ಶಾತೀತವಾಗಿ ನಡೆದಿದೆ. 'ನಮ್ಮ ಸಂವಿಧಾನ ಮೂಲತತ್ವ, ನಂಬಿಕೆ ಮತ್ತು ಮೌಲ್ಯಗಳು' ಎಂಬ ಸಲೀಲ್‌ಮಿಶ್ರ ಅವರ ಲೇಖನ ಅಧ್ಯಯನ ಪೂರ್ಣವಾಗಿದೆ. ತಮ್ಮ ಲೇಖನದಲ್ಲಿ ಡಾ.ಬಂಜಗೆರೆ ಜಯಪ್ರಕಾಶ್ ಅವರು ಸಂವಿಧಾನದಲ್ಲೇ ಇರುವ ಕೆಲವು ತೊಡಕುಗಳತ್ತ ಗಮನ ಸೆಳೆದಿದ್ದಾರೆ. ಒಕ್ಕೂಟತತ್ವ ಹಾಗೂ ಏಕೀಕೃತ ರಾಷ್ಟ್ರತತ್ವದ ಸಮತೋಲನ ಸಾಧಿಸುವ ಗುರಿ ಸಂವಿಧಾನ ನಿರ್ಮಾಣದ ಹಿಂದಿದ್ದರೂ ಪ್ರಾದೇಶಿಕ ಭಾಷೆ ಸಂಸ್ಕೃತಿ, ಆರ್ಥಿಕ, ರಾಜಕೀಯ ಆದ್ಯತೆಗಳು ಅಂಚಿಗೆ ತಳ್ಳಲ್ಪಡುತ್ತಲೇ ಇವೆ ಎಂಬ ವಾಸ್ತವ ಸನ್ನಿವೇಶವನ್ನು ಅವರು ತೆರೆದಿಟ್ಟಿದ್ದಾರೆ.

ಹೊಸಮನುಷ್ಯದ ಫೆಬ್ರವರಿ – ಮಾರ್ಚ್ ಸಂಚಿಕೆಗಳು ಅಭಿವೃದ್ಧಿಯ ಪರಿಕಲ್ಪನೆಯ ಹಿಂದಿರುವ ಸತ್ಯ – ಮಿಥ್ಯೆಗಳನ್ನು ಆಳವಾಗಿ ಶೋಧಿಸುವಂತಹ ಬರಹಗಳಿಂದ ಕೂಡಿವೆ. ಅಭಿವೃದ್ಧಿ ಪರಿಕಲ್ಪನೆಯ ಹಿಂದೆ ಸಾಮಾಜಿಕ – ಆರ್ಥಿಕ ಪ್ರಶ್ನೆಗಳಿರುವಂತೆ ಮನುಷ್ಯನ ಸ್ವಾರ್ಥ – ಮಹಾತ್ವಾಕಾಂಕ್ಷೆಗಳನ್ನು ಮೀರಬೇಕಾದ ಅರಿವಿನ ಪ್ರಶ್ನೆಗಳೂ ಇವೆ. ಕೆಲವೊಮ್ಮೆ ಮನುಷ್ಯ ಕಟ್ಟಿಕೊಂಡಿರುವ ಜ್ಞಾನವೇ ಅಪೂರ್ಣವೂ, ಅಹಂ ಪೀಡಿತವೂ ಆಗಿದ್ದು ಅಭಿವೃದ್ಧಿಯ ಕುರಿತಾದ ದೃಷ್ಟಿಕೋನಗಳನ್ನು ನಿರ್ಮಿಸುತ್ತಿರುತ್ತದೆ. ಡಾ.ಟಿ.ವಿ.ರಾಮಚಂದ್ರ ಅವರ ಲೇಖನವು, ಅಭಿವೃದ್ಧಿಯು ಸಮಸ್ತ ಜೀವಪರಿಸರದ ಪರವಾಗಿರಬೇಕು ಎಂಬ ದೃಷ್ಟಿಕೋನವನ್ನು ಸಂಶೋಧನಾತ್ಮಕ ವಿವರಗಳ ಮೂಲಕ ಮುಂದಿಡುತ್ತದೆ. ಅಹಂಕಾರಿಗಳಾದ ಹಾಗೂ ತಿಳುವಳಿಕೆಯ ಕೊರತೆಯಿರುವ ಜನ ರೂಪಿಸಿದ ನೀತಿಗಳು ಹೇಗೆ ಪರಿಸರ ವಿರೋಧಿ ಹಾಗೂ ಆ ಮೂಲಕ ಜೀವವಿರೋಧಿ ಎಂಬುದನ್ನು ಇಲ್ಲಿನ ಹಲವು ಲೇಖನಗಳು ಮನವರಿಕೆ ಮಾಡಿಸುತ್ತವೆ.



ಜೈವಿಕ ಸೂಕ್ಷ್ಮ ಪ್ರದೇಶಗಳನ್ನು ನಿರ್ವಹಿಸಲು ಬೇಕಾದ ಕಾನೂನಾತ್ಮಕ ಪರಿಹಾರಗಳನ್ನು ಸೂಚಿಸುವ ಈ ಲೇಖನ ತಜ್ಞತೆಯಿಂದ ಕೂಡಿದೆ. ಬರಹಗಳು ಕೇವಲ ಬೌದ್ಧಿಕ ಆಟವಾಗದೇ, ಸದ್ಯದ ತಲ್ಲಣಗಳಿಗೆ ಪರಿಹಾರವನ್ನೂ ಸೂಚಿಸುವಂತಿರಬೇಕೆಂಬ ಕಾಳಜಿ ವ್ಯಕ್ತವಾಗುತ್ತದೆ.

ಅಭಿವೃದ್ಧಿ ಕಥನಕ್ಕೆ ಇನ್ನೊಂದು ಒಳನೋಟವುಳ್ಳ ಸೇರ್ಪಡೆಯೆಂದರೆ ಡಿ.ಎಸ್. ನಾಗಭೂಷಣರ 'ಮನುಷ್ಯನನ್ನು ಪ್ರಕೃತಿಯಿಂದ ಪ್ರತ್ಯೇಕಿಸುತ್ತಿರುವ ವಿಜ್ಞಾನವೆಂಬ ಅ–'ಜ್ಞಾನ' ಎಂಬ ಸರಣಿ ಬರವಣಿಗೆ. ಫೆಬ್ರವರಿ, ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ಸಂಚಿಕೆಗಳಲ್ಲಿ ಇದು ಮುಂದುವರೆದಿದೆ. ವಿಜ್ಞಾನವೇ ಪರಮಧರ್ಮವೆಂದು ತಿಳಿದುಕೊಂಡು ತಂತ್ರಜ್ಞಾನವನ್ನು ಆಧರಿಸಿದ, ಬದುಕೇ ಶ್ರೇಷ್ಠವೆಂಬ ಮಿಥ್ಯೆ ನಮ್ಮನ್ನು ಕುರುಡಾಗಿಸಿರುವದರ ಹಿಂದಿನ 'ಜ್ಞಾನ'ದ ಹುನ್ನಾರಗಳನ್ನು ಈ ಲೇಖನ ಬಯಲು ಮಾಡುತ್ತದೆ. ಸರಕು ಸಂಸ್ಕೃತಿಯಲ್ಲಿ ಸುಖಪಡುವ ಹುಂಬತನದಲ್ಲಿ ಆಧ್ಯಾತ್ಮಿಕವಾದ ಅಖಂಡ, ಅವಿಭಾಜ್ಯವಾಗಿ ನೋಡುವ ಅರಿವಿನ ಬೆರಗು ಕಳೆದುಹೋಗುತ್ತದೆ. ಸಮಸ್ತ ಜೀವಪರಿಸರದೊಂದಿಗೆ ತಾದಾತ್ಮ್ಯದಿಂದ ಬದುಕುವ ಕ್ರಮವನ್ನು ವಿಜ್ಞಾನ ಪ್ರೇರಿತವಾದ ಆಧುನಿಕ ಜ್ಞಾನಶಿಸ್ತುಗಳು ಹೇಗೆ ಉಪೇಕ್ಷಿಸಿವೆ ಎಂಬುದನ್ನು ಲೇಖನ ಹೊಳೆಯಿಸುತ್ತದೆ. ಆ ಮೂಲಕ ಜ್ಞಾನ–ವಿಜ್ಞಾನದ ಪುನರ್‌ವ್ಯಾಖ್ಯಾನಕ್ಕೆಳೆಸುತ್ತದೆ.

ಮೇ ಸಂಚಿಕೆಯಲ್ಲಿ ಡಾ.ಜೆ.ಎಸ್.ಸದಾನಂದ ಹಾಗೂ ಡಾ. ನಿತ್ಯಾನಂದ ಶೆಟ್ಟಿಯವರ ಬರಹಗಳಲ್ಲಿ ರಾಷ್ಟ್ರ–ರಾಷ್ಟ್ರೀಯತೆಯ ಕುರಿತ ವಾಗ್ವಾದಗಳು ಗಂಭೀರ ಅಧ್ಯಯನದಿಂದ ಕಟ್ಟಲ್ಪಟ್ಟಿವೆ. ಗಾಂಧಿ, ಟ್ಯಾಗೋರ್, ಲೋಹಿಯಾ, ಅಂಬೇಡ್ಕರ್ ಅವರು ಕಟ್ಟಿಕೊಟ್ಟ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನ ಮಾಡಬೇಕಾಗಿರುವ ಅಗತ್ಯವನ್ನು ಡಾ.ರಾಜೇಂದ್ರಚೆನ್ನಿಯವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದರೆ, ರಾಷ್ಟ್ರೀಯತೆ ಹಾಗೂ ರಾಷ್ಟ್ರವಿಭಜನೆಯ ರಾಜಕಾರಣದ ಮರ್ಮಗಳನ್ನು ಡಾ. ರಾಜಾರಾಂ ತೋಳ್ಪಾಡಿಯವರು ವಿಶ್ಲೇಷಿಸಿದ್ದಾರೆ.

ಮಾರ್ಚ್ ತಿಂಗಳ ಮಹಿಳಾ ಸಂಚಿಕೆಯಲ್ಲಿ ನಮ್ಮ ವಿವಾಹ ಸಂಸ್ಥೆ ಬಿಕ್ಕಟ್ಟಿನಲ್ಲಿದೆಯೇ? ಎಂಬ ಪ್ರಶ್ನೆಗೆ ವೈದೇಹಿ, ಪದ್ಮಾ ಶ್ರೀರಾಮ್, ಶಾರದಾ ಗೋಪಾಲ, ವಿಜಯಾ ಶ್ರೀಧರ್, ಎಚ್.ಎಸ್.ಅನುಪಮಾ, ವಿನಯಾ, ಸುನಂದಾ ಕಡಮೆ, ರೇಣುಕಾ ನಿಡಗುಂದಿಯವರು ಉತ್ತರಿಸಿದ್ದಾರೆ. ವಿವಾಹ ಸಂಸ್ಥೆಯು ಹೆಣ್ಣಿನ ಸ್ವಾಯತ್ತತೆಯನ್ನು ಹೇಗೆ ಅಳಿಸಿಹಾಕುತ್ತದೆ ಎಂಬುದರಿಂದ ಹಿಡಿದು, ವಿವಾಹವು ಜೀವಸಖ್ಯದ ಮೂಲಕ ವ್ಯಕ್ತಿತ್ವವನ್ನು ಹೇಗೆ ಅರಳಿಸುತ್ತದೆ ಎನ್ನುವವರೆಗೆ ಭಿನ್ನ ಧ್ವನಿಗಳನ್ನು ಇಲ್ಲಿ ಕೇಳಿಸಲಾಗಿದೆ. ಕಳೆದ ಶತಮಾನದ ಸ್ತ್ರೀವಾದಿ ತಾತ್ವಿಕತೆಯು ನಮ್ಮ ಭಾರತೀಯ ಸಂದರ್ಭದಲ್ಲಿ ಹೇಗೆ ತನ್ನ ಪರಿಧಿಗಳನ್ನು ಹಿಗ್ಗಿಸಿಕೊಂಡಿದೆಯೆಂಬ ಅರಿವು ಇಲ್ಲಿ ಬಿಚ್ಚಿಕೊಳ್ಳುತ್ತದೆ. ಮಹಾಶ್ವೇತಾದೇವಿಯವರ ಕಥಾಸಾಹಿತ್ಯದ ಎರಡು ಸಂಪುಟಗಳನ್ನು ಎಚ್.ಎಸ್.ಶ್ರೀಮತಿಯವರು ಅನುವಾದಿಸಿದ್ದು ಕಲೆ, ಸಾಹಿತ್ಯ, ಸಮಾಜದ ಕುರಿತ ನಮ್ಮ ಸ್ಥಾಪಿತ ಚಿಂತನೆಗಳನ್ನೇ ಬುಡಮೇಲು ಮಾಡುವ ಶಕ್ತಿ ಅವುಗಳಿಗಿರುವುದನ್ನು ಎಚ್.ಎಸ್.ರಾಘವೇಂದ್ರರಾವ್ ಅವರು ಪರಿಚಯಿಸಿದ್ದಾರೆ. ಇಂತಹ ಬರಹಗಳು ಸ್ತ್ರೀತ್ವ ಹಾಗೂ ಸ್ತ್ರೀತ್ವದ ಮೂಲದಿಂದ ಹುಟ್ಟುವ ಅರಿವಿನ ಮಾದರಿಗಳನ್ನು ಲೋಕಕ್ಕೆ ಪರಿಚಯಿಸುತ್ತವೆ. ಲೋಕವನ್ನು ಅರಿಯುವ ಹೆಣ್ಣು ದೃಷ್ಟಿಕೋನವನ್ನು ಇನ್ನಷ್ಟು ಪರಿಚಯಿಸುವ ಅಗತ್ಯಕ್ಕೆ ಪತ್ರಿಕೆ ಓಗೊಡಬೇಕೆನಿಸುತ್ತದೆ.

ಅರಿವನ್ನು ಅವಿಭಜಿತವಾಗಿ ಕಾಣಬಯಸುವ ಪ್ರಾಮಾಣಿಕ ಹಂಬಲವೇ ಹೊಸಮನುಷ್ಯದ ಶಕ್ತಿ. ಸದ್ಯವನ್ನು ಅರಿಯುತ್ತಲೇ ಶಾಶ್ವತದತ್ತ ಚಲಿಸುವ ಸಮಗ್ರತೆಯಲ್ಲಿ ಹುಟ್ಟುವ ಬರಹಗಳ ಭಿನ್ನ ಆಯಾಮವೊಂದನ್ನು ಪತ್ರಿಕೆ ಸೃಷ್ಟಿಸಿದೆ. ಚದುರಿದಂತಿದ್ದ ಅಂಥ ಮನಸ್ಸುಗಳನ್ನು ಒಂದೆಡೆ ತೊಡಗಿಸುವ ಕ್ರಿಯೆಯಿಂದಾಗಿ ಧನಾತ್ಮಕ ಆಲೋಚನಾ ಕ್ರಮವೊಂದು ಮೊಳೆಯಲು ಇಷ್ಟು ಸಾಕಲ್ಲವೇ?



(ತುಮಕೂರಿನ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿರುವ ಡಾ.ಗೀತಾ ವಸಂತ ಗಮನಾರ್ಹ ಕವಯತ್ರಿ, ಕಥೆಗಾರ್ತಿ ಮತ್ತು ವಿಮರ್ಶಕರೂ ಹೌದು)

ನವಿಲುಗರಿ

ಬೇಕು ಬೇಡಗಳ ಆಟ ಆಟ ಆಡುವಾಗ
ಹುಷಾರು ಮಗಳೆ

ನನ್ನಂಥ ಅಪ್ಪಂದಿರು ನಿಮ್ಮಮ್ಮನ ಥರಾ ಅಮ್ಮಂದಿರು
ಇನ್ನುಳಿದ ಅಣ್ಣ–ತಮ್ಮ, ಅಕ್ಕ–ತಂಗಿ
ಸುತ್ತುಮುತ್ತಲ ಅಕ್ಕಪಕ್ಕದವರನ್ನೂ ಒಳಗೊಂಡು
ನಿನಗೆ ಕಲಿಸುತ್ತಾರೆ
ಈ ಖತರನಾಕ್ ಪಾಠವನ್ನು:

'ಬೇಕೆನಿಸಿದ್ದನ್ನು ಬೇಡ ಅನ್ನು
ಬೇಡ ಅನಿಸಿದ್ದನ್ನು ಬೇಕು ಅನ್ನು
ಆಗ ಮಾತ್ರ ನೀನು ಪೂಜೆಗೆ ಲಾಯಕ್ಕು
ಪ್ರಾರ್ಥನೆಯ ವಸ್ತು;
ಶಾಪಾನುಗ್ರಹ ಶಕ್ತಿಯೂ ನಿನ್ನ ಸುತ್ತ
ಹೊಡೆಯುತ್ತದೆ ಗಸ್ತು'

ಇದನ್ನು ನಂಬಬೇಡ
ಎಂದೆಂದಿಗೂ

ನಂಬಿದರೆ. ಬೇಕೆನಿಸಿದ್ದು
ಸೋಕುವುದೇ ಇಲ್ಲ ನಿನ್ನನ್ನು
ಬೇಡ ಅನಿಸಿದ್ದು ಬೇಡನ ಹಾಗೆ
ಬೇಟೆಯಾಡುತ್ತಿರುತ್ತದೆ ನಿನ್ನನ್ನು


ಆ ಸಾಚಾ ಸುಳ್ಳಿನ ಮುಳ್ಳು
ಸದಾ ಚುಚ್ಚುತ್ತಲೇ ಇರುತ್ತದೆ
ಆ ನೋವಿಂದ ಪಾರಾಗಲು
ನೀನೊಂದು ನೊಂದ ಜೀವಂತ ಶವವಾಗುತ್ತೀಯ

ಆ ಮೋಡವನ್ನು ಮುಟ್ಟಬೇಕು
ಈ ಚಿಟ್ಟೆ ಮುಂಗೈ ಮೇಲೆ ಕೂಡಬೇಕು
ಆ ಬಟ್ಟೆ ತೊಟ್ಟು ನಲಿದಾಡಬೇಕು
ಈ ನವಿಲುಗರಿಯನ್ನು ನೇವರಿಸಬೇಕು

ಇತ್ಯಾದಿ ಈ ಪೃಥ್ವಿ ಮಾತ್ರ ಕೊಡಬಲ್ಲ
ಸಣ್ಣಪುಟ್ಟ ಸುಖಗಳನ್ನೂ ಕಳೆದುಕೊಳ್ಳುತ್ತೀಯ
ಹುಷಾರು ಮಗಳೇ!

–ಎಚ್.ಎಸ್. ಶಿವಪ್ರಕಾಶ







ಆತ್ಮಾವಲೋಕನ

ಕನ್ನಡಿಯಲ್ಲಿ
ಅವರವರೇ ಅವರವರ
ಮುಖ ನೋಡಿಕೊಳ್ಳಬೇಕು

ಮುಖದೊಳಗಿನ ಕಣ್ಣುಗಳ
ತೆರೆದಿಟ್ಟು, ಮೂಗಿನ ಅಳತೆ ಗಮನಿಸಿ
ಕಿವಿಗಳ ಉದ್ದವನ್ನಳೆಯುತ್ತಾ
ನಿಧಾನವಾಗಿ ಚರ್ಮದ ಸುಕ್ಕುಗಳನ್ನೂ
ಅವುಗಳ ಆಳವನ್ನೂ ತಿಳಿಯಬೇಕು
ಆಮೇಲೆ
ಸುಕ್ಕುಗಳ ಆಳಕ್ಕಿಳಿದಂತೆ ಧ್ಯಾನಸ್ಥರಾಗಿ
ಮನದ ಒಳಗವಿಗಳಲ್ಲಿ ತಡಕಬೇಕು
ಅಲ್ಲಿನ ಕತ್ತಲ ಗಾತ್ರವನ್ನೂ.
ಇಲ್ಲಣ ಹಿಡಿದ ಹೊಗೆ ಕೊಳವೆಗಳನ್ನೂ





ಕಮಟುಗಟ್ಟಿದ ವಾಸನೆಯ ಕಟುವನ್ನು
ವಿಶ್ಲೇಷಿಸಬೇಕು
ಒಂದಕ್ಕೆ ಒಂದಕ್ಕೆ ಸರಿಯುತ್ತಾ
ತಮ್ಮ ತಮ್ಮ ಗತ ಚರಿತ್ರೆಯ ಪುಟಗಳಲ್ಲಿ
ಇಣುಕಬೇಕು
ಅಲ್ಲಿ ಬಿದ್ದ ಆಳದ ಪ್ರಪಾತಗಳ
ಪಾಪದ ಗಬ್ಬು ವಾಸನೆಯ ಹೊಂಡಗಳ
ಕೊಲೆಗಡುಕ ಆಲೋಚನೆಗಳು ಹರಿದ ಹಳ್ಳಗಳ
ರಕ್ತ ಸಿಕ್ತ ಹಸ್ತಗಳ ಗೆರೆಯ ಚಲ್ಲಾಟಗಳ
ಎಲ್ಲವ ಇಣುಕಿಣುಕಿ ನೋಡುತ್ತಲೇ
ಆತ್ಮಾವಲೋಕನ
ಅರಿವಿನ ಬೆಳಕಲ್ಲಿ
ದರ್ಪಣಕ್ಕೆ ನಮಿಸಿ ಭಕ್ತಿಯಿಂದ
ನಮೋ ನಮೋ ಎನ್ನಬೇಕು.
ಇಲ್ಲದಿರೆ
ಕನ್ನಡಿ ಕನ್ನಡಿಯಷ್ಟೇ ಆಗುತ್ತಾ
ನೀವು ನೀವೇ, ನಾವು ನಾವೇ
ಆಗುತ್ತಾ
ಬಾಯಾರಿ ಬೆಂಗಾಡಿನಲ್ಲಿ ಸುತ್ತಿ ಸುತ್ತಿ
ಸಾವ ತೆರನಂತೆ
ಸಾಯುತ್ತಲೇ ಇರುತ್ತೇವೆ
ಯಃಕಶ್ಚಿತ್ ಹುಳದಂತೆ
ಲೆಕ್ಕಕ್ಕೇ ಸಿಗದ ಕ್ರಿಮಿ ಕೀಟಾದಿಗಳಂತೆ.

–ಚಂದ್ರಶೇಖರ ತಾಳ್ಯ

ಸಿಡಿಲು ಬಡಿದ ಮರ

ಅದೊಂದು ದೊಡ್ಡ ಮಾವಿನ ಮರ
ಚಾಚಿದೆ ರೆಂಬೆ ಕೊಂಬೆ
ಜಗದಂಬೆಯ ರೀತಿ
ನೆಟ್ಟು ನೀರೂಡಿದ್ದು ಯಾರೋ ಗೊತ್ತಿಲ್ಲ !
ಎಷ್ಟಿರಬಹುದು ಪ್ರಾಯ ? ಅಂದಾಜು...
ಉಹುಂ ಗೊತ್ತಿಲ್ಲ !

ಅದರ ಬುಡದಲ್ಲೊಂದು ಕಲ್ಲು ಬೆಂಚು
ಹಂಚಿಕೊಂಡಿದೆ ನೋವು ಸಾವು
ಪ್ರೇಮ ವಿರಹ ಕೋಪ ತಾಪ ಜುಗುಪ್ಸೆ
ಯಾತನೆ ಸುಖ ದುಃಖ ಕೋಲಾಹಲ.

ಎತ್ತಿಕೊಂಡಿದೆ ಮರ
ಮೆತ್ತಿಕೊಂಡಿದೆ ಮರ
ಸುತ್ತಿಕೊಂಡಿದೆ ಮರ –
ಕಿತ್ತು ಬಿಸುಡುವಂತೆ ಎಲ್ಲ ಮುಖವಾಡಗಳ

ಒಗರು ಹುಳಿ ಸಿಹಿ ಕಹಿ....
ಸಾರ–ನಿಸ್ಸಾರ !
ಒಂದು ದಿನ ದೊಡ್ಡ ಸಿಡಿಲೊಂದ
ತಡೆದು ಬಡಿದು ಆಘಾತ .
ಅಲುಗಾಡಿ ನಿಂತ ನೆಲ
ಅಲ್ಲೋಲಕಲ್ಲೋಲ !



ಈ ಸಲದ ಹಣ್ಣು ದುಪ್ಪಟ್ಟು ಸೀ...
ಒಗರಿಲ್ಲ ಪೊಗರಿಲ್ಲ....ಸೀ ಅಂದರೆ ಸೀ...
ಅಕ್ಕರೆ ಆ ಸಕ್ಕರೆ ಸೀ...

–ಸವಿತಾ ನಾಗಭೂಷಣ

ಬದುಕಿನ ಬೇರೀಜು



“ಹೇಗೆ ಸಂಭಾಳಿಸುತ್ತೀ?
ಚಂದ್ರನಿಲ್ಲದ ಕತ್ತಲನ್ನು”
ಆಗಸ ಉತ್ತರಿಸದೆ ಮಿಕಿಮಿಕಿ ದಿಟ್ಟಿಸಿತು
ಆ ಹೊಳಪು ಕಂಗಳಲಿ
ಸುಖದ ಆನಿಕೆಯ ಅನವರತವೇ
ಹುಸಿಯೆಂಬ ಹಂಗುನೂಲಿತ್ತು

ಪಾಪಭೂಮಿ, ಮಳೆ ಹೋಗಿಯಾಯಿತು
ಎಂದೆ.... ಕರುಣೆಯ ಕಕ್ಕುಲಾತಿಯಲಿ
ಸುರಿವ ಬಿಸಿಲಲ್ಲೂ ನೆತ್ತರಗೆಂಪಿನ ಹೂ ಹೆತ್ತ ನೆಲ
ತುಟಿ ಕೊಂಕಿಸಿತು, ಇನ್ನೂ ಬದುಕಿನ
ಬೇರೀಜು ಗೊತ್ತಿಲ್ಲವೆ ಎಂಬಂತೆ

ತಾನೇ ಅರಳಿಸಿದ ಹೂ, ತನ್ನೆದುರೇ
ದರದರ ಉದುರಿ ಬರಲಾಗುವುದ ಸಹಿಸಿ
ಮತ್ತೂ ಮುಳ್ಳು ಮೈತುಂಬ ಚಿಗುರುತ್ತಿದೆ ಗಿಡ
ಬೆರಗುಗಣ್ಣಿನ ಪಟಪಟಕೆ ತಲೆತೂಗಿ ನಕ್ಕಿತು
ನೀರುಣಿಸಿದ್ದಕ್ಕೆ ತಕಾ ಈ ತತ್ತ್ವವೆಂದು

ಸಾಕಿನ್ನು ಸಾಗಲಾರೆ ಈ ತಂತಿ ಮೇಲಿನ ನಡಿಗೆ
ನನ್ನ ಕೈಯಲ್ಲಿ ನನ್ನ ಬಾಯೊಲೆದು ಬಾಳೆಂಬರೇ ಇದನು ?
ಕೇಳಿದೆ ಆ ತೇನೆಯನ್ನು, ಅದೋ ತಂತಿಯ ಮೇಲೆ ಜೀಕಿ
ರೆಕ್ಕೆ ಅಗಲಿಸಿತು, ತೆರೆಯಿತು ನನ್ನೊಳ ರೆಕ್ಕೆಗಳನು

ಗೆದ್ದಲು ತಿಂದ ಬೇವು ಮತ್ತೂ ಚಿಗಿಯಿತು
ಕಡೆಗೂ ಗೆದ್ದು ನಿಲ್ಲುವುದು ಒಳಗಿನ ಝೇಂಕಾರವೆಂಬಂತೆ
ನಾನೀಗ, ಬಿಳಿಮುಗಿಲ ತೆಕ್ಕೆಯಿಂದಿಳಿದ ಹಸುಳೆ
ಇನ್ನು ಕಸಿಯಲಾಗದು ನನ್ನ ನಗೆಯ ಅರಳ
ನನಗೆ ನಾನೇ ಮನದಡವಿ ಒರಗಿದೆ
ಒಳಗಿನ ಮೊಳಕೆಗಳ ಸಲಹುತ್ತ

–ವಿನಯಾ ಒಕ್ಕುಂದ



ನಿಲ್ದಾಣದ ಪಾದಗಳ ಮೇಲೆ ಬರೆದ ಋಣದ ಸಾಲು

ಜಗತ್ತು ಬೆಚ್ಚಗೆ ತನ್ನ ಮನೆಯಲ್ಲಿ ಮಲಗಿರಲಿ
ನನಗೆ ರೈಲು ನಿಲ್ದಾಣವೇ ಇರಲಿ
ಇಲ್ಲಿ ಅನಾಮಿಕನಿಗೆ ಸುಖವಿದೆ
ಬಂಧುಗಳು ನನ್ನಂಥವರೇ ಇದ್ದಾರೆ
ಬೀದಿಗೆ ಬಿದ್ದ ಜನಕ್ಕೆ
ಒಂದಿಷ್ಟು ಬೆಳಕಿದೆ
ರೈಲು ಸಿಬ್ಬಂದಿಗೆ ನಾವು
ಅರ್ಥವಾಗಿದ್ದೇವೆ

ಸಾವಿರ ಸಾವಿರ ರಾತ್ರಿಗಳನ್ನು
ನಾನು ಈ ಮೆಟ್ಟಿಲ ಮೇಲೆ ಕಳೆದಿದ್ದೇನೆ.
ಜನ ನನ್ನನ್ನು ಗುರುತು
ಹಿಡಿಯುವದು ಬೇಡ
ಗುರುತಿಲ್ಲದೇ ಬದುಕುವ
ಸುಖಕ್ಕಾಗಿಯೇ ನಾನು
ಬೀದಿಗೆ ಬಿದ್ದಿದ್ದೇನೆ.

ನಮಗೆ ಕಳ್ಳರ ಸುಲಿಗೆಕೋರರ ಭಯವಿಲ್ಲ
ಯಾಕೆಂದರೆ ನಮಗೆ ಏನೂ ಇಲ್ಲ
ಎಂಥ ಮಳೆ ರಾತ್ರಿಯಲ್ಲಿಯೂ
ಕಳ್ಳರಿಗೂ ಅರ್ಧ ಹರಿದ ಹೊದಿಕೆ ಕೊಟ್ಟಿದ್ದೇವೆ
ಕಣ್ಣೀರು ಸುರಿಸಿ ಎದ್ದು ಹೋದವರು
ಇಂದಿಗೂ ನಮಗೆ
ಅವರು ಬೇಟಿಯಾಗಿಲ್ಲ
ನಿಲ್ದಾಣದ ರಾತ್ರಿಗಳೇ ಚಂದ

ಹಗಲು ನಮಗೆ ತುಂಬ
ಹಿಂಸೆಯಾಗುತ್ತದೆ ಯಾಕೆಂದರೆ
ನಾಗರಿಕ ಸಮಾಜ ಆಗ ಎದ್ದಿರುತ್ತದೆ
ಕೆಲವು ಪೊಲೀಸರಿಗೂ ಕರುಣೆ ಇದೆ
ಯಾಕೆಂದರೆ ಕೈದಿಗಳ ಸಾವಿನ ಹಾಡನ್ನು
ಅವರ ಬೆತ್ತದ ಮೇಲೆ ಬರೆಯಲಾಗಿದೆ

ನಾವು ಜವಾಬ್ದಾರಿ ಇಲ್ಲದ ಜನ
ಸಮಾಜ ನಮಗೆ
ಅನಾಥರೆಂಬ ರಸೀದಿ ನೀಡಿದೆ
ನಮ್ಮ ಯಾರ ಬಳಿಯೂ ಆ ರಸೀದಿ ಇಲ್ಲ
ಆ ಖಾಲಿ ಹಾಳೆಯನ್ನು ನಾವೂ ಎಂದೊ
ಬೀಸಾಕಿದ್ದೇವೆ

ಈ ಹಗಲು ಸೂರ್ಯನಂಥ
ಶನಿ ಮತ್ತೊಬ್ಬನಿಲ್ಲ
ಯಾಕೆಂದರೆ ಈತ ಜಗತ್ತನ್ನು ಎಬ್ಬಿಸಿ
ನಮ್ಮ ಪ್ರೀತಿಯ ಕತ್ತಲೆಗೆ
ಅನ್ಯಾಯ ಮಾಡುತ್ತಾನೆ

ಲಕ್ಷಲಕ್ಷ ಪಾದಗಳು ಈ ನೆಲವನ್ನು ಮುಟ್ಟಿವೆ
ಸಂಭ್ರಮ ಸಾವು ದುಃಖ ವಿರಹ
ಆಲಿಂಗನ ಎಲ್ಲವನ್ನೂ ಈ ನೆಲ ಕಂಡಿದೆ
ಆದರೆ ಯಾರನ್ನು ಗುರುತು ಹಿಡಿಯುವದಿಲ್ಲ
ನಮ್ಮನ್ನು ಮಾತ್ರ ಪ್ರೀತಿಯಿಂದ
ಹೆಸರಿಟ್ಟು ಕರೆಯುತ್ತದೆ.
ಅದಕ್ಕೆ ನಾವು ಈ ನೆಲಕ್ಕೆ
ಋಣಿಯಾಗಿದ್ದೇವೆ.



–ಬಸವರಾಜ ಹೂಗಾರ


ಸೆರೆಯಾಗಿತ್ತು ನಗು.



ಮಲಗಿದ್ದೆ ನೀನು, ನಿಶ್ಚಲ.
ಮುಚ್ಚಿದ ಕಣ್ಣು, ಉಬ್ಬುತಗ್ಗಿನ ಹಣೆ;
ಗೆರೆಕೊರೆದ ಸುಕ್ಕಿನ ಕೆನ್ನೆಬಯಲು,
ಕಲಶವಿಟ್ಟಂತೆ ಮೂಗು.

ಎತ್ತ ಇಟ್ಟರೆ ಅತ್ತಲೇ ತುಪಕ್ಕು ಬೀಳುವ
ಕೈ, ಕಾಲು,
ಬಿಳುಚಿದ ಹಸ್ತ, ಪಾದ
ಸೊಲ್ಲಡಗಿದ ತುಟಿಯಿಂದ ಆಗೀಗ
ಜಿನುಗುವ ಕಂದುರಕ್ತ.

ಕಿತ್ತು ಬಿಸುಡುವಂತೆ ಎಲ್ಲ ಮುಖವಾಡಗಳ
ಗಂಟೆಗಂಟೆಗೂ ಬಣ್ಣಬದಲಿಸುತ್ತಿತ್ತು ನಿನ್ನ ಚರ್ಮ,
ಜೀವವು ದೇಹವನ್ನು ಬಿಟ್ಟಿರುವ
ಆನಂದಪರವಶತೆಯ ರೂಪಕದಂತೆ
ಅರೆದೆರೆದ ತುಟಿಯೊಳಗೆ ಸೆರೆಯಾಗಿತ್ತು ನಗು.



–ಜ.ನಾ. ತೇಜಶ್ರೀ ಚಿತ್ರಗಳು: ವಿಜಯಶ್ರೀ ಪಾಲಾದಿ

*

ಅದ್ವೈತದ ಹೆಜ್ಜೆ ಗುರುತುಗಳು

–ಲಕ್ಷ್ಮೀಶ ತೋಳ್ಪಾಡಿ

ಬುದ್ಧನಿಂದ ಮಧ್ವರವರೆಗೆ

ಅವೈದಿಕವೂ ಸೇರಿದಂತೆ ಭಾರತದ ದಾರ್ಶನಿಕತೆ ಎಂದರೆ ಅದ್ವೈತ ಅಥವಾ ಅದಕ್ಕೆ ವಿವಿಧ ನೆಲೆಗಳ ಪ್ರತಿಕ್ರಿಯೆ ಮತ್ತು ವ್ಯಾಖ್ಯಾನಗಳು ಎಂದು ಗ್ರಹಿಸಬಹುದಾದ ತಾತ್ವಿಕ ಹಿನ್ನೆಲೆಯಲ್ಲಿ ಬುದ್ಧನ ಶೂನ್ಯವಾದದಿಂದ ಆರಂಭವಾದಂತೆ ಮಧ್ವಾಚಾರ್ಯರ ದ್ವೈತದವರೆಗಿನ ತತ್ವಜ್ಞಾನಿಯ ದೀರ್ಘ ಪಯಣದ ಹೆಜ್ಜೆ ಗುರುತುಗಳನ್ನು ಗಮನಿಸುವುದು ಆಧುನಿಕ ಬದುಕಿನ ವಿರೋಧಾಭಾಸಗಳನ್ನು ಅರಿಯುವ ದೃಷ್ಟಿಯಿಂದ ಒಂದು ಕುತೂಹಲಕಾರಿ ಸಾಹಸವೇ ಆಗಬಹುದು.



ತತ್ತ್ವಜ್ಞಾನವೆಂದರೆ ಈ ನಮ್ಮ ಬದುಕಿನ – ಲೋಕಜೀವನದ ನಡುವೆಯೇ ನಡೆಯುತ್ತಿರುವ ನಮ್ಮ ಬದುಕಿನ ಸಹಜ ಲಯವನ್ನು ಗ್ರಹಿಸುವ ಒಂದು ಸೂಕ್ಷ್ಮ–ಸೃಜನಾತ್ಮಕ ಯತ್ನವಾಗಿದೆ. ಅಂದರೆ ಬದುಕೇ ಬದುಕನ್ನು ತನ್ನೊಳಗಿನಿಂದಲೇ ಗ್ರಹಿಸುವ ಯತ್ನವೆನ್ನಬಹುದು. ತನ್ನೊಡಲೊಳಗಿನ ದ್ರವ್ಯವನ್ನೇ ನೂಲಿನ ಎಳೆಯಾಗಿಸಿ ಜೇಡರಬಲೆ ನೇದಂತೆ ನೇದು ಅದರ ನಡುವೆ ಎಚ್ಚರದಿಂದ ಕಾದು ಕೂತಿರುವಂತೆ, ಎಲ್ಲೂ ಎಳೆ ತುಂಡಾಗದಂತೆ ನೂಲಿನ ಮೇಲೆ ನಡೆದಾಡುವಂತೆ, ಬಹಳ ನಾಜೂಕಿನ ಆದರೆ ಬಹಳ ಕಷ್ಟಪಟ್ಟು ತಿಣುಕಿ ಸಾಧಿಸಿದಂತಲ್ಲದೆ ಸಹಜವಾಗಿಯೂ ಇರುವ ಮನೋಸ್ಥಿತಿಯೊಂದನ್ನು ತತ್ತ್ವಜ್ಞಾನವು ಹಂಬಲಿಸುತ್ತದೆ. ಜೇಡ ಮತ್ತು ಬಲೆಯ ಈ ದೃಷ್ಟಾಂತ ಉಪನಿಷತ್ತಿನದು. ತತ್ತ್ವಜ್ಞಾನಕ್ಕೆ ಈ ಹಂಬಲವನ್ನು ಸಾಧಿಸುವ ಯತ್ನದಲ್ಲಿ ಎದುರಾದ ಸಂದೇಹಗಳು – ಜಿಜ್ಞಾಸೆಗಳು – ಅದು ಕಂಡುಕೊಂಡ ತಥ್ಯಗಳು ಹಲವು.

ಮೊದಲನೆಯದೆಂದರೆ – ಅನುಭವವು ತೀವ್ರವೂ ಗಾಢವೂ ಆದಂತೆ ಅದು ಯಾವುದೇ ವ್ಯವಸ್ಥಾತ್ಮಕತೆಯನ್ನು ಒಳಗಿನಿಂದಲೇ ಧಿಕ್ಕರಿಸುವ ಗುಣವನ್ನು ಹೊಂದಿರುತ್ತದೆ ಎಂಬ ತಥ್ಯ. ವ್ಯವಸ್ಥಾತ್ಮಕತೆಗೆ ತೀವ್ರತೆಯನ್ನು ತಡೆದುಕೊಳ್ಳುವ ಶಕ್ತಿ ಇಲ್ಲವೆ? – ಎಂಬ ಜಿಜ್ಞಾಸೆ. ಬುದ್ಧ ಭಗವಂತ ಹೇಳಿದ ಈ ದೃಷ್ಟಾಂತವನ್ನು ನೋಡಿ. ಹರಿತವಾದ ಬಾಣವೊಂದು ಒಡಲಲ್ಲಿ ನೆಟ್ಟವನಿಗೆ ಯಾತನೆಯ ಆ ತೀವ್ರವಾದ ಅನುಭವವೊಂದೇ ನಿಜ. ಯಾತನೆಯಿಂದ ಬಿಡುಗಡೆಗೊಳ್ಳುವುದೊಂದೇ ಅವನ ಕಾಳಜಿ. ಉಳಿದಂತೆ ಯಾವ ಮಾತುಗಳೂ ಅಲ್ಲ ಎನ್ನುವುದು ಸ್ವಯಂಬುದ್ಧನದೇ ಹೇಳಿಕೆ. ಉಳಿದ ಮಾತುಗಳೆಂದರೆ – ಬಾಣವನ್ನು ಎಸೆದವರಾರು? ಯಾವ ದಿಕ್ಕಿನಿಂದ? ಈ ಬಾಣವನ್ನು ಯಾವ ಲೋಹದಿಂದ ಮಾಡಲಾಗಿದೆ? – ಇತ್ಯಾದಿ ಚಿಂತೆಗಳು. ಇವೆಲ್ಲ ವ್ಯರ್ಥಕಲಾಪ. ಅಂದರೆ ಇಂಥ ಚಿಂತೆಗಳು ಕಾಲ–ದೇಶಬದ್ಧವಾದ ಸನ್ನಿವೇಶವೊಂದನ್ನು ಸೃಷ್ಟಿಮಾಡುತ್ತವೆ. ಅನುಭವಕ್ಕೆ ವಿವರಣೆಯನ್ನು ಒದಗಿಸುತ್ತವೆ. ಈ ಅರ್ಥದಲ್ಲಿ ಪ್ರತಿಚಿತ್ರವೊಂದನ್ನು ರಚಿಸುತ್ತವೆ. ನೋವನ್ನು ಅರ್ಥಮಾಡಿಸುವ ಪ್ರಯತ್ನವನ್ನು ಮಾಡುತ್ತವೆ. ಆದರೆ ಈ ಎಲ್ಲ ಪ್ರಯತ್ನದಲ್ಲಿ ಅನುಭವದಿಂದಲೇ ದೂರ ಹೋಗುತ್ತಿರುವುದು ಮಾತ್ರ ಗೊತ್ತೇ ಆಗುವುದಿಲ್ಲ! ಏಕಾಗ್ರವಾಗಬೇಕಾದದ್ದು ಯಾವುದರಲ್ಲಿ? ನೋವಿನಲ್ಲಿಯೋ? ನೋವಿನ ವಿವರಣೆಯಲ್ಲಿಯೋ?

ವ್ಯಾಖ್ಯಾನಗಳು, ವಿವರಣೆಗಳು ಅನುಭವದ ತೀವ್ರತೆಯನ್ನು ಕಡಮೆ ಮಾಡುವ, ಅನುಭವದಲ್ಲಿ ನಮ್ಮ ಗಮನವು ನೇರವಾಗಿ ನೆಡದಂತೆ ಮಾಡುವ, ಗಮನವನ್ನು ಬೇರೆಡೆ ಸೆಳೆಯುವ ತಂತ್ರದಂತೆ ಗೋಚರಿಸುತ್ತವೆ. ಮುಖ್ಯವಾಗಿ ಅನುಭವಕ್ಕೆ ಪರ್ಯಾಯವೊಂದನ್ನು ಸೃಷ್ಟಿಸುತ್ತವೆ. ಪರ್ಯಾಯವನ್ನು ಸೃಷ್ಟಿಸುವುದು ನಮ್ಮ ಮನಸ್ಸಿನ ಒಂದು ಮೂಲಗುಣವೇ ಆಗಿಬಿಟ್ಟಿದೆ: ಒಂದು ಅಭ್ಯಾಸ; ಒಂದು ಗೀಳು. ಅಲ್ಲದೆ ಇದು ಮನಸ್ಸಿನ ಒಂದು ಸಾಧ್ಯತೆಯೂ ಆಗಿರಬಹುದು! ಆ ಮಾತು ಬೇರೆ.

ಎಲ್ಲದಕ್ಕೂ ಪರ್ಯಾಯವನ್ನು ತನ್ನಲ್ಲಿ ಸೃಷ್ಟಿಸಬಲ್ಲ ಮನಸ್ಸು, ಅದೇ ಕಾರಣದಿಂದಲೇ, ತೀವ್ರವಾದ ಅನುಭವವೊಂದು ಉಂಟಾದಾಗ, ಇದಕ್ಕೆ ತಾನು ಪರ್ಯಾಯವನ್ನು ಸೃಷ್ಟಿಸಲಾರೆನೆಂದು ಒಳನೋಟದಿಂದಲೇ ಅರಿತು ತಾನು ಸ್ತಬ್ಧವಾಗಿಬಿಡುವುದು. ಅನುಭವದಲ್ಲಿ ಮುಳುಗಿ ಹೋಗುವುದು. ಇದೂ ಮನಸ್ಸಿನ ಒಂದು ಸಾಧ್ಯತೆಯೇ. ಮನಸ್ಸೆನ್ನುವುದು ಒಂದು ಎನರ್ಜಿ. ಒಂದು ಶಕ್ತಿ. ಪರ್ಯಾಯವನ್ನು ಸೃಷ್ಟಿಸಬಲ್ಲ ಶಕ್ತಿ. ಪರ್ಯಾಯವನ್ನು ಎಂದು ಏಕೆ ಹೇಳುವುದೆಂದರೆ ಮನಸ್ಸು ತಾನಾಗಿ ಸ್ವತಂತ್ರವಾಗಿ ಏನನ್ನೂ ಸೃಷ್ಟಿಸಲಾರದು. ಅದು ಏನನ್ನಾದರೂ ನೋಡಿಯೇ – ಕೇಳಿಯೇ – ಅದನ್ನು ಅನುಕರಿಸಿಯೇ ಸೃಷ್ಟಿಸಬೇಕು. ಸೃಷ್ಟಿಸುತ್ತದೆ – ಕೂಡ. ಅದರ ಪ್ರಕಾರ ಸೃಷ್ಟಿ ಎಂದರೆ ಅನುಕರಣೆ. ಅನುಕರಣೆ ಎಂದರೆ ಸೃಷ್ಟಿ. ಮುಖ್ಯವಾಗಿ ಮನೋಜೀವಿಗಳಾದ ಮನುಷ್ಯರ ಪಾಡನ್ನು ಸೂಕ್ಷ್ಮವಾಗಿ ನೋಡಿದರೆ ಇದರ ನಿಜ ತಿಳಿಯುತ್ತದೆ. ಇದನ್ನೆಲ್ಲ ತಿಳಿದ ಅಲ್ಲಮಪ್ರಭು ಇದೇ ಅರ್ಥದಲ್ಲಿ "ಪದವನರ್ಪಿಸಬಹುದಲ್ಲದೆ ಪದಾರ್ಥವನ್ನು ಅರ್ಪಿಸಬಹುದೆ? ಚಿತ್ರವ ಬರೆಯಬಹುದಲ್ಲದೆ ಪ್ರಾಣವ ಬರೆಯಬಹುದೆ?" ಎಂದು ಹೇಳಿ ಮನಸ್ಸಿನ ಸೃಷ್ಟಿಯ ಮಿತಿಯನ್ನು ಸೂಚಿಸಿದ್ದ!

ಆದರೆ ಅನುಕರಣೆಯಲ್ಲಿಯೇ ಆಸಕ್ತಿಯನ್ನೂ ಹೆಮ್ಮೆಯನ್ನೂ ಕೃತಾರ್ಥತೆಯನ್ನೂ ಕಾಣುವ ಇಂಥ ಮನಸ್ಸು – ಏಕಾಗ್ರತೆ ಎಂದರೆ ಅನುಕರಣೆಯಲ್ಲಿನ ಏಕಾಗ್ರತೆಯೇ ಎಂದು ತಿಳಿದ ಮನಸ್ಸು ಇದ್ದಕಿದ್ದಂತೆ ಯಾವ ಪೂರ್ವಸೂಚನೆಯೂ ಇಲ್ಲದೆ ದೊಡ್ಡ ನೋವಿನ ಅಲೆಯೊಂದು ಮೈಯ್ಯುದ್ದ ಹರಿದಾಗ ಈ ನೋವನ್ನು ಯಾವ ಬಗೆಯಲ್ಲೂ ತಾನು ಅರ್ಥಮಾಡಿಕೊಂಡು ಅನುಕರಿಸಲಾರೆನೆಂದು ತತ್ಕ್ಷಣದ ಸ್ಪಂದನದಲ್ಲಿ ಅರಿತು ತನ್ನೆಲ್ಲ ಎನರ್ಜಿಯೊಂದಿಗೆ ಆ ನೋವಿನಲ್ಲಿ ಮುಳುಗಿದರೆ, ತನ್ಮಯವಾದರೆ, ಆ ಅನುಭವದಲ್ಲಿ ತನ್ನ ಸ್ವ–ರೂಪವನ್ನೇ ಕಳೆದುಕೊಳ್ಳುವುದು. ಅಂದರೆ ಅನುಕರಿಸಿ, ಪರ್ಯಾಯವನ್ನು ಸೃಷ್ಟಿಸುವ ತನ್ನ ಸ್ವಭಾವದಿಂದಲೇ ಕಳಚಿಕೊಳ್ಳುವುದು. ನಮ್ಮ ಮನಸ್ಸಿನಲ್ಲಿರುವುದು ಈ ಪ್ರಪಂಚವನ್ನು ನೋಡಿ ನಾವೇ ಸೃಷ್ಟಿಮಾಡಿಕೊಂಡ ಅನುಕರಣೆಯ ಪರ್ಯಾಯ ವ್ಯಾಖ್ಯಾನ ಪ್ರಪಂಚವಾದುದರಿಂದ, ಈ ಮನೋಪ್ರಪಂಚವೇ ಉರುಳಿಬೀಳುವುದು. ವೇದವು ನಮಗೆ ಪ್ರಮಾಣ ಇತ್ಯಾದಿ ನಂಬಿಕೆಗಳು ನಮ್ಮ ಮನೋ ಪ್ರಪಂಚದ ಭಾಗವೇ ಆಗಿರುವುದರಿಂದ ಮನೋ ಪ್ರಪಂಚವೇ ಉರುಳಿ ಬಿದ್ದಾಗ ಈ ಎಲ್ಲ ನಂಬಿಕೆಗಳೂ ಎಲ್ಲ ಬಗೆಯ ವ್ಯಾಖ್ಯಾನಗಳೂ ಎಲ್ಲ ದೇವರುಗಳೂ ಉರುಳಿಬೀಳುವರು. ಎಲ್ಲ ವ್ಯವಸ್ಥೆಗಳೂ ಕಳಚುವವು. ಇದು ಮಾನಸಿಕ ಪ್ರಳಯವೇ ಸರಿ! ಇದನ್ನು 'ಮನೋಲಯ'ವೆನ್ನುವರು. 'ಮನೋನಾಶ' ಎನ್ನುವುದೂ ಉಂಟು. ಈ ಬಗೆಯ ಪ್ರಳಯ ಸಂಭವಿಸದೆ ಹೊಸ ಮನಸ್ಸು – ಹೊಸ ಹುಟ್ಟು – ಹೊಸ ಕಾಣ್ಕೆ ಸಂಭವಿಸದು. ಹೊಸ ಮನಸ್ಸೆಂದರೆ, ಪರ್ಯಾಯವನ್ನು ಸೃಷ್ಟಿಸುವ ತನ್ನ ಜನ್ಮಗತ ಅಭ್ಯಾಸದಿಂದ ಬಿಡುಗಡೆಗೊಂಡ – ಒಮ್ಮೆಲೇ ಬಿಡುಗಡೆಗೊಂಡ ಮನಸ್ಸು! 'ಒಮ್ಮೆಲೇ' ಎಂದೇಕೆ ಹೇಳುವುದೆಂದರೆ 'ಬಿಡುಗಡೆ'ಯ ಮಾತು ಬಂದಾಗ ತಾನು ಬಿಡುಗಡೆಯನ್ನು ಅಭ್ಯಾಸ ಮಾಡಬಲ್ಲೆ, ಅನುಕರಿಸಬಲ್ಲೆನೆಂದು ಮನಸ್ಸು ಅಂದುಕೊಳ್ಳುವುದು. ಆಗ ಅದು ಅಭ್ಯಾಸಕ್ಕೆ ಬಿದ್ದ ಹಳೆಯ ಮನಸ್ಸೇ ಆಗಿರುವುದು. ಅಭ್ಯಾಸ ಮಾಡಿದಷ್ಟೂ ಅದು ಹೊಸತಾಗುವ ಸಂಭವವೇ ಕ್ಷೀಣಿಸುವುದು!

ಹೊಸತು ಎನ್ನುವ ಪದವೇ ಇದು ಎಷ್ಟು ಹೊಸತು ಎಂದರೆ ಇದಕ್ಕೆ ಪರ್ಯಾಯವೇ ಇಲ್ಲ, ಇದನ್ನು ಅನುಕರಿಸುವುದೇ ಸಾಧ್ಯವಿಲ್ಲ ಎಂಬಷ್ಟು ಹೊಸತು ಎನ್ನುವ ಅರ್ಥವನ್ನು ಸೂಚಿಸುವುದು. ಇಂಥ ಹೊಸ ಕಾಣ್ಕೆಯನ್ನು ಅಲ್ಲಮ. 'ಹೂ'ವಿಗೆ ಹೋಲಿಸುತ್ತಾನೆ. ಹಾಗೆ ಹೋಲಿಸುವಾಗ ಹಿನ್ನೆಲೆಯ ಪ್ರಳಯವನ್ನೂ ಬಣ್ಣಿಸದೆ ಬಿಟ್ಟಿಲ್ಲ. ಈ ಇಡೀ ಪ್ರಕ್ರಿಯೆಯನ್ನು ಅವನು ಕಂಡ ರೀತಿ ಇದು: 'ಅಲಗನೇರಿ ಹೂವ ಕೊಯ್ದು ಇಳಿದು ಬಂದಂತೆ'– ಎಂದು! ಈ ಮಾತೊಂದು ಅದ್ಭುತವೇ ಸರಿ. ಆಗ ತಾನೇ ಅರಳಿದ ತಾವರೆಯನ್ನು ಕೈಯಲ್ಲಿ ಎತ್ತಿಕೊಂಡ ಪದ್ಮಪಾಣಿ

ನಿರ್ವಾಣವೆಂದರೇನು? ದೀಪ ಆರಿಹೋಗುವುದು- ಎಂದು ಈ ಪದದ ಅರ್ಥ. ದೀಪನಿರ್ವಾಣ ಎಂಬ ಪದವೇ ಇದೆ. ಎಂಥ ಪದ ಬಳಸಿದ್ದಾನೆ ಬುದ್ಧ! 'ತಮಸೋಮಾ ಜ್ಯೋತಿರ್ಗಮಯ' - ಕತ್ತಲೆಯಿಂದ ಬೆಳಕಿನೆಡೆಗೆ ನಡೆಸು- ಎನ್ನುವ ವೈದಿಕ ಪ್ರಾರ್ಥನೆಗಿಂತ ತೀರ ಭಿನ್ನವಾಗಿ ಈ ಮಾತು ಕೇಳಿಸುತ್ತದೆ. ಪ್ರಮಾಣ - ಪ್ರಮೇಯ ವಿಚಾರಗಳಿಗೆ ಸಂಬಂಧಿಸಿದಂತೆ ಬುದ್ಧನಲ್ಲಿ ಒಂದು ಹೊಸ ತಿರುವು ಸಿಕ್ಕಿತು. ಓದಬೇಕಾದ್ದು ನಮ್ಮ ಮೈ-ಮನಗಳ ಗ್ರಂಥಿಗಳನ್ನು - ಯಾವುದೋ ಗ್ರಂಥಗಳನ್ನಲ್ಲ ಎಂಬ ತಿರುವು. 'ಧಮ್ಮಂ ಕಾಯೇನಪಸ್ಸತಿ' ಎನ್ನುವುದು ಬುದ್ಧನದೇ ಮಾತು; ಧರ್ಮವನ್ನು ನಮ್ಮ ಮನೋದೇಹಗಳ ನಿಜದಲ್ಲಿ ತಿಳಿಯಬೇಕು ಎನ್ನುವುದು ಈ ಮಾತಿನ ಇಂಗಿತ. ಏನೇ ಇರಲಿ; ಎಲ್ಲ ಸವಿಶೇಷಗಳನ್ನೂ ದಾಟಿ, ಹೀಗೆಂದು ವರ್ಣಿಸಲಾಗದ, ಮಾತಿಗೆ ಮೀರಿದ ನಿರ್ವಿಶೇಷಾನುಭವವೊಂದನ್ನು ಬುದ್ಧಪ್ರಜ್ಞೆ ಸೂಚಿಸುತ್ತದೆ..

ಬುದ್ಧನ ನೆನಪಾಗುತ್ತದೆ!

ಬುದ್ಧನ ಮಾತುಗಳನ್ನು ಗಮನಿಸಿದಷ್ಟೂ ಅದು ಗಹನವಾಗುತ್ತ ಹೋಗುವುದು. ಇತರ ಮಾತುಗಳೆಲ್ಲ ವ್ಯರ್ಥಕಲಾಪ ಎಂದನಲ್ಲವೆ? ಅದು ವ್ಯರ್ಥ ಕಲಾಪವೇಕಾಗಬೇಕು? ಹೀಗೆ ನಿರಾಕರಿಸುತ್ತ ನಡೆದರೆ ಬುದ್ಧನ ಮಾತುಗಳೂ ನಿರಾಕೃತವಾಗಲಾರವೆ? – ಎಂದು ವಾದಿಸಬಹುದು. ಆದರೆ, ಹೀಗೆ ವಾದಿಸುವುದು ಬುದ್ಧನನ್ನು Miss ಮಾಡಿಕೊಂಡಂತೆಯೇ.

ಏಕೆಂದರೆ ಒಂದು ಮಾತನ್ನು ಹೇಗೆ ಕೇಳಿಸಿಕೊಳ್ಳಬೇಕು ಎಂಬ ಸೂಕ್ಷ್ಮ ಆ ಮಾತಿನಲ್ಲಿಯೇ ಇರುತ್ತದೆ. ನಾವು ಏನು ವಾದಿಸುವುದಿದ್ದರೂ ನಮ್ಮ ಪೂರ್ವಾಗ್ರಹಗಳ ಮೂಲಕವೇ ವಾದಿಸುತ್ತೇವೆ. ಈ ಪೂರ್ವಾಗ್ರಹಗಳನ್ನು ಕಳಚಿಕೊಳ್ಳುವುದೇ ಮುಖ್ಯ – ಅದೇ ಮನಸ್ಸಿಗೆ ಬಿಡುಗಡೆ ತರುವಂಥದು ಎನ್ನುವುದೇ ಬುದ್ಧನಗಮ್ಯ. ಮನಸ್ಸು ಹೀಗೆ ಮುಕ್ತವಾಗಿ ಕೇಳುವುದು ಸಾಧ್ಯವಾದರೆ ಬುದ್ಧನ ಮಾತುಗಳೇ ಬಾಣದಂತೆರಗಿ ಮನದೊಳಗೆ ನಾಟಿ ಲೋಕದಲ್ಲಿ ಕಲಿತುದೆಲ್ಲವನ್ನೂ ಕಳಚಿಕೊಂಡು ಏಕಾಂಗಿಯಾಗಿ ನಿಲ್ಲುವ ನಿತಾಂತ ಸಂಕಟವನ್ನುಂಟು ಮಾಡಿ ಆ ಸಂಕಟದ ಮೂಲಕವೇ ಮನಸ್ಸು ಹೊಸಹುಟ್ಟನ್ನು ಪಡೆಯಬಹುದು!

ಜಡ ಮನುಷ್ಯನನ್ನು ಹೊಸ ಮನುಷ್ಯನನ್ನಾಗಿಸುವ ಕಡೆಗೆ ಮಾತ್ರ ಬುದ್ಧನ ಗಮನ. ಅವನ ಮಾತಿನ ಮಟ್ಟವನ್ನು ಗಮನಿಸಿ. "ಸತ್ತಮೇಲೂ ಒಂದು ಬದುಕಿದೆ ಮತ್ತು ನಾವು ಮಾಡಿದ ಒಳ್ಳೆಯ – ಕೆಟ್ಟ ಕರ್ಮಗಳ ಫಲವನ್ನು ನಾವು ಅಲ್ಲೂ ಅನುಭವಿಸುವೆವು ಎಂಬ ಕಾರಣಕ್ಕೆ ಇಲ್ಲೂ ನಾವು ಒಳ್ಳೆಯವರಾಗಿರಬೇಕು–ಒಳ್ಳೆಯ ಕರ್ಮಗಳನ್ನು ಮಾಡಬೇಕೆನ್ನುವುದು ಕೂಡ ಒಂದು ಒಪ್ಪಂದದ ಮನೋಧರ್ಮವೇ ಆಗಿದೆ. ಸತ್ತ ಮೇಲೆ ಏನೂ ಇಲ್ಲ. ಆದುದರಿಂದ ಕರ್ಮಫಲಗಳನ್ನು ಅನುಭವಿಸುವುದೆನ್ನುವುದೂ ಇಲ್ಲ ಎಂದು ಒಂದೊಮ್ಮೆ ತಿಳಿದು ಬಂದರೂ ಆಗಲೂ ತಾನು ಯಾರನ್ನೂ ದ್ವೇಷಿಸದೆ, ಯಾವ ಬಗೆಯ ಕೀಳ್ತನಕ್ಕೂ ಬಲಿಯಾಗದೆ ಒಳಿತನ್ನೇ ಎಸಗುತ್ತ ಹೋಗುವೆನೆನ್ನುವ ಬದುಕೇ ನಿಜವಾಗಿಯೂ ಎಚ್ಚರದ ಬದುಕು" – ಇದು 'ಕಾಲಾಮಸುತ್ತ'ದಲ್ಲಿದೆ. ದೇವರ ಭಯದಿಂದ ಒಳ್ಳೆಯವರಾಗಿರುವುದೂ ನಿಜವಾಗಿ ಒಳ್ಳೆಯವರಾದಂತಲ್ಲ ಎಂದು ಸೂಚಿಸುವ ಈ ಮಾತು, ಪ್ರಮಾಣಗಳಿಗೆ ಕಟ್ಟುಬೀಳುವುದು ಹೇಗೆ ನಮ್ಮನ್ನು ದಿಕ್ಕುತಪಿಸಬಲ್ಲುದೆಂದು ಸೂಕ್ಷ್ಮವಾಗಿ ಹೇಳುತ್ತದೆ. ಬುದ್ಧನು ಗುರುತಿಸುವ ದುಃಖವೆಂದರೆ – ಎಲ್ಲ ಸಗುಣ, ಸಾಕಾರ, ಸವಿಶೇಷ ಅನುಭವಗಳ ಒಂದು ಮೊತ್ತವೇ ಆಗಿದೆ. ದುಃಖವೆಂದಾಗ ಹುಟ್ಟು–ಸಾವುಗಳ ಸಮಸ್ಯೆ, ರೋಗರುಜಿನ–ಮುಪ್ಪುಗಳ ಸಮಸ್ಯೆ ಎಂದಷ್ಟೇ ಭಾವಿಸಬಾರದು. ಹುಟ್ಟೆಂದರೇನು? ಸಾಕಾರಗೊಳ್ಳುವಿಕೆ. ಸಾಕಾರವೆಂದರೆ ಪ್ರಕೃತಿಯ ಎಲ್ಲ ಗುಣ–ಧರ್ಮಗಳಿಗೆ ಮೈಯೊಡ್ಡುವಿಕೆ. ಇದೇ ದುಃಖವಲ್ಲವೆ? ಸ್ಥಾವರಕ್ಕೆ ಅಳಿವುಂಟು ಎಂದು ಬಸವಣ್ಣ ಹೇಳಿದಂತೆ. ಸ್ಥಾವರಗೊಳ್ಳುವಿಕೆಯೇ ಅಳಿವನ್ನು ಆಹ್ವಾನಿಸಿದಂತೆ! ಇದೇ ದುಃಖವಲ್ಲವೆ? ಆದುದರಿಂದ, ದುಃಖಾನುಭವವು ಹೀಗೆ ಬದುಕಿನ ಸಗುಣ ಸಾಕಾರ ಅನುಭವಗಳಿಗೆಲ್ಲ ಪ್ರತೀಕವೆಂಬಂತೆ ಒದಗಿರುವುದರಿಂದ, ದುಃಖವು ಪೂರ್ಣವಾಗಿ ನಿರುದ್ಧವಾದಾಗ ಪ್ರತೀಕವೇ ಭಗ್ನವಾಗಿ ಹೋಯಿತು. ಸಂಸಾರವೇ ಭಗ್ನವಾಗಿ ಹೋಯಿತು. ಮೂರ್ತಿಭಂಜನೆಯಾಗಿ ಹೋಯಿತು. ನಿರ್ವಾಣವು ಸಂಭವಿಸಿತು. ನಿರ್ವಾಣವೆಂದರೇನು? ದೀಪ ಆರಿಹೋಗುವುದು – ಎಂದು ಈ ಪದದ ಅರ್ಥ. ದೀಪನಿರ್ವಾಣ ಎಂಬ ಪದವೇ ಇದೆ. ಎಂಥ ಪದ ಬಳಸಿದ್ದಾನೆ ಬುದ್ಧ! 'ತಮಸೋಮಾ ಜ್ಯೋತಿರ್ಗಮಯ' – ಕತ್ತಲೆಯಿಂದ ಬೆಳಕಿನೆಡೆಗೆ ನಡೆಸು – ಎನ್ನುವ ವೈದಿಕ ಪ್ರಾರ್ಥನೆಗಿಂತ ತೀರ ಭಿನ್ನವಾಗಿ ಈ ಮಾತು ಕೇಳಿಸುತ್ತದೆ. ಪ್ರಮಾಣ – ಪ್ರಮೇಯ ವಿಚಾರಗಳಿಗೆ ಸಂಬಂಧಿಸಿದಂತೆ ಬುದ್ಧನಲ್ಲಿ ಒಂದು ಹೊಸ ತಿರುವು ಸಿಕ್ಕಿತು. ಓದಬೇಕಾದ್ದು ನಮ್ಮ ಮೈ–ಮನಗಳ ಗ್ರಂಥಿಗಳನ್ನು– ಯಾವುದೋ ಗ್ರಂಥಗಳನ್ನಲ್ಲ ಎಂಬ ತಿರುವು. 'ಧಮ್ಮಂ ಕಾಯೇನಪಸ್ಸತಿ' – ಎನ್ನುವುದು ಬುದ್ಧನದೇ ಮಾತು; ಧರ್ಮವನ್ನು ನಮ್ಮ ಮನೋದೇಹಗಳ ನಿಜದಲ್ಲಿ ತಿಳಿಯಬೇಕು ಎನ್ನುವುದು ಈ ಮಾತಿನ ಇಂಗಿತ. ಏನೇ ಇರಲಿ; ಎಲ್ಲ ಸವಿಶೇಷಗಳನ್ನೂ ದಾಟಿ, ಹೀಗೆಂದು ವರ್ಣಿಸಲಾಗದ, ಮಾತಿಗೆ ಮೀರಿದ ನಿರ್ವಿಶೇಷಾನುಭವವೊಂದನ್ನು ಬುದ್ಧಪ್ರಜ್ಞೆ ಸೂಚಿಸುತ್ತದೆ.* * *

ಆಚಾರ್ಯ ಶಂಕರರು ತೀಕ್ಷ್ಣ ವಿಚಾರಪರರು. ಜ್ಞಾನಸಾಧಕರು. ವಿರಕ್ತರು. ಅವರ ಮುಂದೆ ಇದ್ದ ಸಮಸ್ಯೆ ಏನು? ಎಂದರೆ ವಿಚಾರಪರರಾದ ಎಲ್ಲ ಮನುಷ್ಯಜೀವಿಗಳೂ ಅರಿವಿನ ಮಟ್ಟದಲ್ಲಿ – ವ್ಯಾವಹಾರಿಕ ಮಟ್ಟದಲ್ಲಿ ಅಲ್ಲ – ಯಾವುದಕ್ಕೆ ಪ್ರಯತ್ನಿಸುತ್ತಿದ್ದಾರೆ ಬದುಕಿನಲ್ಲಿ? ವಿಚಾರಪರರಲ್ಲದವರೂ ತಮಗೆ ತಿಳಿಯದೇ ಯಾವುದನ್ನು ಬಯಸುತ್ತಿದ್ದಾರೆ? ಎಂದು ಕೇಳಿದರೆ ಇದಕ್ಕೆ ಒಂದೇ ಉತ್ತರ: 'ಸಮನ್ವಯ'ಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂದು. ನಮ್ಮ ಅನುಭವದಲ್ಲಿಯೇ ನೋಡಿ. ಯಾವುದೇ ಒಂದು ವಿಚಾರವನ್ನು ಕೇಳಿದಾಗಲೂ ಅದರಲ್ಲಿ ಪರಸ್ಪರ ವಿರೋಧಗಳು ಕಂಡು ಬಂದರೆ ಅದು ನಮಗೆ ಮೆಚ್ಚುಗೆಯಾಗದಿರುವುದು ಏಕೆ? ಇದು ಯಾವುದನ್ನು ಸೂಚಿಸುತ್ತದೆ? ನಮ್ಮ ವಿಚಾರಗಳಲ್ಲೂ ಪರಸ್ಪರ ವಿರೋಧ ಬಾರದಂತೆ ನಾವು ಎಚ್ಚರವಾಗಿರುವುದೇಕೆ? ವಿಚಾರಪರರಲ್ಲದ ಭಾವುಕ ಜೀವಿಗಳಿಗೂ ತಾವು ಒಪ್ಪುವ, ತಮ್ಮನ್ನು ಒಪ್ಪುವ, ಪರಸ್ಪರ ನಿಃಶರ್ತ ಸ್ವೀಕಾರದ ಒಂದು ಜಾಗ – ಒಂದು ಮಡಿಲು – ಬೇಕಾಗಿದೆ. ಅಂಥ ಮಡಿಲನ್ನು ಅವರು ಹುಡುಕುತ್ತಿದ್ದಾರೆ. ಬದುಕಿನ ಎಲ್ಲ ನೋವುಗಳ ಅಂತರಾರ್ಥವೇನೆಂದರೆ ಅದು ಹೊಕ್ಕುಳಬಳ್ಳಿ ತುಂಡರಿಸಿ ಬೇರ್ಪಟ್ಟಂತೆ ಇರುವ ಒಂದು ಬಗೆಯ ಅನಾಥ ಪ್ರಜ್ಞೆಯ ನೋವು! ಈ ಎಲ್ಲ ಅನುಭವಗಳೂ ಏಕಸೂತ್ರತೆಯನ್ನು ಕಂಡುಕೊಳ್ಳುವುದು ಬದುಕಿನ ನಿಜವಾದ ತುಡಿತ ಎಂದು ಸೂಚಿಸುತ್ತವೆ. ಇನ್ನೊಂದು ಬಗೆಯಲ್ಲಿ ನೋಡಿದರೆ: ನಾವು ಲೋಕವನ್ನು ನೋಡುವೆವು; ಲೋಕವನ್ನು ವರ್ಣಿಸುವೆವು; ಲೋಕದ ಅವಿಭಾಜ್ಯ ಅಂಗವಾಗಿಯೂ ನಾವು ಇರುವೆವು. ಅಂದರೆ ಲೋಕವನ್ನು ವರ್ಣಿಸುವ ನಮ್ಮ ಮಾತು ನಮ್ಮನ್ನೇ ನಾವು ವರ್ಣಿಸಿಕೊಂಡಂತೆ ಕೂಡಾ. ಅಂದರೆ ತನ್ನನ್ನೇ ತಾನು ನೋಡಿಕೊಳ್ಳುವಂತೆ ಈ ವಿಶ್ವದ ರಚನೆಯಾಗಿದೆ; ಇನ್ನೊಂದನ್ನು ನೋಡುವಂತೆ ಅಲ್ಲ. ತನಗಿಂತ ಭಿನ್ನವಾದುದನ್ನು ನೋಡಲು ಇದು ಸಜ್ಜುಗೊಂಡುದಲ್ಲ. ಇದನ್ನೊಪ್ಪಿ ಇದರ ಮೇಲಿನಿಂದ ವಿಚಾರ ಮಾಡಿದರೆ ಇಂಥದೊಂದು ಏಕಸೂತ್ರತೆಯುಳ್ಳ, ಎಲ್ಲವನ್ನೂ ಒಳಗೊಳ್ಳಬಲ್ಲ, ಯಾವುದನ್ನೂ ತನಗಿಂತ ಬೇರೆ ಎಂದು ತಿಳಿಯದ, ಅಖಂಡವಾದ ವಸ್ತುವೊಂದರಿಂದಲೇ ಈ ಬದುಕು ಹೊರಹೊಮ್ಮಿರಬೇಕು. ಈ ವಸ್ತುವನ್ನು 'ಪರವಸ್ತು' ಎಂದರು. 'ಬ್ರಹ್ಮ' ಎಂದರು. ಇದು ನಿತ್ಯ, ಶುದ್ಧ, ಬುದ್ಧ, ಮುಕ್ತ ಸ್ವಭಾವದ್ದು ಎಂದರು. ಇದು 'ಸ್ವಪ್ರಕಾಶ' ಎಂದರು. ಸ್ವಪ್ರಕಾಶ ಎಂದರೆ ತನ್ನ ಅರಿವನ್ನು ತಾನೇ ಹೊಂದಿರುವಂಥದು ಎಂದು. ಇದು 'ಸ್ವಗತ ಭೇದ ವಿವರ್ಜಿತ' ಎಂದರು. ಅಂದರೆ ತನ್ನನ್ನು ತಾನು ಅರಿತಿದ್ದೇನೆ ಎನ್ನುವಲ್ಲಿ ತಾನು ಬೇರೆ – ತನ್ನ ಅರಿವು ಬೇರೆ ಎಂದು ತನ್ನಲ್ಲಿಯೇ ಎರಡಿಲ್ಲ ಎಂದು. ತನ್ನಲ್ಲಿಯೇ ತಾನು ಅಖಂಡ ಮಂಡಲವೆಂದು. ಇದು ಬ್ರಹ್ಮ, ಇದು ಸತ್ಯ, ಇದು ಒಂದೇ ಸತ್ಯ. ಇದು ಅದ್ವಿತೀಯ ಎಂದರೆ ಎರಡಿಲ್ಲ ಎಂದು ಸಾರಿದರು. ಇದು ಚೈತನ್ಯ ಎಂದು ಘೋಷಿಸಿದರು.

ನಿಜ; ಒಪ್ಪೋಣ. ಆದರೆ, ಇದಕ್ಕೆ ಎರಡನೆಯದಾಗಿ ಇನ್ನೊಂದಿಲ್ಲ ಎನ್ನುವಾಗ ಹಾಗಾದರೆ ನಮ್ಮ ಅನುಭವಕ್ಕೆ ಬಂದಿರುವ ಈ ಪ್ರಪಂಚ ವ್ಯವಹಾರಕ್ಕೇನು ಅರ್ಥ? ಅಲ್ಲದೆ ಬ್ರಹ್ಮ ಭಿನ್ನವಾಗಿಯೇ ಈ ಪ್ರಪಂಚ ನಮ್ಮ ಅನುಭವಕ್ಕೆ ಬಂದಿದೆಯಲ್ಲ? ಏಕೆ? ಪ್ರಪಂಚವೇ ಸತ್ಯ ಅನ್ನಿಸುತ್ತದೆಯಲ್ಲ; ಬ್ರಹ್ಮವೇ ಸುಳ್ಳು ಅನ್ನಿಸುತ್ತದೆಯಲ್ಲ– ಏಕೆ?

ಇದು ಅಜ್ಞಾನ; ಅವಿದ್ಯೆ ಎಂದರು ಶಂಕರ. ಈ ಅಜ್ಞಾನವನ್ನು ಹೀಗೆ ವಿವರಿಸುವರು: ಗಾಢ ನಿದ್ರೆಯಿಂದ ಎಚ್ಚರಗೊಳ್ಳುವೆವು. ಆಮೇಲೆ ಪ್ರಪಂಚ ವ್ಯವಹಾರವು ಪ್ರಾರಂಭವಾಗುವುದು – ಈ ವಿಶಿಷ್ಟ ಅನುಭವಕ್ಕೆ ಒಂದು ಕಾರಣವಿರಬೇಕು. ಆ ಕಾರಣವು ಬ್ರಹ್ಮ ಚೈತನ್ಯವಾಗಿರಲಾರದು. ಏಕೆಂದರೆ ಅದು ಅಖಂಡ. ಆದುದರಿಂದ ನಿದ್ರೆಯ ಕಾಲದಲ್ಲಿಯೇ ಚೈತನ್ಯದ ಜೊತೆಯಲ್ಲಿಯೇ ಕಂಡು ಬರುವ ಬೀಜರೂಪವಾದ ಅಜ್ಞಾನವೇ; ಎಚ್ಚರಗೊಂಡ ಮೇಲೆ ಉಂಟಾಗುವ ವ್ಯವಹಾರ ಪ್ರಪಂಚಕ್ಕೆ ಕಾರಣವಾಗಿರಬೇಕು. ಹೀಗೆ ಪ್ರಪಂಚವೆಲ್ಲ ಅಜ್ಞಾನದ ಕಾರ್ಯ. ಅಜ್ಞಾನವು ಸತ್ಯವಲ್ಲ. ಅದು ಆತ್ಮನಿಂದ ಭಿನ್ನ ಎನ್ನುವ ಅಂಶವೇ ಅದು ಸತ್ಯವಲ್ಲ ಎಂದು ಸೂಚಿಸುವುದು. ಸತ್ಯವಲ್ಲದಿದ್ದರೆ ಮಿಥ್ಯಾ ಆಯಿತು. ಎಲ್ಲದಕ್ಕೂ ಆಧಾರವಾಗಿರುವ ಆತ್ಮನೇ ಮಿಥ್ಯೆಗೂ ಆಧಾರನೆಂದಾಯಿತು! ಇಷ್ಟನ್ನು ಒಪ್ಪದೆ ನಿರ್ವಾಹವಿಲ್ಲ; ಒಪ್ಪಿದರೆ, ಈ ಸತ್ಯ ಮತ್ತು ಮಿಥ್ಯಗಳ ನಡುವೆ ಒಂದು ಸಂಬಂಧವಿರಲೇ ಬೇಕಲ್ಲ – ಒಂದು ಸತ್ಯ ಮತ್ತು ಇನ್ನೊಂದು ಅಸತ್ಯವಾದುದರಿಂದ ಇವುಗಳ ನಡುವಣ ಸಂಬಂಧವೂ ಸತ್ಯವಾಗಿರುವುದು ಸಾಧ್ಯವಿಲ್ಲ. ಮತ್ತೇನೆಂದರೆ – ಈ ಸಂಬಂಧವು ಆತ್ಮನಲ್ಲಿ

ಆರೋಪಿತವಾಗಿದೆ ಎಂದೇ ತಿಳಿಯಬೇಕಾಯಿತು. ಸಂಬಂಧವು ಆತ್ಮನಲ್ಲಿ ಆರೋಪಿತವಾದುದರಿಂದ ಪ್ರಪಂಚವೂ ಆತ್ಮನಲ್ಲಿ ಆರೋಪಿತವೆಂದಾಯಿತು. ನಾವು ಆತ್ಮಧರ್ಮವನ್ನು ಪ್ರಪಂಚದಲ್ಲಿ ತಿಳಿಯುವುದಕ್ಕೂ ಅಂದರೆ ಪ್ರಪಂಚವು ಸತ್ಯವೆಂದು ತಿಳಿಯುವುದಕ್ಕೂ ಪ್ರಪಂಚ ಧರ್ಮವನ್ನು ಆತ್ಮನಲ್ಲಿ ತಿಳಿಯುವುದಕ್ಕೂ ಈ ಪರಸ್ಪರ ಆರೋಪವೇ ಕಾರಣ. ಈ ಆರೋಪಕ್ಕೆ ಇತರೇತರಾಧ್ಯಾಸ ಎಂದು ಪರಿಭಾಷೆ. ಆತ್ಮ ಮತ್ತು ಅನಾತ್ಮದ ನಡುವಣ ಈ ಅನ್ಯೋನ್ಯ ಅಭ್ಯಾಸಕ್ಕೆ ಅವಿದ್ಯೆ ಎಂದು ಹೆಸರು. ಈ ಅವಿದ್ಯೆಯಿಂಗಲೇ ನಾನು ಮಾಡಿದವನು; ಆದುದರಿಂದ ನಾನು ಪಡೆಯಬೇಕಾದವನು ಎಂಬ ಸ್ವರೂಪದ ಕರ್ತಾ – ಭೋಕ್ತಾ ರೂಪದ ಸಂಸಾರಬಂಧ ಉಂಟಾಗಿರುವುದು. ಈ ಅವಿದ್ಯೆಯನ್ನು ಕಳೆಯುವುದಕ್ಕಾಗಿಯೇ ಉಪನಿಷತ್ತು, ಸೂತ್ರ, ಗೀತೆಗಳು ಉದ್ದೇಶಿಸಿರುವುದು. ಸಕಲ ವ್ಯವಹಾರಗಳೂ – ಪ್ರಮಾಣ, ಪ್ರಮೇಯ ವ್ಯವಹಾರಗಳೂ ಸೇರಿ – ಅವಿದ್ಯೆಯಿಂದಲೇ ಉಂಟಾಗಿರುವುದರಿಂದ, ವೇದಾಂತ ವಾಕ್ಯಗಳ ಜ್ಞಾನದಿಂದ ಅವಿದ್ಯೆಯು ತೊಲಗಿದರೆ ಪ್ರಪಂಚ ವ್ಯವಹಾರವೇ ಉಳಿಯುವುದಿಲ್ಲ; ಪ್ರಮಾಣ – ಪ್ರಮೇಯ ವ್ಯವಹಾರವೂ ಸೇರಿ, ಬಂಧನ ಮತ್ತು ಬಿಡುಗಡೆ ಎಂಬ ಕಲ್ಪನೆಗಳೂ ಅಳಿದು ಸೃಷ್ಟಿಯೇ ಅಳಿದು ಹೋಗುವುದು. ಇದು ಜೀವನ್ಮುಕ್ತಿ ಎನ್ನುವರು ಶಂಕರ.

ಬ್ರಹ್ಮ ನಿರ್ವಿಶೇಷ. ಅಂದರೆ ಅದರಲ್ಲಿ ಯಾವ ವಿಶೇಷವೂ ಇಲ್ಲ. ಆದರೆ ಅಧ್ಯಾಸರೂಪವಾದ ಅವಿದ್ಯೆಯಿಂದ ಅದರಲ್ಲಿ ಎಲ್ಲ ವ್ಯವಹಾರಗಳನ್ನೂ ಸಮನ್ವಯಗೊಳಿಸಲಾಗುತ್ತದೆ ಎನ್ನುವುದೇ ಶಂಕರರ ವೇದಾಂತ ದರ್ಶನ.

'ಅವಿದ್ಯೆ'ಯು ಯಾರಿಗೆ ಎಂದು ಕೇಳಿದರೆ – ಹಾಗೆ ಕೇಳುವವನಿಗೇ ಎನ್ನುವರು ಶಂಕರ. ಅವಿದ್ಯೆ ಇದೆ ಎಂದಾದರೆ ಬ್ರಹ್ಮವು ಒಂದೇ – ಎರಡಿಲ್ಲ ಎನ್ನುವ ಮಾತು ಬಿದ್ದು ಹೋಗುವುದಿಲ್ಲವೆ ಎಂದು ಕೇಳಿದರೆ ಬಿದ್ದು ಹೋಗಲಿ, ಅವಿದ್ಯೆಯ ಕಾಲದಲ್ಲಿ ಏನು ಬೇಕಾದರೂ ಆಗಬಹುದು ಎನ್ನುತ್ತಾರೆ. ವೇದಪ್ರಮಾಣವನ್ನು ಒಪ್ಪದವರ ಮಾತನ್ನು ಖಂಡಿಸಿ, ವೇದ ಪ್ರಮಾಣ್ಯವನ್ನು ಸ್ಥಾಪಿಸಿ, ವೇದ ಪ್ರಮಾಣವನ್ನು ಮೀರುವುದೆಂದರೇನು ಎಂದು ಕೂಡ ತೋರಿಸಿ, ನಿರಾಳರಾಗುತ್ತಾರೆ. ಶಂಕರ.

ಇವರ ಮಾತಿನಲ್ಲಿ ಪ್ರತಿಭೆಯೂ ಇದೆ. ಒಳನೋಟವೂ ಇದೆ. ಚಮತ್ಕಾರವೂ ಇದೆ.

ಆಚಾರ್ಯ ಮಧ್ವರ ಬಳಿ ಬರೋಣ. ಶಂಕರರ ಹಿನ್ನೆಲೆಯಲ್ಲಿ ಮಧ್ವರನ್ನು ನೋಡೋಣ.

ಇದೇನು ಅನುಭವವಿರುದ್ಧವಾದ ಮಾತುಗಳು! ಸಮನ್ವಯ ಮಾಡುವುದಕ್ಕೆ ಹೊರಟಿದ್ದೀರಿ ತಾನೇ. ಆದರೆ ಸಮನ್ವಯ ಮಾಡುವ ರೀತಿ ಇದಲ್ಲ; ಹೀಗಲ್ಲ ಎನ್ನುವರು ಮಧ್ವ, ಗೀತೆಯಲ್ಲಿ ಒಂದು ಮಾತಿದೆ. 'ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ – ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ' ಧನಂಜಯ – ನಾನಲ್ಲದೆ ಇನ್ನೊಂದು ಪರತರ ವಸ್ತು ಇಲ್ಲ. ಈ ಎಲ್ಲ ನನ್ನಲ್ಲೇ ಹೆಣೆದುಕೊಂಡಿವೆ – ದಾರದಲ್ಲಿ ಮಣಿಗಳಂತೆ. ಈ ಮಾತು ನೀವು ಮರೆಯಲೇಬಾರದಿತ್ತು. ಏಕೆಂದರೆ ಪರತರ ವಸ್ತು ಒಂದೇ ಇರುವುದು ಎನ್ನುವುದು ಅದ್ವೈತದ ಪ್ರಮೇಯವೇ. ಇನ್ನೊಂದು ವಸ್ತುವೇ ಇಲ್ಲ ಎಂದಲ್ಲ, ಅದಕ್ಕೆ ಸರಿಸಾಟಿಯಾದ ವಸ್ತು ಇನ್ನೊಂದಿಲ್ಲ ಎಂದು ನಾನು ಅರ್ಥೈಸುವೆ. ಅಲ್ಲೇ ಮುಂದೆ ಹೇಳಿದ್ದಾನೆ – ಎಲ್ಲವೂ ನನ್ನಲ್ಲಿ ಹೆಣೆದುಕೊಂಡಿವೆ ಎಂದು. ಆಚಾರ್ಯರೇ, ಇದು ಕೃಷ್ಣನನ್ನು ಒಪ್ಪುವ ನಮಗೆಲ್ಲ ಒಂದು ಸೂಚನೆಯಲ್ಲವೆ? ಭಗವಂತನಲ್ಲಿ ಎಲ್ಲವೂ ಸಮನ್ವಯಗೊಳ್ಳುತ್ತದೆ ಎಂದು 'ಪ್ರೋತಂ' ಎಂದು ಪದ ಬಳಸಿದ್ದಾನೆ. ಹೆಣೆಯಲ್ಪಟ್ಟಿದೆ ಎಂದು. ಭಗವಂತನಲ್ಲಿ ಹೆಣೆಯಲ್ಪಡದೆ ಇರುವುದು ಯಾವುದೂ ಇಲ್ಲ ಎನ್ನುವ ಅರ್ಥದ ಜೊತೆಗೆ ಈ ಹೆಣಿಗೆ ಸುಳ್ಳಲ್ಲ ಎನ್ನುವ ಧ್ವನಿಯೂ ಇಲ್ಲವೆ? ಅಲ್ಲದೆ 'ಹೆಣಿಗೆ' ಎನ್ನುವ ಪರಿಕಲ್ಪನೆಯಲ್ಲಿ ಶಬ್ದಾರ್ಥಗಳು – ಕಾಲ ದೇಶಗಳು ಕೂಡಾ ಸೇರಿ ಪ್ರಮಾಣವಾಙ್ಮಯದ ವಿಶಾಲವಾದ ಭಿತ್ತಿಯೊಂದು ಒಡಮೂಡುವುದಿಲ್ಲವೆ? ಅಂದರೆ ಪ್ರಮಾಣವು ವಿಸ್ತರಿಸುತ್ತ ಹೋಗುತ್ತದೆ. ಪ್ರಮಾಣವು ಸಂಕುಚಿತವಾಗುತ್ತ ಹೋಗುವುದಲ್ಲ. ಇನ್ನು 'ಸೂತ್ರೇ ಮಣಿಗಣಾ ಇವ' ಎಂಬ ಮಾತು. ದಾರದಲ್ಲಿ ಮಣಿಗಳನ್ನು ಕೋದಂತೆ! ಇದು ಹಗ್ಗದಲ್ಲಿ ಕಂಡ ಹಾವಲ್ಲ! ದಾರದಲ್ಲಿ ಪೋಣಿಸಿದ ಮಣಿಮುತ್ತುಗಳು!

ಗೀತೆಯಲ್ಲಿ ಕೃಷ್ಣ – ವೇದಗಳ ಖಂಡನೆಯನ್ನೂ ಮಾಡಿದ್ದುಂಟು. ಕರ್ಮಕಾಂಡದ ದಾರಿಯಲ್ಲಿ ತಮ್ಮ ಆಸೆಗಳ ಪೂರೈಕೆಗಾಗಿ ವೇದಗಳನ್ನು ಬಳಸುವ ಕಾಮಾತ್ಮರಿಗೆ (ಇದು ಕೃಷ್ಣನದೇ ಪದ) ಹಳಿದುದುಂಟು. ದೊಡ್ಡಜ್ಞಾನವೊಂದು ಎಲ್ಲ ಬಗೆಯ ಅಪಾರ್ಥ – ಅನರ್ಥಗಳಿಗೆ ತೆರೆದುಕೊಂಡಿದ್ದೇ ದೊಡ್ಡ ಜ್ಞಾನವಾಗಿರುವುದು ಸಾಧ್ಯ. ಆದುದರಿಂದ ಖಂಡನೀಯವೆಂದು ಕಂಡುದನ್ನು ಖಂಡಿಸಲೇಬೇಕು. ಬುದ್ಧ ಖಂಡಿಸಲಿಲ್ಲವೇ ಕರ್ಮಕಾಂಡವನ್ನು? ಯಜ್ಞಯಾಗಾದಿ

ಯಾವ ಕಾರಣಕ್ಕೂ ಜಗತ್ತು ಮಿಥ್ಯೆಯಲ್ಲ ಇದು ಸತ್ಯವಾದ ಪ್ರಪಂಚವೇ ಎಂದು ಪ್ರತಿಪಾದಿಸುವ ಮಧ್ವರು, ಅಧ್ಯಾಸಾರೋಪವನ್ನು ಸಮರ್ಥಿಸುವುದಕ್ಕೆ ದೃಷ್ಟಾಂತಗಳೇ ಇಲ್ಲ ಎನ್ನುತ್ತಾರೆ. ಹಗ್ಗವನ್ನು ನೋಡಿ ಹಾವೆಂದು ತಿಳಿದು ಗಾಬರಿಬಿದ್ದು ಮತ್ತೆ ಸರಿಯಾಗಿ ಪರಾಂಬರಿಸಿದಾಗ ಅದು ಹಾವಲ್ಲ; ಹಗ್ಗ ಎಂಬ ಅರಿವಿನ ಸಂದರ್ಭವನ್ನು ಅಧ್ಯಾಸಕ್ಕೆ ಕೊಡಲಾಗುತ್ತದೆ. ಇರುವ ಹಗ್ಗದ ಮೇಲೆ ಇಲ್ಲದ ಹಾವಿನ ಆರೋಪದಂತೆ, ಇರುವ ಆತ್ಮನಲ್ಲಿ ಇಲ್ಲದ ಪ್ರಪಂಚದ ಆರೋಪ ನಡೆದಿದೆ ಎಂದು ವಿವರಣೆ. ಇಲ್ಲದ ಹಾವು ಎನ್ನುವ ಮಾತೇ ಸರಿಯಲ್ಲ ಎನ್ನುತ್ತಾರೆ ಮಧ್ವರು. ಹಾವನ್ನು ಕಂಡು ಬೆಚ್ಚಿ ಬೀಳಬೇಕಾದರೆ ನಿಜವಾದ ಹಾವನ್ನು ಕಂಡವರಿಗಷ್ಟೇ ಸಾಧ್ಯ. ಅಲ್ಲಿ ಹಾವಿಲ್ಲ ನಿಜ. ಆದರೆ ನಿಜವಾದ ಹಾವನ್ನು ಕಂಡ ಸಂಸ್ಕಾರ ಅಲ್ಲಿದೆ. ಸಂಸ್ಕಾರಕ್ಕೆ ಕಾರಣವಾದದ್ದು ನಿಜವಾದ ಹಾವು. ಹಾವಿನಂತೆ ಕಂಡ ಹಗ್ಗವಲ್ಲ. ಎರಡು ಸತ್ಯವಸ್ತುಗಳಲ್ಲಿ ಪರಸ್ಪರ ಆರೋಪವಿದೆ ಎಂದರೆ ಸರಿಯಲ್ಲ.

ಆಚರಣೆಗಳನ್ನು? ಅದು ಕೃಷ್ಣನಲ್ಲಿಯೇ ನಡೆದಿತ್ತು. ಕೃಷ್ಣನಲ್ಲಿಯೂ ನಡೆದಿತ್ತು. ಜೊತೆಗೆ ಇನ್ನೊಂದು ಮಾತು ಹೇಳಿದ್ದ. 'ವೇದೈಶ್ಚ ಸರ್ವೈಃ ಅಹಮೇವ ವೇದ್ಯಃ' ಎಲ್ಲ ವೇದಗಳಿಂದ ತಿಳಿಯಲ್ಪಡಬೇಕಾದವನು ನಾನೇ – ಎಂಬ ಮಾತು. ಅಂದರೆ ಕೃಷ್ಣನಂಥ ಅನುಭವವಿದ್ದವನು ಅವನೇ ವೇದ ಪುರುಷನಾಗುವನು. ಅವನು ಹೇಳಿದ್ದೇ ವೇದವಾಕ್ಯವಾಗುವುದು; ಅವನೇ ಪ್ರಮಾಣ ಪುರುಷನಾಗುವನು. ಅವನ ಕಾಲವೇ ವೇದಕಾಲವಾಗುವುದು. ವೇದಗಳು ವಿಸ್ತಾರಗೊಳ್ಳುವವು. 'ಅನಂತಾಃ ವೈ ವೇದಾಃ' ಎಂದದ್ದು ಇದೇ ಅರ್ಥದಲ್ಲಿ. ಪ್ರಾಚೀನ – ನವೀನ ಕಾಲದೇಶಗಳು ಒಂದಾಗುವವು. ಇಲ್ಲೆಲ್ಲೂ ಅನುಭವವಾದ ಮೇಲೆ ಪ್ರಮಾಣಗಳು ಬಿದ್ದು ಹೋಗುವವು ಎಂಬ ಅರ್ಥವೇ ಉಂಟಾಗುವುದಿಲ್ಲ. ಆ ಅರ್ಥದ ಸೊಲ್ಲೂ ಇಲ್ಲ. ಬದಲಾಗಿ ವೇದಗಳು ಪುನರ್ನವಗೊಳ್ಳುವವು ಎಂಬ ಧ್ವನಿ ಇದೆ! ವೇದಗಳು ನಿತ್ಯ ಎಂಬ ಧ್ವನಿ ಇದೆ. ವೇದಗಳೆಲ್ಲ ನನ್ನ ಅನುಭವ ಎನ್ನುವ ಕೃಷ್ಣನ ಮಾತಿನಲ್ಲಿ ಪ್ರಮಾಣ – ಪ್ರಮೇಯಗಳ ಐಕ್ಯ ಸಿದ್ಧಿ ಇದೆ. ಈ ಐಕ್ಯಸಿದ್ಧಿಯೇ ಕೃಷ್ಣನಿಗೆ ಇಷ್ಟ. ಬ್ರಹ್ಮವನ್ನು ಬಲ್ಲ ಜ್ಞಾನಿಯಲ್ಲಿ ಎಲ್ಲ ವೇದಗಳ ಫಲವೂ ಒಳಗೊಂಡಿದೆ ಎಂದು ಮುಕ್ತವಾಗಿ ಹೇಳಿದ್ದಾನೆ. ಪ್ರಮಾಣದ ಸಾರ್ಥಕತೆಯ ಮಾತು. ಪ್ರಮಾಣವು ಬಿದ್ದು ಹೋಗುವ ಮಾತಲ್ಲ – ಇದು.

ಪ್ರಮಾಣವನ್ನು ವೇದೋಪನಿಷತ್ತುಗಳಿಂದ ಇತಿಹಾಸ ಪುರಾಣಗಳವರೆಗೆ ವಿಸ್ತರಿಸುವ ಹಂಬಲ ಮಧ್ವರಿಗೆ. ಇದೂ ಕೂಡ ಇವರ ಸ್ವ–ತಂತ್ರ ಕಲ್ಪನೆಯಲ್ಲ. ಇದು ಉಪನಿಷತ್ತಿನಲ್ಲಿಯೂ – ಮಹಾಭಾರತದಲ್ಲಿಯೂ ಇದೆ. ವೇದಗಳನ್ನು ಮಾತ್ರ ಓದಿದವನು ಅಲ್ಪಶ್ರುತ. ವೇದಗಳನ್ನೂ ಇತಿಹಾಸ ಪುರಾಣಗಳನ್ನೂ ಅನ್ಯೋನ್ಯವಾಗಿ ಓದಿದವನು ಬಹುಶ್ರುತ. ತನ್ನನ್ನು ಮಾತ್ರ ಅಧ್ಯಯನ ಮಾಡಿದವನಿಂದ ತನಗೇ ನ್ಯಾಯ ಸಿಗಲಾರದು ಎಂದು ವೇದಕ್ಕೆ ಗಾಬರಿಯಾಗುತ್ತದೆ ಎಂದು ಮಹಾಭಾರತದ ಮಾತು! ಅಪೂರ್ವವಾದ ಮಾತು! ಏಕೆ ಪ್ರಮಾಣಗಳನ್ನು ವಿಸ್ತರಿಸುವ ತವಕ ಮಧ್ವರಿಗೆ ಎಂದರೆ ಪ್ರಮೇಯನಾದ ಭಗವಂತ ಸರ್ವವ್ಯಾಪಿಯಲ್ಲವೆ? ಅವನ ಬಗೆಗಿನ ವಾಙ್ಮಯವೂ ಸರ್ವವ್ಯಾಪಿಯೇ ಎಂದು ಭಾವ. ಆದುದರಿಂದಲೇ ಬ್ರಹ್ಮಸೂತ್ರಗಳ ಅರ್ಥವನ್ನು ಬಿಡಿಸುವ ಸಂದರ್ಭದಲ್ಲಿ ಮಧ್ವರು ಪುರಾಣದ ವಚನಗಳನ್ನು ಉಲ್ಲೇಖಿಸಿ ಜೋಡಿಸಿ ಬಿಡುತ್ತಾರೆ!

ಯಾವ ಕಾರಣಕ್ಕೂ ಜಗತ್ತು ಮಿಥ್ಯೆಯಲ್ಲ – ಇದು ಸತ್ಯವಾದ ಪ್ರಪಂಚವೇ ಎಂದು ಪ್ರತಿಪಾದಿಸುವ ಮಧ್ವರು, ಅಧ್ಯಾಸಾರೋಪವನ್ನು ಸಮರ್ಥಿಸುವುದಕ್ಕೆ ದೃಷ್ಟಾಂತಗಳೇ ಇಲ್ಲ ಎನ್ನುತ್ತಾರೆ. ಹಗ್ಗವನ್ನು ನೋಡಿ ಹಾವೆಂದು ತಿಳಿದು ಗಾಬರಿಬಿದ್ದು ಮತ್ತೆ ಸರಿಯಾಗಿ ಪರಾಂಬರಿಸಿದಾಗ ಅದು ಹಾವಲ್ಲ; ಹಗ್ಗ ಎಂಬ ಅರಿವಿನ ಸಂದರ್ಭವನ್ನು ಅಧ್ಯಾಸಕ್ಕೆ ಕೊಡಲಾಗುತ್ತದೆ. ಇರುವ ಹಗ್ಗದ ಮೇಲೆ ಇಲ್ಲದ ಹಾವಿನ ಆರೋಪದಂತೆ, ಇರುವ ಆತ್ಮನಲ್ಲಿ ಇಲ್ಲದ ಪ್ರಪಂಚದ ಆರೋಪ ನಡೆದಿದೆ ಎಂದು ವಿವರಣೆ. ಇಲ್ಲದ ಹಾವು ಎನ್ನುವ ಮಾತೇ ಸರಿಯಲ್ಲ ಎನ್ನುತ್ತಾರೆ ಮಧ್ವರು. ಹಾವನ್ನು ಕಂಡು ಬೆಚ್ಚಿ ಬೀಳಬೇಕಾದರೆ ನಿಜವಾದ ಹಾವನ್ನು ಕಂಡವರಿಗಷ್ಟೇ ಸಾಧ್ಯ. ಅಲ್ಲಿ ಹಾವಿಲ್ಲ ನಿಜ. ಆದರೆ ನಿಜವಾದ ಹಾವನ್ನು ಕಂಡ ಸಂಸ್ಕಾರ ಅಲ್ಲಿದೆ. ಸಂಸ್ಕಾರಕ್ಕೆ ಕಾರಣವಾದದ್ದು ನಿಜವಾದ ಹಾವು. ಹಾವಿನಂತೆ ಕಂಡ ಹಗ್ಗವಲ್ಲ. ಎರಡು ಸತ್ಯವಸ್ತುಗಳಲ್ಲಿ ಪರಸ್ಪರ ಆರೋಪವಿದೆ ಎಂದರೆ ಸರಿಯಲ್ಲ. ಮತ್ತೇನೆಂದರೆ – ಎರಡು ಸದೃಶ ವಸ್ತುಗಳಲ್ಲಿ ಪರಸ್ಪರ ನೆನಪು ಜಾಗ್ರತವಾಗುವುದು ಸಹಜ.

ಇದು ಎರಡೂ ಸತ್ಯವೆನ್ನುವುದಕ್ಕೆ ದೃಷ್ಟಾಂತವಾಗುತ್ತದಲ್ಲವೆ – ಅಧ್ಯಾಸಕ್ಕೆ ಅಲ್ಲ.

ಸತ್ಯವಾದ ದೇವರನ್ನೆಂತೋ ಅಂತೇ ಸತ್ಯವಾದ ಪ್ರಪಂಚವನ್ನು ಯಥಾವತ್

(೨೩ನೇ ಪುಟಕ್ಕೆ

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು




ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ
ನೇಗಿಲ ಕುಳದೊಳಡಗಿದೆ ಕರ್ಮ
ನೇಗಿಲ ಮೇಲೆಯೆ ನಿಂತಿದೆ ಧರ್ಮ

– ಕುವೆಂಪು

ಶಿವೇ ಗೌಡರು
ಮತ್ತು ಶ್ರೀಮತಿ ಗಂಗಮ್ಮ
ಗೊಟ್ಟಿಕೆರೆ, ತುರುವೇಕೆರೆ ತಾ.

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



ದೀಪವು ನಿನ್ನದೆ ಗಾಳಿಯೂ ನಿನ್ನದೇ
ಆರದಿರಲಿ ಬೆಳಕು
ಕಡಲೂ ನಿನ್ನದೇ ಹಡಗೂ ನಿನ್ನದೇ
ಮುಳುಗದಿರಲಿ ಬದುಕು

–ಕೆ.ಎಸ್.ನ

ಶ್ರೀಮತಿ ಲಲಿತಾ ಬಾಯಿ
ಮತ್ತು ಶ್ರೀ ವೆಂಕಟರಮಣಯ್ಯ
ಸರಪಾಡಿ (ದಕ್ಷಿಣ ಕನ್ನಡ)

ಗಾಂಧಿ, ಮಾರ್ಕ್ಸ್ ಮತ್ತು ಪರಕೀಯತೆಯಿಂದ ಮುಕ್ತವಾದ ಬದುಕಿನ ಆದರ್ಶ

ಜಿಪ್ಸನ್‌ಜಾನ್ ಮತ್ತು ಪಿ.ಎಂ.ಜಿತೀಶ್‌ರಿಗೆ ನೀಡಿದ ಸಂದರ್ಶನದಲ್ಲಿ ಆಕೀಲ್ ಬಿಲ್ಗ್ರಾಮಿ

ಕನ್ನಡಕ್ಕೆ: ಜಿ. ರಾಜಶೇಖರ



ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯದ ಸಿಡ್ನಿ ಬೋರ್ಗೆಬೆಸ್ಸೆರ್ ತತ್ವಶಾಸ್ತ್ರ ಅಧ್ಯಯನ ಪೀಠದ ಮುಖ್ಯಸ್ಥರಾಗಿರುವ ಅಂತಾರಾಷ್ಟ್ರೀಯ ಖ್ಯಾತಿಯ ಗಾಂಧಿ ವಿದ್ವಾಂಸ ಅಕೀಲ್ ಬಿಲ್ಗ್ರಾಮಿ ಈ ಸಂದರ್ಶನದಲ್ಲಿ ಇದುವರೆಗೆ ಎಡಪಂಥೀಯರಿಂದ, ನಿರ್ದಿಷ್ಟವಾಗಿ ಮಾರ್ಕ್ಸ್‌ವಾದಿಗಳಿಂದ ಖಂಡಿಸಲ್ಪಟ್ಟಿದ್ದ ಗಾಂಧಿಯವರನ್ನು ಇಂದು ಹೊಸಕಣ್ಣುಗಳಿಂದ ನೋಡುವ ಪ್ರಯತ್ನ ಮಾಡಿದ್ದಾರೆ. ಇದರ ಫಲವಾಗಿ ಗಾಂಧಿ ಮತ್ತು ಮಾರ್ಕ್ಸ್ ನಮ್ಮ ಕಾಲದ ಇಬ್ಬರು ಮಹಾ ದಾರ್ಶನಿಕರಾಗಿ ಹೊಂದಿರುವ ತಾತ್ವಿಕ ಸಾಮೀಪ್ಯದ ತಾಣಗಳನ್ನು ಗುರುತಿಸುತ್ತಾ, ಆಧುನಿಕತೆಯ ಮಹಾಶಾಪವಾದ ಮನುಷ್ಯ ತನ್ನಿಂದ ತಾನೇ ದೂರವಾಗುವ 'ಪರಕೀಯತೆ' ಎಂಬ ಅತಿತ್ವವಾದಿ ಬಿಕ್ಕಟ್ಟಿನ ರಾಜಕಾರಣದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ.–ಸಂ.

'ತತ್ವಶಾಸ್ತ್ರಜ್ಞ ಗಾಂಧಿ' ಎಂಬ ಶೀರ್ಷಿಕೆಯ ನಿಮ್ಮ ಖ್ಯಾತ ಪ್ರಬಂಧವೊಂದರಲ್ಲಿ ಮಹಾತ್ಮಾಗಾಂಧಿಯವರನ್ನು ಓರ್ವ ಶಾಸ್ತ್ರಜ್ಞರಾಗಿ ನೀವು ಹೊಸ ಬಗೆಯಲ್ಲಿ ಅರ್ಥೈಸಲು ಯತ್ನಿಸಿದ್ದೀರಿ. ನಿಮ್ಮದೇ ಮಾತುಗಳಲ್ಲಿ ಹೇಳುವುದಾದರೆ ನೀವು ಅವರ ವಿಚಾರಗಳ 'ಪ್ರಾಮಾಣಿಕತೆ'ಯಿಂದ ಚಕಿತರಾಗಿದ್ದೀರಿ. ಗಾಂಧಿಯವರ ವಿಚಾರಗಳ 'ಪ್ರಾಮಾಣಿಕತೆ' ಎಂದರೆ ಏನು? ವಿವರಿಸಿ.

ಆ ಪ್ರಬಂಧವನ್ನು ನಾನು ಬರೆದದ್ದು ೨೦ ವರ್ಷಗಳ ಹಿಂದೆ. ಅತ್ಯಂತ ವೈಯಕ್ತಿಕವಾದ ಸಂಗತಿಯೊಂದನ್ನು ದಾಖಲಿಸುವ ಸಲುವಾಗಿ ನಾನು ಅದನ್ನು ಬರೆಯಲು ನಿರ್ಧರಿಸಿದೆ. ಒಂದು ಮುಸ್ಲಿಮ್ ಮನೆಯಲ್ಲಿ, ಸೆಕ್ಯುಲರ್ ಮುಸ್ಲಿಮ್ ಮನೆಯಲ್ಲಿ ನಾನು ಹುಟ್ಟಿ ಬೆಳೆದು ದೊಡ್ಡವನಾದೆ. ನಮ್ಮ ಮನೆಯಲ್ಲಿ ನೆಹರೂ ಕುರಿತು ಎಷ್ಟು ಗಾಢವಾದ ಮೆಚ್ಚುಗೆ ಮತ್ತು ಪ್ರೀತಿ ಇತ್ತು ಎಂದರೆ ಮನೆಯವರೆಲ್ಲರೂ ನೆಹರೂ ಅವರನ್ನು ನಮ್ಮ ಕುಟುಂಬದ ಹಿರಿಯರಲ್ಲಿ ಒಬ್ಬರು ಎಂದೇ ಭಾವಿಸುತ್ತಿದ್ದರು. ನನಗೆ ಗೊತ್ತಿರುವ ಮಟ್ಟಿಗೆ ನನ್ನ ತಂದೆ ನೆಹರೂರವರನ್ನು ಎಂದೂ ಮುಖತಃ ಭೇಟಿಯಾಗದಿದ್ದರೂ ಅವರನ್ನು ಜವಹರ್‌ಲಾಲ್ ಎಂದೇ ಕರೆಯುತ್ತಿದ್ದರು. ನಾನು ಪ್ರಾಯಕ್ಕೆ ಬರುವ ವೇಳೆಗೆ ಹೆಚ್ಚು ಕಡಿಮೆ ನೆಹರೂ ಅವರ ಎಲ್ಲ ಬರಹಗಳನ್ನೂ ಜೊತೆಗೆ ಪುಸ್ತಕ ರೂಪದಲ್ಲಿ ಪ್ರಕಟವಾಗಿದ್ದ ಅವರು ಅಷ್ಟೇನೂ ಹೆಸರು ಮಾಡದ ಬರಹಗಳನ್ನು ಕೂಡ ಓದಿದ್ದೆ. ನಮ್ಮ ಮನೆಯಲ್ಲಿ ಗಾಂಧಿಗೆ ಗೌರವದ ಸ್ಥಾನವಿತ್ತು. ಆದರೆ ಅವರು ನಮ್ಮಿಂದ ದೂರದಲ್ಲಿರುವಂತೆ ಭಾಸವಾಗುತ್ತಿತ್ತು. ನಾನಂತೂ ಗಾಂಧೀಜಿಯವರ ಕೃತಿಗಳಲ್ಲಿ ಅವರ ಆತ್ಮಚರಿತ್ರೆಯೊಂದನ್ನು ಹೊರತುಪಡಿಸಿ ಬೇರೆ ಏನನ್ನೂ ಓದಿರಲಿಲ್ಲ. ೧೯೯೦ರ ಸುಮಾರಿಗೆ ನಾನು ಗಾಂಧಿಯವರ ಕೃತಿಗಳನ್ನು ಗಂಭೀರವಾಗಿ ಅಧ್ಯಯನ ಮಾಡಲು ಪ್ರಾರಂಭಿಸಿದಾಗ, ನಾನು ನನ್ನ ಮನೆಯ ಮತ್ತು ನಾನು ಬೆಳೆದು ಬಂದ ವಾತಾವರಣದಿಂದ ನಿಧಾನವಾಗಿ ಮತ್ತು ಮೊದಮೊದಲು ತುಸು ಒಲ್ಲದ ಮನಸ್ಸಿನಿಂದ ಕಳಚಿಕೊಂಡಂತೆ, ಗಾಂಧೀಜಿ ನೆಹರೂರಿಗಿಂತ ಹೆಚ್ಚು ಸ್ವಂತಿಕೆಯ ಮತ್ತು ಹೆಚ್ಚು ಆಳವಾದ, ಚಿಂತಕ ಎಂದು ಮನವರಿಕೆ ಆಯಿತು. ಗಾಂಧೀಜಿ ಜೊತೆ ನಮಗೆ ಭಿನ್ನಮತ ಇದ್ದಾಗಲೂ ಅವರ ಚಿಂತನೆಯ ಹೊಸತನ ಮತ್ತು ಸ್ವಾತಂತ್ರ್ಯವನ್ನು ನಾವು ಗುರುತಿಸಲೇಬೇಕು; ಹಾಗೆಯೇ ಸುಪರಿಚಿತ ಸಂಗತಿಗಳನ್ನೂ ಸಹ ವಿನೂತನ ದೃಷ್ಟಿಕೋನದಿಂದ ಅಭ್ಯಸಿಸುವ ಅವರ ವಿಶಿಷ್ಟ ಸಾಮರ್ಥ್ಯವನ್ನು ಸಹ ನಾವು ಗಮನಿಸಬೇಕು. ನಾನು ಗುರುತಿಸಿದಂತೆ ಅವರ ಬರಹಗಳ ಮುಖ್ಯ ಲಕ್ಷಣವೆಂದರೆ, ಅವು ಮಹತ್ವಾಕಾಂಕ್ಷೆಯ ಬರಹಗಳಾಗಿದ್ದಾಗ ಅವರು ರಾಜಕೀಯದ ಬಗ್ಗೆ ಹೇಳುವ ಅನೇಕ ಮಾತುಗಳು, ಮನುಷ್ಯ ಸ್ವಭಾವ, ಮನುಷ್ಯನ ಅನುಭವ, ನೈತಿಕ ಮೌಲ್ಯಗಳು ಹಾಗೂ ಸತ್ಯದ ಪರಿಕಲ್ಪನೆ ಕುರಿತ ಅವರ ಅಮೂರ್ತ ಚಿಂತನೆಗಳಿಂದ ಸ್ವತಂತ್ರವಾದವುಗಳಲ್ಲ; ಅವರ ರಾಜಕೀಯ ಪ್ರತಿಪಾದನೆ ಮತ್ತು ಬದುಕಿನ ಕುರಿತ ಅವರ ಅಮೂರ್ತ ಚಿಂತನೆಗಳ ನಡುವೆ ಅವಿನಾ ಸಂಬಂಧವಿದೆ. ಅವರು ರಾಜಕೀಯದ ಬಗ್ಗೆ ಇಟ್ಟುಕೊಂಡಿದ್ದ ಹೆಚ್ಚು ನಿರ್ದಿಷ್ಟವಾದ ನಿರೀಕ್ಷೆಗಳು ಹಾಗೂ ಅವರ ಈ ಅಮೂರ್ತ ವಿಚಾರಗಳ ನಡುವೆ ಅವಿನಾ ಸಂಬಂಧವಿದೆ ಮಾತವಲ್ಲ, ಈ ನಿರೀಕ್ಷೆಗಳು ಅವರ ಅಮೂರ್ತ ವೈಚಾರಿಕತೆಯಿಂದ ನೇರವಾಗಿ ಪಡೆದಂತಹವಾಗಿವೆ. ಅವರ ರಾಜಕೀಯ ಮತ್ತು ಉನ್ನತ ಸ್ತರದ ಅವರ ತಾತ್ವಿಕ ಚಿಂತನೆಗಳ ನಡುವೆ ಕಾಣುವ ಈ ಅವಿನಾ ಸಂಬಂಧವನ್ನೇ ನಾನು ಪ್ರಾಮಾಣಿಕತೆ ಎಂಬ ಶಬ್ದದಿಂದ ವಿವರಿಸಿದ್ದೇನೆ.

ಮಹಾತ್ಮಾಗಾಂಧಿ ಜನನಾಯಕರಾಗಿ ರಾಷ್ಟ್ರದ ಸ್ವಾತಂತ್ರ್ಯಚಳುವಳಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದವರು. ಅದೇ ವೇಳೆಗೆ ಅವರು ಒಂದು ಆಧ್ಯಾತ್ಮಿಕ ಬದುಕನ್ನೂ ಸಹ ರೂಢಿಸಿಕೊಂಡಿದ್ದರು. ಅವರು ಹಲವು ಆಧ್ಯಾತ್ಮಿಕ ಪ್ರಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು; ಮತ್ತು ಅವರೇ ಹೇಳಿಕೊಂಡಿರುವಂತೆ 'ಸತ್ಯದ ಜೊತೆಗೆ ಪ್ರಯೋಗ'ವನ್ನೂ ನಡೆಸಿದವರು. ಜೊತೆಗೆ ಅವರು ಇನ್ನು ಹಲವು ಆಧ್ಯಾತ್ಮಿಕ ಪ್ರಯೋಗಗಳನ್ನೂ ಕೈಕೊಂಡರು. ಸತ್ಯದ ಜೊತೆಗಿನ ಅವರ ಪ್ರಯೋಗ ನಿಜಕ್ಕೂ ಅನನ್ಯ; ಮತ್ತು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ಇಂತಹ ಇನ್ನೊಂದು ನಿದರ್ಶನ ನಮಗೆ ಆಧುನಿಕ ಜಗತ್ತಿನ ಯಾವ ಮಹಾಪುರುಷನ ಬದುಕಿನಲ್ಲೂ ದೊರೆಯುವುದಿಲ್ಲ. ಯಾರ ಬದುಕಿನಲ್ಲೂ ನೇರ ರಾಜಕೀಯ ಮತ್ತು ಆಧ್ಯಾತ್ಮಿಕತೆ ಹೀಗೆ ಒಟ್ಟಾಗಿ ಸಹಬಾಳ್ವೆ ನಡೆಸಿರುವುದು ಕಾಣುವುದಿಲ್ಲ. ಈ ಮಾತನ್ನು ನೀವು ಒಪ್ಪಿಕೊಳ್ಳುತ್ತೀರಾ?

ಹೌದು. ನಿಮ್ಮ ಮಾತಿಗೆ ನನ್ನ ಒಪ್ಪಿಗೆ ಇದೆ. ರಾಜಕೀಯದಲ್ಲಿ ಅವರು ಪಡೆದ ಯಶಸ್ಸು ಮತ್ತು ಓರ್ವ ಐತಿಹಾಸಿಕ ಮಹತ್ವದ ವ್ಯಕ್ತಿಯಾಗಿ; ಭಾರತದ ರಾಜಕೀಯ ಹಿಡಿದ ಹಾದಿಯಿಂದ ಬೇರೆಡೆ ಹೊರಳಿಕೊಳ್ಳುವಂತೆ ಮಾಡುವಲ್ಲಿ ಅವರು ಮಾಡಿದ ಪ್ರಯತ್ನದ ಯಶಸ್ಸು ಅವರ ತಾತ್ವಿಕತೆಗಿಂತ ಭಿನ್ನವಾಗಿರುವಂತಹದ್ದು ಎಂಬುದೇ ಆಸಕ್ತಿ ಹುಟ್ಟಿಸುತ್ತದೆ ಎಂದು ಭಾವಿಸುವ ಪ್ರವೃತ್ತಿ ಈಗ ಎಲ್ಲೆಡೆ ಕಾಣುತ್ತಿದೆ. ನನ್ನ ಪ್ರಕಾರ ಇದೊಂದು ಅಸಂಬದ್ಧ ನಿಲುವು. ಸ್ಪಷ್ಟವಾಗಿ ಗುರುತಿಸಬಹುದಾದಂತೆ ಅವರು ಓರ್ವ ತತ್ವಶಾಸ್ತ್ರಜ್ಞರಾಗಿರದೆ ಇದ್ದರೆ ಅವರ ಕೃತ್ಯಗಳಿಂದ ಜನರ ಮನಸ್ಸುಗಳನ್ನು ಮತ್ತು ಆ ಕಾಲದ ವಿದ್ಯಮಾನಗಳನ್ನು ಪ್ರಭಾವಿಸುವುದರಲ್ಲಿ ಅವರು ಪಡೆದ ಯಶಸ್ಸು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಅಷ್ಟು ಮಾತ್ರವಲ್ಲ ನಾವು ಅವರ ಬಗ್ಗೆ ತರಗತಿಗಳಲ್ಲಿ ಮತ್ತು ನಮ್ಮ ಮನೆಗಳ ಚಾವಡಿಗಳಲ್ಲಿ ಈಗ ಮಾಡುವಂತೆ, ನಿರಂತರವಾಗಿ ಚರ್ಚೆ ನಡೆಸುತ್ತಿರಲಿಲ್ಲ; ಮತ್ತು ನಿಯತಕಾಲಿಕಗಳು ಹಾಗೂ ಗ್ರಂಥಗಳಲ್ಲಿ ಬರೆಯುತ್ತಲೂ ಇರಲಿಲ್ಲ. ಇದೆಲ್ಲ ಸಾಧ್ಯವಾದದ್ದು ಅವರು ಈಗ ಇರುವಂತೆ, ಓರ್ವ ತತ್ವಶಾಸ್ತ್ರಜ್ಞರಾಗಿರುವುದರಿಂದ. ಅವರ ರಾಜಕೀಯ ಕ್ರಿಯೆ ಅವರ ತಾತ್ವಿಕ ಪರಿಕಲ್ಪನೆಗಳ ಜೊತೆ ನಿಕಟವಾಗಿ ಬೆರೆತುಹೋಗದೆ ಇದ್ದರೆ ತನ್ನ ಸಹವರ್ತಿಗಳ ಮೇಲೆ ಆ ನಮೂನೆಯ ಪ್ರಭಾವ ಬೀರುವುದಾಗಲಿ, ಆ ಕಾಲದಲ್ಲಿ ಅಸಾಧಾರಣ ಸಂಖ್ಯೆಯ ಜನರನ್ನು ಒಂದು ರಾಜಕೀಯ ಕಾರ್ಯಕ್ರಮದ ಅಡಿಯಲ್ಲಿ ಒಟ್ಟಿಗೇ ತರುವುದಾಗಲಿ, ಖಂಡಿತಕ್ಕೂ ಅವರಿಗೆ ಸಾಧ್ಯವಿರಲಿಲ್ಲ. ಅವರ ರಾಜಕೀಯ ಮತ್ತು ಅವರ ತಾತ್ವಿಕತೆ ಪರಸ್ಪರ ಒಡೆದುಕೊಳ್ಳದೆ ಬೆರೆತುಹೋಗಿರುವುದರಿಂದ ಅವರಿಗೆ ಭಾರತದ ಜನತೆಯನ್ನು ಅಷ್ಟು ವ್ಯಾಪಕವಾಗಿ ಮತ್ತು ಗಾಢವಾಗಿ ಪ್ರಭಾವಿಸಲು ಸಾಧ್ಯವಾಯಿತು. ಆ ಪ್ರಾಮಾಣಿಕತೆಯಿಂದಾಗಿ ನಿಜಕ್ಕೂ ಭಾರತದ ಜನತೆಯನ್ನು ಆ ಪ್ರಮಾಣದಲ್ಲಿ ತನ್ನ ಕಾರ್ಯಕ್ರಮದತ್ತ ಒಲಿಸಿಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಯಿತು. ಒಂದು ದೇಶದ ಜನಸಾಮಾನ್ಯರು. ಈ ಬಗೆಯ ಪ್ರಾಮಾಣಿಕತೆಗೆ ಪ್ರತಿಕ್ರಿಯಿಸಿದರು: ಅವರು ಏನಿದ್ದರೂ ಜನನಾಯಕನ ರಾಜಕೀಯ ನೈಪುಣ್ಯಕ್ಕೆ ಮಾತ್ರ ಸ್ಪಂದಿಸುತ್ತಾರೆ ಎಂದು ಭಾವಿಸುವವರು ಗಾಂಧಿಯವರ ಕುರಿತು ತಳೆಯುವ ನಿಲುವು

ಊನಗೊಂಡಿರುವಂತಹದ್ದು ಮತ್ತು ಜನಸಮುದಾಯದ ಸಾಮೂಹಿಕ ರಾಜಕೀಯದ ಕುರಿತು ಅಪ್ರಜಾಸತ್ತಾತ್ಮಕವಾಗಿರುವಂತಹದ್ದು. ಜನಸಾಮಾನ್ಯರ ಶಕ್ತಿ ಸಾಮರ್ಥ್ಯ ಮತ್ತು ಅವರು ಯಾವುದಕ್ಕೆ ಹೇಗೆ ಸ್ಪಂದಿಸುತ್ತಾರೆ ಎಂಬ ಕುರಿತ ಗಾಢ ಅಜ್ಞಾನ ಮಾತ್ರ ಇಂತಹ ಅಪಕಲ್ಪನೆಗೆ ಕಾರಣವಾಗಬಹುದು.

ಗಾಂಧಿ ಮತ್ತು ಮಾರ್ಕ್ಸ್ ತದ್ವಿರುದ್ಧ ತುದಿಗಳಲ್ಲಿರುವ ಇಬ್ಬರು ಮಹಾನ್ ವ್ಯಕ್ತಿಗಳು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ನೀವು ಅವರಿಬ್ಬರ ನಡುವೆ ಕೆಲವು ಸಮಾನ ಗುಣಗಳನ್ನು ಗುರುತಿಸಿದ್ದೀರಿ. ಅವರಿಬ್ಬರೂ ಆಧುನಿಕತೆಯ ಬಗ್ಗೆ ಒಂದೇ ಬಗೆಯ ವಿಮರ್ಶಾತ್ಮಕ ಧೋರಣೆ ತಳೆದಿದ್ದರು, ಯಾಕೆಂದರೆ ಇಬ್ಬರೂ ಪ್ರಕೃತಿ ಮತ್ತು ನಮ್ಮಿಂದ ಪರಕೀಯರಾಗಿರುವುದು ಆಧುನಿಕತೆಯ ಮೂಲಭೂತ ಲಕ್ಷಣಗಳಲ್ಲಿ ಒಂದು ಎಂದು ಭಾವಿಸಿದ್ದರು. ಗಾಂಧಿ ಮತ್ತು ಮಾರ್ಕ್ಸ್ ನಡುವೆ ಈ ನಿಟ್ಟಿನಲ್ಲಿ ಗೋಚರಿಸುವ ಚಿಂತನೆಯ ಸಮಾನ ಗುಣಗಳು ಯಾವುವು? ಆಧುನಿಕತೆಯ ಸಂದರ್ಭದಲ್ಲಿ ನಮ್ಮ ಪ್ರಶ್ನೆಯ ಬಗ್ಗೆ ನಿಮ್ಮ ವಿವರಣೆ ಏನು?

ನಿಮಗೆ ಗೊತ್ತಿರುವ ಹಾಗೆ ಗಾಂಧಿಯವರನ್ನು ಭಾರತದಲ್ಲಿ ಮತ್ತು ಹೊರ ದೇಶಗಳಲ್ಲಿ ಎಡಪಂಥೀಯರು ಹಲವು ದಶಕಗಳವರೆಗೆ ವಿಪರೀತ ಟೀಕೆಗೆ ಗುರಿಪಡಿಸಿದ್ದರು. ಗಾಂಧಿಯವರನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಳ್ಳುವ ಕೆಲವು ಸಮಕಾಲೀನ ಎಡಪಂಥೀಯ ಲೇಖಕರ ಬಗ್ಗೆ ಈ ಸಂದರ್ಭದಲ್ಲಿ ನಾನು ಹೇಳುವಂತಹದ್ದು ಏನೂ ಇಲ್ಲ. ಆದಾಗ್ಯೂ ಗಾಂಧಿಯವರಿಂದ ರಾಜಕೀಯವಾಗಿ ಕೆಲವು ಗಂಭೀರ ಪ್ರಮಾದಗಳಾಗಿವೆ ಎಂಬ ವಾಸ್ತವವನ್ನು ಅಲ್ಲಗೆಳೆಯಲಾಗುವುದಿಲ್ಲ. ಹಾಗೆಯೇ ಅವರ ಕೆಲವು ಅಭಿಪ್ರಾಯಗಳು ಸಂಪೂರ್ಣವಾಗಿ ತಪ್ಪಾಗಿದ್ದವು ಎಂಬುದನ್ನು ಸಹ ನಿರಾಕರಿಸುವ ಹಾಗಿಲ್ಲ. ಆದರೆ ತುಂಬ ಆಸಕ್ತಿ ಕೆರಳಿಸುವ ಮತ್ತು ಸ್ವಂತಿಕೆಯ ತೀವ್ರವಾದಿ ಅಥವಾ ಎಡಪಂಥೀಯ ಗಾಂಧಿಯನ್ನು ನಾವು ಅವರ ಬರಹಗಳಲ್ಲಿ ಕಂಡುಕೊಳ್ಳಬಹುದು. ಹಾಗೆಯೇ ಅವರ ಹಲವು ಕಾರ್ಯಾಚರಣೆಗಳಲ್ಲೂ ನಾವು ಎಡಪಂಥೀಯ ಗಾಂಧಿಯನ್ನು ಶೋಧಿಸಿಕೊಳ್ಳಬಹುದು. ಹಾಗೆ ಮಾಡುವಾಗ ಅವರ ಬದುಕು ಮತ್ತು ಕ್ರಿಯೆಗಳ ಪೈಕಿ, ನಾವು ಅನಿವಾರ್ಯವಾಗಿ ನಮಗೆ ಅವಶ್ಯವಿರುವುದನ್ನು ಮಾತ್ರ ಆಯ್ದುಕೊಳ್ಳಬೇಕಾಗುತ್ತದೆ. ಆದರೆ ಈ ಮಾತು ಬಹುಮುಖ್ಯ ಚಿಂತಕರೆಲ್ಲರ ಬರಹ ಮತ್ತು ಚಿಂತನೆಗಳ ಮಟ್ಟಿಗೂ ಸತ್ಯ. ಅವರೆಲ್ಲರ ಬಗೆಗೆ ಹೇಗೋ ಹಾಗೆಯೇ ಗಾಂಧಿಯವರ ಚಿಂತನೆ ಮತ್ತು ಬರಹಗಳಲ್ಲಿ ವಿರೋಧಾಭಾಸಗಳು ಇರುವುದು ನಿಜ. ಅವರೊಬ್ಬರ ಮಟ್ಟಿಗೆ ಮಾತ್ರ ಹೇಳುವುದಾದರೆ ಅಂತಹ ವಿರೋಧಾಭಾಸಗಳು ಇನ್ನಷ್ಟು ಜಾಸ್ತಿ ಪ್ರಮಾಣದಲ್ಲಿ ಕಂಡುಬರುವುದೂ ನಿಜ. ಇದಕ್ಕೆ ಕಾರಣವೆಂದರೆ ಅವರು ಶ್ರೇಷ್ಠ ಮಟ್ಟದ ಓರ್ವ ಚಿಂತಕರಾಗಿದ್ದಾಗ್ಯೂ ಅವರು ಎಂದೂ ತಿಂಗಳ ಸಂಬಳ ಪಡೆಯುವ ವೃತ್ತಿನಿರತ ತತ್ವಶಾಸ್ತ್ರಜ್ಞನಾಗಿರಲಿಲ್ಲ. ವೃತ್ತಿನಿರತ ತತ್ವಶಾಸ್ತ್ರಜ್ಞರ ಅಖಂಡ ಚಿಂತನೆ ಮತ್ತು ಬರವಣಿಗೆ ಗಾಂಧಿಯವರಿಗೆ ಸಾಧ್ಯವಿರಲಿಲ್ಲ. ಅವರ ಬಹುತೇಕ ಮಾತು ಮತ್ತು ಬರಹಗಳಿಗೆ ಆ ಕ್ಷಣದ ರಾಜಕೀಯ ಅವಶ್ಯಕತೆಗಳಿಗೆ ಸ್ಪಂದಿಸುವ ತುರ್ತು ಇದ್ದಿತು ಮತ್ತು ಅಂತಹ ಪ್ರತಿಕ್ರಿಯೆ, ಸಹಜವಾಗಿ ಮತ್ತು ಯಾರಾದರೂ ನಿರೀಕ್ಷಿಸಬಹುದಾದಂತೆ ಒಮ್ಮೊಮ್ಮೆ ಸಾವಧಾನದಲ್ಲಿ ಮತ್ತು ಚಿಂತನಶೀಲವಾಗಿ ಮಾಡಿದ ಬರವಣಿಗೆಯಲ್ಲಿ ಅವರ ಹೇಳಿದ್ದನ್ನು ಅಲ್ಲಗೆಳೆಯುವಂತಿದ್ದವು.

ಗಾಂಧಿಯವರ ಕುರಿತ ಎಡಪಂಥೀಯ ಸವಕಲು ಮಾತುಗಳಿಂದ ಕಳಚಿಕೊಂಡು ತನ್ನ ಕೆಲವು ಲೇಖನಗಳಲ್ಲಿ ವಿಶ್ಲೇಷಿಸಿದವರಲ್ಲಿ ಇರ್ಫಾನ್ ಹಬೀಬ್ ಮೊದಲಿಗರು. ಗಾಂಧಿಯವರ ಕುರಿತು ಮೊದಲ ಬಾರಿ ನಾನು ಬರೆದ ವೇಳೆಯಲ್ಲಿ ನಾನು ಇರ್ಫಾನ್ ಸಾಹಿಬ್‌ರ ಬರಹಗಳನ್ನು ಓದಿರಲಿಲ್ಲ. ಅದು ಹೇಗೂ ಇರಲಿ ಗಾಂಧಿಯವರ ಕುರಿತ ಇರ್ಫಾನ್ ಹಬೀಬ್ ಅವರದ್ದು ಚಾರಿತ್ರಿಕ ದೃಷ್ಟಿಕೋನ. ಗಾಂಧಿಯವರ ಕುರಿತು ನಾನು ಮೊದಲಿಗೆ ಆಸಕ್ತಿ ತಳೆದದ್ದು ಓರ್ವ ತತ್ವಶಾಸ್ತ್ರಜ್ಞನಾಗಿ.

ಮಾರ್ಕ್ಸ್ ಜೊತೆ ಗಾಂಧಿಯವರಿಗೆ ಇರುವ ಸಹಮತ ನಾನು ಈಗಾಗಲೇ ದಾಖಲಿಸಿರುವಂತೆ, ಅವರಿಬ್ಬರ ಬರಹಗಳ ಮೇಲ್ಪದರಗಳಲ್ಲೂ ತಕ್ಷಣ ಗೋಚರಿಸುವುದಿಲ್ಲ. ಈ ಸಹಮತ ಅವರಿಬ್ಬರನ್ನೂ ನಾವು ಅರ್ಥೈಸಿಕೊಳ್ಳುವ ವಿಧಾನದಲ್ಲಿ ಅಡಕವಾಗಿದೆ. ಮಾರ್ಕ್ಸ್‌ನ ಬರಹಗಳ ಪೈಕಿ ನಾನು ಆತನ ಮೊದಮೊದಲ ಬರಹಗಳು ಮತ್ತು ಅವನ ಬದುಕಿನ ಕೊನೆಯ ದಶಕದಲ್ಲಿ ರಷಿಯಾದ 'ಮಿರ್' [ರಷಿಯಾದ ನಿರಂಕುಶವಾದಿಗಳಾದ ಝಾರ್‌ಗಳ ಕಾಲದ ರೈತಾಪಿ] ಕುರಿತ, ಅವನ ಕಡೆಕಡೆಯ ಲೇಖನಗಳಿಗೆ ಪ್ರಾಶಸ್ತ್ಯ ನೀಡಿದ್ದೇನೆ. ಈ ಎರಡೂ ಕಾಲಘಟ್ಟದ ಬರಹಗಳ ಮೂಲಕ ನಾನು ಮಾರ್ಕ್ಸ್‌ನ 'ಬಂಡವಾಳ' ಕುರಿತ ತಳಮಟ್ಟದ ಮಹತ್ವಪೂರ್ಣ ವಿಶ್ಲೇಷಣೆಯನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದ್ದೇನೆ. ಗಾಂಧಿಯವರ ಬಗ್ಗೆ ಹೇಳುವುದಾದರೆ ಅವರ 'ಹಿಂದ್ ಸ್ವರಾಜ್'ನಂತಹ ಕೃತಿ ಮತ್ತು ಅಪಾರ ಸಂಖ್ಯೆಯಲ್ಲಿರುವ ಅವರ ಹೇಳಿಕೆಗಳು ಹಾಗೂ ರವೀಂದ್ರನಾಥ್ ಟಾಗೋರ್ ಜೊತೆ ಅವರು ನಡೆಸಿದ ಗಮನಾರ್ಹ ಪತ್ರವ್ಯವಹಾರ ಒಳಗೊಂಡಂತೆ

"...ಮಾರ್ಕ್ಸ್ ಕ್ರಾಂತಿಕಾರಿ ಪರಿವರ್ತನೆಗಾಗಿ ಯುರೋಪ್ ಹಿಡಿದ ಹಾದಿ ರಷಿಯಾದಂತಹ ದೇಶಗಳಿಗೆ ಅನಿವಾರ್ಯವಲ್ಲ ಎಂದು ಪ್ರತಿಪಾದಿಸಿದ. ಮಾರ್ಕ್ಸ್‌ನ ಈ ಬರಹಗಳಲ್ಲಿ ಭಾರತದ ಬಗೆಗೂ ಚರ್ಚೆ ಇದೆ. ಭಾರತವಲ್ಲದೆ ಹೆನ್ರಿಮೇನ್‌ನಂತಹವರ ಬಗ್ಗೆ ಬಹಳ ಮಾರ್ಮಿಕವಾದ ಟೀಕೆಯೂ ಇದೆ. ಗಾಂಧಿ ಎಂದೂ ಸಮಾಜವಾದಿಯಾಗಿರಲಿಲ್ಲ. ಭಾರತದ ಬಗೆಗಿನ, ತನ್ನ ದಾರ್ಶನಿಕ ಆಶಯಗಳಲ್ಲಿ ಭಾರತ ಒಂದು ಸಮಾಜವಾದಿ ದೇಶವಾಗುವುದನ್ನು ಗಾಂಧಿ ಸುತಾರಾಂ ಬಯಸಲಿಲ್ಲ. ಗಾಂಧಿಯವರಿಗೆ, ಈಗ ನಾವು ಆ ಪರಿಕಲ್ಪನೆಯನ್ನು ಅರ್ಥೈಸುವ ವಿಧಾನದಲ್ಲಿ ಸಮಾಜದಲ್ಲಿ ವರ್ಗಗಳ ಅಸ್ತಿತ್ವ ಕುರಿತು ಯಾವ ತಿಳುವಳಿಕೆಯೂ ಇರಲಿಲ್ಲ ಎಂದು ಪ್ರತಿಪಾದಿಸಲು ಸಹ ನಾನು ಸಿದ್ಧನಿದ್ದೇನೆ. ಆದರೆ ಗಾಂಧಿ ಬಂಡವಾಳಶಾಹಿಯನ್ನು ದ್ವೇಷಿಸುತ್ತಿದ್ದರು ಬಂಡವಾಳಶಾಹಿಯ ಮನಃಸ್ಥಿತಿ ಮತ್ತು ಮನುಷ್ಯ ಸಂಬಂಧಗಳ ಮೇಲೆ ಅದರ ವಿನಾಶಕಾರೀ ಪ್ರಭಾವವನ್ನು ಅವರು ಖಂಡಿಸುತ್ತಿದ್ದರು. ಹಿಂದ್ ಸ್ವರಾಜ್‌ನ ವಸ್ತು ನಿಜಕ್ಕೂ ಬಂಡವಾಳಶಾಹಿಯ ಕುರಿತು ಅವರ ಪ್ರತಿರೋಧವೇ ಆಗಿದೆ. ಇದೇ ವೇಳೆಗೆ ಹಿಂದ್ ಸ್ವರಾಜ್ ಬಂಡವಾಳಶಾಹಿ ಮತ್ತು ಆಧುನಿಕತೆಯ ವಿರುದ್ಧ ದೊಡ್ಡ ಗಂಟಲಿನಲ್ಲಿ ದನಿ ಎತ್ತುತ್ತದೆ."

ಹಲವು ಪತ್ರ ಸಂಕಲನಗಳ ಮೂಲಕ ನಾನು ಗಾಂಧಿಯವರನ್ನು ಕಂಡುಕೊಂಡಿದ್ದೇನೆ. ಅವರ ಈ ಬರಹಗಳಲ್ಲಿ ನಮಗೆ ಗೋಚರವಾಗುವ ಗಾಂಧಿ ಅವನ್ನು ಪ್ರಕಟಿಸುತ್ತಿದ್ದ ಕಾಲಘಟ್ಟದಲ್ಲಿ [ಹಿಂದ್ ಸ್ವರಾಜ್ ೧೯೦೯ರಲ್ಲಿ ಪ್ರಕಟವಾಯಿತು] ಆಧುನಿಕ ಯುಗದ ಮೊದಲ ದಿನಗಳ ಯುರೋಪ್ ಯಾವ ಸ್ಥಿತಿಯಲ್ಲಿ ಇತ್ತೋ, ಅದೇ ಸ್ಥಿತಿಯಲ್ಲಿ ಭಾರತವೂ ಇದೆ ಎಂದು ಭಾವಿಸಿದ್ದರು. ಯುರೋಪ್ ಆಧುನಿಕತೆಯ ಶೈಶವದಿಂದ ಪಕ್ವತೆಯ ಕಡೆಗೆ ಸಾಗಿದ ಹಾದಿಯನ್ನು ಭಾರತವೂ ಅನುಸರಿಸುವುದು, ಗಾಂಧಿಯವರಿಗೆ ಬೇಡವಾಗಿತ್ತು. ಅದಕ್ಕೆ ಪರ್ಯಾಯಗಳನ್ನು ಕಂಡುಕೊಳ್ಳಲು ಭಾರತಕ್ಕೆ ಖಂಡಿತ ಸಾಧ್ಯವಾಗುತ್ತದೆ ಎಂದು ಗಾಂಧಿ ಭಾವಿಸಿದ್ದರು. ಈ ದೃಷ್ಟಿಯಿಂದ ಗಾಂಧಿಯವರ ಧೋರಣೆ ಹಾಗೂ ತನ್ನ ಬದುಕಿನ ಕೊನೆಯ ದಿನಗಳಲ್ಲಿ ರಷಿಯಾದ ರೈತ ಕಮ್ಯೂನ್‌ಗಳ [ರೈತ ಸಹಕಾರಿ ಕೇಂದ್ರಗಳು] ಕುರಿತು ತನ್ನ ಬರಹಗಳಲ್ಲಿ ಮಾರ್ಕ್ಸ್ ತಳೆದ ನಿಲುವು – ಇವುಗಳ ನಡುವೆ ಸಾಮ್ಯವಿದೆ.

ತನ್ನ ಈ ಬರಹಗಳಲ್ಲಿ ಮಾರ್ಕ್ಸ್ ಕ್ರಾಂತಿಕಾರಿ ಪರಿವರ್ತನೆಗಾಗಿ ಯುರೋಪ್ ಹಿಡಿದ ಹಾದಿ ರಷಿಯಾದಂತಹ ದೇಶಗಳಿಗೆ ಅನಿವಾರ್ಯವಲ್ಲ ಎಂದು ಪ್ರತಿಪಾದಿಸಿದ. ಮಾರ್ಕ್ಸ್‌ನ ಈ ಬರಹಗಳಲ್ಲಿ ಭಾರತದ ಬಗೆಗೂ ಚರ್ಚೆ ಇದೆ. ಭಾರತವಲ್ಲದೆ ಹೆನ್ರಿಮೇನ್‌ನಂತಹವರ ಬಗ್ಗೆ ಬಹಳ ಮಾರ್ಮಿಕವಾದ ಟೀಕೆಯೂ ಇದೆ. ಗಾಂಧಿ ಎಂದೂ ಸಮಾಜವಾದಿಯಾಗಿರಲಿಲ್ಲ. ಭಾರತದ ಬಗೆಗಿನ, ತನ್ನ ದಾರ್ಶನಿಕ ಆಶಯಗಳಲ್ಲಿ ಭಾರತ ಒಂದು ಸಮಾಜವಾದಿ ದೇಶವಾಗುವುದನ್ನು ಗಾಂಧಿ ಸುತಾರಾಂ ಬಯಸಲಿಲ್ಲ. ಗಾಂಧಿಯವರಿಗೆ, ಈಗ ನಾವು ಆ ಪರಿಕಲ್ಪನೆಯನ್ನು ಅರ್ಥೈಸುವ ವಿಧಾನದಲ್ಲಿ ಸಮಾಜದಲ್ಲಿ ವರ್ಗಗಳ ಅಸ್ತಿತ್ವ ಕುರಿತು ಯಾವ ತಿಳುವಳಿಕೆಯೂ ಇರಲಿಲ್ಲ ಎಂದು ಪ್ರತಿಪಾದಿಸಲು ಸಹ ನಾನು ಸಿದ್ಧನಿದ್ದೇನೆ. ಆದರೆ ಗಾಂಧಿ ಬಂಡವಾಳಶಾಹಿಯನ್ನು ದ್ವೇಷಿಸುತ್ತಿದ್ದರು ಬಂಡವಾಳಶಾಹಿಯ ಮನಃಸ್ಥಿತಿ ಮತ್ತು ಮನುಷ್ಯ ಸಂಬಂಧಗಳ ಮೇಲೆ ಅದರ ವಿನಾಶಕಾರೀ ಪ್ರಭಾವವನ್ನು ಅವರು ಖಂಡಿಸುತ್ತಿದ್ದರು. ಹಿಂದ್ ಸ್ವರಾಜ್‌ನ ವಸ್ತು ನಿಜಕ್ಕೂ ಬಂಡವಾಳಶಾಹಿಯ ಕುರಿತು ಅವರ ಪ್ರತಿರೋಧವೇ ಆಗಿದೆ. ಇದೇ ವೇಳೆಗೆ ಹಿಂದ್ ಸ್ವರಾಜ್ ಬಂಡವಾಳಶಾಹಿ ಮತ್ತು ಆಧುನಿಕತೆಯ ವಿರುದ್ಧ ದೊಡ್ಡ ಗಂಟಲಿನಲ್ಲಿ ದನಿ ಎತ್ತುತ್ತದೆ. ಇದಕ್ಕೆ ಕಾರಣವೆಂದರೆ ಗಾಂಧಿ ಆತಂಕದಲ್ಲಿ ಆದರೆ ವ್ಯಾವಹಾರಿಕ ವಸ್ತುನಿಷ್ಠತೆಯಲ್ಲಿ, ಬಂಡವಾಳಶಾಹಿ ಹೇಗೆ ಬೇರೂರಿ ಎಲ್ಲವನ್ನೂ ನಿಯಂತ್ರಿಸುತ್ತದೆ ಮತ್ತು ಅದು ಆಧುನಿಕತೆ ತನ್ನ ಪ್ರಾರಂಭಿಕ ಘಟ್ಟದಿಂದ, ಕ್ರಮೇಣ ಬಲಿತು ಮಾಗಿ ಪಕ್ವಗೊಳ್ಳುವ ಹಂತಕ್ಕೆ ಹೊರಳಿಕೊಳ್ಳುವ ವಿಧಾನದಲ್ಲೇ ಭಾರತದಲ್ಲೂ ಗಟ್ಟಿಯಾಗಿ ನೆಲಕಚ್ಚಿ ತಳವೂರಬಹುದು ಎಂಬ ವಾಸ್ತವವನ್ನು ಗ್ರಹಿಸಿದ್ದರು. ಬಂಡವಾಳಶಾಹಿ ಒಮ್ಮೆ ಹೀಗೆ ಸ್ಥಾಪಿತವಾಗಿಬಿಟ್ಟರೆ ಅದು ಮನುಷ್ಯ ವರ್ತನೆಯ ಮೇಲೆ ಎಂತಹ ಅನಿಷ್ಟಕಾರಿ ಪರಿಣಾಮಕ್ಕೆ ಕಾರಣವಾಗಬಹುದು ಮತ್ತು ಮನುಷ್ಯ ಸಂಬಂಧಗಳನ್ನು ಸಹ ಗಂಭೀರವಾಗಿ ಆಳವಾಗಿ ಮತ್ತು ವ್ಯಾಪಕವಾಗಿ ಹದಗೆಡಿಸಬಲ್ಲದು ಎಂಬುದರ ಅರಿವು ಗಾಂಧಿಯವರಿಗೆ ಇತ್ತು.

ಮಾರ್ಕ್ಸ್ ಮತ್ತು ಗಾಂಧಿಯವರ ವಿಚಾರಗಳಲ್ಲಿ ಕಾಣುವ ಈ ಸಾಮ್ಯವನ್ನು ಕ್ಷಣಕಾಲ ಒತ್ತಟ್ಟಿಗಿಡೋಣ. ಯುರೋಪ್ ಆಧುನಿಕ ಯುಗದ ಮೊದಲ ದಿನಗಳಲ್ಲಿ ಇದ್ದ ಕವಲುದಾರಿಯಂತಹ ಬಿಕ್ಕಟ್ಟಿನ ಸ್ಥಿತಿಯಲ್ಲೇ ಭಾರತವೂ ಇದೆ ಎಂದು ಗಾಂಧಿ ಯೋಚಿಸಿದ್ದರು ಎಂಬ ನನ್ನ ಗ್ರಹಿಕೆ ಸರಿಯಾಗಿದ್ದರೆ, ಅರ್ಥ ವ್ಯವಸ್ಥೆಯ ಮೇಲೆ ಈ ವಿದ್ಯಮಾನದಿಂದ ಆಗುವ ದುಷ್ಪರಿಣಾಮ ಮತ್ತು ಜನರ ವೈಚಾರಿಕತೆ ಹಾಗೂ

ಸಾಮಾಜಿಕ ಬದುಕನ್ನು ಅದು ಹದಗೆಡಿಸುವುದನ್ನು ಮುಂಚಿತವಾಗಿ ನಿವಾರಿಸಿಕೊಳ್ಳಲು ಗಾಂಧಿ ಬಯಸಿದ್ದರು. ಗಾಂಧಿ ತೊಡೆದುಹಾಕಲು ಬಯಸಿದ ಅನಿಷ್ಟ ಬೆಳವಣಿಗೆಗಳೆಲ್ಲ ಕಾಣಿಸಿಕೊಂಡಿರುವುದು ಹೌದಾದರೆ ಆಧುನಿಕ ಯುಗದ ಮೊದಲ ದಿನಗಳಲ್ಲಿ ಜೀವಿಸಿಕೊಂಡಿದ್ದ ಇತರ ಭಿನ್ನಮತೀಯ ಚಿಂತಕರ ಜೊತೆ ಗಾಂಧಿಯವರನ್ನು ಹೋಲಿಸುವುದು ಅತ್ಯಂತ ಯುಕ್ತವಾಗಿದೆ. ಹಾಗಾಗಿ ನಾನು ಗಾಂಧಿಯವರ ಚಿಂತನೆಯ ಬಹುಭಾಗ ಮಾರ್ಕ್ಸ್‌ನ ಜೊತೆ ಮಾತ್ರವಲ್ಲ ಮಾರ್ಕ್ಸ್‌ನಿಗಿಂತಲೂ ಮೊದಲು, ಆಧುನಿಕತೆಯ ಶೈಶವದ ದಿನಗಳಲ್ಲಿ ಜೀವಿಸಿದ್ದ ಗೆರಾರ್ಡ್ ವಿನ್‌ಸ್ಟಾನ್‌ಲಿಯಂತಹವರ ಜೊತೆ ಬೌದ್ಧಿಕ ಸಾಹಚರ್ಯ ಹೊಂದಿದೆ ಎಂದು ಭಾವಿಸಿದ್ದೇನೆ. ಗೆರಾರ್ಡ್‌ವಿನ್‌ಸ್ಟಾನ್‌ಲಿ ಎನ್‌ಕ್ಲೋಸರ್ ಚಳುವಳಿಯ [ಸಣ್ಣ ಹಿಡುವಳಿಗಳನ್ನು ಭಾರೀ ಕೃಷಿ ಭೂಮಿಯನ್ನಾಗಿಸಿ, ಶ್ರೀಮಂತರು ಸ್ವಾಧೀನಪಡಿಸಿಕೊಳ್ಳುವುದು ಹಾಗೂ ಸಾಮೂಹಿಕ ಒಡೆತನದ 'ಪರಂಬೋಕು' ಜಮೀನನ್ನು ಖಾಸಗಿ ಆಸ್ತಿಯಾಗಿಸಿ, ಭಾರೀ ಭೂಮಾಲಿಕರು ಸ್ವಂತ ಉಪಯೋಗಕ್ಕೆ ಬಳಸಿಕೊಳ್ಳುವುದು.] ದುಷ್ಪರಿಣಾಮಗಳನ್ನು [ಅವನ ಮಟ್ಟಿಗೆ ಇಂಗ್ಲೆಂಡ್‌ನಲ್ಲಿ] ಮುಂದಾಗಿ, ಮತ್ತು ನಿಖರ ಊಹಿಸಿ, ಅವನ್ನು ಪರಿಹರಿಸಿಕೊಳ್ಳಲು ಯತ್ನಿಸಿದಾತ. ಈ ಎನ್‌ಕ್ಲೋಸರ್ ಚಳುವಳಿಯ ಪರಿಣಾಮವಾಗಿ ಹಳ್ಳಿಯ ಸಮಸ್ತರ ಸಾಮೂಹಿಕ ಒಡೆತನದ ಆಸ್ತಿ [ಪರಂಬೋಕು] ಖಾಸಗೀಕರಣಗೊಂಡು ಸಾಂಪ್ರದಾಯಿಕ ಕೃಷಿಯ ವಿಧಾನಗಳು ಈಗ ನಾವು ಅದನ್ನು ಕರೆಯುವಂತೆ ಕೃಷಿ ಉದ್ಯಮವಾಗಿ ಪರಿವರ್ತನೆಗೊಳ್ಳುವುದನ್ನು ಗೆರಾರ್ಡ್ ವಿನ್‌ಸ್ಟಾನ್‌ಲಿ ನಿಖರವಾಗಿ ಮತ್ತು ಸಾಕಷ್ಟು ಮೊದಲೇ ಊಹಿಸಿದ್ದ.

ನೀವು ಆಧುನಿಕತೆಯ ಪರಿಕಲ್ಪನೆಯನ್ನೂ ಬೌದ್ಧಿಕವಾಗಿ ಹೇಗೆ ವಿವರಿಸುತ್ತೀರಿ? ಜಗತ್ತಿನಾದ್ಯಂತ ಇರುವ ನಮ್ಮಂತಹವರನ್ನು ಆಧುನಿಕತೆ ಹೇಗೆ ರೂಪಿಸಿದೆ ಮತ್ತು ಪ್ರಭಾವಿಸಿವೆ? ಅನೇಕ ವಿಚಾರವಾದಿಗಳು ಆಧುನಿಕತೆಯನ್ನು 'ಜಡ ಉಪಕರಣದ ಮಟ್ಟಕ್ಕೆ ಇಳಿಸಿದ ವೈಚಾರಿಕತೆ' 'ಪಶ್ಚಿಮಕೇಂದ್ರಿತ ಸ್ವಭಾವ' 'ಧರ್ಮವಿರೋಧಿ' 'ಸಮಗ್ರವನ್ನೂ ಒಳಗೊಂಡಿರುವ ಮಹತ್ವಾಕಾಂಕ್ಷೆಯ ನಿರೂಪಣೆ' ಎಂದು ಮುಂತಾಗಿ ಮಾಡುವ ವಿಮರ್ಶೆಯನ್ನು ಹೇಗೆ ವಿವರಿಸುತ್ತೀರಿ?

ನನಗೆ ನಿಜಕ್ಕೂ ಅನ್ನಿಸುವುದು ಏನೆಂದರೆ ಕಳೆದ ಶತಮಾನದಲ್ಲಿ ಆಧುನಿಕತೆಯನ್ನು ಸ್ಥೂಲವಾಗಿ ವಿರೋಧಿಸದೆ ಯಾರೊಬ್ಬನೂ ಸಾಮ್ರಾಜ್ಯಶಾಹಿಯನ್ನು ಸಹ ಎದುರು ಹಾಕಿಕೊಳ್ಳಲು ಸಾಧ್ಯವಿರಲಿಲ್ಲ. ನಾನು ಸ್ಥೂಲವಾಗಿ ಆಧುನಿಕತೆಯನ್ನು ವಿರೋಧಿಸದೆ.... ಎಂದು ಹೇಳಿದೆ; ನನ್ನ ಮನಸ್ಸಿನಲ್ಲಿಯೂ ಅದೇ ಇದೆ. ಆಧುನಿಕತೆಯ ಕುರಿತ ಈ ವಿರೋಧ ನಿಜಕ್ಕೆ ಯಾವ ಬಗೆಯದ್ದು ಮತ್ತು ಅದು ಹೇಗಿರಬೇಕು ಎಂಬುದು ಈಗಲೂ ನನಗೆ ಸ್ಪಷ್ಟವಿಲ್ಲ. ಅದೊಂದು ಸಂಕೀರ್ಣ ಸಮಸ್ಯೆ. ಈ ಸಮಸ್ಯೆಗೆ ಸಾಕಷ್ಟು ಕೆಟ್ಟ ಪರಿಹಾರಗಳನ್ನು ಹೇಳಲಾಗಿದೆ. ನನ್ನ ಕೆಲಸದ ಬಹುಪಾಲು ಈ ಸಮಸ್ಯೆಯ ಜೊತೆಗೆ ಏಗುವುದಕ್ಕೆ ಮೀಸಲಾಗಿದೆ. ಈ ವಿಷಯದ ಕುರಿತು ಹಲವು ಸೂಕ್ಷ್ಮ ವಿಚಾರಗಳನ್ನು ಹೇಳುವುದಿದ್ದರೂ ಮೊದಲಿಗೇ ಸ್ಪಷ್ಟವಾಗಿ, ನಾವು ಗುರುತಿಸಬೇಕಾದ್ದು ಅದರ ಪ್ರಾಥಮಿಕ ಚಲನಶೀಲತೆಯನ್ನು. ಬಂಡವಾಳಶಾಹಿಗೆ ಸಾಮ್ರಾಜ್ಯಶಾಹಿ ಅತ್ಯಗತ್ಯ. ಬಂಡವಾಳ ಶಾಹಿಯ ಆರ್ಥಿಕ ಸಂರಚನೆ, ಆಧುನಿಕತೆಯ ಕೊಡುಗೆಯಾಗಿರುವುದರಿಂದ ಸಾಮ್ರಾಜ್ಯಶಾಹಿಯನ್ನು ಮೂಲಭೂತವಾಗಿ ವಿರೋಧಿಸುವವನು ಅನಿವಾರ್ಯವಾಗಿ ಬಂಡವಾಳಶಾಹಿಯನ್ನು ವಿರೋಧಿಸುವವನಾಗಿರುತ್ತಾನೆ; ಮತ್ತು ಅದೇ ಕಾರಣಕ್ಕೆ ಅವನು ಆಧುನಿಕತೆಯನ್ನು ಸಹ ವಿರೋಧಿಸುವಂತಹವನಾಗಿರುತ್ತಾನೆ. ವಸಾಹತು ಆಳ್ವಿಕೆಯಿಂದ ಬಿಡುಗಡೆ ಬಯಸುವ ಹಲವರು ಸಾಮ್ರಾಜ್ಯಶಾಹಿಯನ್ನು ವಿರೋಧಿಸುವಂತಹವರಲ್ಲ. ಹಾಗಾಗಿ ಸಾಮ್ರಾಜ್ಯಶಾಹಿ, ವಸಾಹತುಶಾಹಿ, ಬಂಡವಾಳಶಾಹಿ ಹಾಗೂ ಆಧುನಿಕತೆ ಒಟ್ಟೊಟ್ಟಿಗೆ ಇರುವ ಸರಳ ಸತ್ಯವನ್ನು ಅಂತಹವರು ಗುರುತಿಸಲಾರರು. ಆದರೆ ನಮ್ಮ ಕಾಲದ ಈ ವಿಶಿಷ್ಟ ಗುಣವೇ ಗಾಂಧಿ ಮತ್ತು ಎಡಪಂಥೀಯರನ್ನು ಒಟ್ಟು ಸೇರಿಸಿತು. ಎಡಪಂಥ ಸಹಜವಾಗಿ ವಸಾಹತುಶಾಹಿಯ ಆರ್ಥಿಕ ಸಂರಚನೆಯತ್ತ ತನ್ನ ಗಮನವನ್ನು ಕೇಂದ್ರೀಕರಿಸಿತು ಮತ್ತು ಅದಕ್ಕೆ ಎದುರಾಗಿ ಬಂಡವಾಳಶಾಹಿ ತಲೆ ಎತ್ತುತ್ತಿದ್ದುದನ್ನು ಗುರುತಿಸಿತು. ಆಧುನಿಕತೆಯ ಕುರಿತ ಗಾಂಧಿಯವರ ವಿರೋಧ ನಾನು ಈ ಮೊದಲೇ ಹೇಳಿದಂತೆ, ಬಂಡವಾಳಶಾಹೀ ಆಧುನಿಕತೆಯ ವೈಚಾರಿಕ ಮತ್ತು ಸಾಂಸ್ಕೃತಿಕ ಪರಿಣಾಮಗಳತ್ತ ತನ್ನ ಗಮನವನ್ನು ಹೆಚ್ಚು ಕೇಂದ್ರೀಕರಿಸಿತು.

ಆಧುನಿಕತೆಯ ಕುರಿತು ಇತ್ತೀಚಿಗಿನ ಸೈದ್ಧಾಂತಿಕ/ವಿಮರ್ಶಕ ದೃಷ್ಟಿಕೋನಗಳನ್ನು ಒಟ್ಟಿಗೇ ಸೂಚಿಸಲು ನಿಮ್ಮ ಪ್ರಶ್ನೆಯ ಕೊನೆಯಲ್ಲಿ ಎಲ್ಲವನ್ನೂ ಸೇರಿಸಿಕೊಂಡ ಹೋಲ್ಡಾಲ್ ತರಹದ ಅನೇಕ ನುಡಿಗಟ್ಟುಗಳನ್ನು ಪಟ್ಟಿಮಾಡಿದ್ದೀರಿ. ಆಧುನಿಕತೆಯ ವಿಮರ್ಶಕರು ಆ ನುಡಿಗಟ್ಟುಗಳನ್ನು ಬಳಸುವ ವಿಧಾನ ಒರಟು ಎಂದು ನನಗೆ ಅನ್ನಿಸಿದೆ. ಉದಾಹರಣೆಗೆ ಜಡ ಉಪಕರಣವೊಂದರ ಮಟ್ಟಕ್ಕೆ ಇಳಿಸಿದ ವೈಚಾರಿಕತೆ ಎಂಬ ಟೀಕೆಯ ನುಡಿಗಟ್ಟು, ಅದು ನಿಜಕ್ಕೂ ಏನನ್ನು ಹೇಳಹೊರಟಿದೆ? ಸ್ಥೂಲವಾಗಿ ಹೇಳುವುದಾದರೆ ಆಧುನಿಕ ಕಾಲದಲ್ಲಿ ಅತ್ಯಂತ

'ನಾವು ಹೇಗೆ ಮತ್ತು ಯಾವಾಗ ಜಗತ್ತಿನ ಕುರಿತ ನಮ್ಮ ಪರಿಕಲ್ಪನೆಯನ್ನು, ಅದು ನಮಗೆ ಬರಿಯ ವಾಸದ ಸ್ಥಳವಲ್ಲ, ಬದಲು ಈ ಜಗತ್ತಿನ ಮೇಲೆ ಯಜಮಾನಿಕೆ ಸಾಧಿಸಿ ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು' ಎಂದು ಪರಿವರ್ತಿಸಿಕೊಂಡೆವು. ಆದರೆ ಈ ಪ್ರಶ್ನೆ ಎಷ್ಟು ಸರ್ವೇಸಾಮಾನ್ಯವಾದದ್ದು ಮತ್ತು ಎಲ್ಲವನ್ನೂ ಅಡಕ ಮಾಡಿಕೊಂಡಿರುವಂತಹದ್ದು ಎಂದರೆ ಅದನ್ನು ಹೇಗೆ ಉತ್ತರಿಸುವುದು ಎಂದು ದಿಗ್ಭ್ರಮೆಯಾಗುತ್ತದೆ. ಗಾಂಧಿಯವರ ಬರಹಗಳಲ್ಲಿ ಅವರು ಈ ಪ್ರಶ್ನೆಯನ್ನು ನಾಲ್ಕು ವಿಭಿನ್ನ ಪ್ರಶ್ನೆಗಳಾಗಿ ವಿಂಗಡಿಸಿಕೊಳ್ಳುತ್ತಾರೆ. ಈ ಪ್ರಶ್ನೆಗಳೆಲ್ಲವೂ ವಿವರಪೂರ್ಣವೂ ಸಮಗ್ರವೂ ಆದ ಉತ್ತರಗಳನ್ನು ಬಯಸುವಂತಹವು. 'ಹೇಗೆ ಮತ್ತು ಯಾವಾಗ ನಾವು ಪ್ರಕೃತಿಯ ಬಗೆಗಿನ ನಮ್ಮ ಪರಿಕಲ್ಪನೆಯನ್ನು 'ಪ್ರಾಕೃತಿಕ ಸಂಪನ್ಮೂಲ' ಎಂದು ಬದಲಾಯಿಸಿಕೊಂಡೆವು?' 'ಹೇಗೆ ಮತ್ತು ಯಾವಾಗ ಕೇವಲ ಮನುಷ್ಯರನ್ನು ನಾವು ಪ್ರಜೆಗಳು ಎಂದು ಬದಲಾಯಿಸಿಕೊಂಡೆವು?' 'ಹೇಗೆ ಮತ್ತು ಯಾವಾಗ ಜನಸಮೂಹದ ಕುರಿತ ನಮ್ಮ ಪರಿಕಲ್ಪನೆಯನ್ನು 'ಜನಸಂಖ್ಯೆ' ಎಂದು ಬದಲಾಯಿಸಿಕೊಂಡೆವು?' ಮತ್ತು 'ಹೇಗೆ ಮತ್ತು ಯಾವಾಗ ನಾವು ಜ್ಞಾನದ ಕುರಿತ ನಮ್ಮ ಪರಿಕಲ್ಪನೆಯನ್ನು [ಕೇವಲ ಬದುಕುವ ಸಲುವಾಗಿ] ಪರಿಣತಿ ಎಂದು [ಇತರ ಮೇಲೆ ಯಜಮಾನಿಕೆ ಮಾಡುವ ಸಾಧನವಾಗಿ] ಬದಲಾಯಿಸಿಕೊಂಡೆವು?'

ದಕ್ಷ ವಿಧಾನದ ಮೂಲಕ ಬೂರ್ಜ್ವಾ ಸಮಾಜದ ಜೀವನೋದ್ದೇಶಗಳನ್ನು ಗುರುತಿಸಲು ಹಾಗೂ ಸಾಧಿಸಲು ಮಾರ್ಗವೊಂದನ್ನು ಕಂಡುಕೊಂಡು ಅನುಸರಿಸಲು ನಾವು ವೈಚಾರಿಕತೆಯನ್ನು ವಿಪರೀತ ಅವಲಂಬಿಸಿಕೊಂಡಿದ್ದೇವೆ. ಈಗ ವೈಚಾರಿಕತೆಯ ಈ ಬಗೆಯ ಉಪಯೋಗವಾದೀ ಬಳಕೆಯನ್ನು ಪ್ರತಿರೋಧಿಸಲು ಸಂಕ್ಷಿಪ್ತವಾಗಿ ನಾವು ಇದನ್ನು ಉಪಕರಣವಾದ ವಿರೋಧಿ ಎಂದು ಕರೆಯೋಣ. ನಾವು ಉಪಕರಣವಾದದ ವಿವರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅತ್ಯಂತ ಎಚ್ಚರದಲ್ಲಿ ಅಭ್ಯಸಿಸಬೇಕು. ಮತ್ತು ಆ ಮೂಲಕ ಉಪಕರಣವಾದ ಎಂದರೆ ಏನು ಎಂದು ಅರ್ಥಮಾಡಿಕೊಳ್ಳಲು ಯತ್ನಿಸಬೇಕು. ಗಾಂಧಿಯವರು ಉಪಕರಣವಾದ ಎಷ್ಟು ಸಂಕೀರ್ಣವಾದ ಸಮಸ್ಯೆ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಅವರ ಕುರಿತ ನನ್ನ ಕೆಲವು ಬರಹಗಳಲ್ಲಿ ನಾನು ಹೇಳಿರುವಂತೆ ಗಾಂಧೀಜಿ ಆಧುನಿಕತೆಯ ಕುರಿತು genealogical ಆದ ಅಂದರೆ ಅದು ಹುಟ್ಟಿ ಬೆಳೆದು ವಿಕಾಸಗೊಂಡ ಬಗೆಯನ್ನು ಕೆದಕಿ ಕೇಳುತ್ತಾರೆ. ಆ ಉತ್ತರ ಉಪಕರಣವಾದ ವಿರೋಧಿ ಎಂದು ಭಾಸವಾಗುತ್ತದೆ. ಅವರು ವಿರೋಧಿಸುವ ಸರ್ವೇಸಾಮಾನ್ಯವಾದ ಉಪಕರಣವಾದವನ್ನು ಈ ಉತ್ತರ ನಿರ್ದಿಷ್ಟವಾಗಿ ಗುರುತಿಸುತ್ತದೆ ಎಂದೂ ಭಾಸವಾಗುತ್ತದೆ. 'ನಾವು ಹೇಗೆ ಮತ್ತು ಯಾವಾಗ ಜಗತ್ತಿನ ಕುರಿತ ನಮ್ಮ ಪರಿಕಲ್ಪನೆಯನ್ನು, ಅದು ನಮಗೆ ಬರಿಯ ವಾಸದ ಸ್ಥಳವಲ್ಲ, ಬದಲು ಈ ಜಗತ್ತಿನ ಮೇಲೆ ಯಜಮಾನಿಕೆ ಸಾಧಿಸಿ ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು' ಎಂದು ಪರಿವರ್ತಿಸಿಕೊಂಡೆವು. ಆದರೆ ಈ ಪ್ರಶ್ನೆ ಎಷ್ಟು ಸರ್ವೇಸಾಮಾನ್ಯವಾದದ್ದು ಮತ್ತು ಎಲ್ಲವನ್ನೂ ಅಡಕಮಾಡಿಕೊಂಡಿರುವಂತಹದ್ದು ಎಂದರೆ ಅದನ್ನು ಹೇಗೆ ಉತ್ತರಿಸುವುದು ಎಂದು ದಿಗ್ಭ್ರಮೆಯಾಗುತ್ತದೆ. ಗಾಂಧಿಯವರ ಬರಹಗಳಲ್ಲಿ ಅವರು ಈ ಪ್ರಶ್ನೆಯನ್ನು ನಾಲ್ಕು ವಿಭಿನ್ನ ಪ್ರಶ್ನೆಗಳಾಗಿ ವಿಂಗಡಿಸಿಕೊಳ್ಳುತ್ತಾರೆ. ಈ ಪ್ರಶ್ನೆಗಳೆಲ್ಲವೂ ವಿವರಪೂರ್ಣವೂ ಸಮಗ್ರವೂ ಆದ ಉತ್ತರಗಳನ್ನು ಬಯಸುವಂತಹವು. 'ಹೇಗೆ ಮತ್ತು ಯಾವಾಗ ನಾವು ಪ್ರಕೃತಿಯ ಬಗೆಗಿನ ನಮ್ಮ ಪರಿಕಲ್ಪನೆಯನ್ನು 'ಪ್ರಾಕೃತಿಕ ಸಂಪನ್ಮೂಲ' ಎಂದು ಬದಲಾಯಿಸಿಕೊಂಡೆವು?' 'ಹೇಗೆ ಮತ್ತು ಯಾವಾಗ ಕೇವಲ ಮನುಷ್ಯರನ್ನು ನಾವು ಪ್ರಜೆಗಳು ಎಂದು ಬದಲಾಯಿಸಿಕೊಂಡೆವು?' 'ಹೇಗೆ ಮತ್ತು ಯಾವಾಗ ಜನಸಮೂಹದ ಕುರಿತ ನಮ್ಮ ಪರಿಕಲ್ಪನೆಯನ್ನು 'ಜನಸಂಖ್ಯೆ' ಎಂದು ಬದಲಾಯಿಸಿಕೊಂಡೆವು?' ಮತ್ತು 'ಹೇಗೆ ಮತ್ತು ಯಾವಾಗ ನಾವು ಜ್ಞಾನದ ಕುರಿತ ನಮ್ಮ ಪರಿಕಲ್ಪನೆಯನ್ನು [ಕೇವಲ ಬದುಕುವ ಸಲುವಾಗಿ] ಪರಿಣತಿ ಎಂದು [ಇತರ ಮೇಲೆ ಯಜಮಾನಿಕೆ ಮಾಡುವ ಸಾಧನವಾಗಿ] ಬದಲಾಯಿಸಿಕೊಂಡೆವು?' ಈಗ ನಾವು ಈ ನಾಲ್ಕು ಪ್ರಶ್ನೆಗಳಿಗೆ ಅವಕ್ಕೆ ತಕ್ಕ ವಿವರಗಳು ಮತ್ತು ಮಾಹಿತಿಯೊಂದಿಗೆ ಉತ್ತರಿಸಿ, ಮರಳಿ ಆ ಉತ್ತರಗಳನ್ನು ಪರಿಶೀಲಿಸುವುದರ ಮೂಲಕ ಅವೆಲ್ಲ ಪರಸ್ಪರ ಸಂಬಂಧವಿಲ್ಲದ ನಾಲ್ಕು ವಿಭಿನ್ನ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳಲ್ಲ; ಬದಲಿಗೆ ಮೂಲಭೂತವಾಗಿ ಅದು ಒಂದೇ ಪ್ರಶ್ನೆಗೆ [ಮೊದಲು ಕೇಳಿದ ಸರ್ವೇಸಾಧಾರಣವಾದ ಪ್ರಶ್ನೆಗೆ] ಉತ್ತರ ಎಂಬುದನ್ನು ಕಂಡುಕೊಂಡರೆ ಆಗ ಮಾತ್ರ ನಾವು ಉಪಕರಣವಾದ ವಿರೋಧಿ ಎಂಬ ನುಡಿಗಟ್ಟಿನ ಮುಖಾಂತರ ಅರ್ಥಪೂರ್ಣವಾದ ಏನನ್ನಾದರೂ ಹೇಳಲು ಸಾಧ್ಯ. ಅಲ್ಲಿಯವರೆಗೆ ಇದೆಲ್ಲವೂ ಗಾಳಿಯಲ್ಲಿ ಮಾಡುವ ಗುದ್ದಾಟ

ಮತ್ತು ಸವಕಲು ಮಾತುಗಳನ್ನು ಬಳಸಿ, ಸಾಧನ ಮತ್ತು ಗುರಿಗಳ ಕುರಿತು ಮಾಡುವ ಒಣಚರ್ಚೆ. ಆಧುನಿಕತೆಯನ್ನು ವಿಮರ್ಶಿಸಲು ನೀವು ಬಳಸಿದ ಎಲ್ಲ ನುಡಿಗಟ್ಟುಗಳ ಬಗೆಗೂ ಇದೇ ಬಗೆಯ ಎಚ್ಚರದ ಮಾತುಗಳನ್ನು ಹೇಳಬಹುದು.

ಆಧುನಿಕತೆಯ ವೈಫಲ್ಯಗಳನ್ನು ಅರ್ಥಮಾಡಿಕೊಳ್ಳಲು ನಾನು ಅನುಸರಿಸುವ ವಿಮರ್ಶೆಯ ಒಂದು ವಾದ ಸರಣಿಯನ್ನು [ಅದು ಎಲ್ಲರಿಗೂ ಪರಿಚಿತವಾದದ್ದು] ಇದು. ಮೊದಲಿಗೇ ಒಂದು ಅಂಶವನ್ನು ಸ್ಪಷ್ಟಪಡಿಸುವುದಾದರೆ ಆಧುನಿಕತೆಯ ಎರಡು ಘೋಷಿತ ಮೌಲ್ಯಗಳಾದ 'ವಿಮೋಚನೆ' ಮತ್ತು 'ಸಮಾನತೆ'ಗಳನ್ನು ಪುನರುಜ್ಜೀವನ ಯುಗದ ಮೌಲ್ಯಗಳಿಗೆ ತಕ್ಕಂತೆ ಸೈದ್ಧಾಂತಿಕವಾಗಿ ಶಾಸ್ತ್ರ ಸಮ್ಮತ ರೀತಿಯಲ್ಲಿ ಹೇಗೆ ಬೆಳೆಸಲಾಯಿತು ಎಂದರೆ, ಅವೆರಡೂ ಪರಸ್ಪರ ಬಿಕ್ಕಟ್ಟು ಮತ್ತು ಘರ್ಷಣೆಗಳಲ್ಲಿ ಸಹಬಾಳ್ವೆ ನಡೆಸುವುದು ಅನಿವಾರ್ಯವಾಯಿತು. ಇದು ಈಗಾಗಲೇ ಸಾಕಷ್ಟು ಅಧ್ಯಯನಕ್ಕೆ ಒಳಪಟ್ಟಿದ್ದು ಆಸ್ತಿಯ ಒಡೆತನ, ಆಸ್ತಿಯ ಒಡೆಯನ ತಲೆಗೆ ತುರುಕಿದ ವಿಮೋಚನೆ ಬಗೆಗಿನ ಒಂದು ನಿರ್ದಿಷ್ಟ ಪರಿಕಲ್ಪನೆ, ದೇಶದ ಕಾನೂನಾಗಿ ಜಾರಿಗೊಂಡು ಆಸ್ತಿಯ ಹಕ್ಕು ಪ್ರಜೆಗಳ ಒಂದು ಮೂಲಭೂತ ಹಕ್ಕು ಎಂಬುದಾಗಿ ಎಲ್ಲೆಡೆ ಪ್ರಚಲಿತಗೊಂಡು, ಈ ವಿದ್ಯಮಾನ ಲಿಬರಲ್ ಆಧುನಿಕತೆ ಎಂಬ ಹೆಸರಿನಲ್ಲಿ ದಶದಿಕ್ಕುಗಳಲ್ಲೂ ಹರಡಿಕೊಳ್ಳಲು ಕಾರಣವಾಯಿತು. ಇದು ಸಮಾನತೆಯ ಗುರಿಯೊಡನೆ ಹೇಗೆ ಘರ್ಷಣೆ ಬಿಕ್ಕಟ್ಟುಗಳಿಗೆ ಕಾರಣವಾಗುತ್ತದೆ ಎಂಬುದನ್ನು ಎಷ್ಟು ವ್ಯಾಪಕವಾಗಿ ಅಧ್ಯಯನ ಮಾಡಲಾಗಿದೆ ಮತ್ತು ತಳಮಟ್ಟ ಶೋಧಿಸಲಾಗಿದೆ ಎಂದರೆ ಈ ಕುರಿತು ಹೆಚ್ಚಿಗೆ ಹೇಳುವ ಅಗತ್ಯವಿಲ್ಲ. ವಿಮೋಚನೆ ಮತ್ತು ಸಮಾನತೆಗಳ ನಡುವೆ ನಡೆಯುವ ಇನ್ನೊಂದು ಬಗೆಯ ಘರ್ಷಣೆ ಹಾಗೂ ಬಿಕ್ಕಟ್ಟುಗಳ ಬಗ್ಗೆ ವಿಶೇಷವಾದ ಅಧ್ಯಯನ ನಡೆದಂತೆ ತೋರುವುದಿಲ್ಲ. ಇದು ಪ್ರತಿಭೆಯನ್ನು ಗುರುತಿಸಿ ಸಮಾಜ ಕೊಡುವ ಮನ್ನಣೆ ಪ್ರೋತ್ಸಾಹಗಳೇ ಸಂಭಾವನೆಯಾಗಿ ಸಂದರೆ ಶತಮಾನಗಳವರೆಗೆ ಉತ್ಪಾದನೆಯಲ್ಲಿ ಅತ್ಯುತ್ತಮ ಸಾಧನೆ ಕಂಡುಬಂದಾಗ [ಉದಾಹರಣೆಗೆ ಕಲಾಕೃತಿ ಒಂದು] ಆ ಸರಕನ್ನು ಉತ್ಪಾದಿಸುವ ಕಾಲದ ವಿಶೇಷ ಗುಣಕ್ಕೆ, ವಿಶಿಷ್ಟತೆಗೆ ಹೊಗಳಿಕೆ ಮತ್ತು ಮೆಚ್ಚುಗೆ ಸಂದಿತು. ನೀವು ದೀರ್ಘಕಾಲೀನ ಐತಿಹಾಸಿಕ ದೃಷ್ಟಿಕೋನದಿಂದ ಈ ಸನ್ನಿವೇಶವನ್ನು ವೀಕ್ಷಿಸಿದರೆ, ಈ ಬಗೆಯ ಉತ್ಪಾದನೆಗೆ ಪ್ರಚೋದನೆ ನೀಡಿದ ವೈಯಕ್ತಿಕ ಪ್ರತಿಭೆಗೆ ಹೊಗಳಿಕೆ ಮತ್ತು ಸಂಭಾವನೆ ಸಲ್ಲಲು ತೊಡಗಿದ್ದು ತೀರ ಇತ್ತೀಚೆಗಿನ ಬೆಳವಣಿಗೆ. ಇದಕ್ಕೆ ಭಾಗಶಃ ಕಾರಣವೆಂದರೆ, ಇಂತಹ ವಸ್ತುವಿನ ಉತ್ಪಾದನೆಯ ಶ್ರೇಷ್ಠ ಗುಣಮಟ್ಟಕ್ಕೆ ಅದರ ಹಿನ್ನೆಲೆಯಲ್ಲಿರುವ Zeitgest ಗೆ [ಕಾಲದ ವಿಶಿಷ್ಟ ಗುಣಕ್ಕೆ] ಪ್ರಶಂಸೆ ಸಲ್ಲುವುದು. ಎಂದರೆ ಅದರ ಉತ್ಪಾದನೆಗೆ ಕಾರಣಕರ್ತನಾದವನ ವೈಯಕ್ತಿಕತೆಯನ್ನು ಅಲ್ಲಗಳೆದಂತೆ ಎಂಬ ಸೈದ್ಧಾಂತಿಕ ನಿಲುವು; ಇಂತಹ ಶ್ರೇಷ್ಠ ಮಟ್ಟದ ಉತ್ಪಾದನೆಗೆ ಕಾರಣಕರ್ತನಾದ ವ್ಯಕ್ತಿ ಮೇಲೆ ಹೇಳಿದ ಕಾಲದ ವಿಶಿಷ್ಟ ಗುಣವನ್ನೂ ಮೈಗೂಡಿಸಿಕೊಂಡವನು ಎಂಬ ನಿಲುವು. ಹಾಗಾಗಿ dessertನ [ಶಿಕ್ಷೆ ಅಥವಾ ಸಂಭಾವನೆಗೆ ಅರ್ಹನಾಗುವ ಸ್ಥಿತಿ] ವಿಚಾರಗಳು ವೈಯಕ್ತಿಕ ಸ್ವಾತಂತ್ರ್ಯ ಮತ್ತು ಪ್ರತಿಭೆಯ ಜೊತೆ ಥಳಕು ಹಾಕಿಕೊಳ್ಳುವ ಮುಖಾಂತರ ಪ್ರೋತ್ಸಾಹ ಗಿಟ್ಟಿಸಿಕೊಂಡವು. ಈ ಪ್ರವೃತ್ತಿ ಸಾಮಾನ್ಯ ಸ್ವಾತಂತ್ರ್ಯದ ಭಾಗವಾಯಿತು; ನಂತರ ಅದು ವ್ಯಕ್ತಿಯ ಉತ್ಪಾದನೆಯ ಶ್ರೇಷ್ಠತೆಯನ್ನು ಇತರರು ಅನುಭವಿಸುವ ಸ್ವಾತಂತ್ರ್ಯಕ್ಕೂ ವಿಸ್ತರಿಸಿತು. ಇದರಿಂದಾಗಿ ಇಂತಹ ಉತ್ಪಾದನೆ ಎಷ್ಟು ಸಾಧ್ಯವೋ ಅಷ್ಟು ಉತ್ತಮ ಮಟ್ಟದ್ದಾಗಲು ಎಲ್ಲ ಬಗೆಯ ಪ್ರೋತ್ಸಾಹವನ್ನೂ ಕೊಡಲಾಗುವ ಪರಿಸ್ಥಿತಿ ಬಂದಿತು. ಹಾಗಾಗಿ ಈಗ ತಿಂಗಳ ಸಂಬಳ ಪಡೆಯುವ ವೃತ್ತಿನಿರತರಿಗೂ ಪ್ರತಿಭೆಗೆ ಅನುಗುಣವಾಗಿ ಪ್ರೋತ್ಸಾಹಧನದ ಮೊತ್ತದಲ್ಲಿ ಹೆಚ್ಚಳವಾಗ ತೊಡಗಿದೆ; ಬ್ಯಾಂಕರುಗಳಿಗೆ ಧಾರಾಳ ಬೋನಸ್ ನೀಡಲಾಗುತ್ತಿದೆ; ಕ್ರೀಡಾಪಟುಗಳಿಗೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಪ್ರೋತ್ಸಾಹ ಧನ ಒದಗಿಸಲಾಗುತ್ತಿದೆ; ಪುಸ್ತಕಗಳ ಬರಹಗಾರರಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಈ ಪಟ್ಟಿ ಹೀಗೆಯೇ ಮುಂದೆ ಸಾಗುತ್ತದೆ. ಈ ಎಲ್ಲ ಪ್ರಶಸ್ತಿ ಪಾರಿತೋಷಕಗಳನ್ನು ವೈಯಕ್ತಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಕೊಡಲಾಗುತ್ತದೆ. ಈ ಬಗೆಯ ಎಲ್ಲ 'ಇನಾಮು'ಗಳೂ 'ಸಮಾನತೆ'ಯ ಆಕಾಂಕ್ಷೆಯ ಜೊತೆ ಎಂತಹ ಬಿಕ್ಕಟ್ಟು ಮತ್ತು ಘರ್ಷಣೆಗಳಿಗೆ ಕಾರಣವಾಗಬಹುದು ಎಂಬುದು ಈ ವೇಳೆಗೆ ಯಾರಿಗಾದರೂ ಹೊಳೆದೀತು. ಈ ತರಹದ ಮತ್ತು ಇಂತಹದ್ದೇ ಇತರ ಕಾರಣಗಳಿಗಾಗಿ ಆಧುನಿಕತೆಯ ಪ್ರಧಾನ ಧಾರೆಯ ರಾಜಕೀಯ ಪರಂಪರೆ ಸ್ವಾತಂತ್ರ್ಯ ಮತ್ತು ಸಮಾನತೆಯ ಎರಡು ಮಹಾನ್ ಆದರ್ಶಗಳನ್ನು ಇವೆರಡೂ ಪರಸ್ಪರ ಒಟ್ಟಾಗಿ ನಮ್ಮ ಅನುಭವಕ್ಕೆ ದಕ್ಕಲು ಅವಕಾಶವೇ ಒದಗಿ ಬರದಂತೆ ಎಚ್ಚರವಹಿಸಿ ಬೆಳೆಸಿತು.

ಈ ಬೆಳವಣಿಗೆಗಳನ್ನೆಲ್ಲ ಗಮನಿಸಿ, ನಾನು, ಮತ್ತೆ ಮಾರ್ಕ್ಸ್ ಮತ್ತು ಗಾಂಧಿಯವರತ್ತ ಹೊರಳಿ ನೋಡಿದಾಗ ಅವರಿಬ್ಬರೂ ಸ್ವಾತಂತ್ರ್ಯ ಮತ್ತು ಸಮಾನತೆಯ ಈ ಎರಡು ಮೌಲ್ಯಗಳಲ್ಲಿ ಯಾವುದನ್ನು ಸಹ ತಮ್ಮ ಚಿಂತನೆಯ ಕೇಂದ್ರವಾಗಿಸಿಕೊಳ್ಳಲಿಲ್ಲ ಎಂಬ ಸತ್ಯ ಹೊಳೆಯಿತು. ಮಾರ್ಕ್ಸ್ ಸಾಕಷ್ಟು ಸ್ಪಷ್ಟವಾಗಿಯೇ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಬೂರ್ಜ್ವಾ ಆದರ್ಶಗಳೆಂದು ಜರಿದು

ಅವರಿಬ್ಬರೂ ತಮ್ಮ ಮೂಲಭೂತ ಗುರಿ ಮತ್ತು ಕಾಲಕ್ರಮದಲ್ಲಿ ಕ್ರಾಂತಿಕಾರೀ ರಾಜಕೀಯದ ಕುರಿತ ತಿಳುವಳಿಕೆಗೆ ಅನುಗುಣವಾಗಿ ರೂಪಿಸಿಕೊಂಡ ಉದ್ದೇಶಗಳನ್ನು ಸಾಧಿಸಲು [ಗಾಂಧಿಯವರ ಮಟ್ಟಿಗೆ ಇದು ಸರಿ ಹೊಂದುವುದಿಲ್ಲ. ಯಾಕೆಂದರೆ ಗಾಂಧಿ ಸ್ಪಷ್ಟವಾಗಿ ಗುರುತಿಸಬಹುದಾದಂತೆ ಎಂದೂ ಸಮಾಜವಾದಿಯಾಗಿರಲಿಲ್ಲ] ಪರಕೀಯತೆಯನ್ನು ಮೀರುವುದು ಅಥವಾ ಪರಕೀಯತೆಯಿಂದ ಮುಕ್ತವಾದ ಬದುಕನ್ನು ರೂಢಿಸಿಕೊಳ್ಳುವುದು, ಅವರ ಕಾರ್ಯಯೋಜನೆಯಾಗಿತ್ತು. ಅವರಿಬ್ಬರೂ ಆಧುನಿಕತೆಯ ಆಳದಲ್ಲಿರುವ, ವಿಕಾರವನ್ನು ಬಂಡವಾಳದ ಸಹಜ ಪ್ರವೃತ್ತಿಗೆ ಅನುಗುಣವಾಗಿ ಹುಟ್ಟಿಕೊಳ್ಳುವ ಪರಕೀಯತೆಯಲ್ಲಿ ಗುರುತಿಸಿದರು. ಗಾಂಧಿ ಮತ್ತು ಮಾರ್ಕ್ಸ್‌ರಿಂದ ಈ ಪಾಠಗಳನ್ನು ಕಲಿತುಕೊಳ್ಳುವುದು ನಾನು ಈಗಷ್ಟೆ ಪ್ರಸ್ತಾಪಿಸಿದ ಆಧುನಿಕ ವಿರೋಧಿ ನಿಲುವಿನ ಕುರಿತ ಸರಿಯಾದ ಮತ್ತು ಅತ್ಯಂತ ಪ್ರಸ್ತುತ ವಿಧಾನ ಹಾಗೂ ಆಧುನಿಕತೆಯ ಬಗೆಗಿನ ವಿಚಾರ ಕುರಿತ ಅಭ್ಯಾಸಕ್ಕೆ ಒಳ್ಳೆಯ ಆರಂಭ.

ತಿರಸ್ಕರಿಸಿಬಿಟ್ಟ, ಗಾಂಧಿಯವರು ಎಲ್ಲರೂ ಬಲ್ಲ ಹಾಗೆ ಉದಾರವಾದಿ ವಿಚಾರಗಳು ಮತ್ತು ಆದರ್ಶಗಳನ್ನು ಪ್ರತಿನಿಧಿಸುವ ಸಂಸ್ಥೆಗಳು ಮತ್ತು ನಿಯಮಾವಳಿಗಳನ್ನು ಸಾರಾಸಗಟು ಉಪೇಕ್ಷಿಸಿಬಿಟ್ಟರು. ನನ್ನ ಪ್ರಕಾರ ಸ್ವಾತಂತ್ರ್ಯ ಮತ್ತು ಸಮಾನತೆಗಳ ನಡುವಿನ ಈ ಘರ್ಷಣೆ ಹಾಗೂ ಬಿಕ್ಕಟ್ಟು, ಅವರಿಬ್ಬರೂ ಈ ಆದರ್ಶಗಳನ್ನು ತಿರಸ್ಕರಿಸಲು ಪ್ರಧಾನ ಕಾರಣವಾಯಿತು. ನಾನು ಈ ಸನ್ನಿವೇಶವನ್ನು ನಿರೂಪಿಸಿದ ವಿಧಾನದಲ್ಲಿ ಮತ್ತು ಆ ಶಬ್ದಗಳಲ್ಲೇ ಅವರಿಬ್ಬರೂ ಈ ಎರಡು ಆದರ್ಶಗಳ ಬಗೆಗಿನ ತಮ್ಮ ತಿರಸ್ಕಾರವನ್ನು ವ್ಯಕ್ತಪಡಿಸಲಿಲ್ಲ. ಈ ಜ್ಞಾನ ಪುನರುತ್ಥಾನದ, ಆಧುನಿಕ ಆದರ್ಶಗಳಾದ ಸ್ವಾತಂತ್ರ್ಯ, ಸಮಾನತೆಗಳಿಗಿಂತ ಭಿನ್ನವಾಗಿರುವ ಹೆಚ್ಚು ಮೂಲಭೂತವಾದ ಹೆಚ್ಚು ಮಾನವೀಯವಾದ ಮತ್ತು ಹಾಗೂ ಶಾಶ್ವತವಾದ ಪರ್ಯಾಯವೊಂದನ್ನು ಮಾರ್ಕ್ಸ್ ಹಾಗೂ ಗಾಂಧಿ ಇಬ್ಬರೂ ಅರಸಿದರು.

ಅವರಿಬ್ಬರೂ ತಮ್ಮ ಮೂಲಭೂತ ಗುರಿ ಮತ್ತು ಕಾಲಕ್ರಮದಲ್ಲಿ ಕ್ರಾಂತಿಕಾರೀ ರಾಜಕೀಯದ ಕುರಿತ ತಿಳುವಳಿಕೆಗೆ ಅನುಗುಣವಾಗಿ ರೂಪಿಸಿಕೊಂಡ ಉದ್ದೇಶಗಳನ್ನು ಸಾಧಿಸಲು [ಗಾಂಧಿಯವರ ಮಟ್ಟಿಗೆ ಇದು ಸರಿ ಹೊಂದುವುದಿಲ್ಲ. ಯಾಕೆಂದರೆ ಗಾಂಧಿ ಸ್ಪಷ್ಟವಾಗಿ ಗುರುತಿಸಬಹುದಾದಂತೆ ಎಂದೂ ಸಮಾಜವಾದಿಯಾಗಿರಲಿಲ್ಲ] ಪರಕೀಯತೆಯನ್ನು ಮೀರುವುದು ಅಥವಾ ಪರಕೀಯತೆಯಿಂದ ಮುಕ್ತವಾದ ಬದುಕನ್ನು ರೂಢಿಸಿಕೊಳ್ಳುವುದು, ಅವರ ಕಾರ್ಯಯೋಜನೆಯಾಗಿತ್ತು. ಅವರಿಬ್ಬರೂ ಆಧುನಿಕತೆಯ ಆಳದಲ್ಲಿರುವ ವಿಕಾರವನ್ನು ಬಂಡವಾಳದ ಸಹಜ ಪ್ರವೃತ್ತಿಗೆ ಅನುಗುಣವಾಗಿ ಹುಟ್ಟಿಕೊಳ್ಳುವ ಪರಕೀಯತೆಯಲ್ಲಿ ಗುರುತಿಸಿದರು. ಗಾಂಧಿ ಮತ್ತು ಮಾರ್ಕ್ಸ್‌ರಿಂದ ಈ ಪಾಠಗಳನ್ನು ಕಲಿತುಕೊಳ್ಳುವುದು, ನಾನು, ಈಗಷ್ಟೆ ಪ್ರಸ್ತಾಪಿಸಿದ ಆಧುನಿಕ ವಿರೋಧಿ ನಿಲುವಿನ ಕುರಿತ ಸರಿಯಾದ ಮತ್ತು ಅತ್ಯಂತ ಪ್ರಸ್ತುತ ವಿಧಾನ ಹಾಗೂ ಆಧುನಿಕತೆಯ ಬಗೆಗಿನ ವಿಚಾರ ಕುರಿತ ಅಭ್ಯಾಸಕ್ಕೆ ಒಳ್ಳೆಯ ಆರಂಭ.

ಪರಕೀಯತೆಯಿಂದ ಮುಕ್ತವಾದ ಬದುಕಿನ ಕುರಿತ ಗಾಂಧಿ ಮತ್ತು ಮಾರ್ಕ್ಸ್‌ನ ಆದರ್ಶಗಳು ಆಧುನಿಕ ಉದಾರವಾದದ ಮೌಲ್ಯಗಳಾದ ಸ್ವಾತಂತ್ರ್ಯ ಮತ್ತು ಸಮಾನತೆಗಳ ಸ್ಥಾನವನ್ನು ಹೇಗೆ ತುಂಬಿಸಬಹುದು ಎಂಬ ಬಗ್ಗೆ ನಿಮ್ಮ ಯೋಚನೆಗಳೇನು ವಿವರಿಸುವಿರಾ?

ಆಗಲಿ, ಖಂಡಿತವಾಗಿ. ಗಾಂಧಿ ಮತ್ತು ಮಾರ್ಕ್ಸ್ ಸ್ವಾತಂತ್ರ್ಯ ಮತ್ತು ಸಮಾನತೆಗಳ ಆದರ್ಶಗಳಿಗೆ ಪರ್ಯಾಯವೊಂದನ್ನು ಕಂಡುಕೊಂಡಿದ್ದಾರೆ ಎಂದು ಭಾವಿಸಿದರೆ ಈ ಆದರ್ಶಗಳೇನೂ ಅಪ್ರಸ್ತುತವಾಗಿಬಿಡುವುದಿಲ್ಲ. ಆದರೆ ಆಧುನಿಕ ಉದಾರವಾದ ಈ ಆದರ್ಶಗಳಿಗೆ ನೀಡಿದ ಮನ್ನಣೆ ಇನ್ನು ಮುಂದೆ ಅವುಗಳಿಗೆ ಸಲ್ಲುವುದಿಲ್ಲ. ಈ ಅಂಶವನ್ನು ಸ್ವಲ್ಪ ವಿವರಿಸುತ್ತೇನೆ. ಆಧುನಿಕತೆಯ ಕುರಿತು ವಿಮರ್ಶಾತ್ಮಕ ನಿಲುವು ತಳೆದ ಮಾರ್ಕ್ಸ್ ಮತ್ತು ಗಾಂಧಿಯವರನ್ನು ಕ್ಷಣಕಾಲ, ಬದಿಗೆ ಸರಿಸಿ, ನಮ್ಮ ರಾಜಕೀಯ ಆದರ್ಶಗಳನ್ನು ಈಜಾಡಿಸಲು ಪುನರ್ ಸಂಯೋಜಿಸಿದ ಸಾಮಾನ್ಯ ವಿಷಯದ ಕಡೆಗೆ ಗಮನ ಹರಿಸೋಣ. ನಾನು ಪ್ರಭಾವಿತನಾಗಿರುವ ಥಾಮಸ್ ಕುನ್ಹ್ ಹೇಳುವ ಪ್ರಕಾರ, ಸಿದ್ಧಾಂತದಲ್ಲಿ ತಲೆದೋರುವ ತೀವ್ರ ಪಲ್ಲಟಗಳು, ಹಳೆಯ ಪರಿಕಲ್ಪನೆಗಳನ್ನು ಹಾಗೇ ಉಳಿಸಿಕೊಳ್ಳುತ್ತವೆ; ಆದರೆ ಅವುಗಳ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನೇನೂ ವ್ಯಕ್ತಪಡಿಸುವುದಿಲ್ಲ; ಬದಲಾಗಿ ಅವು ವಿಷಯವನ್ನೇ ಬದಲಿಸುತ್ತವೆ ಎಂದು ಅವರು ಹೇಳುತ್ತಾರೆ. ಅವು ಹಳೆಯ

(೩೮ನೇ ಪುಟಕ್ಕೆ

ಗಾಂಧಿ-ಅಂಬೇಡ್ಕರ್ ಮುಖಾಮುಖಿ : ಈ ಜೋಡಿಯ ಭೇಟಿ ಯಾವಾಗ?

ಮೂಲ ಇಂಗ್ಲಿಷ್: ಸಂಜಯ ಪಲ್ಶೀಕರ್
ಕನ್ನಡಕ್ಕೆ: ಎಂ ರಾಜು

ಗಾಂಧಿ ಮತ್ತು ಅಂಬೇಡ್ಕರ್‌ಗೆ ಸಂಬಂಧಿಸಿದಂತೆ ನೂರಾರು ಛಾಯಾಚಿತ್ರಗಳು ಲಭ್ಯವಿರುವವಾದರೂ ಇಬ್ಬರೂ ಒಟ್ಟಿಗಿರುವ ಛಾಯಾಚಿತ್ರ ಒಂದೇ ಒಂದು-ಅದೂ ಎರಡನೇ ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ ತೆಗೆದದ್ದು-ಎಂಬುದೇ ಈ ಎರಡು ವ್ಯಕ್ತಿತ್ವಗಳ ಸಂಬಂಧದ ಹದವನ್ನು ಹೇಳುವಂತಿದೆ. ಸಮಕಾಲೀನ ಚರ್ಚೆಗಳಲ್ಲಿ ಅತ್ಯಂತ ಮುಖ್ಯವಾದ ಚರ್ಚೆಗಳ ವಸ್ತುವಾದ ಈ ಇಬ್ಬರ ನಡುವಣ ವಾಗ್ವಾದ ಮೇಲ್ನೋಟಕ್ಕೆ ಎರಡು ಭಿನ್ನ ಎರಕಗಳ ವ್ಯಕ್ತಿತ್ವಗಳ ನಡುವಣ ಸಂಘರ್ಷ ರೂಪದಲ್ಲಿ ಕಂಡರೂ, ಆ ಸಂಘರ್ಷ ಗುರಿಯನ್ನು ಕುರಿತ ಸಂಘರ್ಷವಾಗಿರದೆ ಮಾರ್ಗವನ್ನು ಕುರಿತ ಸಂಘರ್ಷವಾಗಿರುವುದರಿಂದ ಈ ಎರಡೂ ವ್ಯಕ್ತಿತ್ವಗಳು ನಮ್ಮೊಡನಿಲ್ಲದ ಈ ಕಾಲ-ದೇಶ ಸಂದರ್ಭಗಳಲ್ಲಿ ನಮ್ಮ ಇಂದಿನ ಅಗತ್ಯಗಳಿಗೆ ತಕ್ಕಂತೆ ಪುನರ್‌ನಿರೂಪಿಸಿಕೊಳ್ಳುವ ಅವಕಾಶ ನಮಗೆ ಇದ್ದೇ ಇದೆ. ಇಂದಿನ ನಮ್ಮ ನಡುವಿನ ಬಹುಮುಖ್ಯ ರಾಜಕೀಯ ಶಾಸ್ತ್ರ ವಿದ್ವಾಂಸರಾದ ಸಂಜಯ ಪಲ್ಶೀಕರ್ ಅಂತಹ ಒಂದು ಪುನರ್ ನಿರೂಪಣೆಯ ಪ್ರಯತ್ನ ಮಾಡಿದ್ದಾರೆ.-ಸಂ

ಗಾಂಧಿ ಮತ್ತು ಅಂಬೇಡ್ಕರ್ ಅವರುಗಳ ನಡುವೆ ಎಷ್ಟು ಭಿನ್ನಾಭಿಪ್ರಾಯಗಳಿದ್ದವೋ ಅಷ್ಟೇ ಸಹಮತವೂ ಇದ್ದದ್ದು ವಾಸ್ತವ. ಇಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳ ನಡುವಿನ ಸಂಬಂಧಗಳ ಚರ್ಚೆಗೆ ತೊಡಗುವ ಮೊದಲು ಎರಡು ಸಾಮಾನ್ಯ ಅಂಶಗಳನ್ನು ಗಮನಿಸುವುದು ಸೂಕ್ತ. ಸಾಮಾಜಿಕ ಬದಲಾವಣೆಯ ಚಳುವಳಿಗಳು ವಿಮೋಚನಾ ತತ್ವಗಳನ್ನು(emancipatory ideologies) ಅವಲಂಬಿಸಿರುತ್ತವೆ. ನಮ್ಮ ಸದ್ಯದ ಕಾಲಘಟ್ಟದಲ್ಲಿ ಸಾಮಾಜಿಕ ಪರಿವರ್ತನೆಗಾಗಿ ನಡೆಯುವ ಚಳುವಳಿಗಳು ದುರ್ಬಲವೂ ಮತ್ತು ಸ್ಥಳೀಯವೂ ಆಗಿವೆ ಮತ್ತು ಇಂದಿನ ಪ್ರಮುಖ ಚರ್ಚೆಗಳು ವಿಮೋಚನೆಯನ್ನು ಬೆಂಬಲಿಸುವ ದಿಸೆಯಲ್ಲಿಲ್ಲ. ಈ ಪರಿಪ್ರೇಕ್ಷ್ಯದಲ್ಲಿ ವಿಮೋಚನಾ ತತ್ವಗಳ ಮರುಹೊಂದಾಣಿಕೆಯ ಸಾಧ್ಯತೆಗಳನ್ನು ಬಳಸಿಕೊಳ್ಳಬೇಕಾದ ಅಗತ್ಯವಿದೆ. ಹಾಗೆಯೇ ಯಾವುದೇ ಒಂದು ತಾತ್ವಿಕತೆಯ ಪ್ರಭಾವಕ್ಕೆ ಸಂಪೂರ್ಣ ಒಳಗಾಗದ ಸಮದೂರದ ನಿಲುವಿನ ಅಗತ್ಯ ಕೂಡ ಇದೆ.

ಎರಡನೆಯದಾಗಿ ವಿಚಾರಗಳನ್ನು ವಿಮರ್ಶಿಸುವಾಗ ವ್ಯಕ್ತಿಗಳ ನಡುವಿನ ಸಂಘರ್ಷ ಒಂದು ನಿರ್ಣಾಯಕ ಅಂಶವಾಗಬಾರದು. ಗಾಂಧಿ ಮತ್ತು ಅಂಬೇಡ್ಕರ್ ಅವರುಗಳ ತತ್‌ಕ್ಷಣದ ರಾಜಕೀಯ ಅಗತ್ಯಗಳು ಪರಸ್ಪರ ವಿರುದ್ಧವಾಗಿದ್ದವು. ಅಂಬೇಡ್ಕರ್ ಅವರು ಅಸ್ಪೃಶ್ಯರ ನಾಯಕರಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿ ಜೀವನಪರ್ಯಂತ ತಾವು ಅಸ್ಪೃಶ್ಯರ ಅಧಿಕೃತ ಪ್ರತಿನಿಧಿ ಎಂದು ಹೇಳಿಕೊಳ್ಳುತ್ತಿದ್ದರು. ಮತ್ತೊಂದು ಕಡೆ ಗಾಂಧಿ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ಅಸ್ಪೃಶ್ಯರಿಗೆ ಅವರದ್ದೇ ಆದ ಪ್ರತ್ಯೇಕ ಹಿತಾಸಕ್ತಿಗಳಿವೆ ಎಂಬುದನ್ನು ನಿರಾಕರಿಸುವಂತೆ ಕಾಣುತ್ತಿತ್ತು. ಅಂಬೇಡ್ಕರ್ ಅವರಿಗೆ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಅಂಶಗಳ ಬಗ್ಗೆ ಸಂಶಯವಿದ್ದೇ ಇತ್ತು ಮತ್ತು ಈ ವಿಷಯದಲ್ಲಿ ಗಾಂಧಿ ಸಾಕಷ್ಟು ಸೂಕ್ಷ್ಮವಾಗಿಲ್ಲ ಎಂದು ಅವರಿಗೆ ಅನ್ನಿಸುತ್ತಿತ್ತು. ಹಾಗಾಗಿ ಗಾಂಧಿ ಸ್ವಾತಂತ್ರ್ಯ ಚಳುವಳಿಯ ಮುಂದಾಳಾಗಿದ್ದರಿಂದ ತಾವು ಗಾಂಧಿಯವರಿಗೆ ಎದುರಾಗಿ ನಿಲ್ಲಬೇಕೆಂದು ಅಂಬೇಡ್ಕರ್ ಅವರಿಗೆ ಅನ್ನಿಸುತ್ತಿತ್ತು. ಈ ಐತಿಹಾಸಿಕ ಹಿನ್ನೆಲೆಯಲ್ಲಿ ನಾವು ಸಮಸ್ಯೆಯನ್ನು ಪರಿಗಣಿಸುವಾಗ ಗಾಂಧಿ ಅಥವಾ ಅಂಬೇಡ್ಕರ್ ಅವರ ಪರವಾದ ನಿಲುವನ್ನು ತಳೆಯಲಾಗದು.

ಪ್ರಸ್ತುತ ಲೇಖನವು ಗಾಂಧಿ ಅಂಬೇಡ್ಕರ್ ನಡುವಿನ ಭಿನ್ನಾಭಿಪ್ರಾಯಗಳು ಅವರ ವ್ಯಕ್ತಿತ್ವಗಳ ಭಿನ್ನತೆಯ ಪರಿಣಾಮವಾಗಿ ಮತ್ತು ಅವರ ಕಾಲದ ರಾಜಕೀಯ ಪರಿಪ್ರೇಕ್ಷ್ಯದಲ್ಲಿ ಅವರುಗಳು ನಿಂತ ನೆಲೆಯ ಹಿನ್ನೆಲೆಯಿಂದ ಮೂಡಿದ್ದು ಎಂಬ ನಂಬಿಕೆಯೊಂದಿಗೆ ಮುನ್ನಡೆಯುತ್ತದೆ. ಹಾಗಿದ್ದರೂ ಈ ಸಂಘರ್ಷ ಮತ್ತು ಸಮಕಾಲೀನ ರಾಜಕೀಯದ ವಿಶ್ಲೇಷಣೆಯ ಆಚೆಗೆ ಗಾಂಧಿ ಮತ್ತು ಅಂಬೇಡ್ಕರ್ ಅವರುಗಳು ಪರಸ್ಪರ ಪೂರಕವಾಗಿರಬಹುದಾದ ಕೆಲವು ನೆಲೆಗಳೂ ಇವೆ ಎಂಬುದು ನಿಜ. ಇದನ್ನು ಕಂಡುಕೊಳ್ಳಲು ಯಾರ ರಾಜಕೀಯ ನಿಲುವು ಸರಿ ಅಥವಾ ಯಾರ ನಿಲುವು ತಪ್ಪು ಎಂಬುದನ್ನು ನಿರೂಪಿಸುವ ಪ್ರಯತ್ನ ಮಾಡದೆ ಮುಕ್ತ ಮನದಿಂದ ಮುಂದುವರಿಯುವುದು ಮುಖ್ಯ.

ಪ್ರತ್ಯೇಕ ಮತಕ್ಷೇತ್ರದ ಪ್ರಶ್ನೆ

ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ಮೀಸಲಿರಿಸುವ ಪ್ರಶ್ನೆ ಅಂತಹ ಒಂದು ಚರ್ಚಾಸ್ಪದ ಸಂಗತಿ. ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ ಬೇಕೆಂಬುದನ್ನು ಗಾಂಧಿ ವಿರೋಧಿಸಿದ್ದು, ತಮ್ಮ ಉಪವಾಸದ ಮೂಲಕ ಅಂಬೇಡ್ಕರ್ ಅವರನ್ನು ಈ ವಿಚಾರದಲ್ಲಿ ಒತ್ತಾಯಿಸಿದ್ದು ತಪ್ಪೇ? ಅಂಬೇಡ್ಕರ್ ಅವರ ಚಿಂತನೆಯ ಮೂಲ



ಚಿತ್ರದ ಸಮೀಪದ ಸಾಲಿನಲ್ಲಿ ಅಂಬೇಡ್ಕರ್ ಕ್ಯಾಮರಾದತ್ತ ಹಿಂತಿರುಗಿ ನೋಡುತ್ತಿದ್ದರೆ ದೂರದ ಸಾಲಿನಲ್ಲಿ ಗಾಂಧಿಯವರನ್ನು ಕಾಣಬಹುದು

ಪ್ರತ್ಯೇಕ ಮತಕ್ಷೇತ್ರವಾಗಿರಲಿಲ್ಲ ಎಂಬ ಹಿನ್ನೆಲೆಯಲ್ಲಿ ಈ ಪ್ರಶ್ನೆಯು ಅಪ್ರಸ್ತುತ ಎನ್ನುವುದು ನನ್ನ ವಾದ. ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಗಾಂಧಿ ಅಂಬೇಡ್ಕರ್ ಅವರ ಸಂಬಂಧಗಳನ್ನು ಅವರುಗಳ ವ್ಯಕ್ತಿಗತ ಅಥವಾ ರಾಜಕೀಯ ಕಾರ್ಯತಂತ್ರಗಳ ಹಿನ್ನೆಲೆಯಲ್ಲಿ ಶೋಧಿಸದೆ ಅವರುಗಳ ವಿಮೋಚನಾ ತತ್ವಗಳ ಹಿನ್ನೆಲೆಯಲ್ಲಿ ಶೋಧಿಸಬೇಕಾದ ಅಗತ್ಯವಿದೆ.

ಅಸ್ಪೃಶ್ಯತೆಯು ಜಾತಿ ವ್ಯವಸ್ಥೆಯ ವ್ಯಕ್ತರೂಪ ಎಂದು ಅಂಬೇಡ್ಕರ್ ನಂಬಿದ್ದರು. ಆದ್ದರಿಂದ ಅವರು ಜಾತಿ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಹಿಂದೂ ಮತಗ್ರಂಥಗಳಿಂದ ಅದಕ್ಕೆ ದೊರೆತ ಸಮರ್ಥನೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸ ಬಯಸಿದರು. ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕೆಂಬ ವಿಚಾರ ಜಾತಿ ವಿರೋಧಿ ಚಳುವಳಿಯ ಒಂದು ಭಾಗ ಮಾತ್ರವಾಗಿದ್ದು, ಜಾತಿ ವ್ಯವಸ್ಥೆ ಸಂಪೂರ್ಣ ನಾಶವಾಗಬೇಕೆಂಬುದು ಅವರ ಕಾಳಜಿಗಳಲ್ಲೊಂದಾಗಿತ್ತು. ಗಾಂಧೀಜಿಯವರಾದರೋ ಜಾತಿ ಆಧಾರಿತ ತಾರತಮ್ಯದ ವಿರುದ್ಧವಾಗಿದ್ದರು. ಆದರೆ ಜಾತಿ ಸಮಸ್ಯೆಯು ಅವರ ಚಿಂತನೆಗಳಲ್ಲಿ ಒಂದು ತುರ್ತು ವಿಚಾರವಾಗಿರಲಿಲ್ಲ. ಜಾತಿ ಸಮಸ್ಯೆಗಿಂತಲೂ ಹೆಚ್ಚಾಗಿ ಅಸ್ಪೃಶ್ಯತೆ ಅವರ ಕಾಳಜಿಯಾಗಿತ್ತು. ಅಸ್ಪೃಶ್ಯತೆಯು ಜಾತಿ ವ್ಯವಸ್ಥೆಯ ಕೇಂದ್ರ. ಒಮ್ಮೆ ಅಸ್ಪೃಶ್ಯತೆಯು ನಿವಾರಣೆಯಾದರೆ ಜಾತಿ ವ್ಯವಸ್ಥೆ ತನ್ನಷ್ಟಕ್ಕೆ ಮಾಯವಾಗುವುದು ಎಂಬುದು ಅವರ ನಂಬಿಕೆಯಾಗಿತ್ತು. ಅಸ್ಪೃಶ್ಯತೆಯ ಆಚರಣೆಯು ಜಾತ್ಯಾಧಾರಿತ ಅಸಮಾನತೆಯ ಪ್ರಕಟರೂಪ ಎಂದು ಗಾಂಧಿ ಗುರುತಿಸಿದ್ದರು. ಆದರೆ ಒಮ್ಮೆ ಅಸ್ಪೃಶ್ಯತೆ ನಿವಾರಣೆಯಾದರೆ ಜಾತಿ ನಿರ್ಮೂಲನೆಯಾಗಿಬಿಡುವುದೇ ಎಂಬುದು ಮುಖ್ಯ ಪ್ರಶ್ನೆ. ಹಾಗಾದರೆ ಸ್ಪೃಶ್ಯರ ನಡುವೆ ಕೂಡ ಅಂತರಿಕ ತಾರತಮ್ಯ ಮತ್ತು ಶ್ರೇಣೀಕರಣ ಏಕಿರಬೇಕು? ಜಾತಿ ವ್ಯವಸ್ಥೆಯ ಎಲ್ಲ ಕುರೂಪವನ್ನೂ ಅಸ್ಪೃಶ್ಯತೆ ಬಿಂಬಿಸುತ್ತದೆ ಆದ್ದರಿಂದ ಅದು ತಕ್ಷಣ ತೊಲಗಬೇಕು ಎಂದು ಗಾಂಧಿ ಹೇಳುತ್ತಿದ್ದರು. ಈ ತರ್ಕವನ್ನು ಮುಂದುವರಿಸಿ ಅವರು, ಜಾತಿ ಪ್ರಶ್ನೆ ನಾಶವಾದಾಗ ಮಾತ್ರ ಅಸ್ಪೃಶ್ಯತೆಯು ಕಾಣೆಯಾಗುವುದು ಎಂದು ವಾದಿಸುತ್ತಿದ್ದರು. ಅಂತಿಮವಾಗಿ ಜಾತಿವ್ಯವಸ್ಥೆಯು ರದ್ದಾಗುವುದನ್ನು ಸ್ವೀಕರಿಸಲು ಗಾಂಧಿ ಸಿದ್ಧರಿದ್ದರು ಎನ್ನುವ ವಿಷಯದಲ್ಲಿ ಯಾವುದೇ ಸಂಶಯವಿಲ್ಲ. ಆದರೂ ಗಾಂಧಿಯವರ ಚರ್ಚೆಯ ತಿರುಳು ಜಾತಿ ವ್ಯವಸ್ಥೆಯಾಗಿರಲಿಲ್ಲ.

ಗಾಂಧಿಯವರ ಪಾಪ ಮತ್ತು ಪ್ರಾಯಶ್ಚಿತ್ತದ ಮಾತು

ಪರಿಣಾಮವಾಗಿ ಗಾಂಧಿಯವರು ತಮ್ಮ ಸತ್ಯಾಗ್ರಹದ ವ್ಯಾಪ್ತಿಯನ್ನು ಜಾತಿ ಮತ್ತು ಜಾತಿ ಆಧಾರಿತ ಅಸಮಾನತೆಗೆ ವಿಸ್ತರಿಸಲಿಲ್ಲ. ದಲಿತರ ದೇವಾಲಯ ಪ್ರವೇಶಕ್ಕೆ ಗಾಂಧಿ ಬೆಂಬಲ ನೀಡಿದರು. ಆದರೆ ಈ ರೀತಿಯ ಚಳುವಳಿಯು ತಮ್ಮ ಕಾರ್ಯಕ್ರಮಗಳ ಕೇಂದ್ರಸ್ಥಾನವನ್ನು ಆಕ್ರಮಿಸಲು ಅವರು ಅವಕಾಶ ನೀಡಲಿಲ್ಲ. ಹಾಗೆಯೇ ಗಾಂಧಿಯವರು ಅಸ್ಪೃಶ್ಯತೆಯ ಪಾಪದ ಬಗ್ಗೆ ಹಿಂದೂಗಳಿಗೆ ಮನವರಿಕೆ ಮಾಡಿಕೊಡಲು ಉಪವಾಸ ಕೈಗೊಂಡರು. ಆದರೆ ಸತ್ಯಾಗ್ರಹದ ತತ್ವವು ತಮ್ಮದೇ ಸಮಾಜವು ಮಾಡುತ್ತಿದ್ದ ಅನ್ಯಾಯದ ಬಗ್ಗೆ, ಅದಕ್ಕೆ ಧರ್ಮವು ಸಮ್ಮತಿ ನೀಡಿದ್ದರ ಬಗೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡುವುದಿಲ್ಲ. ಸತ್ಯಾಗ್ರಹವು ಒಂದು ರಾಜಕೀಯ ಅಸ್ತ್ರವಾಗಿ ಗಾಂಧಿಯವರ ಚಿಂತನೆ ಮತ್ತು ಆಚರಣೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರದರ್ಶಿಸಲ್ಪಟ್ಟಿದೆ. ಆದರೆ ಸತ್ಯಾಗ್ರಹವು ಒಂದು ನೈತಿಕ ಶುದ್ಧೀಕರಣವಾಗಬೇಕಿದ್ದರೆ ಜಾತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಯಾವ ಬಗೆಯ ಹೋರಾಟ ಅಗತ್ಯ ಇದೆ? ಅಸ್ಪೃಶ್ಯತೆಯನ್ನು ತೊಡೆಯುವ ಜವಾಬ್ದಾರಿ ಸವರ್ಣೀಯರಿಗೆ ಸೇರಿದ್ದು ಎಂದು ಗಾಂಧಿ ವಾದಿಸುತ್ತಿದ್ದರು. ಹಾಗಾಗಿ ಅವರು ಪಾಪ ಮತ್ತು ಪ್ರಾಯಶ್ಚಿತ್ತದ ಮಾತನಾಡುತ್ತಿದ್ದರು. ಆದರೆ ಅಂಬೇಡ್ಕರ್ ಅವರ ಪ್ರಕಾರ ಅಸ್ಪೃಶ್ಯತೆಯು ಅಸ್ಪೃಶ್ಯನ ದೇಹದ ಮೇಲೆ ಉಳಿದಿರುವ ಒಂದು ಕಳಂಕ. ಅವರು ಗಾಂಧಿ ಚೌಕಟ್ಟಿನ ಒಳಗೆ ತಮ್ಮ ಸಂಕಷ್ಟದ ವಿರುದ್ಧ ಹೇಗೆ ಹೋರಾಡಬೇಕು? ಅವರು ಸತ್ಯಾಗ್ರಹ ಮಾಡಬೇಕೆಂದರೂ ಜಾತಿ ವ್ಯವಸ್ಥೆಗೆ ಧಾರ್ಮಿಕ ಸಮ್ಮತಿ ಇದೆ ಎಂಬ ತಾತ್ವಿಕವಾದ ಭ್ರಮೆಯಲ್ಲಿರುವ, ಜಾತಿ ವ್ಯವಸ್ಥೆಯಿಂದ ಭೌತಿಕ ಲಾಭ ಪಡೆಯುತ್ತಿರುವ ಸವರ್ಣೀಯರ ಮನಸ್ಸಾಕ್ಷಿಯನ್ನು ಸತ್ಯಾಗ್ರಹವು ತಟ್ಟುವುದು ಹೇಗೆ? ಗಾಂಧಿಯವರ ಚರ್ಚೆಯು ಜಾತಿ ವ್ಯವಸ್ಥೆಯ ವಿರುದ್ಧದ, ಮುಖ್ಯವಾಗಿ ಜಾತಿ ವ್ಯವಸ್ಥೆಯಿಂದ ಅನುಕೂಲ ಪಡೆಯುತ್ತಿರುವ ಗುಂಪುಗಳ ವಿರುದ್ಧದ ಹೋರಾಟದ ವಿಷಯಕ್ಕೆ ಬೌದ್ಧಿಕ ಗಮನವನ್ನೂ ರಾಜಕೀಯ ಶಕ್ತಿಯನ್ನೂ ನೀಡುವುದಿಲ್ಲ. ಪ್ರತಿಯಾಗಿ ಗಾಂಧಿಯವರು ಸಹಕಾರ ಸಾಧ್ಯವಿರುವ ಕ್ಷೇತ್ರಗಳನ್ನು ಹುಡುಕಲು ಮತ್ತು ಜಾತಿಗಳನ್ನು ಏಕೀಕರಣಗೊಳಿಸಲು ಪ್ರಯತ್ನಿಸುತ್ತಾರೆ. ಆದ್ದರಿಂದ ಜಾತೀಯ ವಿಭಾಗಗಳನ್ನು ಒಂದು ವಿಶ್ಲೇಷಣೆಯ ಮಟ್ಟದಲ್ಲಾದರೂ ಗುರುತಿಸಲು ನಿರಾಕರಿಸುತ್ತಾರೆ.

ಸಮಾಜದ ಒಂದು ವರ್ಗವು ಮತ್ತೊಂದು ವರ್ಗವನ್ನು ನ್ಯಾಯಯುತವಾಗಿ ನಡೆಸಿಕೊಳ್ಳುತ್ತಿಲ್ಲ ಎಂಬುದರ ಅರಿವು ಗಾಂಧಿಯವರಿಗೆ ಇತ್ತು. ಸಮಾಜವು ಒಡೆದಿರುವುದು ಅನುಭವದ ಮಟ್ಟದಲ್ಲಿ ತಿಳಿದಿದ್ದರೂ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ನೀಡಿ ಅವರಿಗೊಂದು ಪ್ರತ್ಯೇಕ ರಾಜಕೀಯ ಅಸ್ಮಿತೆಯನ್ನು ನೀಡಲು ಗಾಂಧೀಜಿ ನಿರಾಕರಿಸಿದರು. 'ಜಾತಿಗಳಿಗೆ ಮೀಸಲಾತಿ'ಯನ್ನು ನೀಡುವುದರ ಬಗ್ಗೆ ಅವರಿಗೆ ಸಮ್ಮತಿಯಿತ್ತು. ಆದರೆ ಮೀಸಲಾತಿಯ ಮೂಲಕ ಚುನಾಯಿತರಾದವರ ಪ್ರಾತಿನಿಧಿಕ ಲಕ್ಷಣವು ಮತೀಯವಾಗಿರಬಾರದು, ಅಂದರೆ ಮೀಸಲು ಕ್ಷೇತ್ರಗಳಿಂದ ಚುನಾಯಿಸಲ್ಪಟ್ಟವರು ಅಸ್ಪೃಶ್ಯರನ್ನು ಮಾತ್ರ ಪ್ರತಿನಿಧಿಸದೆ ಸಾಮಾನ್ಯ ಮತದಾರರೆಲ್ಲರನ್ನೂ ಪ್ರತಿನಿಧಿಸುವಂತಿರಬೇಕು ಎಂಬುದು ಅವರ ನಿಲುವಾಗಿತ್ತು. ಜಾತಿಯ ವಿರುದ್ಧ ಸತ್ಯಾಗ್ರಹವನ್ನು ಸಂಘಟಿಸುವಲ್ಲಿ ಅವರು ತೋರಿದ ಸಾಪೇಕ್ಷ ಅನಾದರವು ಬಹುಶಃ ಸಾಮಾಜಿಕ ವಿಘಟನೆಯ ರಾಜಕೀಯ ಸ್ವರೂಪವನ್ನು ಅವರು ಗುರುತಿಸದೇ ಇದ್ದುದರಿಂದ ಬಂದಿರಬೇಕು.

ಅಸ್ಪೃಶ್ಯರನ್ನು ಅವರು ಹರಿಜನರೆಂದು ಕರೆದರೂ ಹಿಂದೂ ಸಮಾಜದಲ್ಲಿರುವ ಅನ್ಯಾಯದ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಜಾತ್ಯಾಧಾರಿತ ವಿಭಾಗಗಳನ್ನು, ವಿಶ್ಲೇಷಣೆಗೆ ಆಧಾರವಾಗಿ ಒದಗಬಹುದು ಎಂಬುದನ್ನು ಗುರುತಿಸಲು ಗಾಂಧಿ ನಿರಾಕರಿಸಿದರು. ಅಸ್ಪೃಶ್ಯರು ಮತ್ತು ಸವರ್ಣೀಯ ಹಿಂದೂಗಳ ನಡುವೆ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸುವುದಕ್ಕಾಗಿ ಅಂಬೇಡ್ಕರ್ ಅವರು ಸವರ್ಣ, ಮತ್ತು ಆದಿವಾಸಿಗಳು, ಮೂಲನಿವಾಸಿಗಳು ಮುಂತಾದವರನ್ನು ಒಳಗೊಳ್ಳುವ ಅವರ್ಣ ಎಂಬ ವರ್ಗಗಳನ್ನು ಬಳಸುವ ಸಾಧ್ಯತೆಯನ್ನು ಸೂಚಿಸಿದರು. ಈ ವರ್ಗೀಕರಣದ ಹಿಂದಿರುವ ತರ್ಕವೆಂದರೆ ಜಾತಿಗ್ರಸ್ತ ಸಮಾಜದಲ್ಲಿರುವ ಮುಖ್ಯ ವಿರೋಧಾಭಾಸವನ್ನು ವರ್ಣ ಅಥವಾ ದ್ವಿಜ ಸ್ಥಾನಗಳ ಮೂಲಕ ಗುರುತಿಸುವುದು. ಗಾಂಧಿಯವರು ಜಾತಿಯ ಅನುಭವದ ವಾಸ್ತವವನ್ನು ಒಪ್ಪಿಕೊಳ್ಳಲು ಸಿದ್ಧರಿದ್ದರೂ ತಾತ್ವಿಕ ನೆಲೆಯಲ್ಲಿ ಜಾತಿವಿರೋಧಿ ಹೋರಾಟದಲ್ಲಿ ಇರುವ ವಾಸ್ತವಾಂಶವನ್ನು ಒಪ್ಪಲು ಸಿದ್ಧರಿರಲಿಲ್ಲ. ಆದ್ದರಿಂದಲೇ ಅವರು ಅಸ್ಪೃಶ್ಯರನ್ನು ಹಿಂದೂ ತೆಕ್ಕೆಯೊಳಗೇ ಗುರುತಿಸ ಬಯಸುತ್ತಿದ್ದುದು.

ವರ್ಣಭೇದ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಗಳ ಮೂಲಕ, ಹೋರಾಟಗಳ ಜೊತೆಗೇ ಗಾಂಧೀಜಿಯವರ ಚಿಂತನೆಗಳು ವಿಕಾಸವಾದವು. ಈ ಹೋರಾಟಗಳು ಅವರಿಗೆ ಪಾಶ್ಚಿಮಾತ್ಯ ಸಮಾಜದ ಕೇಡುಗಳನ್ನು ಪರಿಚಯಿಸಿದವು. ಆದರೂ ಗಾಂಧಿಯವರು ಪಶ್ಚಿಮ ವಿರೋಧೀ ರಾಷ್ಟ್ರೀಯತೆಯನ್ನು ಹುಟ್ಟುಹಾಕುವ ಆವೇಶಕ್ಕೆ ಸಿಲುಕಿಕೊಳ್ಳಲಿಲ್ಲ.

ಆಧುನಿಕತೆ: ಗಾಂಧಿ-ಅಂಬೇಡ್ಕರ್‌ರ ಪರಸ್ಪರ ಭಿನ್ನತೆ

ಪಶ್ಚಿಮದ ಸಂಕಷ್ಟ ಇರುವುದು ಅಲ್ಲಿನ ಉತ್ಪಾದನಾ ಪ್ರಕ್ರಿಯೆಯಲ್ಲಿ ಎಂಬುದು ಗಾಂಧಿಯವರಿಗೆ ಅರ್ಥವಾಗಿತ್ತು. ಈ ಉತ್ಪಾದನಾ ಪ್ರಕ್ರಿಯೆ ಸರಕೀಕರಣಕ್ಕೆ(commodification) ದಾರಿಮಾಡುವ ಮೂಲಕ ಮಾನವನ ಅವನತಿಗೆ ಕಾರಣವಾಯಿತು. ಹಾಗಾಗಿ ಗಾಂಧಿಯವರು ತಮ್ಮ ಗಮನವನ್ನು ಆಧುನಿಕ ಜೀವನಶೈಲಿ ಮತ್ತು ಪೊಳ್ಳು ಭೌತವಾದವನ್ನು ಕೃತಕವಾಗಿ ಸೃಷ್ಟಿಸುವುದರ ವಿರುದ್ಧ ಹರಿಸಿದರು. ಮನುಷ್ಯನನ್ನು ಉತ್ಪಾದಕನ ಸ್ಥಿತಿಯಿಂದ ಬಳಕೆದಾರನ ಸ್ಥಿತಿಗೆ ರೂಪಾಂತರಿಸಿದ್ದು ಮಾನವ ಸಮಾಜದ ಅವನತಿಯ ದಿಕ್ಕಿನಲ್ಲಿ ಮೊದಲ ಹೆಜ್ಜೆ.

ಈ ಅರ್ಥದಲ್ಲಿ ಗಾಂಧಿಯವರ ಚರ್ಚೆಯನ್ನು ಬಂಡವಾಳಶಾಹಿಯ ಸಮಸ್ಯೆಯ ಪರಿವೇಶದಲ್ಲಿ ಇರಿಸಬಹುದು. ಅವರು ಬಂಡವಾಳಶಾಹಿಯನ್ನು ನೇರವಾಗಿ ಎಂದೂ ಖಂಡಿಸದಿದ್ದರೂ ಅದರ ವಿರುದ್ಧವಾಗಿದ್ದುದಂತೂ ನಿಜ. ಆಧುನಿಕ ಉತ್ಪಾದನಾ ಪ್ರಕ್ರಿಯೆಯ ಶೋಷಕ ಪ್ರವೃತ್ತಿ, ಬಳಕೆದಾರಿಕೆಯ ಅಮಾನವೀಕರಣ ಪರಿಣಾಮಗಳು ಮುಂತಾದುವನ್ನು ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ವಿಶ್ಲೇಷಣೆ ಎಂದು ಪರಿಗಣಿಸದಿದ್ದಲ್ಲಿ ಅವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಗಾಂಧಿಯವರ ಸರಳಜೀವನ ಮತ್ತು ಸ್ವದೇಶೀ ಮುಂತಾದುವುಗಳನ್ನು ಅಸೂಕ್ಷ್ಮ ಭೌತತನದ(materiality) ಬಂಡವಾಳಶಾಹಿಯು ಉತ್ತೇಜಿಸುವ ಪರಾವಲಂಬನೆಯ ವಿರುದ್ಧದ ಅಂಶಗಳು ಎಂಬಂತೆ ನೋಡಬೇಕು. ಈ ಅರ್ಥದಲ್ಲಿ ಸ್ವದೇಶಿಯು ಭೌತಿಕ ಅಭಿವೃದ್ಧಿಯ ವ್ಯಾಪ್ತಿಯನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುತ್ತದೆ ಮತ್ತು ಅಭಿವೃದ್ಧಿಯ ಸಾಧನವಾಗಿ ಬಂಡವಾಳಶಾಹಿಯನ್ನು ತಿರಸ್ಕರಿಸುತ್ತದೆ. ಗಾಂಧೀಜಿಯವರು ಆಧುನಿಕ ನಾಗರೀಕತೆಗೆ ವಿರುದ್ಧವಾಗಿರಲಿಲ್ಲ, ಅವರ ವಿರೋಧವಿದ್ದುದು ಬಂಡವಾಳವನ್ನು ಆಧರಿಸಿದ ಸಾಮಾಜಿಕ ವ್ಯವಸ್ಥೆಯ ಬಗೆಗೆ.

ಬಂಡವಾಳಶಾಹಿ ಮತ್ತು ಆಧುನಿಕ ನಾಗರೀಕತೆಗಳ ವಿಚಾರಗಳಲ್ಲಿ ಅಂಬೇಡ್ಕರ್ ಅವರ ನಿಲುವು ಭಿನ್ನವಾಗಿತ್ತು. ಮೊದಲನೆಯದಾಗಿ ತಮ್ಮ ರಾಜಕೀಯ ಜೀವನದುದ್ದಕ್ಕೂ ಅವರು ತಮ್ಮ ಆರ್ಥಿಕ ಜ್ಞಾನವನ್ನು ರಾಜಕೀಯ ಕಾರ್ಯಸೂಚಿಯಲ್ಲಿ ಬಳಸಲಿಲ್ಲ. ಎರಡನೆಯದಾಗಿ ಅವರ ಪ್ರಾರಂಭಿಕ ಆರ್ಥಿಕ ಸಿದ್ಧಾಂತವು ಅವರ ಕಾಲದಲ್ಲಿ ಪ್ರಚಲಿತವಿದ್ದ ಆರ್ಥಿಕ ತಿಳುವಳಿಕೆಗಿಂತ ಭಿನ್ನವಾಗಿರಲಿಲ್ಲ.

ಜಾತಿ ವ್ಯವಸ್ಥೆಯು ಕಾರ್ಯಾಚರಿಸುತ್ತಿದ್ದ ರೀತಿ ಮತ್ತು ಇದಕ್ಕೆ ಇದ್ದ ಸಮಾಜೋ ಧಾರ್ಮಿಕ ಸಮರ್ಥನೆಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ಅಂಬೇಡ್ಕರ್ ಅವರು ಪ್ರಯತ್ನ ಮಾಡುತ್ತಿದ್ದರು. ಅವರ ರಾಜಕೀಯ ಹೋರಾಟಗಳು ಆರ್ಥಿಕ ನೆಲೆಗಿಂತ ಭಿನ್ನವಾದ ನೆಲೆಯಲ್ಲಿ ಕೇಂದ್ರಿತವಾಗಿದ್ದವು. ಹಾಗಾಗಿ ಜಾತಿ ವ್ಯವಸ್ಥೆಯ ಆರ್ಥಿಕ ಆಯಾಮದ ಅರಿವಿದ್ದರೂ ಅವರು ಜಾತಿ ವ್ಯವಸ್ಥೆಯ ಸಾಂಸ್ಕೃತಿಕ ಧಾರ್ಮಿಕ ರಾಜಕೀಯ ಆಯಾಮಗಳ ಬಗೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಆಧುನಿಕ ಬಂಡವಾಳಶಾಹಿ ಆರ್ಥಿಕತೆಗೆ ಸಂಬಂಧಿಸಿದಂತೆ ಅಂಬೇಡ್ಕರ್ ಅವರ ಬರಹಗಳಲ್ಲಿ ಒಂದು ರೀತಿಯ ಡೋಲಾಯಮಾನ ಸ್ಥಿತಿ ಕಂಡುಬರುತ್ತದೆ. ಒಂದು ಕಡೆ ಅವರು ಕಮ್ಯೂನಿಸ್ಟರ ಅರ್ಥವ್ಯವಸ್ಥೆಯ ದೃಢತೆಯಲ್ಲಿ ನಂಬಿಕೆ ಹೊಂದಿರಲಿಲ್ಲ. ಹಾಗೆಯೇ ಅದಕ್ಕೆ ಪರ್ಯಾಯವಾಗಿ ಜಾತಿ ವ್ಯವಸ್ಥೆಗೆ ಪ್ರಾಮುಖ್ಯತೆ ಇರುವ 'ಹಳೆಯ ವ್ಯವಸ್ಥೆ'ಯ ಲಕ್ಷಣಗಳನ್ನು ವೈಭವೀಕರಿಸುವ, ಸಮರ್ಥಿಸುವ ವ್ಯವಸ್ಥೆಯ ಬಗೆಗೂ ಅವರಿಗೆ ನಂಬಿಕೆಯಿರಲಿಲ್ಲ. ಹಾಗಾಗಿ ಸ್ವಯಂಪೂರ್ಣ ಹಳ್ಳಿಗಳು, ಗುಡಿ ಕೈಗಾರಿಕೆ, ಪರಸ್ಪರ ಅವಲಂಬನೆ ಇತ್ಯಾದಿಗಳು ಪರೋಕ್ಷವಾಗಿ ಜಾತಿ ವ್ಯವಸ್ಥೆಯ ಹಿತಾಸಕ್ತಿಯನ್ನು ಪೋಷಿಸುತ್ತವೆ ಎಂಬ ಕಾರಣಕ್ಕೆ ಅವರಿಗೆ ರುಚಿಸಲಿಲ್ಲ. ಆಧುನಿಕತೆಯ ಶಕ್ತಿಗಳು ಜಾತಿವ್ಯವಸ್ಥೆಯನ್ನಾದರಿಸಿದ ಸಮಾಜದ ಬೇರುಗಳನ್ನು ಸಡಿಲಿಸಬಹುದು ಎನ್ನಿಸಿದ್ದರಿಂದ ಆಧುನಿಕತೆಯ ಕೇಡು ಅವರಿಗೆ ಮನದಟ್ಟಾಗಲಿಲ್ಲವೆನ್ನಿಸುತ್ತದೆ.

ಬಂಡವಾಳಶಾಹಿಯು ಪೊಳ್ಳು ಪ್ರಜಾತಂತ್ರವಾಗಿ ಪರಿಣಮಿಸುವುದು ಎಂಬ ಅರಿವು ಅಂಬೇಡ್ಕರ್ ಅವರಿಗೆ ಇತ್ತು. ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವಗಳಿಗೆ ಅಪಾಯ ಕೇವಲ ಬ್ರಾಹ್ಮಣವಾದದಿಂದ ಮಾತ್ರ ಇಲ್ಲ ಬಂಡವಾಳಶಾಹಿಯಿಂದಲೂ ಸಹ ಇದೆ ಎಂಬುದು ಅವರಿಗೆ ತಿಳಿದಿತ್ತು. ಒಂದು ಪರ್ಯಾಯ ಆರ್ಥಿಕ ವ್ಯವಸ್ಥೆಯನ್ನು ಹುಡುಕುವುದರಲ್ಲಿ ಅವರಿಗೆ ಆಸಕ್ತಿ ಇದ್ದರೂ ಅವರ ತುರ್ತು, ಸಾಮಾಜಿಕವೇ ಹೊರತು ಆರ್ಥಿಕ ಕ್ಷೇತ್ರವಾಗಿರಲಿಲ್ಲ.

ಸಂಪ್ರದಾಯ : ಗಾಂಧಿ-ಅಂಬೇಡ್ಕರ್ ಗ್ರಹಿಕೆಗಳು

ಗಾಂಧಿ ಮತ್ತು ಅಂಬೇಡ್ಕರ್ ಅವರುಗಳು ಸಂಪ್ರದಾಯವನ್ನು ಹೇಗೆ ಪರಿಭಾವಿಸಿದರು ಎಂಬುದು ಆಸಕ್ತಿದಾಯಕ ಸಂಗತಿ. ಗಾಂಧಿಯವರು

ಸಂಪ್ರದಾಯದೊಂದಿಗೆ ಒಂದು ಸೃಜನಾತ್ಮಕ ಸಂವಾದದಲ್ಲಿ ತೊಡಗಿ ಅದರೊಳಗಿನ ಸತ್ವದ ಅಂಶವನ್ನು ಹುಡುಕಿ ತೆಗೆದು ಅದನ್ನು ಒತ್ತಿ ಹೇಳುತ್ತಾರೆ. ಹಲವಾರು ಸಂದರ್ಭಗಳಲ್ಲಿ ಸಂಪ್ರದಾಯದ ಸಂಕೇತಗಳಿಗೆ ಹೊಸ ಅರ್ಥಗಳನ್ನು ಹುಡುಕುತ್ತಾರೆ. ಅವರು ಹೊಸದೇನನ್ನೂ ಕೇಳುತ್ತಿಲ್ಲ, ಹಳೆಯ ಸಂಪ್ರದಾಯದ ಮುಂದುವರಿಕೆಯನ್ನೇ ಬಯಸುತ್ತಿದ್ದಾರೆ ಎನ್ನುವ ಭಾವನೆ ಮೂಡಿಸುತ್ತಾರೆ. ಜನರಲ್ಲಿ ಕ್ರಾಂತಿಕಾರಕ ಸಾಮರ್ಥ್ಯವನ್ನು ಬಡಿದೆಬ್ಬಿಸುವ ಶಕ್ತಿ ಗಾಂಧಿಯವರಿಗೆ ಭಾಗಶಃ ಈ ರೀತಿಯಲ್ಲಿ, ಯಾವ ಹೊಸ ಕ್ರಾಂತಿಕಾರಿ ವಿಚಾರವನ್ನೂ ಹೇಳಿಕೊಳ್ಳದೇ ಇರುವುದರಿಂದ ಮತ್ತು ಸಂಪ್ರದಾಯದ ಮೂಲಕ ಜನಸಾಮಾನ್ಯರ ಮನಸ್ಸಾಕ್ಷಿಯನ್ನು ಮುಟ್ಟುವ ಮೂಲಕ ಬಂದಿರುವಂತಹುದು. ಈ ಉದ್ದೇಶಕ್ಕಾಗಿ ಜನಪ್ರಿಯ ಸಾಂಪ್ರದಾಯಿಕ ಸಂಕೇತಗಳನ್ನು ಆಯ್ದುಕೊಳ್ಳುವಾಗ ಗಾಂಧಿ, ಸತ್ಯ ಮತ್ತು ನ್ಯಾಯಗಳ ಜೊತೆ ಸಂಬಂಧ ಹೊಂದಿರುವ ಸಂಕೇತಗಳನ್ನೇ ಬಳಸಿದರು. ನಮ್ಮ 'ಮಹಾನ್ ಸಂಪ್ರದಾಯ'ದ ಒಬ್ಬ ವಿವರಣಕಾರನ ಸ್ಥಾನವನ್ನು ವಹಿಸಿಕೊಂಡು ಸಂಪ್ರದಾಯದ ಆಧಾರದ ಮೇಲೆ ತಮ್ಮದೇ ಆದ ಒಂದು ನೈತಿಕ ನಿಯಮಾವಳಿಗಳ ಚೌಕಟ್ಟನ್ನು ನಿರ್ಮಿಸುವ ಸ್ವಾತಂತ್ರ್ಯವನ್ನು ಅವರು ತೆಗೆದುಕೊಂಡರು.

ಮತ್ತೊಂದು ಕಡೆ ಅಂಬೇಡ್ಕರ್ ಅವರು ಶೋಷಣೆಯನ್ನು ಅರ್ಥೈಸುವ ಒಂದು ತಾತ್ವಿಕತೆಯ ಹುಡುಕಾಟದಲ್ಲಿದ್ದರು. ಸಂಪ್ರದಾಯವೆಂಬುದೇ ಈ ತಾತ್ವಿಕತೆ, ಸಂಪ್ರದಾಯದ ಬೆಂಬಲವಿಲ್ಲದೆ ಜಾತಿಯನ್ನು ಆಧರಿಸಿದ ಅನ್ಯಾಯವು ಮುಂದುವರಿಯಲು ಸಾಧ್ಯವಿಲ್ಲ ಎಂಬುದು ಅವರ ನಂಬಿಕೆಯಾಗಿತ್ತು. ಹಿಂದೂ ಸಮಾಜದ ಸಂಪ್ರದಾಯವು ಬ್ರಾಹ್ಮಣ ಹಿತಾಸಕ್ತಿ ಪ್ರಧಾನವಾದುದಾಗಿತ್ತು. ಹಾಗಾಗಿ ಜಾತಿಯನ್ನು ಹಿಂದೂ ಸಮಾಜದ ನೀತಿಸಂಹಿತೆಯನ್ನಾಗಿ ಸ್ಥಾಪಿಸುವಲ್ಲಿ ಸಂಪ್ರದಾಯಕ್ಕೆ ಇದ್ದ ಪಾತ್ರವನ್ನು ಅವರು ನಿರ್ಲಕ್ಷಿಸುವಂತಿರಲಿಲ್ಲ. ಹತ್ತೊಂಭತ್ತನೆಯ ಶತಮಾನದುದ್ದಕ್ಕೂ ಸುಧಾರಣೆಗಳನ್ನು ತರುವ ಪ್ರಯತ್ನಗಳು ನಡೆದಾಗಲೆಲ್ಲಾ ಅವಕ್ಕೆ ಅಡ್ಡಿಯುಂಟುಮಾಡಿದ್ದು ನಮ್ಮ ಸಂಪ್ರದಾಯದ ಹೆಸರಿನಲ್ಲೇ. ಬಹುಶಃ ಸಂಪ್ರದಾಯಗಳಿಗಿಂತ ಸಂಪ್ರದಾಯಗಳನ್ನು ಎತ್ತಿ ಹಿಡಿಯಲು ಪ್ರಯತ್ನಿಸಿದ ಶಕ್ತಿಗಳೇ, ಅಂಬೇಡ್ಕರ್ ಅವರು ಅದರ ಟೀಕಾಕಾರರಾಗುವಂತೆ ಮಾಡಿರಬೇಕು. ಅವರು ಎಲ್ಲ ಸಂಪ್ರದಾಯಗಳನ್ನೂ ತಿರಸ್ಕರಿಸಲಿಲ್ಲ, ಹಾಗಿದ್ದರೆ ಅವರು ಅದೇ ಸಂಪ್ರದಾಯದಲ್ಲಿ ಧಮ್ಮ ಮಾರ್ಗವನ್ನು ಹುಡುಕಲು ಪ್ರಯತ್ನಿಸುವುದು ಹೇಗೆ ಸಾಧ್ಯವಿತ್ತು? ವಿಭಿನ್ನ ಪಂಥಗಳ ರೂಪದಲ್ಲಿರುವ ವಿಮೋಚಕ ಸಂಪ್ರದಾಯಗಳಿಗೂ ಅವರು ವಿರುದ್ಧವಾಗಿರಲಿಲ್ಲ. ಅವರ ದೂರು ಇದ್ದದ್ದೇ ಸಾಂಪ್ರದಾಯಿಕ ಚೌಕಟ್ಟಿನ ಒಳಗೆ ಒಂದು ವಿಮೋಚನೆಯ ಅವಕಾಶ ಇಲ್ಲದಿದ್ದುದರ ಬಗ್ಗೆ.

ಒಂದು ಅಸಮಾನ ಸಮಾಜದಲ್ಲಿ ಸಂಪ್ರದಾಯವು ಸದಾ ಒಂದು ದ್ವಂದ್ವಕ್ಕೆ ಸಿಲುಕಿಕೊಳ್ಳುತ್ತದೆ. ಅಸಮಾನತೆಯ ಸಮರ್ಥಕರು ಇದನ್ನು 'ಅನಾದಿ', 'ಸನಾತನ' ಎಂದೆಲ್ಲಾ ಕರೆದು, ಇದು ಸಂಪ್ರದಾಯದ ಭಾಗವೆಂದು ಬಿಂಬಿಸಲು ಪ್ರಯತ್ನಿಸುತ್ತಾರೆ. ಇದರ ವಿರೋಧಿಗಳು ಸಮಾಜದಲ್ಲಿರುವ ಪಾಪಗಳಿಗೆಲ್ಲ ಸಂಪ್ರದಾಯವೇ ಕಾರಣವೆಂದು ದೂಷಿಸುತ್ತಾರೆ. ಸಂಪ್ರದಾಯವು ಹೊಂದಿರುವ ಭಾವನಾತ್ಮಕ ಶಕ್ತಿಯನ್ನು ಗುರುತಿಸಿದ ಗಾಂಧಿಯವರು, ಅದನ್ನು ದುರಭಿಮಾನದ ವೈಭವೀಕರಣದಿಂದ ಬಿಡಿಸುವ ಉದ್ದೇಶದಿಂದ ತಮ್ಮ ಚಿಂತನೆಗೆ ತಕ್ಕ ಹಾಗೆ ಪುನರೂಪಿಸಬಯಸಿದರು. ಸಂಪ್ರದಾಯವನ್ನು ಹೀಗೆ ಪುನರೂಪಿಸುವುದಕ್ಕೂ ಕೂಡ ಒಂದು ಪ್ರಬಲ ವಿಮರ್ಶೆ ಬೇಕು. ಅಸಮಾನತೆಯನ್ನು ಮುಂದುವರಿಸುವ ಶಕ್ತಿಗಳ ಜೊತೆ ಸಂಪ್ರದಾಯವು ಶಾಮೀಲಾಗಿಬಿಡಬಹುದು ಎಂಬ ಎಚ್ಚರಿಕೆಯನ್ನು ಸದಾ ಜಾಗೃತ ಸ್ಥಿತಿಯಲ್ಲಿಡಲು ಈ ವಿಮರ್ಶೆ ಬೇಕು. ಹಲವು ಸಂದರ್ಭಗಳಲ್ಲಿ ಸಂಪ್ರದಾಯವು ಶೋಷಕ ವ್ಯವಸ್ಥೆಗೆ ಒಂದು ವಿಶ್ವಾಸಾರ್ಹತೆಯನ್ನು ತಂದುಕೊಟ್ಟುಬಿಡುತ್ತದೆ ಎಂಬುದರ ಬಗೆಗೆ ನಮ್ಮ ಸಂವೇದಯನ್ನು ಸೂಕ್ಷ್ಮಗೊಳಿಸಲೂ ಕೂಡ ಸತತ ವಿಮರ್ಶೆ ಬೇಕು. ಅಸಮಾನತೆಯ ಸಮರ್ಥಕರು ಸಂಪ್ರದಾಯದ ಕೊಡೆಯ ಅಡಿಯಲ್ಲಿ ನಿರಾತಂಕವಾಗಿ ಇರುತ್ತಾರೆ. ಹಾಗಾಗಿ ಸಂಪ್ರದಾಯವನ್ನು ಪುನರೂಪಿಸಿಕೊಂಡು, ಅದನ್ನು ಒಂದು ನ್ಯಾಯಯುತ ಸಮಾಜ ನಿರ್ಮಾಣಕ್ಕೆ ಬಳಸುವುದಕ್ಕೆ ಒಂದು ಪ್ರಬಲ ಇಚ್ಛಾಶಕ್ತಿ ಬೇಕು. ಸಂಪ್ರದಾಯದ ಬಹುಪಾಲನ್ನು ನಿರಾಕರಿಸಿ, ಐತಿಹಾಸಿಕವಾಗಿ ಅದು ಇದ್ದದ್ದಕ್ಕಿಂತ ಭಿನ್ನವಾದ ಒಂದು ನೆಲೆಯಲ್ಲಿ ಅದನ್ನು ಸ್ಥಾಪಿಸುವುದಕ್ಕೆ ಈ ಇಚ್ಛಾಶಕ್ತಿಯ ಅಗತ್ಯವಿದೆ. ಅಂಬೇಡ್ಕರ್ ಅವರ ವಿಮರ್ಶಾತ್ಮಕ ಮೌಲ್ಯಮಾಪನವು ಸಂಪ್ರದಾಯವನ್ನು ಪುನರೂಪಿಸಿಕೊಳ್ಳುವ ಗಾಂಧಿಯವರ ಪ್ರಯತ್ನಕ್ಕೆ ಒಂದು ಪ್ರತಿವಾದವನ್ನು ಒದಗಿಸುತ್ತದೆ. ಗಾಂಧೀಜಿಯವರ ಯೋಜನೆಯಾದರೂ ಕೂಡ ಎಲ್ಲ ಸಂಪ್ರದಾಯವನ್ನೂ ವಿಮರ್ಶೆಯಿಲ್ಲದೆ ಪುನರೂಪಿಸುವುದಲ್ಲ.

ಗಾಂಧಿ-ಅಂಬೇಡ್ಕರ್: ಭಿನ್ನ ಸಂಕಥನಗಳು

ಒಂದು ಸಾಮಾನ್ಯ ಅರ್ಥದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ನ್ಯಾಯ ಮತ್ತು ಭ್ರಾತೃತ್ವಗಳನ್ನು ಆಧರಿಸಿದ ಒಂದು ಸಮುದಾಯವನ್ನು ಕಲ್ಪಿಸಿಕೊಂಡರು. ಗಾಂಧಿಯವರ ಸಂಕಥನಗಳು, ಸಮುದಾಯದ ಅಂಶಗಳನ್ನು ಪ್ರೀತಿ, ಅಹಿಂಸೆ, ಮಾನವಜೀವನದ ಘನತೆ, ದೈಹಿಕ ಶ್ರಮಕ್ಕೆ ಮನ್ನಣೆ ಮತ್ತು ದುರಾಸೆಯನ್ನು ನಿರಾಕರಿಸುವ ಶೋಷಣಾರಹಿತ ಉತ್ಪಾದನಾ ವಿಧಾನ ಮುಂತಾದುವುಗಳ ರೂಪದಲ್ಲಿ ಗುರುತಿಸಬಯಸುತ್ತದೆ. ಅಂಬೇಡ್ಕರ್ ಅವರ ಸಂಕಥನವು ಹಿಂದೂ ಸಮಾಜದ ವಿಮರ್ಶೆಯೊಂದಿಗೆ, ಭಾರತದ ಸಾಮಾಜಿಕ ವಾಸ್ತವವನ್ನು ಟೀಕಿಸುವ ಮೂಲಕ ಪ್ರಾರಂಭವಾಗುತ್ತದೆ. ಸಹಜವಾಗಿಯೇ ಅದು ಹಿಂದೂ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ಆದರ್ಶಗಳು ಮತ್ತು ಹಿಂದೂ ಸಂಪ್ರದಾಯಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಈ ವಿಮರ್ಶೆಯನ್ನು ಒಂದು ಸಾಮುದಾಯಿಕ ಕಾಣ್ಕೆಯ ನೆಲೆಯಲ್ಲಿ ಸ್ಥಾಪಿಸಲು ಅದು ಬಯಸುತ್ತದೆ. ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವಗಳು ಅಂಬೇಡ್ಕರ್ ಅವರನ್ನು ಸದಾ ಕೈಬೀಸಿ ಕರೆಯುತ್ತಿದ್ದರೂ ಅಂತಿಮವಾಗಿ ಅವರು ಸಮಾಜವಾದ ಮತ್ತು ಉದಾರವಾದಗಳನ್ನು ದಾಟಿ ಧಮ್ಮ ಪರಿಕಲ್ಪನೆಯ ಕಡೆ ಸಾಗಿದರು.

ತಮ್ಮ ಸಂಕಥನಗಳ ರಚನೆಯಲ್ಲಿ ಭಿನ್ನತೆ ಇದ್ದಾಗಲೂ ಗಾಂಧಿ ಮತ್ತು ಅಂಬೇಡ್ಕರ್ ಅವರುಗಳು ಹಂಚಿಕೊಳ್ಳುತ್ತಿದ್ದ ಕಾಣ್ಕೆಗಳಲ್ಲಿ ಸಾಮ್ಯವಿದೆ. ಸಾಮಾಜಿಕ ಬದಲಾವಣೆಯು ಸಾಮಾಜಿಕ ಚಟುವಟಿಕೆಗಳ ಮೂಲಕ ಮಾತ್ರ ಬರುವುದೆಂಬುದನ್ನು ಇಬ್ಬರೂ ನಂಬಿದ್ದರು. ಹಾಗಾಗಿ ಅವರು ಅನ್ಯಾಯದ ವಿರುದ್ಧ ಜನರನ್ನು ಒಂದುಗೂಡಿಸುವ ಪ್ರಯತ್ನ ಮಾಡಿದರು. ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಕಲ್ಪಿಸಿಕೊಂಡ ಸಾಮಾಜಿಕ ಚಟುವಟಿಕೆಗಳು ಪ್ರಜಾತಾಂತ್ರಿಕವಾಗಿ ಜನಪ್ರಿಯ ಹೋರಾಟಗಳಾಗಿದ್ದವು. ಹಲವು ಸಲ ಗಾಂಧಿಯವರು ಹೊಂದಾಣಿಕೆಯನ್ನು ಬೆಂಬಲಿಸಿ ಸಂಘರ್ಷವನ್ನು ತಪ್ಪಿಸುತ್ತಿದ್ದಂತೆ ತೋರುತ್ತಿತ್ತು. ಅಂಬೇಡ್ಕರ್ ಅವರನ್ನೂ ಹಲವಾರು ಜನ ಘರ್ಷಣಾರಹಿತ ರಾಜಕಾರಣದ ಬೆಂಬಲಿಗರು ಎಂದು ಪರಿಗಣಿಸುತ್ತಾರೆ. ಅದೇನೇ ಆದರೂ ಗಾಂಧಿ ಮತ್ತು ಅಂಬೇಡ್ಕರ್ ಅವರುಗಳು ಜನಪ್ರಿಯ ಹೋರಾಟಗಳನ್ನು ನಡೆಸಿದರು. ಅವರುಗಳು ಹೋರಾಟಗಳನ್ನು ಅಗತ್ಯ ಎಂದೂ ಅನುಭವವನ್ನು ಸಮೃದ್ಧಗೊಳಿಸುವುದೆಂದೂ ಪರಿಗಣಿಸುತ್ತಿದ್ದರು. ಜನಸಾಮಾನ್ಯರ ಪಾಲ್ಗೊಳ್ಳುವಿಕೆ ಇಲ್ಲದೆ, ಹೋರಾಟವಿಲ್ಲದೆ, ಅನ್ಯಾಯವು ನಿವಾರಣೆಯಾಗುವುದನ್ನು ಅವರು ಕಲ್ಪಿಸಿಕೊಳ್ಳಲಿಲ್ಲ. ಜೊತೆಗೆ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರಿಗೂ ಅಹಿಂಸೆಯ ಮೌಲ್ಯವನ್ನು ಒಪ್ಪಿಕೊಳ್ಳುವುದು ಕಷ್ಟವೇ ಆಗಿರಲಿಲ್ಲ.

ಗಾಂಧಿ ಮತ್ತು ಅಂಬೇಡ್ಕರ್ ಅವರುಗಳ ಸಂಕಥನಗಳು ಮಾನವ ಜೀವನದ ಭೌತಿಕತೆಯನ್ನು(materiality) ಗೌರವಿಸಿದವು. ಭೌತಿಕ ಅಗತ್ಯಗಳ ಪೂರೈಕೆ ಮತ್ತು ಒಂದು ಸ್ಥಿರವಾದ ಭೌತಿಕ ಜೀವನವು ಮಾನವ ಚಟುವಟಿಕೆಯ ನೆಲೆ ಎಂದು ಅವರುಗಳು ಪರಿಗಣಿಸಿದ್ದರು. ನೈತಿಕತೆಯನ್ನು ಕುರಿತಂತೆ ಈ ಇಬ್ಬರ ದೃಷ್ಟಿಕೋನದಲ್ಲೂ ಎದ್ದು ಕಾಣುವ ಹೋಲಿಕೆ ಇದೆ. ಭೌತಿಕ ಸಾಮಾಜಿಕ ಜೀವನಗಳನ್ನು ಸಮನ್ವಯಗೊಳಿಸಲು ನೈತಿಕ ಮೌಲ್ಯಗಳು ನಿರಂತರವೂ ಅಗತ್ಯವೂ ಆಗಿವೆ ಎಂಬುದನ್ನು ಇಬ್ಬರೂ ಒಪ್ಪಿದ್ದರು. ಧರ್ಮವನ್ನೂ, ಧರ್ಮ ಗ್ರಂಥಗಳನ್ನೂ ಆತ್ಮಸಾಕ್ಷಿ ಮತ್ತು ನೈತಿಕತೆಯ ಬೆಳಕಿನಲ್ಲಿ ಅರ್ಥಮಾಡಿಕೊಳ್ಳಬೇಕೆಂದು ಇಬ್ಬರೂ ಪ್ರತಿಪಾದಿಸಿದರು. ಧರ್ಮ ಗ್ರಂಥಗಳಲ್ಲಿ ವೈರುಧ್ಯಗಳು ಕಂಡುಬಂದಾಗ ಆತ್ಮಸಾಕ್ಷಿಯು ನಮ್ಮನ್ನು ಮುನ್ನಡೆಸಬೇಕೆಂದು ಇಬ್ಬರೂ ಪ್ರತಿಪಾದಿಸಿದರು. ಈ ಅರ್ಥದಲ್ಲಿ ಅವರು ಧರ್ಮಗ್ರಂಥಗಳ ಬಗ್ಗೆ ಮಾತ್ರ ಸಂದೇಹವಾದಿಗಳಾಗಿರದೆ ಪುರೋಹಿತ ವರ್ಗವು ಧರ್ಮಗ್ರಂಥಗಳನ್ನು ವ್ಯಾಖ್ಯಾನಿಸುವ ವಿಚಾರದಲ್ಲೂ ಸಹ ಸಂದೇಹವಾದಿಗಳೇ ಆಗಿದ್ದರು. ಗಾಂಧಿ ಮತ್ತು ಅಂಬೇಡ್ಕರ್ ಅವರುಗಳು ಧರ್ಮವನ್ನು ಆಧ್ಯಾತ್ಮಿಕ ನೆಲೆಯಿಂದ ಹೊರತೆಗೆದು ಅದನ್ನು ಸತ್ಯ, ಅನುಕಂಪ, ಪ್ರೀತಿ, ಆತ್ಮಸಾಕ್ಷಿ, ಸಾಮಾಜಿಕ ಜವಾಬ್ದಾರಿ ಮತ್ತು ಉನ್ನತ ನೈತಿಕ ಹೊಣೆ ಮುಂತಾದ ಜಾತ್ಯತೀತತೆಯ ನೆಲೆಯಲ್ಲಿ ಸ್ಥಾಪಿಸಿದರು. ಈ ನೆಲೆಯಲ್ಲಿ ಅರ್ಥ ಮಾಡಿಕೊಂಡಾಗ ಗಾಂಧಿಯವರ ಸನಾತನ ಧರ್ಮ ಮತ್ತು ಅಂಬೇಡ್ಕರ್ ಅವರ ಧಮ್ಮಗಳು, ವ್ಯಕ್ತಿಗಳು ಖಾಸಗಿಯಾಗಿ ಉತ್ತಮ ಜೀವನವನ್ನು ಅರಸುವುದಕ್ಕೆ ಮಿತಿಗೊಳ್ಳದೆ, ಸಾಮಾಜಿಕ ಕ್ರಿಯಾಶೀಲತೆಗೆ ಒಂದು ಚೌಕಟ್ಟಾಗಿ ಕೆಲಸ ಮಾಡುತ್ತವೆ. ಧರ್ಮವು ಧರ್ಮನಿರಪೇಕ್ಷವೂ ಮತ್ತು 'ಸಾರ್ವಜನಿಕ ವಲಯದ'ಒಂದು ಭಾಗವೂ ಆಗುತ್ತದೆ. ತಾವು ಧಾರ್ಮಿಕರು ಎಂದು ಹೇಳಿಕೊಂಡ ಜನ ಜಪ ಮಾಡುತ್ತಾ ಕುಳಿತಿದ್ದಾಗ, ಗಾಂಧಿ ಮತ್ತು ಅಂಬೇಡ್ಕರ್ ಅವರುಗಳು ಸಾಮಾನ್ಯ ಜನರ ಧಾರ್ಮಿಕತೆಯನ್ನು ಸಾಮಾಜಿಕ ಬದಲಾವಣೆಯ ಶಕ್ತಿಯಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದರು.

ಗಾಂಧಿವಾದದ ಸೀಮಿತ ವ್ಯಾಖ್ಯಾನ


ಸತ್ಯ ಮತ್ತು ಅಹಿಂಸೆಗಾಗಿ ನಡೆಯುವ ಹೋರಾಟ ಜಾತಿ ಹೋರಾಟವನ್ನೂ ಒಳಗೊಳ್ಳಬೇಕು. ಏಕೆಂದರೆ, ಜಾತಿ ಎಂದರೇ ಹಿಂಸೆ ಮತ್ತು ಅನ್ಯಾಯದ ರಚನೆ. ಗಾಂಧಿಯವರ ಪಶ್ಚಿಮದ ಸೈತಾನಿ ಸಂಸ್ಕೃತಿಯ ತಿರಸ್ಕಾರವು ಗಾಂಧಿವಾದದ ಜಾತಿ ಆಧಾರಿತ ಅನ್ಯಾಯದ ತಿರಸ್ಕಾರವೂ ಆಗಬಲ್ಲದು. ತನ್ನದೇ ಆದ ಒಂದು ಸಮಾಜದ ಒಳಗೆ ಇರುವ ಕೆಡುಕಿನ ಶಕ್ತಿಗಳ ವಿರುದ್ಧ ಆತ್ಮಬಲವನ್ನು ಬಳಸುವುದನ್ನು ಗಾಂಧಿ

ತಡೆಯುವುದಿಲ್ಲ. ಸಮಕಾಲೀನ ಗಾಂಧೀವಾದವು ಜಾತಿ ಹೋರಾಟದಿಂದ ದೂರ ಉಳಿದರೆ ಅದು ಗಾಂಧಿಯವರ ಸಂಕಥನದ ಆತ್ಮವನ್ನೇ ಕಳೆದುಕೊಂಡ ಹಾಗೆ. ಗಾಂಧಿಯವರನ್ನು ಹೀಗೆ ಸೀಮಿತ ರೀತಿಯಲ್ಲಿ ವ್ಯಾಖ್ಯಾನಿಸುವುದನ್ನು ಒಂದು ಸೃಜನಾತ್ಮಕ ವ್ಯಾಖ್ಯಾನದ ಮೂಲಕ ನಿರಾಕರಿಸಬೇಕಾಗುತ್ತದೆ. ಶೂದ್ರ ಅತಿಶೂದ್ರ ಮುಂತಾದ ವರ್ಗಗಳನ್ನು ಗುರುತಿಸದೇ ಇರುವುದು ಗಾಂಧಿವಾದದ ತಿರುಳಾಗುವುದಿಲ್ಲ. ವಾಸ್ತವದಲ್ಲಿ 'ದರಿದ್ರನಾರಾಯಣ' ಎಂಬ ಪದದ ಬಳಕೆಯೇ ಸಾಮಾಜಿಕ ವಾಸ್ತವವನ್ನು ಶೋಷಣಾ ಪ್ರಧಾನ ಸಂಬಂಧಗಳ ಆಧಾರದಲ್ಲೇ ಅರ್ಥಮಾಡಿಕೊಳ್ಳಲು ಇರುವ ಸಮ್ಮತಿಯನ್ನು ಮುನ್ನಿರೀಕ್ಷಿಸುತ್ತದೆ (pre-suppose). ಹಾಗಾಗಿ ಜಾತಿಯ ಆಧಾರದಲ್ಲಿ ಸಾಮಾಜಿಕ ಶಕ್ತಿಗಳ ರಾಜಕೀಯ ಚಿತ್ರಣವನ್ನು ಗಾಂಧಿವಾದಿ ಸಂವಾದದಲ್ಲಿ ಸೇರಿಸಿಕೊಳ್ಳಬಹುದು. ಅಸ್ಪೃಶ್ಯತೆಯ ಹಿಂದಿರುವ ಧಾರ್ಮಿಕ ಅಧಿಕಾರವನ್ನು ಗಾಂಧಿಯವರು ಬಲವಾಗಿ ವಿರೋಧಿಸಿದ್ದು, ಮುಂದಿನ ದಿನಗಳಲ್ಲಿ ಅಂತರ್ಜಾತಿ ವಿವಾಹಗಳ ಬಗ್ಗೆ ಅವರ ಅಭಿಪ್ರಾಯ ಬದಲಾದದ್ದು, ಪ್ರಾರಂಭಿಕ ವರ್ಷಗಳಲ್ಲಿ ಅವರು ವರ್ಣವನ್ನು ಅಸಾಂಪ್ರದಾಯಿಕ ರೀತಿಯಲ್ಲಿ ವ್ಯಾಖ್ಯಾನಿಸಿದ್ದು, ನಂತರದ ವರ್ಷಗಳಲ್ಲಿ ಅವರು ವರ್ಣ ವ್ಯವಸ್ಥೆಯ ಬಗ್ಗೆ ಆಸಕ್ತಿ ಕಳೆದುಕೊಂಡಿದ್ದು, 'ಶೂದ್ರ'ರಾಗಬೇಕು–ದೈಹಿಕ ಶ್ರಮದಲ್ಲಿ ತೊಡಗಬೇಕು ಎಂಬರ್ಥದಲ್ಲಿ–ಎಂದು ಅವರು ಪದೇ ಪದೇ ಕರೆಕೊಡುತ್ತಿದ್ದುದು, ಇವೆಲ್ಲವೂ ಜಾತಿಯ ಪ್ರಶ್ನೆಯು ಗಾಂಧಿಯವರ ಸಂವಾದದ ನ್ಯಾಯಯುತ ಕಾಳಜಿಯಾಗಬಹುದು ಎಂಬುದನ್ನು ಸೂಚಿಸುತ್ತದೆ. ಶ್ರಮದ ಘನತೆಯ ಬಗ್ಗೆ ಸತತವಾಗಿ ಮಾತನಾಡುವ ಗಾಂಧಿಯವರು ತ್ರಿವರ್ಣಿಗಳ ಬಗೆಗಾಗಲೀ ಅವರ ಪಾತ್ರದ ಬಗೆಗಾಗಲೀ ಸ್ತುತಿಸಿ ಮಾತನಾಡುವುದಿಲ್ಲ. ಅವರ ಸನಾತನ ಧರ್ಮದ ಕಲ್ಪನೆಯು ಬ್ರಾಹ್ಮಣವಾದದಿಂದ ಪ್ರಭಾವಿಸಲ್ಪಟ್ಟಿಲ್ಲ.

ಗಾಂಧಿ ಅಂಬೇಡ್ಕರ್ ಸಂಕಥನಗಳ ಸಮನ್ವಯದ ಸಾಧ್ಯತೆಗಳು

ಅದೇ ರೀತಿಯಲ್ಲಿ ಬಂಡವಾಳಶಾಹಿ ಅಥವಾ ಆಧುನಿಕತೆಯ ಬಗೆಗೆ ಅಂಬೇಡ್ಕರ್ ಅವರ ನಿಲುವನ್ನು ವಿಸ್ತರಿಸಿ ಮರುವ್ಯಾಖ್ಯಾನಿಸಬಹುದು. ಭಾರತದ ಸಂದರ್ಭದಲ್ಲಿ ಶೋಷಣೆಯ ಪ್ರಾಥಮಿಕ ಮೂಲ ಜಾತಿ ವ್ಯವಸ್ಥೆ ಎಂದು ಅವರು ಗುರುತಿಸಿದರೂ ಬಂಡವಾಳಶಾಹಿಯ ಶೋಷಕ ಗುಣವನ್ನು ಅವರು ಅಲ್ಲಗಳೆಯುವುದಿಲ್ಲ. ಸಮಾಜವಾದವನ್ನು ಅವರು ಅಂಗೀಕರಿಸಿದ್ದರು (ಸ್ವತಂತ್ರ ಲೇಬರ್ ಪಕ್ಷದ ಕಾರ್ಯಕ್ರಮದ ಪ್ರಕಾರ) ಮತ್ತು ಅವರು ನಂಬಿದ್ದ ಪ್ರಭುತ್ವ ಸಮಾಜವಾದದ(State Socialism) ಹೊರಗೆ ಅವರು ಸಂಪತ್ತಿನ ಶೇಖರಣೆ ಮತ್ತು ಶೋಷಣೆಗಳು 'ದುಃಖ'ವನ್ನು ತರುತ್ತವೆ ಎಂಬ ದೃಷ್ಟಿಯನ್ನು ತಳೆಯುವ ಪ್ರಯತ್ನ ಮಾಡಿದರು. ಧಮ್ಮದ ಬಗೆಗಿನ ಅವರ ಪರಿಕಲ್ಪನೆಯು, ಭೌತಿಕ ಸೌಖ್ಯ ಮತ್ತು ತೀರಲಾರದ ಲಾಲಸೆಗಳ ನಡುವೆ ಸ್ಪಷ್ಟ ಭಿನ್ನತೆಯನ್ನು ಅವರು ಗುರುತಿಸಿದ್ದರು ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಅವರ ಸಂವಾದದ ಒಳಗೆ ಆಧುನಿಕತೆಯ ಬಗೆಗಿನ ವಿಮರ್ಶೆಯನ್ನು ಈ ನೆಲೆಯಲ್ಲಿ ಇರಿಸಬಹುದು. ಅಂಬೇಡ್ಕರ್ ಅವರು ಸಂಪ್ರದಾಯವನ್ನು, ಸಾಂಪ್ರದಾಯಿಕ ಜೀವನ ಕ್ರಮವನ್ನು ತಿರಸ್ಕರಿಸುವುದು ಆಧುನಿಕತೆಯಂತೆ ಕಾಣುವುದು ನಿಜ. ಅಸ್ಪೃಶ್ಯರ ತತ್‌ಕ್ಷಣದ ಆಸಕ್ತಿಗಳನ್ನು ಅಂಬೇಡ್ಕರ್ ಅವರು ಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿತ್ತು ಎಂಬುದನ್ನು ನಾವು ಮರೆಯಲಾಗದು. ಹಾಗಾಗಿ ನಗರಗಳಿಗೆ ತೆರಳಿ ಎಂದು ಅವರು ಮನವಿ ಮಾಡಿದ್ದನ್ನು ಒಂದು ಆಧುನಿಕತಾವಾದಿ ಯೋಜನೆ ಎಂದು ಅರ್ಥೈಸಲಾಗದು. ಅದೇ ರೀತಿ ಗಾಂಧಿಯವರು ಗ್ರಾಮವನ್ನು ಸ್ವೀಕರಿಸಿದ್ದನ್ನು ಸಮಕಾಲೀನ ಗ್ರಾಮೀಣ ಜೀವನದ ಸಮರ್ಥನೆ ಎಂದು ತಿಳಿಯಲಾಗದು. ಅಂಬೇಡ್ಕರ್ ಅವರ ವ್ಯಾಖ್ಯಾನವನ್ನು ಅವರ ಧಮ್ಮದ ಪರಿಕಲ್ಪನೆಯಲ್ಲಿ ನೆಲೆಗೊಳಿಸುವುದು, ಗಾಂಧಿ ಮತ್ತು ಅಂಬೇಡ್ಕರ್ ಅವರುಗಳ ನಡುವೆ ಇರುವ ಅಂತರವನ್ನು ಕಡಿಮೆಮಾಡುವ ಸಾಧ್ಯತೆಯನ್ನು ಹೆಚ್ಚಿಸಬಹುದು.

ಗಾಂಧಿ ಮತ್ತು ಅಂಬೇಡ್ಕರ್ ಅವರುಗಳ ಸಂವಾದಗಳು ಪರಸ್ಪರ ವಿರುದ್ಧಗಳಲ್ಲ(antithetical). ಆದ್ದರಿಂದ ಅವುಗಳನ್ನು ಸಮಾನವಾದ ಕಾಳಜಿಗಳು ಮತ್ತು ಎರಡು ವಿಭಿನ್ನ ವಿಚಾರಗಳ ನಡುವಿನ ಒಂದು ಸಂವಾದ ಎಂಬಂತೆ ಪರಿಭಾವಿಸುವುದು ಸಾಧ್ಯ. ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ವಿಮೋಚನೆಯ(emancipation) ಪ್ರಶ್ನೆಯ ಬಗ್ಗೆ ಕಾಳಜಿ ಹೊಂದಿದ್ದರು. ಹಾಗಾಗಿ ಅವರ ಸಂವಾದದ ವ್ಯಾಪ್ತಿಯನ್ನು ಹೆಚ್ಚಿಸುವುದು ಬಹಳವೇ ಅವಶ್ಯಕವಾಗಿದೆ. ಆದರೆ ನಾವು ಈಗಾಗಲೇ ಕಂಡ ಹಾಗೆ ಈ ವಿಮೋಚನೆಯ ಯೋಜನೆಯ ನ್ಯಾಯಪರತೆಯನ್ನೇ ಪ್ರಶ್ನಿಸಲಾಗುತ್ತಿದೆ. ಇಂದಿನ ಪ್ರಧಾನ ಸಂವಾದವು ಜಾತಿಯ ಪ್ರಶ್ನೆಯನ್ನೇ ಅವಗಣನೆಮಾಡಲು ಪ್ರಯತ್ನಿಸುತ್ತಾ ಬಂಡವಳಶಾಹಿಯನ್ನು ನ್ಯಾಯಸಮ್ಮತಗೊಳಿಸಲು ಬಯಸುತ್ತಿದೆ. ಮತ್ತೊಂದು ಕಡೆ ಸಾಮಾಜಿಕ ಬದಲಾವಣೆಯ ಚಳುವಳಿಗಳು ಒಡೆದು ಹೋಗಿವೆ ಅಥವಾ ನಿಲುಗಡೆಗೊಂಡಿವೆ. ಈ ಸವಾಲನ್ನು ಎದುರಿಸಲು ಬೇಕಾದ ಸೈದ್ಧಾಂತಿಕ ಬಲವನ್ನು ನಮ್ಮ ಕಾಲದ ಎರಡು ಶ್ರೀಮಂತ ಸಂವಾದಗಳನ್ನು ಬೆಸೆಯುವ ಮೂಲಕ ಪಡೆಯಬೇಕಿದೆ.



(ಹೈದರಾಬಾದ್ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ಶಾಸ್ತ್ರದ ಪ್ರಾಧ್ಯಾಪಕರಾಗಿರುವ ಸಂಜಯ ಪಲ್ಶೀಕರ್ ಸಮಕಾಲೀನ ಪ್ರಮುಖ ಗಾಂಧಿ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ)

(ಕೃಪೆ: **ಜನತಾ,** ಏಪ್ರಿಲ್, ೨೦೧೯)

೧೪ನೇ ಪುಟದಿಂದ)

ಅರ್ಥ ಮಾಡಿಕೊಳ್ಳುವುದೇ ಮಧ್ವರ ಏಕಮೇವ ಹಂಬಲ. ಆದುದರಿಂದಲೇ ಅವರು ಜೀವತ್ರೈವಿಧ್ಯವನ್ನು ಹೇಳಿದರು. ಜೀವಗಣದಲ್ಲಿ ಮೂರು ಬಗೆಯವರು ಇದ್ದಾರೆ. ಮುಕ್ತಿಯೋಗ್ಯರು–ನಿತ್ಯ ಸಂಸಾರಿಗಳು ಮತ್ತು ತಮೋಯೋಗ್ಯರು ಎಂದು. ಹೀಗೆ ಹೇಳಿದವರಲ್ಲಿ ಮಧ್ವರು ಮೊದಲಿಗರಲ್ಲ. ಜೈನಧರ್ಮದಲ್ಲಿಯೂ ಈ ವಿಂಗಡಣೆ ಇದೆ. ಅಲ್ಲದೆ ಇದು ಮಧ್ವರ ಸ್ವತಂತ್ರ ಕಲ್ಪನೆಯೂ ಅಲ್ಲ. ಸುಪ್ರಸಿದ್ಧವಾದ ಈಶಾವಾಸ್ಯೋಪನಿಷತ್ತಿನ ಈ ಮಾತು ಗಮನಿಸಿ: 'ಅಸುರ್ಯಾನಾಮ ತೇ ಲೋಕಾಃ ಅಂಧೇನ ತಮಸಾವೃತಾಃ, ತಾನ್ ತೇ ಪ್ರೇತ್ಯ ಅಭಿಗಚ್ಛಂತಿ ಯೇ ಕೇ ಚ ಆತ್ಮಹನೋ ಜನಾಃ'




ಇದರರ್ಥ ಹೀಗೆ: 'ತಮ್ಮೊಳಗಿರುವ ಭಗವಂತನನ್ನು ತಿಳಿಯದೆ ಬದುಕಿದ ಮಂದಿ, ದೇಹ ಉರುಳಿದ ಮೇಲೆ ಕತ್ತಲೆಯ ದುಃಖಮಯವಾದ ಅಸುರರು ಹೋಗುವಂಥ ಲೋಕಗಳಿಗೆ ಸೇರಿಕೊಳ್ಳುವರು'. ಈ ಮಾತನ್ನು ವ್ಯಾಖ್ಯಾನಿಸಬೇಕಾದರೆ ನೀವು ಹೇಗೆ ವ್ಯಾಖ್ಯಾನಿಸುವುದು ಸಾಧ್ಯ? ಈ ಮಾತಿರಲಿ. ಗೀತೆಯಲ್ಲಿ ಸ್ವಯಂ ಕೃಷ್ಣನಾಡಿದ ಮಾತು – ೧೬ನೆಯ ಅಧ್ಯಾಯದಲ್ಲಿದೆ. 'ಆಂತರಿಕ ಭಾವದಲ್ಲಿ ಇಬ್ಬಗೆಯ ಜೀವರಿದ್ದಾರೆ. ದೈವೀಭಾವ ಮತ್ತು ಆಸುರೀ ಭಾವದವರು' ಎಂದು. ಸುಮಾರು ೧೦–೧೨ ಶ್ಲೋಕಗಳಲ್ಲಿ ಅಸುರೀ ಭಾವದ ಜೀವರ ನಡೆನುಡಿಗಳನ್ನು ಬಣ್ಣಿಸಿ ಕೊನೆಗೆ ಕೃಷ್ಣ ಹೀಗೆ ಹೇಳಿದ: 'ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್, ಕ್ಷಿಪಾಮಿ ಅಜಸ್ರಂ ಅಶುಭಾನ್ ಆಸುರೀಷ್ವೇವ ಯೋನಿಷು' – ಪರತತ್ತ್ವವನ್ನೇ ದ್ವೇಷಿಸುವ ಕ್ರೂರಿಗಳೂ ನೀಚರೂ ಆದ ಇಂಥ ಜೀವರನ್ನು ನಾನು ನಿರಂತರವಾಗಿ ಆಸುರೀ ಬಸಿರುಗಳಲ್ಲಿಯೇ ಕೆಡವುತ್ತೇನೆ!

ಈ ಮಾತಿನ ಮೇಲೆ ಎಷ್ಟು ವಿಧವಾಗಿಯೂ ವಾದಿಸಬಹುದು. ಆ ಮಾತು ಬೇರೆ. ಆದರೆ ಯಾರು ಎಂಥವರೋ ಅವರು ಅಂಥವರೇ ಆಗುತ್ತಾರೆ ಎನ್ನುವುದಷ್ಟೆ ಮಥಿತಾರ್ಥ. ಚೋದ್ಯವೆಂದರೆ ಕೃಷ್ಣನನ್ನು ಮೆಚ್ಚುವವರು, ಉಪನಿಷತ್ತನ್ನು ಹೊಗಳುವವರು – ಮಧ್ವರನ್ನು ಮಾತ್ರ ಈ ಕಾರಣಕ್ಕೆ ಕಟುವಾಗಿ ಟೀಕಿಸುವರು. ನಗಬೇಕಷ್ಟೆ!

ಮಧ್ವರಿಗೆ ಸರ್ವವ್ಯಾಪಿಯನ್ನು ತಿಳಿಯುವ ಹಂಬಲ!

ಸರ್ವವ್ಯಾಪಿಯನ್ನು ತಿಳಿಯುವುದೆಂದರೆ: ಸರ್ವವನ್ನೂ ಅದು ಹೇಗಿದೆಯೋ ಹಾಗೆ ಒಪ್ಪುವುದು. ಅಂದರೆ ಪ್ರಪಂಚವನ್ನು 'ಸತ್ಯ'ವೆನ್ನುವುದು.

ಸರ್ವವ್ಯಾಪಿಯನ್ನು ತಿಳಿಯುವುದೆಂದರೆ: ಪ್ರಮಾಣಗಳನ್ನು ಎಲ್ಲೆಡೆ ವಿಸ್ತರಿಸುವುದು. ಸರ್ವವ್ಯಾಪಿಯನ್ನು ತಿಳಿಯುವುದೆಂದರೆ ಸಾಧಾರಣೀಕರಣದ ಕೊನೆಯ ಹಂತವನ್ನು ಮುಟ್ಟುವುದು. ಅಂದರೆ ಅತಿಸಾಮಾನ್ಯ ಜೀವನವನ್ನು ನಡೆಸುತ್ತಲೇ ಹೀಗೆ ಸಾಮಾನ್ಯನಂತಿರುವುದು ಒಂದು ಸಾಧ್ಯತೆಯೂ ಹೌದು ಎಂದು ಅರಿಯುವುದು.



(ಚಿಂತನೆಯಲ್ಲಿ ಪರಂಪರೆ ಮತ್ತು ಪ್ರಯೋಗಶೀಲತೆಗಳ ಜಂಟಿ ಸಾಹಸ ಮಾಡಬಲ್ಲ ಪ್ರತಿಭೆಯುಳ್ಳ ಲಕ್ಷ್ಮೀಶರು ಪುತ್ತೂರಿನ ನಿವಾಸಿಗಳು)

ಮಾನವಕೇಂದ್ರಿತ ಯುಗ ಮತ್ತು ಗಾಂಧಿ-ಟ್ಯಾಗೋರರ ಪ್ರಸ್ತುತತೆ

ಇಂಗ್ಲಿಷ್ ಮೂಲ: ಸಮರ್ ಬಾಗ್ಚಿ
ಕನ್ನಡಕ್ಕೆ: ಟಿ..ಎಲ್ ರೇಖಾಂಬ

ಗಾಂಧಿ ತತ್ವವೆಂಬುದೇನಾದರೂ ಇದ್ದರೆ ಅದು, ಪಶ್ಚಿಮದ ಆಧುನಿಕ ನಾಗರೀಕತೆ ಜಗತ್ತನ್ನು ಒಂದು ಭೌತ ವಸ್ತುವೆಂಬಂತೆ ಗ್ರಹಿಸುವ ಮೂಲಕ ಅದರ ಅಧ್ಯಾತ್ಮಿಕ ಅಸ್ತಿತ್ವವನ್ನು ನಿರ್ಲಕ್ಷಿಸಿ ಅದನ್ನು ತನ್ನ ಅನುಭೋಗಕ್ಕಾಗಿ ದೊರೆತಿರುವ ಆಸ್ತಿಯೆಂದು ಪರಿಗಣಿಸುವ ಮೂಲಕ ಮನುಷ್ಯನ ಬದುಕನ್ನು 'ಅಧಾರ್ಮಿಕ' ಮಾಡಿದೆ ಎಂಬುದು. ಈ ಅರ್ಥದಲ್ಲಿ ಅವರನ್ನು ಪರಿಸರ ಮತ್ತು ಪರಿಸರವಾದ ಎಂಬ ಪರಿಕಲ್ಪನೆಗಳೇ ಇನ್ನೂ ಹುಟ್ಟಿರದ ಕಾಲಮಾನದಲ್ಲಿ ಭೂಮಿ ಮನುಷ್ಯಕುಲದ ತೊಟ್ಟಿಲಾಗಿ ನಾಶವಾಗುವ ಆತಂಕದ ಬಗ್ಗೆ ಮಾತನಾಡಿದ ಆಧುನಿಕ ಕಾಲದ ಮೊದಲ ಪರಿಸರವಾದಿ ಎನ್ನಬಹುದು. ಅವರು ಪ್ರತಿಪಾದಿಸಿದ ಜೀವನ ದೃಷ್ಟಿ ಮತ್ತು ಜೀವನ ಕ್ರಮಗಳೆರಡೂ ಈ ತತ್ವದಿಂದಲೇ ಸ್ಫೂರ್ತಿ ಹೊಂದಿದವಾಗಿದ್ದವು. ಗಾಂಧಿಯವರ ಸಮಕಾಲೀನರಾಗಿದ್ದ ವಿಶ್ವಕವಿ ರವೀಂದ್ರನಾಥ ಟ್ಯಾಗೋರರ ಕವಿ ದ್ರಷ್ಟಾರ ದೃಷ್ಟಿಯೂ ಗಾಂಧಿಯವರ ಈ ತತ್ವದೊಂದಿಗೆ ಸಮರಸವಾಗಿತ್ತು.

ಹಾಗಾಗಿ ಇಂದು 'ಅಭಿವೃದ್ಧಿ' ಎಂಬ ಹೆಸರಿನಲ್ಲಿ ನಡೆಯುತ್ತಿರುವ ಪರಿಸರ ನಾಶ ಹಾಗೂ ಅದರ ಪರಿಣಾಮವಾದ ಹವಾಮಾನ ವೈಪರೀತ್ಯ ಭೂಮಿಯ ಮೇಲಿನ ಮನುಷ್ಯ ಮಾತ್ರವಲ್ಲ, ಇಡೀ ಜೀವಜಗತ್ತಿನ ಭವಿಷ್ಯವನ್ನೇ ಸಂದಿಗ್ಧತೆಗೆ ತಲುಪಿಸಿ, ವಿಜ್ಞಾನಿಗಳು 'ಆರನೆಯ ಸಾಮೂಹಿಕ ಮಹಾವಿನಾಶ ಹತ್ತಿರ ಬರುತ್ತಿದೆ; ಅದು ಸಂಭವಿಸಿದಾಗ ಈ ಭೂಮಿಯಿಂದ ನಿರ್ನಾಮವಾಗುವ ಮೊಟ್ಟಮೊದಲ ಜೀವಿಸಂಕುಲವೆಂದರೆ, ಮನುಷ್ಯಕುಲವೇ' ಎಂದು ಹೇಳುತ್ತಿರುವ ಸಂದರ್ಭದಲ್ಲಿ ಈ ಲೇಖನ ನಮ್ಮ ತಿಳಿವನ್ನು ಮಾತ್ರವಲ್ಲ, ನಮ್ಮ ಜವಾಬ್ದಾರಿಗಳ ಅರಿವನ್ನು ಮಾಡಿಕೊಡಬಹುದು-ಸಂ.



ಭೂಮಿಯು ಇಂದು ನಿರ್ಣಾಯಕ ಪಾರಿಸರಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕೆಲ ತಿಂಗಳ ಹಿಂದೆ, ಪಶ್ಚಿಮ ಬಂಗಾಳದ ಸಮಾಜವಾದಿ ಡಾ.ಸಮಂತಾ ನಾಥ್ ಘೋಷ್ ಅವರು 'ಇಪ್ಪತ್ತೊಂದನೇ ಶತಮಾನದ ಸಮಾಜವಾದ'ದ ಬಗ್ಗೆ ಚರ್ಚೆಯೊಂದನ್ನು ಏರ್ಪಡಿಸಿದ್ದರು. ವಿಷಮಿಸುತ್ತಿರುವ ಪರಿಸರ ಬಿಕ್ಕಟ್ಟು ಮತ್ತು ಪರಿಸರ ಸಮಾಜವಾದಗಳ ಕುರಿತು ಜಗತ್ತಿನಾದ್ಯಂತ ಸಮಾಜವಾದಿಗಳು ಮತ್ತು ಮಾರ್ಕ್ಸ್‌ವಾದಿಗಳು ಈಗ ಬಹಳ ಗಂಭೀರವಾಗಿ ಚರ್ಚೆಯಲ್ಲಿ ತೊಡಗಿದ್ದಾರೆ. ಅಮೆರಿಕಾದ ಪ್ರಖ್ಯಾತ ಮಾರ್ಕ್ಸ್‌ವಾದಿ ನಿಯತಕಾಲಿಕೆಯಾದ 'Analytical monthly review'ನಲ್ಲಿ ಮಾರ್ಕ್ಸ್‌ನ ಪಾರಿಸರಿಕ ದೃಷ್ಟಿಕೋನಗಳ ಬಗೆಗೆ ಹಲವಾರು ವಿಮರ್ಶಾತ್ಮಕ ಲೇಖನಗಳು ಪ್ರಕಟವಾಗಿವೆ. ಮಾನವಕುಲವು ಅಳಿಯದೇ ಉಳಿಯಬೇಕೆಂದರೆ, ಅದು ಒಂದು ಪರಿಸರ–ಸಮಾಜವಾದೀ ಸಮಾಜಕ್ಕಾಗಿ ಎಲ್ಲ ರೀತಿಯಿಂದಲೂ ಹೋರಾಡಲೇಬೇಕಾಗುವ ಸಮಯವೀಗ ಬಂದಿದೆ.

ಇಪ್ಪತ್ತು ವರ್ಷಗಳ ಹಿಂದೆ 'ಮಾನವಕೇಂದ್ರಿತ ಯುಗ' (Anthroposcene Age) ಎಂಬ ಪದವನ್ನು ನಾವು ಕೇಳೇ ಇರಲಿಲ್ಲ. ಆಕ್ಸ್‌ಫರ್ಡ್ ನಿಘಂಟಿನಲ್ಲಿನ್ನೂ ಈ ಪದ ಕಾಣಿಸಿಕೊಂಡಿಲ್ಲ. ಆದರೆ 'ಮಾನವ ಕೇಂದ್ರಿತ ಯುಗ' ಎನ್ನುವ ಮಾತು ಪರಿಸರ ಸಂಬಂಧೀ, ಸಮಾಜವಿಜ್ಞಾನ ಸಂಬಂಧೀ ಪುಸ್ತಕಗಳಲ್ಲಿ ಮತ್ತು ನಿಯತಕಾಲಿಕೆಗಳಲ್ಲಿ ಈಗೀಗ ನಿಯಮಿತವಾಗಿ ಬಳಕೆಯಾಗುತ್ತಿದೆ. ಭೂವೈಜ್ಞಾನಿಕ ಕಾಲಮಾನದಲ್ಲಿ ಪ್ರಸ್ತಾಪಿತವಾಗಿರುವ 'ಮಾನವಕೇಂದ್ರಿತ ಯುಗ'ವು ಆರಂಭವಾಗಿರುವುದು, ಈ ಭೂಮಿಯ ಪರಿಸರ ವ್ಯವಸ್ಥೆಯ ಮೇಲೆ ಮನುಷ್ಯನು ಗುರುತರವಾದ ಪರಿಣಾಮವನ್ನು ಬೀರಲಾರಂಭಿಸಿದಾಗಿನಿಂದ. ಈ ಹೊಸಯುಗಕ್ಕೆ ಒಂದು ನಿರ್ದಿಷ್ಟವಾದ ಆರಂಭದಿನವಿಲ್ಲದಿದ್ದರೂ, ವಾತಾವರಣದಲ್ಲಿನ ಸಾಕ್ಷಿಗಳನ್ನಾಧರಿಸಿ ಪ್ರಸ್ತಾಪಿತವಾಗಿರುವುದಷ್ಟೇ ಆದರೂ, ಕೈಗಾರಿಕಾ ಕ್ರಾಂತಿ ಆರಂಭವಾದಾಗಿನಿಂದ, ಅಂದರೆ ೧೭೮೦ರಲ್ಲಿ ಸ್ಟೀಮ್ ಇಂಜಿನ್ ಕಂಡುಹಿಡಿದಾಗಿನಿಂದ ಈ ಯುಗ ಆರಂಭವಾಯಿತೆನ್ನಬಹುದು.

ಕೈಗಾರಿಕಾ ಕ್ರಾಂತಿಯ ನಂತರದ ಸಮಯವು ಬಂಡವಾಳಶಾಹಿಯ ಸುವರ್ಣಕಾಲ. ಗರಿಷ್ಠ ಲಾಭದ ದುರಾಸೆಯಿಂದಾಗಿ ಸರಕುಗಳ ಉತ್ಪಾದನೆಯಲ್ಲೂ ಕೊಳ್ಳುಬಾಕತನದ ಗ್ರಾಹಕೀಕರಣದಲ್ಲೂ ಪೈಪೋಟಿ ಶುರುವಾಯಿತು. ಸುಮಾರು ೧೮೦೦ರ ಕೈಗಾರಿಕಾ ಕ್ರಾಂತಿಯ ಹೊಸತರಲ್ಲಿ ಒಬ್ಬ ಅಮೆರಿಕನ್, ಮಾರುಕಟ್ಟೆಗೆ ಹೋದರೆ, ೧೫೦ ಚದರ ಮೀಟರ್ ವಿಸ್ತೀರ್ಣದಲ್ಲಿ ಹೆಚ್ಚೆಂದರೆ ೩೦೦ ವಸ್ತುಗಳ ಆಯ್ಕೆ ಇರುತ್ತಿತ್ತು. ಆದರೆ ಇಂದು, ೦.೧ ಮಿಲಿಯನ್ ಜನಸಂಖ್ಯೆಯ ಒಂದು ನಗರದಲ್ಲಿ ವಾಸಿಸುವ ಒಬ್ಬ ಅಮೆರಿಕನ್, ಮಾರುಕಟ್ಟೆಗೆ ಹೋದರೆ, ೧.೫ ಮಿಲಿಯನ್ ಚದರ ಮೀಟರ್ ವಿಸ್ತೀರ್ಣದಲ್ಲಿ ೧ ಮಿಲಿಯನ್ ವಸ್ತುಗಳ ಆಯ್ಕೆ ಇರುತ್ತದೆ. ಮಾರ್ಕ್ ಟ್ವೈನ್ ಹೇಳುವಂತೆ; 'ನಾಗರಿಕತೆಯೆಂದರೆ, ಅನಗತ್ಯ ಅವಶ್ಯಕತೆಗಳ ಮಿತಿಯಿಲ್ಲದ ವಿಸ್ತರಣೆ'.

ಇದು ಪ್ರಕೃತಿ ಮತ್ತು ಸಮಾಜದಲ್ಲಿ ಯುಗಾಂತರದ ಬಿಕ್ಕಟ್ಟನ್ನು ಸೃಷ್ಟಿಸಿದೆ. ಸ್ಟಾನ್‌ಫೋರ್ಡ್, ಪ್ರಿನ್ಸ್‌ಟನ್ ಮತ್ತು ಬರ್ಕ್‌ಲಿ ವಿಶ್ವವಿದ್ಯಾನಿಲಯಗಳ ವಿಜ್ಞಾನಿಗಳು ಇತ್ತೀಚೆಗೆ, 'ಆರನೆಯ ಸಾಮೂಹಿಕ ಮಹಾವಿನಾಶ ಹತ್ತಿರ ಬರುತ್ತಿದೆ; ಅದು ಸಂಭವಿಸಿದಾಗ ಈ ಭೂಮಿಯಿಂದ ನಿರ್ನಾಮವಾಗುವ ಮೊಟ್ಟಮೊದಲ ಜೀವಿಸಂಕುಲವೆಂದರೆ, ಮನುಷ್ಯಕುಲವೇ' ಎಂದು ತಿಳಿಸಿದ್ದಾರೆ. ೬೫ ಮಿಲಿಯನ್ ವರ್ಷಗಳ ಹಿಂದೆ ಐದನೇ ಸಾಮೂಹಿಕ ಮಹಾವಿನಾಶ ಸಂಭವಿಸಿದಾಗ ಇತರ ಜೀವಿಗಳೊಂದಿಗೆ ಡೈನೊಸಾರ್ ಸಂತತಿ ಅಳಿದುಹೋಯಿತು. ಆಸ್ಟ್ರೇಲಿಯಾ ನ್ಯಾಷನಲ್ ಯೂನಿವರ್ಸಿಟಿಯ ಸೂಕ್ಷ್ಮಜೀವಾಣು ವಿಜ್ಞಾನಿ ದಿವಂಗತ ಡಾ.ಫ್ರಾಂಕ್ ಫೆನ್ನರ್, ಕೆಲ ವರ್ಷಗಳ ಹಿಂದೆ, ತಾವು ಸಾಯುವ ಮೊದಲು ಹೇಳಿದ್ದು; 'ಮನುಷ್ಯಕುಲವು ಇನ್ನು ನೂರು ವರ್ಷಗಳಲ್ಲಿ ತನ್ನ ಗ್ರಾಹಕೀಕರಣ ಮತ್ತು ಜನಸಂಖ್ಯೆಯ ಹೆಚ್ಚಳಗಳಿಂದ ಅಳಿದುಹೋಗುತ್ತದೆ'. ಅವರು ಪ್ರಸ್ತಾಪಿಸಿರುವುದರಲ್ಲಿ ಮೊದಲ ಅಂಶವನ್ನು ನಾನು ಒಪ್ಪುತ್ತೇನಾದರೂ, ಇವತ್ತಿನ ಪರಿಸರ ಬಿಕ್ಕಟ್ಟಿಗೆ ಜನಸಂಖ್ಯೆಯ ಹೆಚ್ಚಳವೂ ಮೂಲ ಕಾರಣ ಎಂಬುದನ್ನು ಒಪ್ಪುವುದಿಲ್ಲ. ಏಕೆಂದರೆ, ಜಗತ್ತಿನ ಬಹುಪಾಲು ಜನಸಮೂಹ ವಾಸಿಸುವ ಮೂರನೆಯ ಜಗತ್ತು ಅಷ್ಟೊಂದು ಸರಕನ್ನು ಬಳಸುವುದಿಲ್ಲ. ಜಗತ್ತಿನಾದ್ಯಂತ ಮುಂದುವರಿದ ದೇಶಗಳಲ್ಲಿರುವ ಕೆಲವೇ ಶ್ರೀಮಂತರ ಕೊಳ್ಳುಬಾಕತನವೇ ಇಂದು ನಾವು ಎದುರಿಸುತ್ತಿರುವ ಪ್ರಕೃತಿ ಮತ್ತು ಸಮಾಜದ ಈ ಯುಗಾಂತರದ ಬಿಕ್ಕಟ್ಟಿಗೆ ಮುಖ್ಯ ಕಾರಣ.

EFP (Ecological Foot prints) ಎನ್ನುವುದು ಪರಿಸರ ವಿಜ್ಞಾನದ ಇತ್ತೀಚಿನ ಹೊಸ ಕಲ್ಪನೆ. EFP ಎಂದರೆ, ಒಂದು ವ್ಯಕ್ತಿಯು ಜೀವಿಸಲು ಅಗತ್ಯವಿರುವ ಪರಿಸರವನ್ನೊಳಗೊಂಡ ಒಂದು ಪ್ರದೇಶ. ಈ ಭೂಮಿಯ ಸರಾಸರಿ ಧಾರಣ ಸಾಮರ್ಥ್ಯ ಪ್ರತಿವ್ಯಕ್ತಿಗೆ ೧.೯ ಹೆಕ್ಟೇರು ಮಾತ್ರ. ಆದರೆ ಅಮೆರಿಕಾದ ಪ್ರತಿವ್ಯಕ್ತಿಯ ಸರಾಸರಿ EFP ಯು ೧೦ ಹೆಕ್ಟೇರುಗಳು, ಆಸ್ಟ್ರೇಲಿಯಾದ್ದು ೮ ಹೆಕ್ಟೇರುಗಳು, ಯೂರೋಪಿನದ್ದು ೫ ಹೆಕ್ಟೇರುಗಳು ಮತ್ತು ಏಷಿಯಾ, ಆಫ್ರಿಕಾಗಳದ್ದು ಪ್ರತಿವ್ಯಕ್ತಿಗೆ ಕೇವಲ ೧.೪ ಮತ್ತು ೧.೫ ಹೆಕ್ಟೇರುಗಳು ಮಾತ್ರ. ಆದ್ದರಿಂದಲೇ, ಪ್ರಕೃತಿ ಮತ್ತು


ಸಮಾಜ ಕುಸಿಯುತ್ತಿರುವುದಕ್ಕೆ ಜನಸಾಂದ್ರವಾಗಿರುವ ಮೂರನೇ ಜಗತ್ತು ಕಾರಣವಲ್ಲ ಎಂದು ನಾನು ಹೇಳುವುದು.

ಪ್ರಕೃತಿಯ ಕುಸಿತ

ಭೂಮಿಯ ಮೇಲಿನ ಅರಣ್ಯ ಮತ್ತು ಜೀವವೈವಿಧ್ಯಗಳು ವೇಗವಾಗಿ ಕಣ್ಮರೆಯಾಗುತ್ತಿವೆ. ಒಂದು ದಿನದ ಒಂದು ಸೆಕೆಂಡಿನಲ್ಲಿ ೪೦ ಫುಟ್‌ಬಾಲ್ ಮೈದಾನಗಳಿಗೆ ಸಮಾನವಾದಷ್ಟು ಅರಣ್ಯನಾಶವಾಗುತ್ತಿದೆ. ಕೈಗಾರಿಕಾ ಕ್ರಾಂತಿ ಆರಂಭವಾದಾಗಿನಿಂದ, ಸರಕು ಉತ್ಪಾದನೆಗಾಗಿ ಬೇಕಾಗುವ ಇಂಧನದ ಅಗತ್ಯ ಹೆಚ್ಚುತ್ತಲೇ ಇದೆ. ಪ್ರಸ್ತುತ ಇಂಧನ ಅಗತ್ಯವು ಪ್ರತಿ ವರ್ಷ ಸುಮಾರು ೨.೨% ರಷ್ಟು ಪ್ರಮಾಣದಲ್ಲಿ ಹೆಚ್ಚುತ್ತಿದೆ. ಇಂದು ಉತ್ಪಾದಿಸಲ್ಪಡುತ್ತಿರುವ ಬಹುತೇಕ ಎಲ್ಲ ಇಂಧನಗಳ ಮೂಲವೂ ಭೂಗರ್ಭದಿಂದ ಅಗೆದುತೆಗೆದ ಪಳೆಯುಳಿಕೆ ಇಂಧನವೇ. ಈ ಪಳೆಯುಳಿಕೆ ಇಂಧನಗಳನ್ನು ಉರಿಸುವುದರಿಂದ ಬಿಡುಗಡೆಯಾಗುವ ಇಂಗಾಲದ ಡೈ ಆಕ್ಸೈಡ್, ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗಿ, ಹವಾಮಾನ ಬದಲಾವಣೆಗಳಿಗೆ ಎಡೆ ಮಾಡಿಕೊಡುತ್ತಿದೆ. ಇತ್ತೀಚೆಗೆ ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಭೀಕರ ವರದಿಯ ಪ್ರಕಾರ, ಹವಾಮಾನ ಬದಲಾವಣೆಯು ಈ ಜಗತ್ತಿನ ಮೇಲೆ ತೀವ್ರವಾದ ಹಾನಿಯನ್ನುಂಟು ಮಾಡುವುದನ್ನು ತಡೆಗಟ್ಟಲು ನಮಗಿರುವುದು ಕೇವಲ ೧೨ ವರ್ಷಗಳು ಮಾತ್ರ. ನಾವು ಹೇಗೆ ಈ ಹಂತವನ್ನು ತಲುಪಿದ್ದೇವೆ ಅನ್ನುವುದರ ಮೌಲ್ಯಮಾಪನವನ್ನೂ ಅದು ಮಾಡಿದ್ದು, ಅದರ ಆಪಾದನೆಯನ್ನು ನೇರವಾಗಿ, ಕೇವಲ ೧% ಇರುವ ಜಗತ್ತಿನ ಅತಿಶ್ರೀಮಂತ ಕೋಟ್ಯಧೀಶರ ಮೇಲೆ ಹೊರಿಸಿದೆ. ಜಗತ್ತಿನ ನಾನಾ ಕಡೆಗಳಲ್ಲಿ ಚಂಡಮಾರುತಗಳು, ಅತಿವೃಷ್ಟಿ, ಅನಾವೃಷ್ಟಿಗಳು ಸಂಭವಿಸುತ್ತಿವೆ. ಜಾಗತಿಕ ತಾಪಮಾನ ಹೆಚ್ಚಳದ ಪರಿಣಾಮವಾಗಿ ಸಮುದ್ರಮಟ್ಟ ಏರುತ್ತಿದ್ದು ತಗ್ಗು ಪ್ರದೇಶಗಳನ್ನು ನುಂಗಿಹಾಕುತ್ತಿದೆ. ಭೂಮಿಯ ತಾಪಮಾನದ ಸಮತೋಲನವನ್ನು ಕಾಪಾಡುವ ಥರ್ಮೋಹ್ಯಾಲೈನ್ ಪರಿಚಲನೆಯು(Thermohaline circulation – ತಾಪಮಾನ ಮತ್ತು ಲವಣಾಂಶಗಳ ವ್ಯತ್ಯಾಸದಿಂದ ಉಂಟಾಗುವ, ಹಿಮಗಡ್ಡೆಗಳ ಸೃಷ್ಟಿಗೆ ಕಾರಣವಾಗುವ ಸಮುದ್ರದೊಳಗಿನ ಪ್ರವಾಹಚಕ್ರ) ನಿಧಾನವಾಗುತ್ತಿದೆ. ಸಮುದ್ರಗಳ ಆಮ್ಲೀಕರಣ, ಹವಳದಿಬ್ಬಗಳ ಬಣ್ಣಗೆಡುವಿಕೆ, ಓಝೋನ್ ಸವಕಳಿ, ಸಾರಜನಕ ಮತ್ತು ರಂಜಕ ಚಕ್ರದ ಏರುಪೇರು, ಗಾಳಿ ಮತ್ತು ನೀರಿನ ಮಾಲಿನ್ಯ, ಗಾಳಿಯಲ್ಲಿ ಏರೋಸಾಲ್‌ನ(ವಾಯುದ್ರವ) ಏರಿಕೆ, ಅಪಾಯಕಾರಿ ತ್ಯಾಜ್ಯಗಳ ಶೇಖರಣೆ ಇತ್ಯಾದಿ ಎಲ್ಲವೂ ಹೆಚ್ಚುತ್ತಿವೆ. ಇನ್ನು ಸುಮಾರು ೬೦ ವರ್ಷಗಳ ನಂತರ ಬೆಳೆಗಳನ್ನು ಬೆಳೆಯಲು ಭೂಮಿಯೇ ಉಳಿದಿರುವುದಿಲ್ಲವೆಂದು ವಿಜ್ಞಾನಿಗಳು ಅಂದಾಜಿಸುತ್ತಿದ್ದಾರೆ. ಮರುಭೂಮಿಗಳು ಹೊಸ ಪ್ರದೇಶಗಳನ್ನು ಆವರಿಸಿಕೊಳ್ಳುತ್ತಿವೆ. ಆರ್ಕ್ಟಿಕ್‌ನ ಭೂಭಾಗದ ಒಳಗೆ ಯಾವಾಗಲೂ ಹೆಪ್ಪುಗಟ್ಟಿರುವ ಹಿಮಗಡ್ಡೆಯು(Permafrost) ಹಿಂದೆಂದಿಗಿಂತಲೂ ವೇಗವಾಗಿ ಕರಗುತ್ತಿದ್ದು, ಅವುಗಳ ಅಡಿಯಲ್ಲಿ ಹುದುಗಿರುವ ಮಿಲಿಯಾಂತರ ಟನ್ನುಗಳಷ್ಟಿರುವ ಮೀಥೇನ್ ಅನಿಲವು ಬಿಡುಗಡೆಗೊಳ್ಳುವ ಅಪಾಯವು ಎದುರಾಗುತ್ತಿದೆ. ಹಸಿರುಮನೆ ಅನಿಲವಾಗಿರುವ ಇಂಗಾಲದ ಡೈಆಕ್ಸೈಡ್‌ಗಿಂತ ಮೀಥೇನ್ ಅನಿಲವು ೨೦ಪಟ್ಟು ಹೆಚ್ಚು ಅಪಾಯಕಾರಿಯಾದ ಹಸಿರುಮನೆ ಅನಿಲವಾಗಿದೆ. ಅಷ್ಟಲ್ಲದೇ, ಆರ್ಕ್ಟಿಕ್ ಹಿಮವು ಕರಗಿದರೆ, ಆಲ್ಬೆಡೋ(Albedo–ಹಿಮವು ಸೂರ್ಯನ ಬೆಳಕನ್ನು ಪ್ರತಿಫಲಿಸುವ ಪ್ರಮಾಣ) ಕಡಿಮೆಯಾಗುತ್ತದೆ. ಹಿಮದ ಜಾಗದಲ್ಲಿ ಆವರಿಸುವ ಕರಿನೀರು ಹೆಚ್ಚು ಶಾಖವನ್ನು ಹೀರಿಕೊಳ್ಳುವುದರಿಂದ ಜಾಗತಿಕ ತಾಪಮಾನವೂ ಹೆಚ್ಚುತ್ತದೆ.

ಅಭಿವೃದ್ಧಿಯ ಮಾನದಂಡವಾಗಿ ಜಿಡಿಪಿ ಏರಿಕೆಯ ಬಗ್ಗೆ ಮಾತನಾಡುವ ನಾವು, ಪರಿಸರನಾಶದ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ೧೯೯೨ರಲ್ಲಿ ವಿಶ್ವಬ್ಯಾಂಕ್‌ನ ಇಬ್ಬರು ವಿಜ್ಞಾನಿಗಳು, ಭಾರತದ ಪರಿಸರನಾಶದ ವೆಚ್ಚವನ್ನು ಲೆಕ್ಕಹಾಕಿದ್ದರು. ಅದು ಒಟ್ಟು ರೂ.೩೪೦ ಬಿಲಿಯನ್‌ಗಳಾಗಿತ್ತು. ಅಂದರೆ ಆಗಿನ ಜಿಡಿಪಿಯ ೪.೫% ರಷ್ಟಿತ್ತು. ಈ ವರದಿ ಪ್ರಕಟವಾದ ನಂತರ, ದೆಹಲಿಯ ವಿಜ್ಞಾನ ಮತ್ತು ಪರಿಸರ ಕೇಂದ್ರವು ('Down to Earth' ಎನ್ನುವ ಬಹುಮುಖ್ಯ ಪರಿಸರ ನಿಯತಕಾಲಿಕೆಯನ್ನು ಪ್ರಕಟಿಸುವ ಕೇಂದ್ರವೂ ಹೌದು) ಅದನ್ನು ಪರಿಶೀಲಿಸಿದಾಗ, ಪರಿಸರನಾಶದ ಇನ್ನೂ ಅದೆಷ್ಟೋ ವೆಚ್ಚಗಳನ್ನು ಪರಿಗಣಿಸಿಲ್ಲವೆಂಬುದು ಕಂಡುಬಂದಿತು. ಈ ಎಲ್ಲ ವೆಚ್ಚಗಳನ್ನೂ ಒಳಗೊಂಡರೆ, ಭಾರತದ ಪರಿಸರನಾಶದ ವೆಚ್ಚವು ಸುಮಾರು ರೂ.೫೦೦ ರಿಂದ ರೂ.೭೦೦ ಬಿಲಿಯನ್ ಆಗುತ್ತದೆಂದು ಕಂಡುಕೊಂಡರು. ಅದು ಅಂದಿನ ಜಿಡಿಪಿಯ ಶೇಕಡಾ ೭ ರಿಂದ ೯ ರಷ್ಟಾಗುತ್ತದೆ.

ಸನ್ನಿಹಿತವಾಗಿರುವ ಪರಿಸರ ಕುಸಿತದ ಮಾರಕ ಪರಿಣಾಮಗಳು ಸಂಪೂರ್ಣವಾಗಿ ನಮ್ಮ ಅನುಭವಕ್ಕೆ ಸಿಗದೇ ಇರಬಹುದು. ಆದರೆ ಭವಿಷ್ಯದಲ್ಲಿ ನಮ್ಮ ಮುಂದಿನ ತಲೆಮಾರು ನಿಸ್ಸಂದೇಹವಾಗಿ ಅನುಭವಿಸುತ್ತದೆ. ಜಗತ್ತಿನ ಕೆಲವು ಅತಿ ಶ್ರೀಮಂತರೇ ಈ ಪರಿಸರ ವಿಪತ್ತಿಗೆ ಮುಖ್ಯ ಕಾರಣ. ಅವರ ದುರಾಸೆಯೇ



"ಪಶ್ಚಿಮದ ವಿವಿಧ ದೇಶಗಳು ಇಷ್ಟೊಂದು ಬಾಧೆಗೊಳಗಾಗಿರುವುದನ್ನು ನಾನು ನೋಡುತ್ತೇನೆಂಬುದನ್ನು ಕಲ್ಪಿಸಿಯೂ ಇರಲಿಲ್ಲ. ಅವರು ಸಂತೋಷವಾಗಿಲ್ಲ. ಬೃಹತ್ ಪ್ರಮಾಣದ ಸ´ ರ´ ಕ´ ು ಗ´ ಳ´ ನ´ ್ನು ಶೇಖರಿಸಿಟ್ಟುಕೊಂಡಿರುವುದರಲ್ಲಿ ಅನುಮಾನವಿಲ್ಲ. ಆದರೆ ಎಲ್ಲ ಕಡೆಯೂ ಆಳದ ಯಾತನೆಯಿದೆ. ನಗರಗಳಲ್ಲಿ ಜನರು ಪರಸ್ಪರ ಸಂಪರ್ಕದಲ್ಲಿ ಉಳಿಯುವುದು ಸಾಧ್ಯವಾಗದೇ ಹೋಗಿದೆ. ಬಹಳ ದೂರ ಹೋಗಬೇಕಿಲ್ಲ. ಇಲ್ಲೇ, ನಾವು ಬದುಕುತ್ತಿರುವ ಮತ್ತು ಪರಿಚಿತ ಸ್ಥಳವಾಗಿರುವ ಕಲ್ಕತ್ತಾದಲ್ಲಿಯೇ, ಸುಖ-ದುಃಖಗಳಲ್ಲಿಯಾಗಲೀ, ಸುತ್ತಮುತ್ತ ಏನಾದರೂ ಸಂಭವಿಸಿದಾಗಲಾಗಲೀ ಅಕ್ಕಪಕ್ಕದವರೊಂದಿಗೆ ಸಂಬಂಧವೇ ಇಲ್ಲದಂತಿದ್ದಾರೆ"

-ರವೀಂದ್ರನಾಥ ಟ್ಯಾಗೋರ್.

ಅನಗತ್ಯ ಅಗತ್ಯಗಳ ಉತ್ಪಾದನೆಗೆ ಎಡೆಮಾಡಿಕೊಡುತ್ತಿರುವುದು ಮತ್ತು ಅದಕ್ಕಾಗಿ ಬೃಹತ್ ಪ್ರಮಾಣದ ಇಂಧನಶಕ್ತಿ ಮತ್ತು ನೈಸರ್ಗಿಕ ಸಂಪನ್ಮೂಲಗಳು ಬಳಕೆಯಾಗುತ್ತಿರುವುದು ಮತ್ತು ಅದರಿಂದಾಗಿಯೇ ಈ ಹವಾಮಾನ ಬಿಕ್ಕಟ್ಟು ಎದುರಾಗಿರುವುದು.

ಜಾಗತಿಕ ತಲಾವಾರು ಜಿಡಿಪಿಯು ಐದು ಪಟ್ಟು ಹೆಚ್ಚುವುದರ ಮೂಲಕ ೨೦ನೇ ಶತಮಾನವು ಅಪ್ರತಿಮ ಆರ್ಥಿಕ ಬೆಳವಣಿಗೆಯನ್ನು ಕಂಡಿದೆ. ೧೯೫೦ ಮತ್ತು ೧೯೯೦ ರ ನಡುವೆ, ವಿಶ್ವದ ಕೈಗಾರಿಕಾ ಬಳಕೆಗಾಗಿ ಮಾಡುವ ವೃತ್ತಾಕಾರದ ಮರದ ದಿಮ್ಮಿಯ ಕೊಯ್ಲು ದ್ವಿಗುಣಗೊಂಡಿದೆ; ನೀರಿನ ಬಳಕೆ ಮೂರುಪಟ್ಟು ಹೆಚ್ಚಾಗಿದೆ; ತೈಲ ಉತ್ಪಾದನೆ ಆರುಪಟ್ಟು ಹೆಚ್ಚಿದೆ. ೧೯೫೦ ರಷ್ಟು ಇತ್ತೀಚೆಗೆ, ಇವತ್ತಿನ ಉತ್ಪಾದನೆಯ ಏಳನೇ ಒಂದು ಭಾಗದಷ್ಟು ಸರಕನ್ನು ಈ ಜಗತ್ತು ಉತ್ಪಾದಿಸಿತ್ತು ಹಾಗೂ ಮೂರನೇ ಒಂದು ಭಾಗದಷ್ಟು ಅದಿರನ್ನು ಅಗೆದುತೆಗೆದಿತ್ತು. ಆದರೆ ಈ ಸರಾಸರಿ ಅಂಕಿಅಂಶಗಳು, ಆರ್ಥಿಕ ಅಭಿವೃದ್ಧಿಯ ಮತ್ತು ಅಧಿಕ ಉತ್ಪಾದನೆಯ ಬಹುಪಾಲು ಲಾಭವನ್ನು ಶ್ರೀಮಂತರೇ ಕಬಳಿಸಿರುವ ಕಹಿಸತ್ಯವನ್ನು ಮರೆಮಾಚುತ್ತವೆ. ಅದು ವರಮಾನ ಮತ್ತು ಸಂಪನ್ಮೂಲಗಳ ಹಂಚಿಕೆಯಲ್ಲಿ ದೊಡ್ಡ ಕಂದಕವನ್ನು ಸೃಷ್ಟಿಸಿದೆ.

ಸಮಾಜದ ಕುಸಿತ

ಮೊದಲನೇ ವಿಶ್ವವಾಗಲೀ ಮೂರನೇ ವಿಶ್ವವಾಗಲೀ ಒಟ್ಟಿನಲ್ಲಿ ಮಾನವ ಸಮಾಜವು ಕಂಪಿಸುತ್ತಿದೆ. ನಾವು ಜನದಟ್ಟಣೆಯ ಮೂರನೇ ವಿಶ್ವದಲ್ಲಿ ಬದುಕುತ್ತಿದ್ದೇವೆ. ನಮ್ಮ ಪರಿಸ್ಥಿತಿ ನಮಗೆ ಗೊತ್ತಿದೆ. ಭಾರತದಲ್ಲಿ ೧% ಇರುವ ಅತಿಶ್ರೀಮಂತ ಜನ, ೨೦೧೭ ರಲ್ಲಿ ಸೃಷ್ಟಿಯಾದ ಸಂಪತ್ತಿನ ೭೩% ರಷ್ಟು ಭಾಗವನ್ನು ಕಬಳಿಸಿದ್ದಾರೆ. ಕಳೆದ ೨೦ ವರ್ಷಗಳಲ್ಲಿ, ೧೦೦ ರಿಂದ ೧೨೦ ಮಿಲಿಯನ್ ಜನ ಉದ್ಯೋಗ ಸಾಮರ್ಥ್ಯವನ್ನು ಪಡೆದಿದ್ದಾರೆ. ಆದರೆ ೦.೩ ಮಿಲಿಯನ್ ಜನರಿಗೆ ಮಾತ್ರ ಉದ್ಯೋಗ ಸಿಕ್ಕಿದೆ. ಇನ್ನೊಂದು ಕಡೆ, ಕಳೆದ ೧೫ ವರ್ಷಗಳಲ್ಲಿ ಬಿಲಿಯನೇರ್‌ಗಳ ಸಂಪತ್ತು ೧೧೨ಪಟ್ಟು ಹೆಚ್ಚಾಗಿದೆ. ವಿಶ್ವ ಸಂಸ್ಥೆಯು ಪ್ರಕಟಿಸಿರುವ, ತಲಾವಾರು ಜಿಡಿಪಿ, ಸಾಮಾಜಿಕ ಬೆಂಬಲ, ಆರೋಗ್ಯಕರ ಜೀವನದ ಆಯಸ್ಸು ಮತ್ತು ಬದುಕಿನ ಆಯ್ಕೆಗಳನ್ನು ಮಾಡುವ ಸ್ವಾತಂತ್ರ್ಯ ಮತ್ತು ವಿಶ್ವಸನೀಯತೆಗಳನ್ನಾಧರಿಸಿದ, ೨೦೧೭ರ 'ವಿಶ್ವ ಸಂತುಷ್ಟತೆಯ ವರದಿ'ಯ (World happiness report) ಪ್ರಕಾರ, ಒಟ್ಟು ೧೫೫ ದೇಶಗಳ ಶ್ರೇಯಾಂಕ ಪಟ್ಟಿಯಲ್ಲಿ ಭಾರತವು ೧೨೨ನೇ ಸ್ಥಾನವನ್ನು ಪಡೆದಿದೆ.

ಮೊದಲನೇ ವಿಶ್ವದ ಶಿಖರಪ್ರಾಯವಾಗಿರುವ ಅಮೇರಿಕಾದ ಪರಿಸ್ಥಿತಿಯೇನು? ೧೯೮೯ ರಲ್ಲಿ, ಹಾಲೆಂಡಿನ ಡೆನ್ ಹೇಗ್ ಎಂಬಲ್ಲಿ ನಡೆದ, ನಾನೂ ಭಾಗವಹಿಸಿದ್ದ, ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯಗಳ ಮಂಡಳಿಯ ಅಂತಾರಾಷ್ಟ್ರೀಯ ತ್ರೈವಾರ್ಷಿಕ ಸಮ್ಮೇಳನದಲ್ಲಿ ಪ್ರಧಾನ ಭಾಷಣಕಾರರಾದ ಡಾ. ನೀಲ್ ಪೋಸ್ಟ್‌ಮನ್‌ರವರು ಅಮೆರಿಕಾದ ಸಮಾಜದ ಬಗ್ಗೆ ಈ ಮಾತುಗಳನ್ನು ಆಡಿದರು; 'ನಾವು ಈಗಾಗಲೇ, ಮುಂದಾಗಬಹುದಾದ ಪ್ರತಿಯೊಂದು ತಾಂತ್ರಿಕ ಆವಿಷ್ಕಾರವನ್ನೂ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ನಮ್ಮ ಸಮಾಜವನ್ನು ಸಿದ್ಧಮಾಡಿಟ್ಟುಕೊಂಡಿದ್ದೇವೆ. ನಾವು ಹೊಂದಿರುವ ಎಲ್ಲ ಸವಲತ್ತುಗಳ ಮತ್ತು ಕ್ರಿಯೆಗಳ ಪರಿಣಾಮಗಳನ್ನು ಬಹಳ ಉನ್ಮತ್ತತೆಯಿಂದ, ಸ್ವಇಚ್ಛೆಯಿಂದ, ವಿವೇಕ ಶೂನ್ಯತೆಯಿಂದ ಕಡೆಗಣಿಸಿದ್ದೇವೆ. ಏಕೆಂದರೆ, ತಂತ್ರಜ್ಞಾನ ಅದನ್ನು ಬಯಸುತ್ತಿತ್ತು.



'ಮರುಭೂಮಿಯು ದೂರದ ದಕ್ಷಿಣ ಸೀಮೆಯಲ್ಲಷ್ಟೇ ಇಲ್ಲ/ ಮರುಭೂಮಿಯು ನಿನ್ನ ಸಮೀಪಕ್ಕೆ ಬಂದಿರುವುದಷ್ಟೇ ಅಲ್ಲ/ ಮರುಭೂಮಿಯು ನಿನ್ನ ಪಕ್ಕದಲ್ಲೇ ಇರುವ ಸುರಂಗ ರೈಲಿನಲ್ಲಿ ನುಸುಳಿದೆ/ ಮರುಭೂಮಿಯಿದೆ ಇಲ್ಲೇ ನಿನ್ನೊಡಹುಟ್ಟಿದವನ ಹೃದಯದಲ್ಲಿ'.

-ಟಿ.ಎಸ್. ಎಲಿಯಟ್

ಅದಕ್ಕಾಗಿ ನಮ್ಮ ಧರ್ಮದ, ಕುಟುಂಬದ, ಮಕ್ಕಳ, ಇತಿಹಾಸದ ಮತ್ತು ಶಿಕ್ಷಣದ ಕಡೆಗೆ ಬೆನ್ನು ತಿರುಗಿಸಿದ್ದೇವೆ. ಅದರ ಫಲವಾಗಿ ಇಂದು ಅಮೆರಿಕಾದ ಸಮಾಜ ಮುರಿದುಬೀಳುತ್ತಿದೆ. ಇದು ಎಲ್ಲರಿಗೂ ಗೊತ್ತಿದೆ, ಆದರೆ ಅದರ ಮುಂದೆ ಸಮಾಜ ದುರ್ಬಲವಾದಂತೆ ತೋರುತ್ತದೆ. ನಮ್ಮ ತಂತ್ರಜ್ಞಾನದ ಕನಸಿನ ಭಾಗಶಃ ಚಿತ್ರಣವನ್ನಿಲ್ಲಿ ಕೊಡುತ್ತೇನೆ. ೧೯೯೫ರ ಹೊತ್ತಿಗೆ, ನಮ್ಮ ೮೫% ಮಕ್ಕಳು ಏಕಮಾತ್ರ ಪೋಷಕರಿರುವ ಮನೆಯಲ್ಲಿ ಬದುಕುತ್ತವೆ. ನಮ್ಮ ದೊಡ್ಡ ದೊಡ್ಡ ನಗರಗಳಲ್ಲಿ ೫೦% ಗಿಂತ ಕಡಿಮೆ ವಿದ್ಯಾರ್ಥಿಗಳು ಹೈಸ್ಕೂಲ್ ಹಂತವನ್ನು ದಾಟುತ್ತಾರೆ. ಈ ಸಂಸ್ಕೃತಿಯು ಸಾಮೂಹಿಕ ಶಿಕ್ಷಣದ ಕಲ್ಪನೆಯಿಂದ ಒಡಮೂಡಿದ್ದು. ...ನಮ್ಮ ಒಟ್ಟು ಜನಸಂಖ್ಯೆಯ ಕಾಲು ಭಾಗ, ಅಂದರೆ ಸುಮಾರು ೬೦ಮಿಲಿಯನ್ ಜನರು ಅನಕ್ಷರಸ್ಥರು. ಪ್ರತಿವರ್ಷ, ೪೦ಮಿಲಿಯನ್ ಜನ ತಂತಮ್ಮ ವಾಸಸ್ಥಳವನ್ನು ಬದಲಿಸುತ್ತಾರೆ ಮತ್ತು ಅದೆಷ್ಟೋ ಮಿಲಿಯನ್ ಜನರಿಗೆ ವಾಸಿಸಲು ಮನೆಗಳೇ ಇಲ್ಲದೇ ಬೀದಿಗಳಲ್ಲಿ, ಸುರಂಗ ಮಾರ್ಗಗಳಲ್ಲಿ ಬದುಕುತ್ತಿದ್ದಾರೆ. ೧೯೫೯ರಿಂದ ಇಲ್ಲಿಯವರೆಗೆ, ಹಿಂಸಾತ್ಮಕ ಕ್ರೌರ್ಯದ ಪ್ರಕರಣಗಳು ೧೧,೦೦೦% ಹೆಚ್ಚಿವೆ! ಪ್ರತಿ ಹತ್ತು ಅಮೆರಿಕನ್ನರಲ್ಲಿ ಇಬ್ಬರು ತಮ್ಮ ಬದುಕಿನ ಒಂದು ಭಾಗವನ್ನು ಮಾನಸಿಕ ಆಸ್ಪತ್ರೆಗಳಲ್ಲಿ ಕಳೆಯುತ್ತಾರೆ. ನಮ್ಮ ನಗರಗಳು ವಾಹನದಟ್ಟಣೆಯಿಂದ ಉಸಿರುಗಟ್ಟುತ್ತಿವೆ. ನಮ್ಮ ನೀರಿನ ಪೂರೈಕೆಯು ಸೀಸ ಮತ್ತು ವೈದ್ಯಕೀಯ ಅವಶೇಷಗಳಿಂದ ವಿಷಪೂರಿತವಾಗಿದೆ; ನಮ್ಮ ಮಳೆಯು ಆಮ್ಲೀಯವಾಗಿದೆ; ನಮ್ಮ ಜನ, ಜಗತ್ತಿನ ಉಳಿದ ಭಾಗಗಳ ಯಾವುದೇ ಜನಸಮುದಾಯಕ್ಕಿಂತ ತಲಾ ಹೆಚ್ಚು ಆಸ್ಪಿರಿನ್ ಸೇವಿಸುತ್ತಾರೆ; ನಮ್ಮ ಶಿಶುಮರಣ ಪ್ರಮಾಣವು ಪಶ್ಚಿಮ ಜಗತ್ತಿನಲ್ಲೇ ಅತಿ ಹೆಚ್ಚು; ಹಾಗೂ ನಮ್ಮ ಯುವಕರು ತಮ್ಮ ಮಿದುಳುಗಳನ್ನು ಮಾದಕ ವಸ್ತುಗಳ ಅಮಲಿನಲ್ಲಿ ಬೇಯಿಸುತ್ತಿದ್ದಾರೆ.

ಕೈಗಾರಿಕೀಕರಣಗೊಂಡ ನಗರ ನಾಗರಿಕತೆಯ ಫಲವಾಗಿ ಪ್ರಕೃತಿ ಮತ್ತು ಸಮಾಜ ಕುಸಿದುಬಿದ್ದೇ ಬೀಳುತ್ತದೆನ್ನುವುದನ್ನು ರಬೀಂದ್ರನಾಥ್ ಟ್ಯಾಗೋರ್ ಮತ್ತು ಗಾಂಧೀಜಿ, ಇಬ್ಬರೂ ಅರ್ಥಮಾಡಿಕೊಂಡಿದ್ದರು. ೧೯೪೧ರಲ್ಲಿ ಟ್ಯಾಗೋರರು ಕಾಲವಶರಾದ ವರ್ಷದಲ್ಲೇ ಬರೆದ 'ನಾಗರಿಕತೆಯಲ್ಲಿನ ಬಿಕ್ಕಟ್ಟು'(Crisis in Civilization) ಎನ್ನುವ ತಮ್ಮ ಪ್ರಸಿದ್ಧ ಪ್ರಬಂಧದಲ್ಲಿ ಹೀಗೆನ್ನುತ್ತಾರೆ: 'ನನ್ನ ಬದುಕಿನ ಒಂದು ಹಂತದಲ್ಲಿ, ಯೂರೋಪಿನ ಒಡಲಿನಿಂದ ನಾಗರಿಕತೆಯ ಬುಗ್ಗೆಗಳು ಚಿಮ್ಮುತ್ತವೆ ಎಂದೇ ನಂಬಿದ್ದೆ. ಆದರೆ ಇಂದು, ಇನ್ನೇನು ಈ ಜಗತ್ತಿನಿಂದ ನಿರ್ಗಮಿಸುವ ಸಮಯದಲ್ಲಿ, ಆ ನಂಬಿಕೆಯು ಸಂಪೂರ್ಣವಾಗಿ ದಿವಾಳಿಯಾಗಿದೆ'. ೧೯೪೦ರಲ್ಲಿ, ಆಗ ಅಮೆರಿಕಾದಲ್ಲಿ ಬೋಧಿಸುತ್ತಿದ್ದ ಬಂಗಾಳಿ ಕವಿ ಡಾ.ಅಮಿಯ ಚಕ್ರಬರ್ತಿ ಅನ್ನುವವರಿಗೆ ಬರೆದ ಪತ್ರವೊಂದರಲ್ಲಿ ಟ್ಯಾಗೋರರು ಬರೆಯುತ್ತಾರೆ: 'ಬ್ರಾಹ್ಮಣರ ಜ್ಞಾನವನ್ನೂ, ಕ್ಷತ್ರಿಯರ ರಟ್ಟೆಬಲವನ್ನೂ, ಶೂದ್ರರ ಸೇವೆಯನ್ನೂ ಶೋಷಿಸುತ್ತಿರುವ ವ್ಯಾಪಾರಬುದ್ಧಿಯ ಯೂರೋಪು ಎದುರಿಸಲಾಗದಷ್ಟು ಬೆಳೆದುಬಿಟ್ಟಿದೆ. ಆದರೆ ಅವರ ಪಾದಗಳು ವಿನಾಶದ ಕಡೆಗಿರುವ ಇಳಿಜಾರಿನ ಮೇಲೆ ನಿಂತಿವೆಯೆಂಬುದು ನನಗೆ ಕಾಣಿಸುತ್ತಿದೆ'. ೧೯೩೦ ರಲ್ಲಿ, ಶಾಂತಿನಿಕೇತನದ ಗ್ರಾಮಸಭೆಯೊಂದರಲ್ಲಿ ಟ್ಯಾಗೋರ್ ಹೀಗೆ ಮಾತನಾಡಿದ್ದಾರೆ: 'ಪಶ್ಚಿಮದ ವಿವಿಧ ದೇಶಗಳು ಇಷ್ಟೊಂದು ಬಾಧೆಗೊಳಗಾಗಿರುವುದನ್ನು ನಾನು ನೋಡುತ್ತೇನೆಂಬುದನ್ನು ಕಲ್ಪಿಸಿಯೂ ಇರಲಿಲ್ಲ. ಅವರು ಸಂತೋಷವಾಗಿಲ್ಲ. ಬೃಹತ್ ಪ್ರಮಾಣದ ಸರಕುಗಳನ್ನು ಶೇಖರಿಸಿಟ್ಟುಕೊಂಡಿರುವುದರಲ್ಲಿ ಅನುಮಾನವಿಲ್ಲ. ಆದರೆ ಎಲ್ಲ ಕಡೆಯೂ ಆಳದ ಯಾತನೆಯಿದೆ. ನಗರಗಳಲ್ಲಿ ಜನರು ಪರಸ್ಪರ ಸಂಪರ್ಕದಲ್ಲಿ ಉಳಿಯುವುದು ಸಾಧ್ಯವಾಗದೇ ಹೋಗಿದೆ. ಬಹಳ ದೂರ ಹೋಗಬೇಕಿಲ್ಲ. ಇಲ್ಲೇ, ನಾವು ಬದುಕುತ್ತಿರುವ ಮತ್ತು ಪರಿಚಿತ ಸ್ಥಳವಾಗಿರುವ ಕಲ್ಕತ್ತಾದಲ್ಲಿಯೇ, ಸುಖ-ದುಃಖಗಳಲ್ಲಿಯಾಗಲೀ, ಸುತ್ತಮುತ್ತ ಏನಾದರೂ ಸಂಭವಿಸಿದಾಗಲಾಗಲೀ ಅಕ್ಕಪಕ್ಕದವರೊಂದಿಗೆ ಸಂಬಂಧವೇ ಇಲ್ಲದಂತಿದ್ದಾರೆ'. ಟ್ಯಾಗೋರರು ಸಹಕಾರತತ್ವದ ಮೇಲೆ ನಾಲ್ಕು ಲೇಖನಗಳನ್ನು ಬರೆದಿದ್ದಾರೆ. ೧೯೨೮ರಲ್ಲಿ ಬರೆದ 'ಸಹಕಾರೀತತ್ವದ ನಿಯಮಗಳು'(Rules of cooperative) ಎನ್ನುವ ಲೇಖನದಲ್ಲಿ: 'ಸಾಮಾಜೀಕರಣವೇ ಹಳ್ಳಿಗಳ ಜೀವಾಳ. ಇದು ಪಟ್ಟಣಗಳಲ್ಲಿ ಸಾಧ್ಯವಿಲ್ಲ. ಒಂದು ಕಾರಣವೆಂದರೆ, ಪಟ್ಟಣಗಳು ದೊಡ್ಡವಿರುವುದರಿಂದ ಸಾಮಾಜಿಕ ಸಂಬಂಧಗಳು ಜಾಳಾಗಿರುತ್ತವೆ. ಮತ್ತೊಂದು ಕಾರಣವೆಂದರೆ, ವ್ಯಾಪಾರ, ಕೆಲ ವಿಶೇಷ ಅವಕಾಶಗಳು ಮತ್ತು ಅವಶ್ಯಕತೆಗಳಿಂದಾಗಿ ಹೆಚ್ಚುವ ಜನಸಂಖ್ಯೆ. ಅಲ್ಲಿ ಮನುಷ್ಯರು ತಮ್ಮ ಸ್ವಂತದ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಮೊದಲ ಆದ್ಯತೆ ಕೊಡುತ್ತಾರೆ, ಪರಸ್ಪರರ ಅಗತ್ಯಗಳಿಗಲ್ಲ. ಇದರಿಂದಾಗಿ ಒಂದೇ ಪ್ರದೇಶದಲ್ಲಿ ವಾಸಿಸುವ ನೆರೆಹೊರೆಯವರು ಪರಸ್ಪರ ಪರಿಚಯವಿಲ್ಲದಿದ್ದರೆ ಅವಮಾನವೆಂದೇನೂ ಭಾವಿಸುವುದಿಲ್ಲ. ನಮ್ಮ ಬದುಕು ಸಂಕೀರ್ಣಗೊಳ್ಳುತ್ತಾ ಹೋದಂತೆ ಈ ಅಪರಿಚಿತತೆಯು ಕ್ರಮೇಣ ಹೆಚ್ಚುತ್ತಿದೆ' ಎನ್ನುತ್ತಾರೆ.

ಪ್ರಖ್ಯಾತ ಇಂಗ್ಲಿಷ್ ಕವಿ ಟಿ.ಎಸ್.ಎಲಿಯೆಟ್ ತನ್ನ ಒಂದು ಕವನದಲ್ಲಿ, ಈ ಅಪರಿಚಿತತೆಯ ಬಗ್ಗೆ ಹೀಗೆ ಹೇಳಿದ್ದಾನೆ: 'ಮರುಭೂಮಿಯು ದೂರದ ದಕ್ಷಿಣ ಸೀಮೆಯಲ್ಲಷ್ಟೇ ಇಲ್ಲ/ ಮರುಭೂಮಿಯು ನಿನ್ನ ಸಮೀಪಕ್ಕೆ ಬಂದಿರುವುದಷ್ಟೇ ಅಲ್ಲ/ ಮರುಭೂಮಿಯು ನಿನ್ನ ಪಕ್ಕದಲ್ಲೇ ಇರುವ ಸುರಂಗ ರೈಲಿನಲ್ಲಿ ನುಸುಳಿದೆ/ ಮರುಭೂಮಿಯಿದೆ ಇಲ್ಲೇ ನಿನ್ನೊಡಹುಟ್ಟಿದವನ ಹೃದಯದಲ್ಲಿ'.

ಭಾರತದ ಕೈಗಾರಿಕೀಕರಣದ ಪರಿಣಾಮಗಳ ಬಗ್ಗೆ ಎಚ್ಚರಿಸಿದ್ದರು ಗಾಂಧೀಜಿ. ಅವರು ಬರೆಯುತ್ತಾರೆ: 'ಭಾರತವು ಪಶ್ಚಿಮದ ರೀತಿಯಲ್ಲೇನಾದರೂ ಕೈಗಾರಿಕೀಕರಣಗೊಂಡರೆ ದೇವರೇ ಕಾಪಾಡಬೇಕು. ಒಂದು ಸಣ್ಣ ದ್ವೀಪಸಾಮ್ರಾಜ್ಯ(united kingdom)ದ ಆರ್ಥಿಕ ಸಮ್ರಾಜ್ಯಶಾಹಿಯು ಇಂದು ಇಡೀ ವಿಶ್ವವನ್ನು ಸರಪಳಿಯಲ್ಲಿ ಕಟ್ಟಿಹಿಡಿದಿದೆ. ೩೦ ಕೋಟಿ ಜನಸಂಖ್ಯೆಯ ಒಂದಿಡೀ ರಾಷ್ಟ್ರವೇನಾದರೂ ಇದೇ ರೀತಿಯ ಆರ್ಥಿಕ ಶೋಷಣೆಗೆ ಮುಂದಾದರೆ, ಮಿಡತೆಯ ದಾಳಿಗೆ ಸಿಕ್ಕ ಪೈರಿನಂತೆ ಇಡೀ ವಿಶ್ವವೇ ಬೋಳಾಗಿಬಿಡುತ್ತದೆ'. ೧೯೨೮ರಲ್ಲಿ ಟ್ಯಾಗೋರರು ಚೈನಾದಲ್ಲಿ ಮಾಡಿದ ಒಂದು ಭಾಷಣದಲ್ಲಿ ಹೇಳುತ್ತಾರೆ: 'ಒಂದು ಶತಮಾನಕ್ಕೂ ಹೆಚ್ಚಿನ ಕಾಲ, ಸಮೃದ್ಧ ಪಶ್ಚಿಮವು ತನ್ನ ಸಾರೋಟಿಗೆ ನಮ್ಮನ್ನು ಹಗ್ಗದಲ್ಲಿ ಕಟ್ಟಿ ಎಳೆದು ತಂದಿದೆ. ಧೂಳಿನಿಂದ ಉಸಿರುಕಟ್ಟಿಸುತ್ತಾ, ಗದ್ದಲದಿಂದ ಕಿವುಡಾಗಿಸುತ್ತಾ, ನಮ್ಮ ಅಸಹಾಯಕತೆಯಿಂದಲೇ ನಮ್ಮನ್ನು ಕುಗ್ಗಿಸುತ್ತಾ, ಅದರ ವೇಗದಿಂದ ಕಂಗೆಡಿಸುತ್ತಾ ಸಾಗಿಬಂದಿದೆ. ನಾವು ಈ ಸಾರೋಟು ಸವಾರಿಯನ್ನೇ ಪ್ರಗತಿ ಎಂದೂ ಮತ್ತು ಈ ಪ್ರಗತಿಯೇ ನಾಗರೀಕತೆ ಎಂದೂ ಸ್ವೀಕರಿಸಲು ಒಪ್ಪಿದೆವು. ನಾವು 'ಯಾವುದರ ಕಡೆಗೆ ಪ್ರಗತಿ, ಯಾರಿಗಾಗಿ ಪ್ರಗತಿ' ಎಂದೇನಾದರೂ ಪ್ರಶ್ನಿಸುವ ಸಾಹಸ ಮಾಡಿದ್ದರೆ, ಅದನ್ನು ವಿಚಿತ್ರವೆಂದೂ ಮತ್ತು ಪ್ರಗತಿಯ ನಿರಂಕುಶತೆಯನ್ನು ಅನುಮಾನಿಸುವುದು ಪೂರ್ವದ ಅವಿವೇಕದ ನಡವಳಿಕೆ ಎಂದೂ ತಿಳಿಯಲಾಗುತ್ತಿತ್ತು. ಆದರೆ ಇತ್ತೀಚೆಗೆ, ಕೇವಲ ಸಾರೋಟಿನ ವೈಜ್ಞಾನಿಕ ಪರಿಪೂರ್ಣತೆಯನ್ನು ಮಾತ್ರ ಕಂಡು ಮಾರುಹೋಗದೇ, ಅದರ ಹಾದಿಯಲ್ಲಿನ ಹಳ್ಳ-ಗುಂಡಿಗಳ ಆಳವನ್ನೂ ಗಮನಿಸುವಂತೆ ಒಂದು ದನಿ ಎಚ್ಚರಿಸುತ್ತಿದೆ ನಮ್ಮನ್ನು'.

ಟ್ಯಾಗೋರರ 'ಸಾರೋಟು' ಮತ್ತು 'ಗುಂಡಿಗಳ ಆಳ' ಎಂಬ ಪ್ರತಿಮೆಗಳ, ಗಾಂಧೀಜಿಯ 'ಪೈರುನಾಶ' ರೂಪಕದ ಅರ್ಥವೇನು? ಒಬ್ಬ ಭಾರತೀಯನೋ, ಚೀನೀಯೋ ಅಮೆರಿಕದವನೊಬ್ಬನ EFP ಯನ್ನು ಸರಿಗಟ್ಟಿದರೆ, ಆಗ ಈ ಭೂಮಿಯು ಕೆಲವೇ ದಶಕಗಳಲ್ಲಿ ಬೆತ್ತಲಾದೀತು ಎಂದು ಗಾಂಧೀಜಿ ಹೇಳಿರುವುದು. ಗಾಂಧೀಜಿ ಮತ್ತು ಟ್ಯಾಗೋರರಿಬ್ಬರೂ ನಗರ ಮತ್ತು ಕೈಗಾರಿಕಾ ನಾಗರಿಕತೆಯಿಂದ ಸಂಪೂರ್ಣವಾಗಿ ಭ್ರಮನಿರಸನಗೊಂಡಿದ್ದರು. ೧೯೪೫ರ ಅಕ್ಟೋಬರ್ ೫ರಂದು ಗಾಂಧೀಜಿ ನೆಹರೂರವರಿಗೆ ಬರೆದ ಪತ್ರದಲ್ಲಿ ಹೀಗೆನ್ನುತ್ತಾರೆ: 'ಭಾರತವು, ಆ ಮೂಲಕ ಇಡಿಯ ವಿಶ್ವವೂ, ನಿಜವಾದ ಸ್ವಾತಂತ್ರ್ಯವನ್ನು ಪಡೆಯಬೇಕೆಂದರೆ, ಯಾವಾಗಲೇ ಆದರೂ, ಜನರು ಪಟ್ಟಣಗಳಲ್ಲಲ್ಲ, ಹಳ್ಳಿಗಳಲ್ಲಿ ವಾಸಿಸಬೇಕೆನ್ನುವ; ಹಾಗೆಯೇ ಅರಮನೆಗಳಲ್ಲಲ್ಲ, ಗುಡಿಸಲುಗಳಲ್ಲಿ ವಾಸಿಸಬೇಕೆನ್ನುವ ವಾಸ್ತವಾಂಶವನ್ನು ಅರ್ಥಮಾಡಿಕೊಳ್ಳಲೇಬೇಕು ಎಂಬುದು ನನಗೆ ಮನವರಿಕೆಯಾಗಿದೆ. ಕೋಟ್ಯಂತರ ಜನರು ಪಟ್ಟಣಗಳಲ್ಲಿ, ಅರಮನೆಗಳಲ್ಲಿ ಪರಸ್ಪರ ಶಾಂತಿ ನೆಮ್ಮದಿಯಿಂದಿರಲು ಎಂದಿಗೂ ಸಾಧ್ಯವಿಲ್ಲ. ಆಗ ಬೇರೆ ದಾರಿ ಕಾಣದೆ ಅವರು ಹಿಂಸೆ ಮತ್ತು ಸುಳ್ಳಿನ ಮೊರೆಹೋಗುತ್ತಾರೆ. .....ನಾನು ಇಂದಿನ ನಮ್ಮ ಹಳ್ಳಿಯ ಬದುಕನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತಿದ್ದೇನೆಂದು ಭಾವಿಸಬೇಡ. ನನ್ನ ಕಲ್ಪನೆಯ ಹಳ್ಳಿ ನನ್ನ ಮನಸ್ಸಿನಲ್ಲಷ್ಟೇ ಇದೆ ಇನ್ನೂ. ನನ್ನ ಮನಸ್ಸಿನಲ್ಲಿರುವ ಆದರ್ಶ ಹಳ್ಳಿಯಲ್ಲಿ ಬುದ್ಧಿವಂತ ಜನರಿರುತ್ತಾರೆ. ಅವರು ಪ್ರಾಣಿಗಳಂತೆ ಕೊಳಚೆ ಮತ್ತು ಕತ್ತಲಲ್ಲಿ ಬದುಕುವುದಿಲ್ಲ. ಗಂಡು ಹೆಣ್ಣುಗಳು ಮುಕ್ತವಾಗಿರುತ್ತಾರೆ. ಜಗತ್ತಿನ ಯಾರ ಎದುರೇ ಆದರೂ ಅವರು ತಮ್ಮಂತೆ ತಾವಿರುತ್ತಾರೆ'. ಅಕ್ಟೋಬರ್ ೯ ರಂದು ಪಂಡಿತ್ ನೆಹರೂ ಅವರು ಗಾಂಧೀಜಿಗೆ ಈ ರೀತಿ ಉತ್ತರಿಸುತ್ತಾರೆ: 'ನೀವು 'ಹಿಂದ್ ಸ್ವರಾಜ್' ಬರೆದು ೩೮ ವರ್ಷಗಳಾದವು. ಈ ನಡುವೆ ಜಗತ್ತು ಸಂಪೂರ್ಣವಾಗಿ ಬದಲಾಗಿಹೋಗಿದೆ, ಬಹುಶಃ ತಪ್ಪುದಾರಿಯಲ್ಲಿ.... ಇಡೀ ಜಗತ್ತು ಅಥವಾ ಅದರ ಬಹುದೊಡ್ಡ ಭಾಗ ಆತ್ಮಹತ್ಯೆ ಮಾಡಿಕೊಳ್ಳಲು ಹವಣಿಸಿರುವಂತೆ ಕಾಣುತ್ತಿದೆ ಎಂದು

ನೀವು ಹೇಳುತ್ತಿರುವುದು ಸರಿಯಾಗಿಯೇ ಇದೆ. ಅದು, ನಾಗರಿಕತೆಯಲ್ಲಿ ಬಿತ್ತಿದ್ದ ಕೇಡಿನ ಬೀಜವೊಂದು ಬೆಳೆದು ನಿಂತದ್ದರ ಅನಿವಾರ್ಯ ಪರಿಣಾಮವಾಗಿರಬಹುದು'. ನೆಹರೂ ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಬರೆದಿದ್ದಾರೆ: 'ಬದಲಾವಣೆಯ ಹರಿವನ್ನು ತಡೆದು ನಿಲ್ಲಿಸಲಾಗುವುದಿಲ್ಲ ಅಥವಾ ಆ ಹರಿವಿನ ಸೆಳೆತದಿಂದ ಬಿಡಿಸಿಕೊಳ್ಳುವುದೂ ಸಾಧ್ಯವಾಗುವುದಿಲ್ಲ ಮತ್ತು ಮಾನಸಿಕವಾಗಿ, ಈಡನ್ನನ ಸೇಬುಹಣ್ಣನ್ನು ತಿಂದಮೇಲೆ ಅದರ ರುಚಿಯನ್ನು ಮರೆಯಲಾಗುವುದಿಲ್ಲ. ಹಾಗೆಯೇ ಆದಿಮಾನವನ ಕಾಲಕ್ಕೆ ಹಿಂದೋಡುವುದೂ ಸಾಧ್ಯವಿಲ್ಲ'. ಆದ್ದರಿಂದ, ಸ್ವಾತಂತ್ರ್ಯಾನಂತರದ ಕೈಗಾರಿಕಾ ಉದ್ಯಾನದ ಹಣ್ಣನ್ನು ತಿಂದು ೭೩ ವರ್ಷಗಳಾದ ಬಳಿಕ, ಜಗತ್ತಿನ ಅತ್ಯಂತ ಹಸಿದಿರುವ ಜನರು ಇಲ್ಲಿ, ಭಾರತದಲ್ಲಿ ಬದುಕುತ್ತಿದ್ದಾರೆ. ಪ್ರತಿ ೩ ಸೆಕೆಂಡಿಗೆ ಒಂದು ಮಗು ಅಪೌಷ್ಟಿಕತೆಯಿಂದ ಸಾಯುತ್ತಿದೆ. ಶ್ರೀಮಂತ ಮತ್ತು ಬಡವರ ನಡುವಿನ ಕಂದರವು ದೊಡ್ಡದಾಗುತ್ತಿದೆ. ಕೇವಲ ೧% ಶ್ರೀಮಂತರು ದೇಶದ ೬೦% ಸಂಪತ್ತಿನ ಒಡೆಯರಾಗಿದ್ದಾರೆ.

ಗಾಂಧೀಜಿ ಮತ್ತು ಟ್ಯಾಗೋರರಿಬ್ಬರೂ ಹಳ್ಳಿಗಳ ಪುನರ್ನಿರ್ಮಾಣದ ಬಗ್ಗೆ ಮಾತನಾಡಿದ್ದಷ್ಟೇ ಅಲ್ಲ, ಅವರ ಕಲ್ಪನೆಗಳನ್ನು ವಾಸ್ತವದಲ್ಲಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದರು ಕೂಡಾ. ಟ್ಯಾಗೋರರು ಶಾಂತಿನಿಕೇತನವನ್ನು ಆರಂಭಿಸಿದರು ಮತ್ತು ಅದು ಪರ್ಯಾಯ ಶಿಕ್ಷಣ ಮತ್ತು ಹಳ್ಳಿಗಳ ಪುನರ್ನಿರ್ಮಾಣದ ವಿಷಯಗಳಲ್ಲಿ ಕಾರ್ಯಪ್ರವೃತ್ತವಾಯಿತು. ೧೯೨೨ರಲ್ಲಿ ಸಹಕಾರೀ ತತ್ವಗಳ ಬಗ್ಗೆ ಬರೆದ ಲೇಖನವೊಂದರಲ್ಲಿ ಟ್ಯಾಗೋರರು, 'ನಮ್ಮ ಎಲ್ಲ ಅಗತ್ಯಗಳನ್ನು ಪೂರೈಸಿಕೊಳ್ಳಲು ನಾವು ನಮ್ಮ ಹಳ್ಳಿಗಳನ್ನು ಪುನರ್ನಿರ್ಮಾಣ ಮಾಡಬೇಕು. ಒಂದು ವಲಯವನ್ನು ರೂಪಿಸಿಕೊಳ್ಳುವುದು ಅವಶ್ಯಕವಾಗಿದೆ. ವಲಯಗಳ ಮುಖ್ಯಸ್ಥರು ಎಲ್ಲ ಕೆಲಸಕಾರ್ಯಗಳನ್ನು ಸಂಘಟಿಸಿ, ಕುಂದುಕೊರತೆಗಳನ್ನು ತಮ್ಮಲ್ಲೇ ಪರಿಹರಿಸಿಕೊಂಡಾಗ ಮಾತ್ರ ದೇಶಾದ್ಯಂತ ಸ್ವಯಮಾಡಳಿತವನ್ನು ಬಿತ್ತಲು ಸಾಧ್ಯವಾಗಲಿದೆ. ಹಳ್ಳಿಗಳು ಅವರದ್ದೇ ಆದ ಶಾಲೆಗಳನ್ನು, ಸಹಕಾರೀ ಸಂಘಗಳನ್ನು ಮತ್ತು ಬ್ಯಾಂಕ್‌ಗಳನ್ನು ಸ್ಥಾಪಿಸಿಕೊಳ್ಳಲು ಪ್ರೋತ್ಸಾಹವನ್ನೂ ಸಹಾಯವನ್ನೂ ಮಾಡುವುದು ಅವಶ್ಯಕವಾಗಿದೆ. ಈ ರೀತಿಯಾಗಿ ಹಳ್ಳಿಗಳು ಸ್ವಾವಲಂಬಿಗಳಾಗಿ ಮತ್ತು ಒಗ್ಗಟ್ಟಾಗಿ ಇದ್ದರೆ ಮಾತ್ರ ನಾವು ಬದುಕುಳಿದಂತೆ. ನಮ್ಮ ಅತಿದೊಡ್ಡ ಸಮಸ್ಯೆಯೆಂದರೆ, ನಮ್ಮ ಗ್ರಾಮಸಮಾಜವನ್ನು ಹೇಗೆ ಪುನರ್ನಿರ್ಮಾಣ ಮಾಡುವುದು ಎಂಬುದೇ ಆಗಿದೆ'. ಟ್ಯಾಗೋರರು ತಮ್ಮ ಮಗನನ್ನು, ಅಳಿಯನನ್ನು ಮತ್ತು ನಂಬಿಕಸ್ಥ ಶಿಷ್ಯರಲ್ಲೊಬ್ಬರಾದ ಸಂತೋಷ್ ಚಂದ್ರ ಮಜುಂದಾರ್‌ರನ್ನು, ಕೃಷಿ ಮತ್ತು ಹೈನುಗಾರಿಕೆಯನ್ನು ಕಲಿತು ಬಂದು, ಇಲ್ಲಿಯ ರೈತರಿಗೆ ಅಲ್ಲಿಯ ತಂತ್ರಗಳ ಪ್ರಾತ್ಯಕ್ಷಿಕೆಯನ್ನು ಕೊಡಲು ಸಾಧ್ಯವಾಗುವಂತೆ, ಅಮೆರಿಕೆಗೆ ಕಳಿಸಿದರು. ಶಾಂತಿನಿಕೇತನದ ಸುತ್ತಮುತ್ತಲಿನ ಅನೇಕ ಹಳ್ಳಿಗಳಲ್ಲಿ ಟ್ಯಾಗೋರರು ಕೆಲಸ ಮಾಡಿದರು.

ಗಾಂಧೀಜಿ ಹೇಳಿದ್ದರು, 'ಎಷ್ಟರಮಟ್ಟಿಗೆ ರಚನಾತ್ಮಕ ಪ್ರಯತ್ನಗಳಲ್ಲಿ ಯಶಸ್ಸು ಸಾಧಿಸುವ ಸಾಮರ್ಥ್ಯವಿದೆಯೋ ಅಷ್ಟರಮಟ್ಟಿಗೆ ರಾಜಕೀಯ ಅಧಿಕಾರ ಗಳಿಸುವ ತನ್ನ ಸಾಮರ್ಥ್ಯವನ್ನು ಕಾಂಗ್ರೆಸ್ ಹೆಚ್ಚಿಸಿಕೊಳ್ಳುತ್ತದೆ. ನನ್ನ ದೃಷ್ಟಿಯಲ್ಲಿ ಅದೇ ರಾಜಕೀಯ ಅಧಿಕಾರದ ತಿರುಳು'. ರಾಷ್ಟ್ರನಿರ್ಮಾಣದ ಪ್ರಯತ್ನಗಳ ಮೂಲಕ ಕ್ರಾಂತಿಯನ್ನು ಪೂರ್ಣಗೊಳಿಸುವುದು ಸಾಧ್ಯ ಎಂದು ಗಾಂಧೀಜಿ ನಂಬಿದ್ದರು. ಅವರು ತಮ್ಮ ರಚನಾತ್ಮಕ ಕಾರ್ಯಕ್ರಮಗಳಿಂದಲೇ ಇಡೀ ದೇಶವನ್ನು ಪ್ರಭಾವಿಸಿದ್ದರು.

ಪರ್ಯಾಯ ಸಮಾಜದ ಸ್ವರೂಪ

ಆಧುನಿಕ ನಾಗರಿಕತೆಯು ತಂದಿಟ್ಟಿರುವ ಬಿಕ್ಕಟ್ಟನ್ನು ಮತ್ತು ಅದರ ಬಗೆಗಿನ ವಿಶ್ಲೇಷಣೆಗಳನ್ನು ಆಧರಿಸಿ, ಮತ್ತು ಗಾಂಧಿ–ಟ್ಯಾಗೋರರ ಬರೆಹಗಳಲ್ಲಿನ ಪರ್ಯಾಯಗಳ ವಿವರಣೆಗಳನ್ನು ಆಧರಿಸಿ, ಈ ಕೆಳಗಿನ ಅಂಶಗಳನ್ನೊಳಗೊಂಡ ಪರಿಸರ ಸ್ನೇಹಿ ಪರ್ಯಾಯಸಮಾಜವನ್ನು ನಾವು ಚಿತ್ರಿಸಿಕೊಳ್ಳಬಹುದು:

* ನೆಲ, ಮಣ್ಣು, ನೀರು, ಗಾಳಿ, ಕಾಡು, ನದಿ, ಸಮುದ್ರ, ಬೆಟ್ಟಗಳು ಇತ್ಯಾದಿಗಳ ಆರೋಗ್ಯವನ್ನು ಸಂರಕ್ಷಿಸಿಕೊಳ್ಳುವ ಮೂಲಕ ಪ್ರಸಕ್ತ ತಲೆಮಾರಿಗಷ್ಟೇ ಅಲ್ಲದೇ ಅಂತರ–ತಲೆಮಾರುಗಳಿಗೂ ಸಮತೆಯ ಭರವಸೆಯನ್ನು ಕೊಡುವಂಥ ಸಮತಾ ಸಮಾಜವನ್ನು ಸ್ಥಾಪಿಸಬೇಕು.

* ಎಲ್ಲರಿಗೂ ತಕ್ಕಷ್ಟು ಆರೋಗ್ಯಕರ ಮತ್ತು ವೈವಿಧ್ಯಮಯ ಆಹಾರ ದೊರಕುವಂತೆ ನೋಡಿಕೊಳ್ಳಬೇಕು.

* ರಾಸಾಯನಿಕ ಮತ್ತು ಔದ್ಯಮಿಕ ಕೃಷಿಯನ್ನು ಕೈಬಿಟ್ಟು ಎಲ್ಲ ಆಹಾರ ಪದಾರ್ಥಗಳೂ ಸಾವಯವ ಉತ್ಪನ್ನಗಳಾಗಿರುವಂತೆ ನೋಡಿಕೊಳ್ಳಬೇಕು.

* ನಗರೀಕರಣವನ್ನು ತ್ಯಜಿಸಬೇಕು ಮತ್ತು ಸ್ವಾವಲಂಬಿ, ಸರಳ ಬದುಕಿನ ಗ್ರಾಮಸಮಾಜವನ್ನು ಸ್ಥಾಪಿಸಬೇಕು. ಎಲ್ಲರೂ ಸಣ್ಣ ಸಣ್ಣ ಪರಿಸರ ಸುಸ್ಥಿರ ಮನೆಗಳಲ್ಲಿ ವಾಸಿಸಬೇಕು. ಅವುಗಳನ್ನು ಜನರು ತಾವೇ ಕಟ್ಟಿಕೊಂಡು ನಿರ್ವಹಿಸುವಂತಿರಬೇಕು. ಮನೆಗಳು ಇಂಧನದಕ್ಷವಾಗಿರಬೇಕು. ಕೆಲ ಮನೆಗಳನ್ನು ಕೆಡವಬೇಕಾಗಬಹುದು. ಆದರೆ ಕೆಡವಿದ ಎಲ್ಲ ವಸ್ತುಗಳೂ ಪುನರ್ಬಳಕೆ ಮಾಡುವಂತಿರಬೇಕು.

* ತಕ್ಕಷ್ಟು ಆರೋಗ್ಯ ಸೇವೆಗಳನ್ನು ಪರಿಚಯಿಸಬೇಕು

* ಎಲ್ಲರಿಗೂ ಉಪಯೋಗಕ್ಕೆ ಬಾರದ ಅನಗತ್ಯ ವಸ್ತುಗಳ ತಯಾರಿಕೆಯನ್ನು ಕೈಬಿಡಬೇಕು. ಹೀಗೆ ಮಾಡಿದರೆ ಇಂಧನ ಮತ್ತು ವಿವಿಧ ರೀತಿಯ ಅದಿರಿನ ಬೇಡಿಕೆಯನ್ನು ತಗ್ಗಿಸಬಹುದು.

* ಎಲ್ಲ ಹಳೆಯ ಮತ್ತು ಬಿಸಾಡಿದ ವಸ್ತುಗಳನ್ನು ಸಂಸ್ಕರಿಸಬೇಕು.

* ಎಲ್ಲ ಉತ್ಪಾದನೆಗಳೂ ಸಹಕಾರೀ ತತ್ವದಲ್ಲಿ ನಡೆಯಬೇಕು. ಹೆಚ್ಚಿನ ಬಳಕೆಯ ವಸ್ತುಗಳು ಸ್ಥಳೀಯವಾಗಿ ಉತ್ಪಾದಿಸಲ್ಪಡಬೇಕು ಮತ್ತು ಉಪಯೋಗಿಸಬೇಕು. ಇದು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸರಕು ಸಾಗಣೆಯ ಅಗತ್ಯವನ್ನು ಕಡಿಮೆ ಮಾಡುತ್ತದೆ. ತನ್ಮೂಲಕ ಇಂಧನ ಬಳಕೆ ಕಡಿಮೆಯಾಗುವುದಲ್ಲದೇ, ಸಾಗಣೆಗೆ ಬೇಕಾಗುವ ಉಪಕರಣಗಳು, ರಸ್ತೆ–ಸೇತುವೆ ನಿರ್ಮಾಣವೂ ಕಡಿಮೆಯಾಗುತ್ತದೆ.

* ಬಹುತೇಕ ಎಲ್ಲ ಜನರೂ ತಂತಮ್ಮ ಹಳ್ಳಿಗಳ ವಿವಿಧ ಕೆಲಸಗಳಲ್ಲಿ ನಿರತರಾಗಿರಬೇಕು. ಇದು ನಗರೀಕರಣದ ಅಗತ್ಯವನ್ನು ಕಡಿಮೆ ಮಾಡುತ್ತದೆ.

* ಹೀಗೆ ಗ್ರಾಮಾಧಾರಿತ ಸಮಾಜದಲ್ಲಿ ಪ್ರತಿಯೊಬ್ಬರೂ ಉತ್ಪಾದನಾ ಕೆಲಸಗಳಲ್ಲಿ ನಿರತರಾಗಿರುವ ಸಂದರ್ಭದಲ್ಲಿ, ಮಕ್ಕಳಿಗೆ ಚಿಕ್ಕಂದಿನಿಂದಲೇ ಹೊಸ ರೀತಿಯ ಶಿಕ್ಷಣವನ್ನು ಪರಿಚಯಿಸಬೇಕು. ಅದು ಅವರನ್ನು ಸ್ವಾವಲಂಬಿಯಾಗಿಸುವಂತೆ ಮತ್ತು ಪರಸ್ಪರ ಸಂಪರ್ಕದಲ್ಲಿ ಉಳಿಸುವಂತೆ ಇರಬೇಕು.

* ಚಿಕ್ಕಂದಿನಿಂದಲೇ ಮಗುವು, ತನ್ನ ಮತ್ತು ಇತರರ ನಡುವೆ ಸೌಹಾರ್ದವನ್ನು ಬೆಳೆಸುವಂಥ, ಪರಿಸರದೊಂದಿಗೆ ತಾದಾತ್ಮ್ಯವನ್ನು ಹೊಂದಲು ಸಹಕಾರಿಯಾದ ಹೊಸ ಸಮೃದ್ಧ ಸಂಸ್ಕೃತಿಯ ಬಗೆಗೆ ಉತ್ಸಾಹವನ್ನು ಹೊಂದಿರಬೇಕು. ಆ ಹೊಸ ಸಂಸ್ಕೃತಿಯು ಕೊಳ್ಳುಬಾಕತನವನ್ನು ತೊರೆಸಿ ಸರಳ ಬದುಕಿನ ಕಡೆಗೆ ಸೆಳೆಯುವಂತಿರಬೇಕು. ಇವೆಲ್ಲವೂ ಮಾಡುವ ಕೆಲಸವನ್ನು ಆಹ್ಲಾದಿಸುವಂತೆ ಮತ್ತು ಬದುಕಿನ ಭಾಗವಾಗುವಂತೆ ಮಾಡುತ್ತದೆ.


* ಲಿಂಗ ಸಮಾನತೆಯನ್ನು ಸ್ಥಾಪಿಸಬೇಕು.

* ಕೈಲಾಗದವರು ಮತ್ತು ವಯಸ್ಸಾದವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಬೇಕು.

ಹೋರಾಟ ಮತ್ತು ನಿರ್ಮಾಣ

ಹೀಗೆ ಕಲ್ಪಿಸಿಕೊಂಡಿರುವ ಸಮಾಜವು ತಂತಾನೇ ಬಂದುಬಿಡುವುದಿಲ್ಲ. ಇದನ್ನು ವಾಸ್ತವವಾಗಿಸಬೇಕಾದರೆ, ಹೋರಾಟ ಮತ್ತು ನಿರ್ಮಾಣ ಕೆಲಸಗಳನ್ನು ಸಮಾನಾಂತರವಾಗಿ ಕೈಗೊಳ್ಳಬೇಕು. ಎಲ್ಲ ಉದ್ಯೋಗನಿರತ ಜನರನ್ನು ಒಂದುಗೂಡಿಸಬೇಕು. ಪರಿಸರ ಸಮಾಜವಾದವನ್ನು ಸ್ಥಾಪಿಸುವುದಕ್ಕಾಗಿ ಪಟ್ಟುಬಿಡದ ಹೋರಾಟವನ್ನು ಆರಂಭಿಸಬೇಕು.

ಇದರೊಂದಿಗೆ, ವಿವಿಧ ಕ್ಷೇತ್ರಗಳಲ್ಲಿನ ಜನರು, ಶಿಕ್ಷಣ, ಕೃಷಿ, ಗ್ರಾಮೋದ್ಯೋಗ, ನೀರಿನ ಕೊಯ್ಲು, ಅರಣ್ಯೀಕರಣ ಇತ್ಯಾದಿ ರಚನಾತ್ಮಕ ಕೆಲಸಗಳನ್ನು ಕೈಗೊಳ್ಳಬೇಕು. ಭಾರತದ ವಿವಿಧ ಭಾಗಗಳಲ್ಲಿ ಇಂಥ ರಚನಾತ್ಮಕ ಕೆಲಸಗಳಾಗುತ್ತಿವೆ. ಆಂಧ್ರಪ್ರದೇಶದ ಟಿಂಬಕ್ಟು ಸಮೂಹ, ಬಂಕರ್ ರಾಯ್ ಅವರ ಪ್ರಯತ್ನಗಳು, ರಾಜಾಸ್ಥಾನದ ತರುಣ ಭಾರತ ಸಂಘ ಮತ್ತು ದೇಶಾದ್ಯಂತ ವಿವಿಧ ಗಾಂಧಿವಾದೀ ಸಂಘಟನೆಗಳು ಇಂತಹ ಕೆಲಸಗಳನ್ನು ಮಾಡುತ್ತಿವೆ. ನಾನು ಸ್ವತಃ ಇಂಥ ಕೆಲಸಗಳಿಗೆ ಸಾಕ್ಷಿಯಾಗಿದ್ದೇನೆ ಹಾಗೂ ದೇಶದಲ್ಲಿ ನಡೆಯುವ ಇಂಥ ರಚನಾತ್ಮಕ ಕೆಲಸಗಳಲ್ಲಿ ಭಾಗಿಯಾಗಿದ್ದೇನೆ. ನಾವು ಕೊಂಡಾಡುವ ಸಮಾಜವನ್ನು ಸ್ಥಾಪಿಸಲು ಸಾಧ್ಯವಿದೆ ಎಂದು ನಾನು ದೃಢವಾಗಿ ನಂಬುತ್ತೇನೆ. ಭಾರತದ ಬಹುತೇಕ ಮಂದಿ ಸರಳವಾಗಿಯೇ ಬದುಕುತ್ತಿದ್ದಾರೆ. ಅನುಕೂಲಸ್ಥರಿಗೆ ಬದಲಾವಣೆ ಕಷ್ಟವಾಗಬಹುದು. ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯ ದೆಸೆಯಿಂದ ಕುಸಿಯುತ್ತಿರುವ ವಿಶ್ವವನ್ನು ಗಣನೆಗೆ ತೆಗೆದುಕೊಂಡರೆ, ಅವರೂ ಕೂಡ ತಮ್ಮ ಜೀವನಶೈಲಿಯನ್ನು ಬದಲಿಸಿಕೊಳ್ಳಲೇಬೇಕಾಗುತ್ತದೆಂದು ನಾನು ಭಾವಿಸುತ್ತೇನೆ. ಇಲ್ಲದಿದ್ದರೆ, ನೈಸರ್ಗಿಕ ಆಯ್ಕೆಯ ಪ್ರಕಾರ, ಅವರು ಅಳಿದುಹೋಗುತ್ತಾರೆ. ಟ್ಯಾಗೋರರು ಬರೆದಿರುವಂತೆ: 'ಮನುಷ್ಯನಲ್ಲಿ ನಂಬಿಕೆ ಕಳೆದುಕೊಳ್ಳುವುದು ಪಾಪಕಾರ್ಯ'.



ನಾನೊಬ್ಬ ಆಶಾವಾದಿ. ಮನುಷ್ಯರು ಉತ್ತಮ ಜಗತ್ತನ್ನು ರೂಪಿಸುವ ಬದಲಾವಣೆಗಾಗಿ ಎದ್ದುನಿಲ್ಲುವರು ಎಂಬ ಖಾತ್ರಿ ನನಗಿದೆ.

(ಸಮರ್ ಬಾಗ್ಚಿಯವರು ವಿಜ್ಞಾನಿ ಮತ್ತು ಕಲ್ಕತ್ತಾದ ಬಿರ್ಲಾ ಕೈಗಾರಿಕಾ ಮತ್ತು ತಂತ್ರಜ್ಞಾನ ವಸ್ತುಸಂಗ್ರಹಾಲಯದ ಮಾಜಿ ನಿರ್ದೇಶಕರು. ವಿಜ್ಞಾನವನ್ನು ಜನಸಾಮಾನ್ಯರತ್ತ ಕೊಂಡೊಯ್ಯುವ ತಮ್ಮ ಕೆಲಸಗಳಿಂದಾಗಿ ಪ್ರಸಿದ್ಧರು.)

ಗಾಂಧೀಜಿಯ ಒಂದು ಪ್ರೇಮ ಪ್ರಸಂಗ

–ಡಿ.ಎಸ್.ನಾಗಭೂಷಣ





ಗಾಂಧಿಯವರ ಸಾರ್ವಜನಿಕ ವ್ಯಕ್ತಿತ್ವದ ಪರಿಚಯ ಮಾತ್ರವಿರುವವರಿಗೆ ಈ ಪ್ರಸಂಗ ಆಶ್ಚರ್ಯವನ್ನೂ, ಕುತೂಹಲವನ್ನೂ ಹುಟ್ಟಿಸಬಹುದು. ಆದರೆ ಗಾಂಧಿ ನಮ್ಮಂತೆಯೇ ರಕ್ತ ಮಾಂಸಗಳಿಂದಾದ ವ್ಯಕ್ತಿ ಎಂಬುದರ ಅರಿವಿನಲ್ಲಿ ಅವರ ಜೀವನವನ್ನು ಅವಲೋಕಿಸಿದಾಗ ಅವರು ನಮ್ಮೆಲ್ಲರಂತೆಯೇ ಮಾನವಸಹಜ ಆಕರ್ಷಣೆಗಳಿಗೆ ಒಳಗಾಗಿದ್ದರು ಮತ್ತು ಅವುಗಳ ವಿರುದ್ಧ ಸೆಣಸಾಡಿದರು ಎಂಬುದು ತಿಳಿಯುತ್ತದೆ. ಹಾಗಾಗಿಯೇ ಅವರು ತಮ್ಮ ಬದುಕನ್ನು 'ಸತ್ಯದೊಡನೆ ಪ್ರಯೋಗ' ಎಂದು ಕರೆದುಕೊಂಡಿರುವುದು.

೧೯೨೦ರ ಅಸಹಕಾರ ಸತ್ಯಾಗ್ರಹ ಸಂದರ್ಭದಲ್ಲಿ ಸಂಭವಿಸಿದ ಈ ಪ್ರೇಮ ಪ್ರಸಂಗ ಗಾಂಧಿಯವರೇ ಹೇಳಿಕೊಂಡಿರುವಂತೆ ಒಂದಿಷ್ಟು ಎಚ್ಚರದಪ್ಪಿದ್ದರೂ ಅವರ ಬದುಕನ್ನು ಅಪಾಯಕ್ಕೆ ಈಡು ಮಾಡುತ್ತಿತ್ತು. ಅವರ ಬದುಕಿನ ಈ ಬಹುಸೂಕ್ಷ್ಮ ಪ್ರಸಂಗವನ್ನು ಡಿ.ಎಸ್ ನಾಗಭೂಷಣ ಅವರು ಬರೆಯುತ್ತಿರುವ 'ಗಾಂಧಿ ಕಥನ'ದಿಂದ ಆರಿಸಿ ನೀಡಲಾಗಿದೆ.-ಸಂ.

ಪಂಜಾಬ್‌ಗೆ ಬಂದ ಗಾಂಧೀಜಿ ಲಾಹೋರ್‌ನ ರಾಮ್‌ಭುಜ್‌ದತ್ ಚೌಧುರಿಯವರ ಮನೆಯಲ್ಲಿ ಬಿಡಾರ ಹೂಡಿ ಅವರ ಪತ್ನಿ ಸರಳಾದೇವಿ ಚೌಧುರಾಣಿಯವರ ಆತಿಥಿಯಾಗಿ ೧೯೧೯ರ ಅಕ್ಟೋಬರ್‌ನಿಂದ ೧೯೨೦ರ ಮಾರ್ಚ್–ಏಪ್ರಿಲ್‌ವರೆಗೆ ಉಳಿದರು. ಈ ಸಮಯದಲ್ಲಿ ಸರಳಾದೇವಿಯ ವ್ಯಕ್ತಿತ್ವಕ್ಕೆ ಮಾರುಹೋದ ಗಾಂಧಿ, ಅವರನ್ನು ತುಂಬ ಹಚ್ಚಿಕೊಂಡು ತಾವು ಹೋದೆಡೆಯಲ್ಲೆಲ್ಲ ಅವರನ್ನೂ ಕರೆದುಕೊಂಡು ಹೋಗತೊಡಗಿದ್ದು ಹಲವರ ಕುತೂಹಲ ಕೆರಳಿಸಿತು. ಗಾಂಧಿ ಲಾಹೋರ್‌ಗೆ ಬಂದಾಗ ಅವರಿಗೆ ಐವತ್ತು ವರ್ಷ, ಸರಳಾದೇವಿಯವರಿಗೆ ನಲವತ್ತೇಳು ವರ್ಷ ವಯಸ್ಸು. ಈ ಮೊದಲೇ ತಿಳಿಸಿದಂತೆ ಮೂಲತಃ ಬಂಗಾಳಿ ಆಢ್ಯ ಮನೆತನಕ್ಕೆ ಸೇರಿದ ಆಕೆಯ ಆಸಕ್ತಿಗಳು ವೈವಿಧ್ಯಮಯವಾಗಿದ್ದವು. ಅವರು ಆಗ ಸೆರೆಮನೆಯಲ್ಲಿದ್ದ ತಮ್ಮ ಪತಿ ನಡೆಸುತ್ತಿದ್ದ 'ಹಿಂದೂಸ್ತಾನ್' ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಸರಳಾದೇವಿಯವರ ಸ್ವತಂತ್ರ ವ್ಯಕ್ತಿತ್ವ ಗಾಂಧಿಯವರನ್ನು ಸೆಳೆದಿತ್ತು. ಲಾಹೋರ್‌ಗೆ ಬಂದೊಡನೆ ಗಾಂಧಿ ತಮ್ಮ 'ನವಜೀವನ' ಪತ್ರಿಕೆಗೆ ಬರೆದ 'ಪಂಜಾಬ್' ಪತ್ರದಲ್ಲಿ ತಾವು ಸರಳಾದೇವಿಯವರ ಅತಿಥಿಯಾಗಿದ್ದು ಅವರ ಪ್ರೀತಿಯ ಹೊಳೆಯಲ್ಲಿ ಮೀಯುತ್ತಿರುವುದಾಗಿ ಬರೆದಿದ್ದಾರೆ.

ಬಹುಮುಖ ಪ್ರತಿಭೆಯ ಸರಳಾದೇವಿ

ಸರಳಾದೇವಿಯವರ ವ್ಯಕ್ತಿತ್ವವನ್ನು ವಿವೇಕಾನಂದರೂ ಸೆಳೆಯಲ್ಪಟ್ಟಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವರು ಸರಳಾದೇವಿಯಂತಹ ದಿಟ್ಟ ಮತ್ತು ಪ್ರತಿಭಾನ್ವಿತ ಮಹಿಳೆಯರು ತಮ್ಮ ಸನಾತನ ಧರ್ಮ ಪುನರುಜ್ಜೀವನ ಆಂದೋಲನದೊಂದಿಗೆ ಕೈಜೋಡಿಸಿದರೆ, ದೇಶ–ವಿದೇಶಗಳ ನೂರಾರು ಜನ ಭಾರತೀಯ ಧರ್ಮ ಪ್ರಚಾರ ಕೈಂಕರ್ಯದಲ್ಲಿ ಪಾಲುದಾರರಾಗುವುದು ಖಂಡಿತವೆಂದು ಸೂಚಿಸಿದ್ದರು. ಆದರೆ ಸರಳಾದೇವಿ ಆ ಆಧ್ಯಾತ್ಮಿಕ ದಾರಿಯನ್ನೊಲ್ಲದೆ ಮೈಸೂರಿಗೆ ಬಂದು ಸ್ವಲ್ಪ ಕಾಲ ಶಾಲೆಯೊಂದರ ಉಪಾಧ್ಯಾಯಿನಿಯಾಗಿ ಸ್ವತಂತ್ರ ಜೀವನದ ಅನುಭವ ಪಡೆದು, ಹಿಮಾಲಯದ ಕುಮಾಂವ್ ಗಿರಿಧಾಮಕ್ಕೆ ಹೋಗಿ ಅಲ್ಲಿಂದ ಟಿಬೆಟ್ಟಿನಲ್ಲಿ ಮಾನಸ ಸರೋವರ ಯಾತ್ರೆಯ ಸಿದ್ಧತೆಯಲ್ಲಿ ತೊಡಗಿದ್ದರು. ಆಗ ಕಲ್ಕತ್ತಾದ ಅವರ ಮನೆಯಿಂದ ತಾಯಿಯ ಅನಾರೋಗ್ಯದ ಬಗ್ಗೆ ಬಂದ ತುರ್ತು ಸಂದೇಶಕ್ಕನುಗುಣವಾಗಿ ಅಲ್ಲಿ ಹೋದ ಸರಳಾದೇವಿಗೆ ಅವರ ತಾಯಿಯ ಕೊನೆಯ ಆಸೆಯಂತೆ ಮದುವೆ ಮಾಡಲಾಯಿತು. ಪತಿ, ವಿಧುರನೂ ಮತ್ತು ಮೊದಲ ಹೆಂಡತಿಯಿಂದ ಜಗದೀಶ್ ಎಂಬ ಒಬ್ಬ ಮಗನನ್ನೂ ಪಡೆದಿದ್ದ ಲಾಹೋರ್‌ನ ಪ್ರಸಿದ್ಧ ವಕೀಲ ರಾಮ್‌ಭುಜ್ ದತ್ ಚೌಧುರಿ. ಆಗ ಸರಳಾದೇವಿಯವರಿಗೆ ಮುವ್ವತ್ತು ಮೂರು ವರ್ಷ. ಸ್ವಭಾವತಃ ಸ್ತ್ರೀವಾದಿಯಾಗಿದ್ದ ಅವರು, ಲಾಹೋರ್‌ನಲ್ಲಿ ಮನುಪ್ರಣೀತ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಿಂದ ಮಹಿಳೆಯರ ಬಿಡುಗಡೆಯ ಉದ್ದೇಶವುಳ್ಳ ಭಾರತ್ ಸ್ತ್ರೀ ಮಹಾಮಂಡಳವನ್ನು ಸ್ಥಾಪಿಸಿ ಸಮಾಜಸೇವಾ ಕಾರ್ಯದಲ್ಲಿ ತೊಡಗಿಕೊಂಡರು. ದಂಪತಿಗಳಿಗೆ ದೀಪಕ್ ಎಂಬ ಮಗನೂ ಹುಟ್ಟಿದ.

ಗಾಂಧಿಯವರ ಪಂಜಾಬ್ ಪ್ರವಾಸದುದ್ದಕ್ಕೂ ಅವರೊಂದಿಗೆ ಇರುತ್ತಿದ್ದ ಸರಳಾದೇವಿ, ಪಂಜಾಬ್ ಅತ್ಯಾಚಾರಗಳ ಸಾಕ್ಷ್ಯ ಸಂಗ್ರಹದಲ್ಲಿ ಅವರಿಗೆ ನೆರವಾಗುತ್ತಿದ್ದರು. ಗಾಂಧಿಯವರ ಸ್ವದೇಶಿ ಪ್ರಚಾರ ಸಭೆಗಳಲ್ಲಿ ಅವರು ಹಾಡುತ್ತಿದ್ದರು ಮತ್ತು ಕೆಲವೆಡೆ ಭಾಷಣಗಳನ್ನೂ ಮಾಡುತ್ತಿದ್ದರು. ಗಾಂಧಿ ತಮ್ಮ 'ಯಂಗ್ ಇಂಡಿಯಾ' ಮತ್ತು 'ನವಜೀವನ' ಪತ್ರಿಕೆಗಳಿಗೆ ಲೇಖನಗಳನ್ನು ಬರೆಯಲು ಅವರನ್ನು ಪ್ರೋತ್ಸಾಹಿಸುತ್ತಿದ್ದರಲ್ಲದೆ, ಅವರ ಬಗ್ಗೆ ಈ ಪತ್ರಿಕೆಗಳಲ್ಲಿ ತಾವೇ ಪರಿಚಯ ಲೇಖನಗಳನ್ನೂ ಬರೆದು ಅವರ ಬರವಣಿಗೆಯಲ್ಲಿನ ಅನಂತ ಸವಿಯನ್ನು ಓದುಗರು ಗುರುತಿಸಲು ಸೂಚಿಸಿದರು. ಗಾಂಧಿಯವರಿಗೆ ಆತಿಥ್ಯ ನೀಡಿದ ಕಾರಣ, ಪಂಜಾಬ್‌ನ ಗವರ್ನರ್ ಓ' ಡ್ವಯರ್‌ನ ಪತ್ನಿ ಲಾಹೋರ್‌ನ ಪ್ರತಿಷ್ಠಿತ ಮಹಿಳೆಯರ ಸಂಘವಾಗಿದ್ದ 'ಪರ್ದ ಕ್ಲಬ್'ನಿಂದ ಅವರನ್ನು ಹೊರಹಾಕುವ ಸೂಚನಾ ಪತ್ರ ನೀಡಿದಾಗ, ಆ ಇಬ್ಬರು ಮಹಿಳೆಯರ ನಡುವೆ ನಡೆದ ಇಡೀ ಪತ್ರವ್ಯವಹಾರವನ್ನು ಗಾಂಧಿ 'ಯಂಗ್ ಇಂಡಿಯಾ'ದಲ್ಲಿ ಪ್ರಕಟಿಸಿ ಸರಳಾದೇವಿಯವರಿಗೆ ನೀಡುತ್ತಿರುವ ಈ ಕಿರುಕುಳ ಭಾರತದ ಸುಸಂಸ್ಕೃತ ಮಹಿಳಾ ಸಮೂಹಕ್ಕೆ ಪ್ರಭುತ್ವ ಒಡ್ಡುತ್ತಿರುವ ಬೆದರಿಕೆ ಎಂಬ ಟಿಪ್ಪಣಿಯನ್ನೂ ಬರೆದರು. ಸರಳಾದೇವಿ ತಮ್ಮ ಮಗ ದೀಪಕ್‌ನನ್ನು ಅಹಮದಾಬಾದ್‌ನ ಆಶ್ರಮದಲ್ಲಿ ಬೆಳೆಯಲು ಕಳಿಸಿದರು.

ಗಾಂಧಿ–ಸರಳಾದೇವಿ ಒಡನಾಟ: ಆಶ್ರಮವಾಸಿಗಳ ಆತಂಕ

ಪಂಜಾಬ್ ದೌರ್ಜನ್ಯಗಳ ವಿಚಾರಣಾ ಸಮಿತಿಯ ವರದಿಯ ಅಂತಿಮ ಕರಡು ಸಿದ್ಧಪಡಿಸಲು ಮದನಮೋಹನ ಮಾಳವೀಯರಿದ್ದ ಬನಾರಸ್‌ಗೆ ಹೋಗಿದ್ದ ಗಾಂಧಿ, ವಾಪಸ್ ಬರುವಾಗ ಸರಳಾದೇವಿಯವರಿಗೆ ದೆಹಲಿಗೆ ಬರಲು ಹೇಳಿ ಅಲ್ಲಿಂದ ಇಬ್ಬರೂ ಅಹಮದಾಬಾದ್‌ಗೂ ಬಂದು, ಒಟ್ಟಿಗೆ ಗುಜರಾತ್ ಪ್ರವಾಸ ಮಾಡಿದರು. ಈ ಸಂದರ್ಭದಲ್ಲಿ ಸರಳಾದೇವಿಯವರು ಸಬರ್ಮತಿ ನದಿಯ ಮರಳು ದಂಡೆಯಲ್ಲಿ ನಡೆದ ಒಂದು ಸಭೆಯನ್ನು ಉದ್ದೇಶಿಸಿಯೂ ಮಾತನಾಡಿದರು.

ಇದನ್ನೆಲ್ಲ ನೋಡಿದ ಕಸ್ತೂರಬಾಗೆ ಏನನ್ನಿಸಿತೋ ತಿಳಿಯದು. ಆದರೆ ಮಹದೇವ ದೇಸಾಯಿ, ಮಗನ್‌ಲಾಲ್, ಅವರ ಮಗ ಮನ್ಮಥದಾಸ್ ಮತ್ತು ಸ್ವತಃ ಗಾಂಧಿಯವರ ಮಗ ದೇವದಾಸ್ ಹಾಗೂ ಅನೇಕ ಆಶ್ರಮವಾಸಿಗಳಿಗೆ ಆತಂಕ ಶುರುವಾಗಿದ್ದಂತೂ ನಿಜ. ಅವರಿಗೆಲ್ಲ ತಮ್ಮ ಕಣ್ಣಿಗೆ ಕಾಣುವುದಕ್ಕಿಂತ ಹೆಚ್ಚಿನ ಸೂಕ್ಷ್ಮವಾದದ್ದೇನೋ ನಡೆಯುತ್ತಿದೆ ಎಂಬ ಅನುಮಾನಗಳು ಶುರುವಾಗಿದ್ದವು.

ಈ ಅನುಮಾನಗಳಿಗೆ ಕಾರಣಗಳೂ ಇದ್ದವು. ಗಾಂಧಿ ತಮ್ಮ ಬದುಕಿಗೆ ಸಂಬಂಧಿಸಿದ ಯಾವ ವ್ಯವಹಾರವನ್ನು ಗುಟ್ಟಾಗಿ ಇಡುತ್ತಿರಲಿಲ್ಲ. ಗಾಂಧಿ–ಸರಳಾದೇವಿಯವರ ನಡುವಣ 'ಸವಿಯಾದ ಆತ್ಮೀಯತೆ'ಯ ಬೆಳವಣಿಗೆಯನ್ನು ಗಾಂಧಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರು, ಅವರಿಬ್ಬರ ನಡುವಣ ಪತ್ರ ವ್ಯವಹಾರಗಳನ್ನು ಗಮನಿಸುತ್ತಾ ತಮ್ಮ ಕುತೂಹಲವನ್ನು ಮಗನ್‌ಲಾಲ್ ಮತ್ತು ಇತರರೊಂದಿಗೆ ಹಂಚಿಕೊಂಡಿದ್ದರು. ದೇಸಾಯಿ ಈ ಸಂಬಂಧವನ್ನು 'ಬೌದ್ಧಿಕ

ದಾಂಪತ್ಯ' ಎಂದು ಕರೆದಿದ್ದರು.

ಈ ಮಧ್ಯೆ ಸರಳಾದೇವಿಯವರ ಪತಿ ರಾಮ್‌ಭುಜ್‌ದತ್ ಚೌಧುರಿ ಸೆರೆಮನೆಯಿಂದ ಬಿಡುಗಡೆಯಾಗಿ ಮನೆಗೆ ಬಂದಿದ್ದರು. ಆ ದಿನ ಸರಳಾದೇವಿಯವರ ಮುಖದ ಮೇಲಿನ ಗೆರೆಗಳು ಅಳಿಸಿ ಒಂದು ಹೊಸಕಾಂತಿ ಮೂಡಿದ್ದನ್ನು ತಾವು ಕಂಡಿದ್ದಾಗಿ ಗಾಂಧಿ 'ನವಜೀವನ್' ಪತ್ರಿಕೆಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಆದರೂ ಇದರಿಂದ ಅವರಿಬ್ಬರ ಸವಿಯಾದ ಸಂಬಂಧಕ್ಕೇನೂ ಬಾಧೆ ಒದಗಿದಂತಿರಲಿಲ್ಲ. ಏಕೆಂದರೆ ಮುಂದೆ ಕೂಡ ಅವರಿಬ್ಬರೂ ಒಟ್ಟಿಗೆ ಹಲವು ಸಭೆಗಳಿಗೆ ಹೋಗಿಬಂದರು ಮತ್ತು ಒಟ್ಟಿಗಿಲ್ಲದಿದ್ದಾಗ ಎಡೆಬಿಡದೆ ಪತ್ರ ವ್ಯವಹಾರ ನಡೆಸಿದರು. ಅಷ್ಟಲ್ಲದೆ ಗಾಂಧಿ ತಮ್ಮ ಈ ವಿಶಿಷ್ಟ ಸಂಬಂಧವನ್ನು ಹಲವು ರೀತಿಯಲ್ಲಿ ಬಣ್ಣಿಸುತ್ತಾ ಪತ್ರಗಳನ್ನು ಬರೆದದ್ದೂ ಇದೆ. ಅವರಲ್ಲಿ ಇಬ್ಬರು ಮುಖ್ಯರೆಂದರೆ ದ.ಆಫ್ರಿಕಾದ ಗೆಳೆಯ ಕಲೆನ್‌ಬಾಕ್ ಮತ್ತು ದ.ಭಾರತದ ಹೊಸ ಶಿಷ್ಯ, ಈಗ ರಾಜಾಜಿ ಎಂದೇ ಪ್ರಸಿದ್ಧರಾಗಿದ್ದ ರಾಜಗೋಪಾಲಾಚಾರಿ.

ನಿಲ್ಲದ ಒಡನಾಟ-ವಿನಿಮಯವಾದ ಪ್ರೇಮ ಪತ್ರಗಳು!

೧೯೨೦ರ ಏಪ್ರಿಲ್‌ನಲ್ಲಿ ೧೯೧೯ರ ಏಪ್ರಿಲ್ ಹರತಾಳದ ವಾರ್ಷಿಕೋತ್ಸವವನ್ನು ರಾಷ್ಟ್ರೀಯ ಸಪ್ತಾಹವೆಂದು ಆಚರಿಸಿದ ಖಿಲಾಫತ್ ಸಮಿತಿಯ ಸಭೆಗೆ ಸರಳಾದೇವಿಯವರೊಂದಿಗೆ ಬಾಂಬೆಗೆ ಆಗಮಿಸಿದ ಗಾಂಧಿ, ಅಲ್ಲಿ ಹಲವು ಸಭೆಗಳಲ್ಲಿ ಭಾಗವಹಿಸಿದರು. ಗಾಂಧಿಯವರ ಪ್ರೇರಣೆಗೆ ಒಳಗಾಗಿ ಸರಳಾದೇವಿಯವರು, ಪ್ರಥಮ ಬಾರಿಗೆ ಖಾದಿ ಸೀರೆ ಮತ್ತು ಕುಪ್ಪಸ ತೊಟ್ಟು ಸಭೆಗಳಲ್ಲಿ ಭಾಗವಹಿಸಿ ಮಾತನಾಡಿದರು. ತಮ್ಮ ನಿಡುಗಾಲದ ಸಹವರ್ತಿ ಮತ್ತು ಅಭಿಮಾನಿ ಅನಸೂಯಾ ಬೆನ್ ಅಂತಹವರೂ ಎಷ್ಟೇ ಒತ್ತಾಯಿಸಿದರೂ, ಅದು ಒರಟು ಮತ್ತು ದಪ್ಪ ಎಂದು ಉಡಲು ನಿರಾಕರಿಸಿದ್ದ ಖಾದಿ ಸೀರೆಯನ್ನು ಈಗ ಸರಳಾದೇವಿಯವರು ಉಟ್ಟು ಸಾರ್ವಜನಿಕ ಸಭೆಯಲ್ಲಿ ಕಾಣಿಸಿಕೊಂಡಿದ್ದರಿಂದ ಖುಷಿಯಾಗಿ, ಇದರಿಂದ ಖಾದಿ ಆಂದೋಲನಕ್ಕೆ ಹೊಸ ಗರಿ ಮೂಡಿದೆ ಎಂದು ಸರಳಾದೇವಿಯವರನ್ನು ಹೊಗಳಿ 'ನವಜೀವನ'ಕ್ಕೆ ಲೇಖನವೊಂದನ್ನು ಬರೆದರು.

ಈ ಕಾರ್ಯಕ್ರಮದ ನಂತರ ಸರಳಾದೇವಿ ತಮ್ಮ ಮಲಮಗ ಜಗದೀಶನ ಮದುವೆ ಸಿದ್ಧತೆಗೆಂದು ತಮ್ಮ ಪತಿಯ ಕರೆಯ ಮೇರೆಗೆ ಲಾಹೋರ್‌ಗೆ ಮರಳಿದರು. ಗಾಂಧಿಗೆ ಮತ್ತೆ ಪಕ್ಕೆ ನೋವು ಆರಂಭವಾದದ್ದರಿಂದ ಅವರು ವೈದ್ಯರ ಸಲಹೆಯ ಮೇರೆಗೆ ಪೂನಾ ಬಳಿಯ ಸಿಂಹಗಢ ಎಂಬ ಗಿರಿಧಾಮಕ್ಕೆ ಹವಾ ಬದಲಾವಣೆಗೆಂದು ತೆರಳಿದರು. ಅಲ್ಲಿ ಗಾಂಧಿಯವರನ್ನು ಸರಳಾದೇವಿಯವರ ಅಗಲಿಕೆ ಎಷ್ಟು ಬಾಧಿಸಿತೆಂದರೆ, ಅವರು ಅಲ್ಲಿದ್ದ ಐದು ದಿನಗಳೂ ಅವರನ್ನು ಕನವರಿಸಿಕೊಂಡು ಪತ್ರ ಬರೆದರು. ತಕ್ಷಣ ಉತ್ತರ ಬರದಿದ್ದಾಗ ಚಡಪಡಿಸಿದರು. ಮಾತು ಕೊಟ್ಟಂತೆ ಹದಿನೈದು ದಿನಗಳೊಳಗಾಗಿ-ಪತಿಯ ಜೊತೆಗಾದರೂ ಸರಿಯೇ-ಹಿಂತಿರುಗಲು ಬೇಡಿಕೊಂಡರು. ರಾಮ್‌ಭುಜ್ ಸರಳಾರನ್ನು ಭಾರತದ 'ಮಹಾನ್ ಶಕ್ತಿ' ಎಂದು ಕರೆಯುತ್ತಿದ್ದುದನ್ನು ನೆನಪಿಸಿ ಈ ಮಹಾನ್ ಶಕ್ತಿ ತಮ್ಮ ಮೇಲೂ ತನ್ನ ಮಾಂತ್ರಿಕತೆಯನ್ನು ಬೀರಿದೆ ಎಂದು ಅವರನ್ನು ಉಬ್ಬಿಸಿದರು.

ಜೂನ್‌ನಲ್ಲಿ ಅಲಹಾಬಾದ್‌ನಲ್ಲಿ ನಡೆದ ಖಿಲಾಫತ್ ಸಮಿತಿ ಸಭೆಗೂ ಗಾಂಧಿ ಮತ್ತು ಸರಳಾದೇವಿ ಒಟ್ಟಿಗೆ ಹೋದುದನ್ನು ಬಿಟ್ಟರೆ, ಮತ್ತೆ ಅವರು ಒಟ್ಟಿಗೆ ಸೇರಿದ ದಾಖಲೆಗಳು ಲಭ್ಯವಿಲ್ಲ. ಆಗಸ್ಟ್‌ನಲ್ಲಿ ಗಾಂಧಿ ಮದ್ರಾಸ್ ಪ್ರಾಂತ್ಯಕ್ಕೆ ಹೋದಾಗ ಅವರೊಂದಿಗೆ ಸರಳಾದೇವಿ ಹೋಗಿದ್ದರೆ? ಎಂಬುದು ಖಚಿತವಿಲ್ಲ. ಆದರೆ ರಾಜಾಜಿಯವರ ಒಂದು ಪತ್ರದಲ್ಲಿ ತಾವು ಸರಳಾದೇವಿಯವರನ್ನು ನೋಡಿರುವ ಪ್ರಸ್ತಾಪ ಬಂದು ಆ ಪತ್ರದಲ್ಲಿಯೇ ಅವರು, ಗಾಂಧಿ ತಮ್ಮ ಹೊಸ ಸಂಬಂಧವನ್ನು ಸಾರ್ವಜನಿಕವಾಗಿ ಪ್ರಕಟಿಸುವ ಸೂಚನೆ ಸಿಕ್ಕಂತೆ, ಈ ಸಂಬಂಧವನ್ನು ಕಡಿದುಕೊಳ್ಳದಿದ್ದರೆ ಆಗುವ ರಾಷ್ಟ್ರೀಯ ಮಟ್ಟದ ಅನಾಹುತಗಳ ಬಗ್ಗೆ ತೀವ್ರ ಎಚ್ಚರಿಕೆಯನ್ನು ಕೊಡುತ್ತಾರಾದ್ದರಿಂದ ಸರಳಾದೇವಿಯವರು ಮದ್ರಾಸ್ ಪ್ರವಾಸದಲ್ಲೂ ಗಾಂಧಿಯವರ ಜೊತೆಗಿದ್ದ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಈ ಸಾಧ್ಯತೆಯನ್ನು ಪುಷ್ಟೀಕರಿಸುವ ಇನ್ನೊಂದು ಪುರಾವೆ ಎಂದರೆ ಗಾಂಧಿ ತಮ್ಮ ಈ ಸಂಬಂಧದ ಬಗ್ಗೆ ದ.ಆಫ್ರಿಕಾದಲ್ಲಿನ ತಮ್ಮ ಸ್ನೇಹಿತ ಕಲೆನ್‌ಬಾಕ್‌ಗೆ ಆಗಸ್ಟ್ ೧೦ರಂದು ಬಹು ಉತ್ಸಾಹದಿಂದ ಬರೆದಿರುವುದು. ಆ ಪತ್ರದಲ್ಲಿ ಗಾಂಧಿ ಸರಳಾದೇವಿಯವರೊಡನೆ ತಮ್ಮ ಸಂಬಂಧವನ್ನು 'ಅನಿರ್ವಚನೀಯ' ಎಂದು ಕರೆಯುತ್ತಾ ತಾವು ಆಕೆಯೊಂದಿಗೆ ಪ್ರಯಾಣ ಮಾಡುತ್ತಿರುವುದಾಗಿಯೂ ಮತ್ತು ಆಕೆ ತಮ್ಮ ಅಧ್ಯಾತ್ಮಿಕ ಪತ್ನಿ ಎಂದೂ ವರ್ಣಿಸಿದ್ದಾರೆ. ಈ ಪತ್ರದ ಇನ್ನೊಂದು ಗಮನಾರ್ಹ ವಾಕ್ಯವೆಂದರೆ 'ಸಾಕಷ್ಟು ವಯಸ್ಸಾಗಿರುವ ಕಸ್ತೂರಬಾ ಈಗ ತನ್ನ ಎಂದಿನ ಸಿಟ್ಟು ಸೆಡವು ಮತ್ತು ಪ್ರೀತಿ ವಾತ್ಸಲ್ಯಗಳೊಂದಿಗೆ ಆಶ್ರಮದಲ್ಲಿದ್ದಾಳೆ' ಎಂಬುದು.

ಗಾಂಧಿಯವರ ಈ ಪ್ರೇಮ ಪ್ರಸಂಗದ ಬಗ್ಗೆ ಅವರ ಮೊಮ್ಮಗ ರಾಜಮೋಹನ ಗಾಂಧಿಯವರು ತಮ್ಮ 'ಮೋಹನದಾಸ' ಪುಸ್ತಕದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಈ ಪ್ರೇಮ ಪ್ರಸಂಗದ ಹಿನ್ನೆಲೆಯಲ್ಲಿ ಮನ್ಮಥನ ಆಟ ಇದ್ದರೂ ಇರಬಹುದು ಎನ್ನುತ್ತಾರೆ. ಏಕೆಂದರೆ ಅವರ ಪ್ರಕಾರ ಆ ಸಂದರ್ಭದಲ್ಲಿ ಗಾಂಧಿ ಕೌಟುಂಬಿಕವಾಗಿ ಮತ್ತು ಸಾರ್ವಜನಿಕವಾಗಿ ತುಂಬ ಒತ್ತಡದಲ್ಲಿದ್ದು, ಚೇತನದ ಪುನರುಜ್ಜೀವನಕ್ಕೆ ಬೇಕಾದ ಎದೆಗುದಿಗಳನ್ನು ಸಹಾನುಭೂತಿಯಿಂದ ಆಲಿಸುವ, ಪ್ರೀತಿಪೂರ್ವಕವಾದ ಪಾಲನೆಯ, ಸೃಷ್ಟಿಶೀಲ ಶಕ್ತಿಯೇ ಅವರ ಪರಿಸರದಲ್ಲಿ ಸಂಪೂರ್ಣ ಕಾಣೆಯಾಗಿತ್ತು. ಸರಳಾದೇವಿಯವರ ಸಹವಾಸದಲ್ಲಿ ಅವರು ತಮ್ಮ ಸುತ್ತಲಿನ ಶುಷ್ಕ ಪರಿಸರದಿಂದ ಹೊರಬಂದು ಬದುಕಿನ ಸವಿಗಾಗಿ ಹಂಬಲಿಸಿದರು. ಸಂಬಂಧದ ಸಾಮರಸ್ಯ ಮತ್ತು ಮಾಧುರ್ಯಗಳ ಸವಿಯಲ್ಲಿ ಇಬ್ಬರೂ ಸೇರಿ ಹೊಸ ಭಾರತವನ್ನು ಕಟ್ಟುವ ಕನಸುಗಳನ್ನು ಕಟ್ಟಿಕೊಂಡಿರಬೇಕು.

ರಾಜಾಜಿಯ ಪ್ರತಿಭಟನಾ ಪತ್ರ-ಎಚ್ಚರಗೊಂಡ ಗಾಂಧಿ

ಹೀಗೆ ೧೯೧೯ರ ಅಕ್ಟೋಬರ್ ಕೊನೆಯ ವಾರದಿಂದ ೧೯೨೦ರ ಕೊನೆಯವರೆಗೆ ವೈವಿಧ್ಯಮಯ ರೂಪಗಳನ್ನು ತಾಳಿ ಬೆಳೆದ ಗಾಂಧೀಜಿಯ ಈ ಪ್ರೇಮ ಪ್ರಸಂಗ ಆಶ್ರಮವಾಸಿಗಳ ಬೇಸರ-ಅಸಮಾಧಾನ ಮತ್ತು ರಾಜಾಜಿಯವರ ಸಿಟ್ಟಿನ ಪರಿಣಾಮವಾಗಿ ಇದ್ದಕ್ಕಿದ್ದಂತೆ ಕೊನೆಗೊಳ್ಳುತ್ತದೆ. ಆಶ್ರಮವಾಸಿಗಳ ಪೈಕಿ ಈ ಸಂಬಂಧದ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದವನು ಗಾಂಧಿಯವರ ಕೊನೆಯ ಮಗ ದೇವದಾಸ. ತಾಯಿ ಕಸ್ತೂರಬಾ ಅವರಿಗೆ ಬಹು ಪ್ರೀತಿಯ ಮಗನಾಗಿದ್ದ ಹದಿಹರೆಯದ ಆ ಹುಡುಗ ಗಾಂಧಿಯವರ ವರ್ತನೆಯಿಂದ ಕಸ್ತೂರಬಾ ಮೇಲೆ ಆಗುವ ಪರಿಣಾಮಗಳನ್ನು ತಂದೆಗೆ ಹೃದಯಂಗಮವಾಗಿ ಮನದಟ್ಟು ಮಾಡಿದ. ಈತನೊಂದಿಗೆ ಮಗನಲಾಲ್, ಆತನ ಮಗ ಮಥುರಾದಾಸ್ ಮತ್ತು ಮಹದೇವ ದೇಸಾಯಿ ಕೂಡ ನಿಂತರು.

ಈ ಪ್ರಯತ್ನದ ಜೊತೆಗೆ ರಾಜಾಜಿ ಬರೆದ ತೀವ್ರ ಪ್ರತಿಭಟನೆಯ ಪತ್ರವೂ ಗಾಂಧಿಯವರ ಧೃತಿಗೆಡಿಸಿರಬಹುದು. ಈ ಪತ್ರದ ಒಂದು ಬಹುಮಾರ್ಮಿಕ ಮಾತೆಂದರೆ 'ಆತ್ಮ ಎಷ್ಟೇ ದಿವ್ಯವಾದರೂ ಅದು ವಾಸ ಮಾಡುವುದು ಮಾಂಸ ಮಜ್ಜೆಗಳ ಗೂಡಿನಲ್ಲೇ!' ಆಗಸ್ಟ್ ೨೩ರಂದು ಗಾಂಧಿ ಸರಳಾದೇವಿಯವರಿಗೆ ಪತ್ರವೊಂದನ್ನು ಬರೆದು ತಮ್ಮ ಚಾರಿತ್ರ್ಯವೇ ಅತ್ಯುತ್ತಮವಾದದ್ದೆಂದು ನಂಬಿದ ಕೆಲವರು ನಮ್ಮ ಚಾರಿತ್ರ್ಯದ ಬಗ್ಗೆ ಸಂಶಯಾತ್ಮರಾಗಿದ್ದು ಆ ಸಂಶಯವನ್ನು ನೀಗಿಸಲು ತಾವು ಅಸಮರ್ಥರಾಗಿರುವುದರಿಂದ 'ಸರ್ವಸ್ವವನ್ನೂ ತ್ಯಾಗ ಮಾಡಿ ಗಳಿಸಲರ್ಹವಾದ ನಿಮ್ಮ ಪ್ರೀತಿಗೆ ನಾನು ಯೋಗ್ಯನಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇನೆ' ಎಂದು ತಿಳಿಸಿದರು. ಇದರಿಂದ ಕುಸಿದುಹೋದ ಸರಳಾದೇವಿ ಪ್ರತಿಭಟಿಸಿದರು: 'ನನ್ನ ಕಾಲಡಿಯಲ್ಲಿದ್ದ ಎಲ್ಲ ಸುಖ ಸಂಪತ್ತನ್ನೂ ತ್ಯಾಗ ಮಾಡಿ ನಿಮ್ಮ ಸ್ನೇಹಕ್ಕಾಗಿ ಹಾತೊರೆದದ್ದಕ್ಕೆ ಇದೆಂತಹ ಪ್ರತಿಫಲ!' ಇವರಿಬ್ಬರ ನಡುವೆ ಹೀಗೆ ಹಲವು ಪತ್ರಗಳು ವಿನಿಮಯವಾದವು. ಈ ಮಧ್ಯೆ ಸರಳಾದೇವಿ ಗಾಂಧಿಯವರನ್ನು ಭೇಟಿ ಮಾಡಿ ಮಾತಾಡಲು ಅಹಮದಾಬಾದ್‌ಗೂ ಬಂದು ಕೆಲ ದಿನ ಆಶ್ರಮದಲ್ಲಿದ್ದರು. ಆದರೆ ಗಾಂಧಿ ತಮ್ಮ 'ಅಸಹಕಾರ ಚಳುವಳಿ'ಯ ಪ್ರಚಾರಕ್ಕಾಗಿ ವ್ಯಾಪಕ ಪ್ರವಾಸದಲ್ಲಿದ್ದ ಕಾರಣ ಭೇಟಿ ಸಾಧ್ಯವಾಗದೆ ತಮ್ಮ ಭಾವನೆಗಳನ್ನು ಹೊರಹಾಕಲು ಅಲ್ಲಿ ಏಕಮಾತ್ರ ಜಾಗವಾಗಿದ್ದ 'ಸ್ನಾನದ ಮನೆಯಲ್ಲಿ ಅತ್ತು' ಹೋಗಿದ್ದರು. ಈ ಪತ್ರಗಳನ್ನು ಗಮನಿಸಿದಾಗ ಗಾಂಧಿ ಸರಳಾದೇವಿಯವರಿಂದ ದೂರವಾಗಲು ಯತ್ನಿಸುತ್ತಿದ್ದುದಕ್ಕೆ, ತಮ್ಮ ಮೇಲಿನ ಹೊರಗಿನವರ ಒತ್ತಡಕ್ಕೆ ಪೂರಕವಾಗಿ ಬದುಕಿನ ರೀತಿ ನೀತಿಗಳ ಬಗ್ಗೆ ಇಬ್ಬರಲ್ಲಿ ಪ್ರಕಟವಾಗತೊಡಗಿದ್ದ ಭಿನ್ನ ಅಭಿಪ್ರಾಯಗಳೂ ಕಾರಣವಾಗಿದ್ದವೆಂದು ತೋರುತ್ತದೆ. ಜೊತೆಗೆ ಸರಳಾದೇವಿಯವರೊಡನೆಯ ಸಂಬಂಧ ದೈಹಿಕ ಸ್ತರಕ್ಕೆ ವಿಸ್ತರಿಸಬಹುದಾದ ಅಪಾಯವನ್ನೂ ಗಾಂಧಿ ಮುನ್ನೋಡಿ ಎಚ್ಚರಿಕೆಯಿಂದಿರುವ ಪ್ರಯತ್ನ ಮಾಡಿರುವ ಸಾಧ್ಯತೆಯೂ ಇದೆ.

ಗಾಂಧಿ ಸರಳಾದೇವಿಯವರಿಗೆ ಪತ್ರ ಬರೆಯುವಾಗಲೆಲ್ಲ ಮನುಶಾಸ್ತ್ರವನ್ನು ವಿರೋಧಿಸುತ್ತಿದ್ದ ಅವರನ್ನು ರೇಗಿಸಲೋ ಎಂಬಂತೆ 'ಶಾಸನ ದಾತ' ('ಲಾ ಗಿವರ್') ಎಂದು ಸಹಿ ಹಾಕಿ ತಾವು ನಂಬಿ ಪಾಲಿಸುತ್ತಿದ್ದ ಸರಳಜೀವನದ ಪಾಠಗಳನ್ನು ಹೇಳುತ್ತಿದ್ದರು. ಉದಾ: ಇಂಗ್ಲಿಷ್ ಬಳಸದಿರುವುದು, ಮನೆ ಖರ್ಚು ಕಡಿಮೆ ಮಾಡಿಕೊಳ್ಳುವುದು, ಚರಕಾದಲ್ಲಿ ನೂಲುವುದನ್ನು ಕಲಿಯುವುದು, ಕಲಿಸುವುದು, ಖಾದಿ ತೊಡುವುದು, ಸೇವಕರಿಲ್ಲದೆ ಮನೆಗೆಲಸಗಳನ್ನು ತಾವೇ ಮಾಡಿಕೊಳ್ಳುವುದು

(೩೩ನೇ ಪುಟಕ್ಕೆ

ಕಥೆ —ಎಂ.ಎಸ್. ಶ್ರೀರಾಮ್


ಚಿತ್ರ: ಗುಜ್ಜಾರಪ್ಪ

ಸತ್ಯಾಗ್ರಹ ಸೌಧ

ಅಂದು ಸಂಜೆಗೆ ಬೋಯಿನಪಲ್ಲಿಯ ಗ್ರಾಮ ಸಭೆ ತುರ್ತಾಗಿ ಸೇರಬೇಕಿತ್ತು. ಅವರ ಮುಂದೆ ಎರಡು ಸಾಧ್ಯತೆಗಳಿದ್ದುವು. ಒಂದು ಭೂ ಸ್ವಾಧೀನ ಕಾಯಿದೆಯಡಿಯಲ್ಲಿ ಸರ್ಕಾರವೇ ಆ ಇಡೀ ಗ್ರಾಮವನ್ನು ಕೈವಶ ಮಾಡಿಕೊಳ್ಳುವುದು ಒಂದಾದರೆ, ಲ್ಯಾಂಡ್ ಪೂಲಿಂಗ್ ವ್ಯವಸ್ಥೆಯಲ್ಲಿ ಸ್ವಯಂಪ್ರೇರಿತರಾಗಿ ಸರ್ಕಾರದೊಂದಿಗೆ ಸಹಕರಿಸಿ ಆದಷ್ಟೂ ಲಾಭವನ್ನು ಪಡೆಯುವುದು ಎರಡನೆಯದ್ದಾಗಿತ್ತು. ಸರ್ಕಾರ ಯಾವ ಯೋಜನೆಗಾಗಿ ಇಡೀ ಗ್ರಾಮವನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದಿದೆ ಎನ್ನುವುದರ ಬಗ್ಗೆ ಯಾರಿಗೂ ನಿಖರವಾದ ಸುದ್ದಿಯಿರಲಿಲ್ಲ. ಈ ಕರೆ ಕೇವಲ ಒಂದು ಗ್ರಾಮಕ್ಕೆ ಮಾತ್ರ ಬಂದಿರುವುದೂ ವಿಚಿತ್ರವೇ ಆಗಿತ್ತು. ಸಾಮಾನ್ಯವಾಗಿ ಸರಕಾರಿ ಯೋಜನೆಗಳೆಂದರೆ ಹಲವು ಗ್ರಾಮಗಳನ್ನೊಳಗೊಂಡಿರುತ್ತದೆ. ಅಣೆಕಟ್ಟು, ದೊಡ್ಡ ರಸ್ತೆ, ರೈಲು ಮಾರ್ಗ ಯಾವುದೂ ತಮ್ಮ ಗ್ರಾಮದಲ್ಲಿ ಆಗುವುದು ಸಾಧ್ಯವಿರಲಿಲ್ಲ. ಹೈದರಾಬಾದಿನಿಂದ ಸಾಕಷ್ಟು ದೂರವಿದ್ದ, ರಂಗಾರೆಡ್ಡಿ ಜಿಲ್ಲೆ ದಾಟಿ ಮಹಬೂಬನಗರ ಜಿಲ್ಲೆಯಲ್ಲಿ ಜಡಚರ್ಲ ಮತ್ತು ಮಹಬೂಬನಗರಗಳ ನಡುವೆಯಿದ್ದ ಗ್ರಾಮ ರಾಷ್ಟ್ರೀಯ ಮತ್ತು ರಾಜ್ಯದ ಹೆದ್ದಾರಿಯಿಂದ ದೂರವಿತ್ತು. ಬೋಯಿನಪಲ್ಲಿಯಲ್ಲಿ ಕೇವಲ ೪೫೦ ಮನೆಗಳಿದ್ದುವು. ಅದರ ಒಟ್ಟು ವಿಸ್ತೀರ್ಣ ಸುಮಾರು ೫೨೩ ಎಕರೆಗಳಿದ್ದುವು. ಮಾಜಿ ಸರಪಂಚ ಅಪ್ಪಲರೆಡ್ಡಿ ಕಾಶಿ ವಿಶ್ವನಾಥ ರೆಡ್ಡಿಯಂತಹ ಒಂದಿಬ್ಬರನ್ನು ಬಿಟ್ಟರೆ ಯಾರಿಗೂ ಒಂದೆರಡು ಎಕರೆಗಿಂತ ಹೆಚ್ಚು ಭೂಮಿಯಿರಲಿಲ್ಲ. ಹೀಗಾಗಿ ತಮ್ಮ ಗ್ರಾಮವೇ ಸ್ವಾಧೀನವಾಗುವಂತಹ ಈ ಯೋಜನೆ ಯಾವುದು ಎನ್ನುವ ಕುತೂಹಲವೂ, ಮತ್ತು ಮನೆಮಠ ಕಳೆದು ಎಲ್ಲಿಗೆ ಹೋಗಬೇಕಾಗಬಹುದೆಂಬ ಆತಂಕವೂ ಅಲ್ಲಿನ ಜನರಿಗೆ ಉಂಟಾಗಿತ್ತು. ಈ ಎಲ್ಲದರ ನಡುವೆ ತುಂಬಾ ಉಲ್ಲಾಸದಿಂದ ಇದ್ದವನು ಮಾಜಿ ಸರಪಂಚ ನರೇಂದರ್ ಗೌಡ್.

ಇಂದಿರಮ್ಮ ಗ್ರಾಮದ ಹಾಲಿ ಸರಪಂಚಳಾಗಿದ್ದಳು. ಇಂದಿರಮ್ಮನ ತಂದೆ ಮಾಜಿ ಪ್ರಧಾನಿ ಇಂದಿರಾಗಾಂಧಿಯ ವೀರಾಭಿಮಾನಿಯಾಗಿದ್ದರಿಂದ ಆಕೆಗೆ ಆ ಹೆಸರನ್ನಿಟ್ಟಿದ್ದರಾದರೂ, ಆಕೆ ಒಂದು ದಿನ ರಾಜಕೀಯ ಪ್ರವೇಶಿಸಿ ಗ್ರಾಮಕ್ಕೇ ಸರಪಂಚಳಾಗುತ್ತಾಳೆಂದು ಇಂದಿರಮ್ಮನನ್ನೊಳಗೊಂಡು ಯಾರೂ ಊಹಿಸಿರಲಿಲ್ಲ. ಹಾಗೆ ನೋಡಿದರೆ ಆಕೆ ಸ್ವ-ಇಚ್ಛೆಯಿಂದ ರಾಜಕೀಯಕ್ಕೆ ಬಂದವಳೂ ಅಲ್ಲ. ಈ ಬಾರಿ ತಮ್ಮ ಗ್ರಾಮಕ್ಕೆ ಮಹಿಳಾ ಸರಪಂಚರ ಸರದಿ ಬಂದದ್ದರಿಂದ ನರೇಂದರ್ ಅವಳನ್ನು ಕಣಕ್ಕಿಳಿಸಿ ಗೆಲ್ಲಿಸಿದ್ದರೂ, ಅವನೇ ನಿಂತು ಪಂಚಾಯ್ತಿಯ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದ. ಇಂದಿರಮ್ಮ ಇಂದಿರಾಗಾಂಧಿಯ ಮೊದಲ ದಿನಗಳಂತೆ 'ಗೂಂಗಿ ಗುಡಿಯಾ' ಆಗಿ ಮುಂದುವರೆದಿದ್ದಳು. ಪಂಚಾಯ್ತಿ ಕಾರ್ಯಾಲಯದಲ್ಲಿ ಇಂದಿರಮ್ಮನೇ ವ್ಯವಹಾರ ನೋಡುತ್ತಿದ್ದರೂ, ಆಕೆಯ ಕುರ್ಚಿಯ ಪಕ್ಕದಲ್ಲಿ ಮತ್ತೊಂದು ಕುರ್ಚಿಯೂ, ಮತ್ತು ಕಡತಗಳೇನಿದ್ದರೂ ಸಂಜೆಯ ವೇಳೆಗೆ ಮನೆಗೆ ತಲುಪಿಸುವ ಪ್ರಕ್ರಿಯೆಯೂ ಚಾಲ್ತಿಯಲ್ಲಿತ್ತು. ಇದು ದೊಡ್ಡ ವಿಚಾರವೇನೂ ಅಲ್ಲವೆಂದು ಗ್ರಾಮಸ್ಥರು ಒಪ್ಪಿದ್ದರು. ನರೇಂದರ್ ಗೌಡ್ ಬಗ್ಗೆ ಘೋರ ವಿರೋಧವಿದ್ದ ಅಪ್ಪಲರೆಡ್ಡಿ ಕಾಶಿ

"ಏ ಜೈಲಲ್ಲ... ಸತ್ಯಾಗ್ರಹ ಸೌಧ. ನೋಡು ಇದರಾಗೆ ಒಂದು ಗಲ್ಲುಗಂಬವೂ ಅದ... ಅಜ್ಮಲ್ ಕಸಾಬ್ ನನ್ಮಗನ್ನ ಇಲ್ಲೇ ಗಲ್ಲಿಗೇರಿಸಿ ದಫನ್ ಮಾಡ್ಬೋದಿತ್ತು... ಇದಕ್ಕಿಂತ ದೊಡ್ಡ ದೇಶಸೇವೆ ಏನದ ಹೇಳು... ದಫನ್ ಮಾಡಲಿಕ್ಕ ಕಬ್ರಸ್ತಾನ. ಸುಡೋದಕ್ಕೆ ವಿದ್ಯುತ್ ಚಿತಾಗಾರ... ಈ ಯೋಜನೆ. ವಿನ್-ವಿನ್ ಅಂತ ವಿಶ್ವವಿಖ್ಯಾತ ಡಿಜಿಜಿ ಕನ್ಸಲ್ಟೆಂಟುಗಳು ಹೇಳಾರ. ನಾವೇ ಜೈಲು ನಡೆಸೋದರಿಂದ ಅಲ್ಲಿರೋ ಸವಲತ್ತುಗಳು ನಮಗೂ ಸಿಗಾಂಗೆ ಮಾಡಬೌದು.. ನೋಡು... ಇದರ ಕೀರ್ತಿ ನನಗಲ್ಲ.. ಸರಪಂಚಳಾಗಿ ನಿನಗೇ ಐರ್ತದ.. ನನ ರಾಣಿ....ನಮಗೂ ಫಾಯಿದೆ. ಶುದ್ಧ ದೇಶನಿರ್ಮಾಣದಲ್ಲ ನಮ್ಮ ಸೇವೆ. ಜೊತೆಗೆ ಇದರಿಂದ ನನಗೆ ಹೈದರಾಬಾದು-ದಿಲ್ಲಿಗೆ ಟಿಕೆಟ್ಟೂ ಸಿಗುತ್ತೆ... ಮರೀಬೇಡ. ಇದರಲ್ಲಿ ನಷ್ಟ ಯಾರಿಗದ ಹೇಳು...."

ವಿಶ್ವನಾಥರೆಡ್ಡಿಯೂ ಈ ವಿಷಯಕ್ಕೆ ಯಾವುದೇ ವಿರೋಧವನ್ನು ವ್ಯಕ್ತ ಪಡಿಸಿರಲಿಲ್ಲ. ಪೆದ್ದಿಲ್ಲು-ಚಿನ್ನಿಲ್ಲು ಅಂತ ಉಪಸಂಸಾರವನ್ನೂ ಹೂಡಿದ್ದ ಅಪ್ಪಲರೆಡ್ಡಿ ಕೆವಿ ರೆಡ್ಡಿಗೆ ಹೆಣ್ಣಿನ ಸ್ಥಾನ(ಮಾನ)ದ ಬಗ್ಗೆ ಅನೇಕ ಹಳೆಯ ನಂಬಿಕೆಗಳಿದ್ದುವು....

ಪ್ರಗತಿಪರ ಸರಪಂಚರಲ್ಲಿ (ಈಗ ಮಾಜಿ) ನರೇಂದರ್ ಹೆಸರೂ, ಪ್ರಗತಿಪರ ಗ್ರಾಮಗಳ ಯಾದಿಯಲ್ಲಿ ಬೋಯಿನಪಲ್ಲಿಯ ಹೆಸರು ಕೇಳಿಬರುವುದು ಸಾಮಾನ್ಯವಾಗಿತ್ತು. ನರೇಂದರ್ ಗ್ರಾಮದ ನಾಯಕತ್ವ ವಹಿಸಿದಾಗಿನಿಂದಲೂ ಹೊರಪ್ರಪಂಚದ ಜೊತೆಗೆ ಉತ್ತಮ ಸಂಬಂಧವನ್ನಿರಿಸಿಕೊಂಡು ಅನೇಕ ಯೋಜನೆಗಳನ್ನು ಗ್ರಾಮದಲ್ಲಿ ಜಾರಿ ಮಾಡಿದ್ದ. ಹತ್ತು ವರ್ಷಗಳ ಕೆಳಗೇ ಗ್ರಾಮಕ್ಕೆ ನಿರ್ಮಲ್ ಗ್ರಾಮ್ ಯೋಜನಾದ ಪುರಸ್ಕಾರ ದೊರೆತಿತ್ತು. ಗ್ರಾಮೀಣ ಸಡಕ್ ಯೋಜನಾದಡಿಯಲ್ಲಿ ಗ್ರಾಮಕ್ಕೆ ಪಕ್ಕಾ ರಸ್ತೆಯನ್ನೂ ತರಿಸಿದ್ದ. ನಿರ್ಮಲ್ ಗ್ರಾಮ್ ಪುರಸ್ಕಾರ ಪಡೆಯಲು ಹೋದಾಗ ನರೇಂದರ್ ನಂದನ್ ನಿಲೇಕಣಿಯವರನ್ನೂ ಭೇಟಿ ಮಾಡಿ ತಮ್ಮ ಗ್ರಾಮದಲ್ಲಿ ಪೂರ್ಣ ಆಧಾರ್ ನೋಂದಣಿ ಮಾಡಿಸುವ ಆಶ್ವಾಸನೆ ಕೊಟ್ಟು ನಿಲೇಕಣಿಯನ್ನ ತಮ್ಮೂರಿಗೆ ಆಹ್ವಾನಿಸಿದ್ದ. ನಿಲೇಕಣಿಯ ಜೊತೆಗೊಂದು ಸೆಲ್ಫಿಯನ್ನೂ ತೆಗೆಸಿಕೊಂಡಿದ್ದ. ಗ್ರಾಮದಲ್ಲಿ ಪೂರ್ಣ ನೊಂದಣಿಯಾಯಿತಾದರೂ ನಿಲೇಕಣಿಯವರನ್ನ ಮಾತ್ರ ಗ್ರಾಮಕ್ಕೆ ಕರೆತರಲಾಗಿರಲಿಲ್ಲ. ಬದಲಿಗೆ ಸೆಲ್ಫಿಯನ್ನು ಎಲ್ಲ ಟೀಂ ಬೋಯಿನಪಲ್ಲಿ ಗುಂಪುಗಳಿಗೆ ಕಳುಹಿಸಿದ್ದಂತೂ ಉಂಟು.

ದೇಶದಲ್ಲಿ ಗ್ರಾಮಕ್ಕೆಂದೇ ಅಂಕಿತವಾಗಿದ್ದ ವಾಟ್ಸಾಪ್ ಗುಂಪನ್ನು ಪ್ರಾರಂಭಿಸಿದ್ದರಲ್ಲೂ ನರೇಂದರ್ ಹೆಸರನ್ನೇ ಅಗ್ರಸ್ಥಾನದಲ್ಲಿ ಸೇರಿಸಬಹುದೇನೋ. ಗ್ರಾಮಕ್ಕೆ ಭಾರತ್ ಬ್ರಾಡ್ಬಾಂಡಿನಿಂದ ಇಂಟರ್ನೆಟ್ ಸೌಲಭ್ಯ ತಂದದ್ದಲ್ಲದೇ ಈ ಬಾರಿ ಗೂಗಲ್‌ನ ಸುಂದರ್ ಪಿಚ್ಚೈಯನ್ನು ಕರೆತರುತ್ತೇನೆಂದೂ, ಗ್ರಾಮಕ್ಕೆ ಗೂಗಲ್ ಸಂಸ್ಥೆ ಸಂಪೂರ್ಣವಾಗಿ ವೈಫೈ ಮುಫತ್ತಾಗಿ ಕೊಡುವಂತೆ ಮಾಡುತ್ತೇನೆಂದು ಬೀಗಿದ್ದನಾದರೂ, ಅದು ಆಶಯವಾಗಿಯೇ ಉಳಿದಿತ್ತು. ಪಿಚ್ಚೈ ಜೊತೆಗೆ ಒಂದು ಸೆಲ್ಫಿ ಕೂಡಾ ಸಾಧಿಸಲಾಗಿರಲಿಲ್ಲ. ಆದರೂ ಗ್ರಾಮದಲ್ಲಿ ಎಲ್ಲರ ಕೈಗೂ ಸ್ಮಾರ್ಟ್ ಫೋನ್ ಬರುವಂತೆ ಪ್ರಯಾಸ ಮಾಡುತ್ತಿದ್ದ. ಹಾಗೂ ಫೋನ್ ಇದ್ದವರನ್ನೆಲ್ಲಾ ಸೇರಿಸಿ ಗ್ರಾಮದ ವಾಟ್ಸಾಪ್ ಗುಂಪನ್ನೂ ಅವನೇ ಉಂಟುಮಾಡಿದ್ದ. ಗ್ರಾಮಪಂಚಾಯ್ತಿಯ ಒಂದೊಂದು ಕೇರಿಗೆ ಒಂದು ವಾಟ್ಸಾಪ್ ಗುಂಪು ಮಾಡಿ ಅದಕ್ಕೆ ಟೀಂ ಬೋಯಿನಪಲ್ಲಿ ಎನ್ನುವ ಹೆಸರನ್ನಿಟ್ಟಿದ್ದ. ಅದರಲ್ಲಿ ಪ್ರತಿದಿನ ಗುಡ್ ಮಾರ್ನಿಂಗ್ ಮೆಸೇಜುಗಳಲ್ಲದೇ, ರಾಜಕೀಯ, ಆಧ್ಯಾತ್ಮ, ಬೆಳವಣಿಗೆ-ವಿಕಾಸ, ಮತ್ತು ಪ್ರಧಾನಮಂತ್ರಿಗಳ ಗುಣಗಾನದ ಅನೇಕ ಮೆಸೇಜುಗಳನ್ನು ನಿತ್ಯವೂ ಕಳುಹಿಸುತ್ತಿದ್ದ. ಊರಲ್ಲಿ ಡಂಗುರ ಬಾರಿಸುವವನ ಕೆಲಸಕ್ಕೆ ಡಿಜಿಟಲ್ ಇಂಡಿಯಾ ಮತ್ತು ವಾಟ್ಸಾಪಿನಿಂದ ಕುತ್ತು ಉಂಟಾಯಿತು. ಒಟ್ಟಾರೆ ದೇಶದ ನಿರುದ್ಯೋಗದ ಖಾತೆಗೆ ನರೇಂದರ್ ತನ್ನ ವತಿಯಿಂದ ಒಬ್ಬನನ್ನು ಸೇರಿಸಿ ಪ್ರಗತಿಯನ್ನು ಸಾಧಿಸಿದ್ದ.

ಪ್ರಸ್ತಾವಿತ ಯೋಜನೆಯ ಬಗ್ಗೆ ನರೇಂದರ್ ಗೌಡ್‌ಗೆ ಸ್ವತಃ ಪ್ರಧಾನ ಮಂತ್ರಿಗಳೇ ಫೋನ್ ಮಾಡಿದ್ದರೆಂದು ಸುದ್ದಿ ಹಬ್ಬಿತ್ತು. ಅಥವಾ ಆ ಸುದ್ದಿಯನ್ನು ನರೇಂದರ್ ಸ್ವತಃ ಹಬ್ಬಿಸಿರಬಹುದು. ಪಿಎಂ ಕಾರ್ಯಾಲಯದಿಂದ ಬಂದಿತ್ತೊ, ಪಿಎಂ ಸ್ವತಃ ಮಾತನಾಡಿದರೋ ಅಥವಾ ಇದು ಯಾವುದೂ ನಡೆಯಲೇ ಇಲ್ಲವೋ ತಿಳಿಯದು. ನರೇಂದರ್ ವಿಷಯದಲ್ಲಿ ಯಾವುದನ್ನೂ ನಿಖರವಾಗಿ ಹೇಳಲು ಸಾಧ್ಯವಿರಲಿಲ್ಲ. ಡೈನಮಿಕ್ ಆಗಿದ್ದ ಅವನು ಗ್ರಾಮದಿಂದ ಬಹುಬೇಗ ರಾಜ್ಯ-ರಾಷ್ಟ್ರ ಮಟ್ಟದ ರಾಜಕೀಯಕ್ಕೆ ಹಾರಬಹುದಾದ ಲಕ್ಷಣಗಳು ಕಂಡಿದ್ದುವು. ಕೇವಲ ಮೂವತ್ತೈದು ವರ್ಷಗಳ ನರೇಂದರ್‌ಗೆ ರಾಜಕೀಯದಲ್ಲಿ ಉಜ್ವಲ ಭವಿಷ್ಯವಿದ್ದಂತೆ ಕಾಣುತ್ತಿತ್ತು. ಪ್ರಸ್ತುತ ಭೂ ಸ್ವಾಧೀನ ಯೋಜನೆಯನ್ನು ಸಾಕಾರಗೊಳಿಸಿದರೆ ತನ್ನ ರಾಜಕೀಯ ಯಾತ್ರೆಗೆ ಅದು ಗಟ್ಟಿ ಬುನಾದಿಯಾಗುತ್ತದೆಂದು ನರೇಂದರ್ ನಂಬಿದ್ದ. ಈ ಯೋಜನೆಯಿಂದಾಗಿ ಅವನು ಖುದ್ದು ಪಿಎಂ ಗಮನಕ್ಕೆ ಬರುವುದು ಅವರ

ನೆನಪಿನಲ್ಲಿ ಉಳಿಯುವುದು ನಿಜಕ್ಕೂ ಸಾಧ್ಯವಿತ್ತು.

ಈಚೆಗಷ್ಟೇ ತರಿಸಿ ಹೊಸತಾಗಿ ಗೋಡೆಗಾನಿಸಿ ನಿಲ್ಲಿಸಿದ್ದ ನಿಲುವುಗನ್ನಡಿಯಲ್ಲಿ ನರೇಂದರ್ ತನ್ನನ್ನು ನೋಡಿಕೊಂಡ. ಪುಟ್ಟದಾಗಿ ಹೊಟ್ಟೆ ಬರುತ್ತಿತ್ತು. ಗಡ್ಡದಲ್ಲಿ ನಾಲ್ಕು ಬಿಳಿ ಕೂದಲುಗಳು ಕಂಡವು. ಒಮ್ಮೆ ಹೊಟ್ಟೆಯನ್ನು ತಟ್ಟಿನೋಡಿಕೊಂಡ. ಗ್ರಾಮದಲ್ಲಿ ಒಂದು ಯೋಗಕೇಂದ್ರವನ್ನು ಪ್ರಾರಂಭಿಸಿ ಎಲ್ಲರಿಗೂ ಸ್ವಾಸ್ಥ್ಯದ ಬಗ್ಗೆ ಅರಿವುಂಟುಮಾಡಬೇಕೆಂದು ಅನ್ನಿಸಿತು. ಈ ಬಾರಿಯ ವಿಶ್ವ ಯೋಗ ದಿನದ ಸಂದರ್ಭಕ್ಕೆ ಒಂದು ಕಾರ್ಯಕ್ರಮವಾಯಿತು ಅಂದುಕೊಳ್ಳುತ್ತಿರುವಾಗಲೇ, ಹಾಲಿ ಯೋಜನೆ ಜಾರಿಗೊಂಡರೆ ತನ್ನ ಗ್ರಾಮವೇ ಇಲ್ಲವಾಗಬಹುದೆನ್ನುವ ವಿರೋಧಾಭಾಸವೂ ಅವನನ್ನು ತಟ್ಟಿತು. ಗ್ರಾಮವಿದ್ದರೆ, ತಾನು ಗ್ರಾಮದ ಸೈಜಿನಲ್ಲಿ ಪುಟ್ಟದಾಗಿ ಉಳಿಯುತ್ತೇನೆ... ಗ್ರಾಮವಿಲ್ಲವಾದರೆ ತಾನು ವಿಶ್ವಮಾನವನಾಗಿ ವಿಸ್ತೃತವಾಗಿ ಬೆಳೆದು ಎಮ್ಮೆಲ್ಲೆ ಎಂಪಿ ಚುನಾವಣೆಗೆ ಟಿಕೆಟ್ ಸಿಗುವ ಸಾಧ್ಯತೆಯೂ ಉಂಟಾಗಬಹುದು ಅನ್ನಿಸಿತ್ತು. ದೇಶಸೇವೆ ದೊಡ್ಡಮಟ್ಟದಲ್ಲಿ ಮಾಡಬೇಕೆಂಬ ಮಹತ್ವಾಕಾಂಕ್ಷೆ ನರೇಂದರ್‌ಗೆ ಇತ್ತು.

ಆರು ಘಂಟೆಯ ಗ್ರಾಮಸಭೆಗೆ ಎಲ್ಲರೂ ಮುದ್ದಾಂ ಬರಬೇಕೆಂದು ನಾಲ್ಕು ಘಂಟೆಗೆ ಮತ್ತೊಮ್ಮೆ ವಾಟ್ಸಾಪ್ ಕಳುಹಿಸಿದ ನರೇಂದರ್ ಸುರಳಿ ಬಂಧನವಿದ್ದ ಎರಡು ದಪ್ಪ ಪುಸ್ತಕಗಳನ್ನು ಅಧ್ಯಯನ ಮಾಡುತ್ತಿದ್ದ. ಪ್ರಧಾನಮಂತ್ರಿಗಳು ಈ ವರದಿಯನ್ನು ಡೌನ್‌ಲೋಡ್ ಮಾಡಿ ಪರಿಶೀಲಿಸಲು ಹೇಳಿದ್ದರಂತೆ. ಅದನ್ನು ಗ್ರಾಮಪಂಚಾಯ್ತಿಯಲ್ಲೇ ಡೌನ್‌ಲೋಡ್ ಮಾಡಿ ಪೆನ್ ಡ್ರೈವಿಗೆ ಹಾಕಿ ಜಡಚರ್ಲದಲ್ಲಿ ಮುದ್ರಿಸಿ ಬೈಂಡ್ ಮಾಡಿಸಿದ್ದ. ಆ ವರದಿ ಸಂಕೀರ್ಣವಾಗಿತ್ತು. ಆದರೂ ಸಾಕಷ್ಟು ಮಟ್ಟಿಗೆ ಓದಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ. ಇದನ್ನು ಗ್ರಾಮದ ಮುಂದೆ ಪ್ರಸ್ತುತಪಡಿಸಿ ಅದನ್ನು ಅವರಿಗೆ ಮನದಟ್ಟಾಗುವಂತೆ ಹೇಳುವುದೆಂತು ಎಂದು ನರೇಂದರ್ ಯೋಚಿಸುತ್ತಿದ್ದ. ಮೊದಲಿಗೆ ತನಗೇ ಈ ವಿಷಯದ ಬಗ್ಗೆ ಮನವರಿಕೆಯಾಗಬೇಕಿತ್ತು. ಹೀಗಾಗಿ ಆ ವರದಿಯ ಸಾರ, ಲಾಭನಷ್ಟಗಳ ಬಗ್ಗೆ ಹೆಚ್ಚು ಗಮನವಿರಿಸಿ ನಿಜಕ್ಕೂ ವಿವರವಾಗಿ ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ. ಬೇಕಿದ್ದರೆ ವರದಿ ಬರೆದ ಸಂಸ್ಥೆಯವರನ್ನೂ ಇಲ್ಲಿಗೆ ಕರೆತಂದು ಗ್ರಾಮವಾಸಿಗಳಿಗೆ ತಿಳಿಹೇಳಿಸಬಹುದು ಎನ್ನುವ ವಿಚಾರವೂ ನರೇಂದರ್ ಮನಸ್ಸಿನಲ್ಲಿ ಹಾಯ್ದು ಹೋಯಿತು.

**

ಸಂಜೆಯ ಸಭೆ ಕಚಾಕಚ್ ತುಂಬಿತ್ತು. ಇಡೀ ಗ್ರಾಮವೇ ಸ್ವಾಧೀನವಾಗಬಹುದಾದ ಯೋಜನೆಯೆಂದರೆ ಮತ್ತೆ ತಮಾಷೆಯೇನೂ ಅಲ್ಲವಲ್ಲ? ಸಭೆಯಲ್ಲಿ ನರೇಂದರ್ ಬರೆದುಕೊಟ್ಟಿದ್ದ ಪ್ರಸ್ತಾವನೆಯ ಮಾತುಗಳನ್ನು ಇಂದಿರಮ್ಮ ಓದಿದಳು.

"ಈ ದಿನ ಪ್ರಧಾನಮಂತ್ರಿಗಳ ಆಶೀರ್ವಾದದೊಂದಿಗೆ ಕೇಂದ್ರ ಸರಕಾರದ ಗೃಹಮಂತ್ರಿಗಳ ಕಾರ್ಯಾಲಯದಿಂದ ಘೋಷಣೆಯಾಗಿರುವ ಒಂದು ಯೋಜನೆಯ ಬಗ್ಗೆ ಚರ್ಚಿಸಲು ನಾವು ಸಭೆ ಸೇರಿದ್ದೇವೆ. ಈ ಯೋಜನೆಯಲ್ಲಿ ಎರಡು ಆಯಾಮಗಳಿವೆ. ಆ ಬಗ್ಗೆ ನಾವು ತಕ್ಷಣಕ್ಕೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಮಾಜಿ ಸರಪಂಚರು ಯೋಜನೆಯನ್ನು ವಿವರಿಸುತ್ತಾರೆ. ನಂತರ ಒಂದರ್ಧ ಘಂಟೆ ಚರ್ಚೆ ಮಾಡೋಣ. ಮೂರು ದಿನದ ನಂತರ ಮತ್ತೆ ಸಭೆ ಸೇರಿ ನಾವು ನಮ್ಮ ತೀರ್ಮಾನವನ್ನ ಸರಕಾರಕ್ಕೆ ತಿಳಿಸಬಹುದು....."

ಇಂದಿರಮ್ಮ ಆ ಕಾಗದದ ತುಂಡನ್ನು ಓದಿದಳಾದರೂ ಅದರ ನಂತರ ಬರುವ ಯೋಜನೆಯ ಬಗ್ಗೆ ಸುತರಾಂ ಏನೂ ತಿಳಿದಿರಲಿಲ್ಲ. ಆಕೆಯ ಮಾತು ಮುಗಿಯುತ್ತಿದ್ದಂತೆ ನರೇಂದರ್ ಎದ್ದು ನಿಂತ. ಗಂಟಲು ಸರಿಮಾಡಿಕೊಂಡ. ಮೈಕ್ ಅಡ್ಜಸ್ಟ್ ಮಾಡುತ್ತಿದ್ದಾಗ ಕೈ ನಡುಗುತ್ತಿತ್ತು. ತಡವರಿಸುತ್ತಲೇ ಪ್ರಾರಂಭಿಸಿದ:

"ಪ್ರೀತಿಯ ಮಾಜಿ ಸರಪಂಚರಾದ ಅಪ್ಪಲರೆಡ್ಡಿಯವರೇ, ಗ್ರಾಮದ ಹಿರಿಯರೇ ಅಕ್ಕ ತಂಗಿಯರೇ, ಅಣ್ಣತಮ್ಮಂದಿರೇ......"

"ಅರೇ ಥೋಡೋ ಮಿಯಾ... ಅಸಲು ವಿಷಯಕ್ಕೆ ಬಾ. ಘುಮಾ ಫಿರಾಯಿಸೋ ಮಾತೇ ಬೇಡ... ಮನೆ ಹತ್ತಿ ಉರೀಲಿಕ್ಕತ್ತದ... ಮೇರೆ ಪ್ಯಾರೇ ದೇಶವಾಸಿಯೋ ಅನ್ನಲಿಕ್ಕತ್ತಿದ್ದಿ... ಸಾಕು. ಬಸ್." ಎಂದು ಹಿಂದಿನಿಂದ ಯಾರೋ ಕೂಗಿದರು. ನರೇಂದರ್ ತನ್ನ ಮಾತನ್ನು ಜಾಗರೂಕವಾಗಿ ಮುಂದುವರೆಸಬೇಕಿತ್ತು...

"ಪಿಎಂ ಮತ್ತು ಗೃಹಮಂತ್ರಿಗಳ ವತಿಯಿಂದ ಬಂದಿರುವ ಈ ಯೋಜನೆಯನ್ನು ನಾವು ಪರಿಗಣಿಸಬೇಕು. ಈ ಪುಸ್ತಕದಲ್ಲಿ ಈ ಯೋಜನೆಯ ವಿವರಗಳೆಲ್ಲಾ ಇದೆ. ಮೂಲಭೂತವಾಗಿ ಏನಪ್ಪಾ ಅಂದರೆ, ನಮ್ಮ ಸರಕಾರ ದೇಶದ ನಾಲ್ಕು ಭಾಗಗಳಲ್ಲಿ ನಾಲ್ಕು ದೊಡ್ಡ ಕಾರಾಗೃಹಗಳನ್ನು ನಿರ್ಮಿಸಬೇಕೆಂದು ನಿರ್ಧರಿಸಿದೆ. ದಕ್ಷಿಣ ಭಾರತದ ಯೋಜನೆಗೆ ನಮ್ಮ ಗ್ರಾಮವನ್ನು ಪಿಎಂ ಖುದ್ದು ಆಯ್ಕೆ ಮಾಡಿದ್ದಾರೆ. ಅವರೇ ನನಗೆ ಫೋನ್ ಮಾಡಿ ಮುದ್ದಾಂ ಆಗಲೇಬೇಕೆಂದು ಆಗ್ರಹಪೂರ್ವಕ ಹೇಳಿದ್ದಾರೆ. ಈ ವಿಷಯದಲ್ಲಿ ನಾನೂ ಪ್ರಧಾನಮಂತ್ರಿ ಮತ್ತು ಗೃಹಮಂತ್ರಿಗಳ ಕಾರ್ಯಾಲಯದಲ್ಲಿ ಪೈರವಿ ಮಾಡಿ ನಮ್ಮೂರಿಗೆ ಬರುವ ಹಾಗೆ ಮಾಡಿದ್ದೇನೆ. ನಿಮಗೆ ಗೊತ್ತು. ಈ ಸರಕಾರದಲ್ಲಿ ಯಾವುದೇ ಪೈರವಿ ನಡೆಯೋದಿಲ್ಲ.. ಆದರೂ ಇದು ನಮ್ಮ ಕಡೆಗೇ ಬರ್ತಿದೆ ಅಂದ್ರ, ಇದು ನಮ್ಮ ಗ್ರಾಮದ ಹೆಮ್ಮೆಯ ವಿಷಯ...."

"ಕಾರಾಗೃಹ ಬೋಲೆತೋ....?"

"ಜೈಲು. ಇದು ಅತ್ಯಾಧುನಿಕವಾದ ಜೈಲಾಗಿರುತ್ತದೆ. ಈ ದಾಖಲೆಯ ಪ್ರಕಾರ ದೇಶದ ಕಾನೂನು ವ್ಯವಸ್ಥೆಯ ಸುಧಾರಣೆಯಾಗುತ್ತಿದ್ದಂತೆ, ಕೇಂದ್ರ ಸರಕಾರ ಕೊಡುತ್ತಿರುವ ಸುಶಾಸನದ ಫಲವಾಗಿ ಜೈಲಿಗೆ ಹೋಗುವವರ ಸಂಖ್ಯೆ ಹೆಚ್ಚಾಗುವುದರಲ್ಲಿದೆ. ರಾಜಕೀಯ ಭ್ರಷ್ಟರು, ಮಾವೋವಾದಿಗಳು, ಬೌದ್ಧಿಕ ಅಪರಾಧಿಗಳು, ದೇಶದ್ರೋಹಿಗಳು ಒಂದು ಗುಂಪು. ಚೋರಿ, ಡಕೈತಿ, ಅತ್ಯಾಚಾರ, ಹಿಂಸಾಚಾರ ಮಾಡುವವರು ಒಂದು ಗುಂಪು. ಕೋಮುಗಲಭೆ, ಆತಂಕವಾದಿಗಳದ್ದು ಒಂದು ಗುಂಪು. ಆರ್ಥಿಕ ಅಪರಾಧಿಗಳದ್ದು ಒಂದು ಗುಂಪು. ಹೀಗೆ ಸರಕಾರ ಎಲ್ಲವನ್ನು ಸ್ವಚ್ಛ ಮಾಡಬೇಕೆಂದು ಹೊರಟಿದೆ. ವಿಚಾರಣೆಗೆ ಸಮಯವಾದರೂ ವಿಚಾರಣೆಯ ಕಾಲದಲ್ಲಿ ಈ ತಥಾಕಥಿತ ಅಪರಾಧಿಗಳು ನಮ್ಮ ನಡುವಿನಲ್ಲಿ ಓಡಾಡುವುದು ನಮಗೆ ಅಪಾಯಕಾರಿಯಾದ್ದರಿಂದ, ಜಾಮೀನಿನ ಕಾಯಿದೆಯನ್ನು ಬಲಪಡಿಸಿ, ಯಾರಿಗೂ ಸುಲಭವಾಗಿ ಜಾಮೀನು ಸಿಗದಿರುವ ಹಾಗೆ ಕಾನೂನನ್ನು ಬದಲಾಯಿಸುವ ಇರಾದೆಯಿದೆ. ಸದ್ಯಕ್ಕೆ ನಮ್ಮ ಜೈಲುಗಳು ತುಂಬಿಹೋಗಿರುವುದರಿಂದ, ಭವ್ಯಭಾರತದ ನಿರ್ಮಾಣದಲ್ಲಿ ಇದೂ ಒಂದು ಸ್ಥಾವರವಾಗಲಿದೆ. ಇದಕ್ಕೆ ಸತ್ಯಾಗ್ರಹ ಸೌಧ ಎಂದು ಸರಕಾರ ನಾಮಕರಣ ಮಾಡಿದೆ...."

"ಜೈಲಾ... ಜೈಲು ಕಟ್ಟಬೇಕಾದರೆ ನಮ್ಮ ಹಳ್ಳಿಗೆ ಹಳ್ಳೀನೇ ಯಾಕೆ ಬೇಕು? ದಕ್ಷಿಣ ಭಾಗದಲ್ಲಿರುವ ಕಲ್ಲುಬಂಡೆಗಳ ಬಂಜರು ಭೂಮಿ ಸಾಲದೇ...."

"ಪ್ರಸ್ತುತ ನಮ್ಮಲ್ಲಿರುವ ಅತ್ಯಂತ ದೊಡ್ಡ ಜೈಲು ತಿಹಾರ್ ಜೈಲು. ಅಲ್ಲಿ ಸುಮಾರು ೬,೦೦೦ ಕೈದಿಗಳ ಜಾಗದಲ್ಲಿ ೧೧,೦೦೦ ಕೈದಿಗಳಿದ್ದಾರೆ. ಆದರೆ ಈ ಒಂದೊಂದೂ ಸತ್ಯಾಗ್ರಹ ಸೌಧದಲ್ಲಿ ಸುಮಾರು ೫೦,೦೦೦ ಕೈದಿಗಳಿಗೆ ಸ್ಥಳಾವಕಾಶವನ್ನು ಮಾಡಿಕೊಡುವ ಇರಾದೆಯಿದೆ. ಅತ್ಯಾಧುನಿಕವಾದ ಜೈಲುಗಳನ್ನು ಸರಕಾರ ಕಟ್ಟಬೇಕೆಂದಿದೆ. ಈ ಪುಸ್ತಕ ಓದಿದರೆ ಸರಕಾರದ ದೂರದೃಷ್ಟಿ ನಮಗೆ ಗೊತ್ತಾಗುತ್ತದೆ. ಬರುವ ವರ್ಷಗಳಲ್ಲಿ ಎಷ್ಟು ಜನರನ್ನು ಬಂಧಿಸಬಹುದು, ಅದರಿಂದ ದೇಶಕ್ಕೆ ಎಷ್ಟು ಫಾಯಿದೆ, ಜೈಲಿನದ್ದೇ ಒಂದು ವ್ಯವಸ್ಥೆಯಿದ್ದು ಅದೂ ಸ್ವಯಂಪೂರ್ಣವಾಗಿ ಸರಕಾರದ ದೇಣಿಗೆಯಿಲ್ಲದೇ ನಡೆಯುವುದು ಹೇಗೆ... ಎಲ್ಲವನ್ನೂ ಯೋಚಿಸಿ ಈ ದಾಖಲೆಯನ್ನು ತಯಾರಿಸಿದ್ದಾರೆ. ಗಮ್ಮತ್ತೆಂದರೆ ಗಾಂಧೀಜಿಯವರ ಗ್ರಾಮಸ್ವರಾಜ್ ಸೂತ್ರಗಳು ಇದರಲ್ಲಿವೆ. ಕೈದಿಗಳಿಗೆ ಯಾವುದೇ ಯಂತ್ರಗಳ ಸಹಾಯ ಇರುವುದಿಲ್ಲವಾದ್ದರಿಂದ ಎಲ್ಲವೂ ಶ್ರಮದಾನದಿಂದಲೇ ನಡೆಯುತ್ತದೆ. ಯಾವುದೇ ಸಮಯಕ್ಕೆ ೪೦,೦೦೦ಕ್ಕಿಂತ ಕಡಿಮೆ ಕೈದಿಗಳಿಲ್ಲದಂತೆ ಈ ವ್ಯವಸ್ಥೆ ನಡೆಯುತ್ತದೆ. ಇದರಲ್ಲಿ ಕಾಲು ಭಾಗ ಬೌದ್ಧಿಕ ಅಪರಾಧಿಗಳಿಗೆ ಮೀಸಲಾಗಿದೆ. ಈ ಥಿಂಕ್ ಟ್ಯಾಂಕುಗಳನ್ನು ಒಳಕ್ಕೆ ಹಾಕಿ ಅವರ ಕೈಲಿ ಶ್ರಮದ ಕೆಲಸ ಮಾಡಿಸಿದರೆ ಮಿಕ್ಕವರ ಅಪರಾಧಗಳು ತಾನಾಗಿಯೇ ಕಡಿಮೆಯಾಗುತ್ತದೆ ಎನ್ನುವ ಆಲೋಚನೆಯೂ ಇದೆ.... ನೋಡಿ ದೇಶ ನಿರ್ಮಾಣದ ಈ ಮಹತ್ವದ ಕೆಲಸದಲ್ಲಿ ಬೋಯಿನಪಲ್ಲಿಯ ಹೆಸರು ಅಮರವಾಗುವ ಅವಕಾಶವನ್ನು ಕಳೆದು ಕೊಳ್ಳಬಾರದೆಂದು ನಾನು ಮನವಿ ಮಾಡುತ್ತಿದ್ದೇನೆ...."

"ಜೈಲು ಕಟ್ಟಿ ಅಮರಾ ಆಗೋದು ಹ್ಯಾಂಗಪ... ನಮ್ಮ ಭೂಮಿ ತಗಂತಾರೆ, ಮನೆಯೂ ಗಾಯಬ್, ಕೆಲಸವೂ ಇಲ್ಲ... ಸೂಸೈಡ್ ಮಾಡ್ಕಳ್ಳಾಕ್ಕೆ ಇಂಥ ಸುವರ್ಣಾವಕಾಶಕ್ಕಿಂತ ಬೇರೆ ಸಿಗಾಂಗಿಲ್ಲ ನೋಡು...... ಅಪ್ಪಾ ನರೇಂದರ್ ತಲೀ ಕೆಟ್ಟದೇನೋ... " ಮತ್ತೆ ಹಿಂದಿನಿಂದ ಒಬ್ಬ ಕೇಳಿದ.

ಅಲ್ಲಿಯವರೆಗೂ ಮೌನವಾಗಿದ್ದ ಮಾಜಿ ಸರಪಂಚ್ ಅಪ್ಪಲರೆಡ್ಡಿಯವರು ಮಧ್ಯಸ್ಥಿಕೆ ಮಾಡಿದರು... "ಮಾಜಿ ಸರಪಂಚ್‌ಗಾರೂ... ಈ ಯೋಜನೆಯಿಂದ ಊರಿಗೇನು ಫಾಯ್ದೆ ಆಗ್ತದ ಹೇಳ್ರಿ, ನಾವು ಭೂತಾಯೀನ ನಂಬಿ ಬೆಳದೋರು. ಚಿಲ್ಲರೆ ಕಾಸಿಗೆ ಅದರಲ್ಲೂ ಜೇಲು ಕಟ್ಟೋದಕ್ಕೆ ನಮ್ಮ ಜಮೀನು ಕೊಡೋದಕ್ಕೆ ನಾವೇನು ಚೆವಿಲೋ ಪೂವು ಗಿರಾಕಿಗಳಾ.. ಮತಲಬ್ ಕೀ ಬಾತ್ ಕರೋ" ಅಂದರು.

ಅಪ್ಪಲರೆಡ್ಡಿಯವರು ಇದರಲ್ಲಿ ಮಾತನಾಡುವ ಅವಕಾಶ ಕಾಣುತ್ತಿದ್ದಾರೆಂದರೆ ಅಪಾಯವೇ ಎಂದು ನರೇಂದರ್‌ಗೆ ಅನ್ನಿಸಿತು. ನರಂದರ್‌ಗೆ ವಿರೋಧ ವ್ಯಕ್ತಪಡಿಸುವ ಕ್ಷೀಣದನಿಯಾಗಿದ್ದ ಅಪ್ಪಲರೆಡ್ಡಿಯ ದನಿ ಗಟ್ಟಿಯಾಗುತ್ತಾ ಹೋಗಿತ್ತು. ಅಪ್ಪಲರೆಡ್ಡಿಯ ವಾದ ಸರಳವಾಗಿತ್ತು. ಹಿಂದಿನ ಚುನಾವಣೇಲಿ ಆತ ಈ ಮಾತುಗಳನ್ನು ಹೇಳಿದ್ದರೂ ಸೋತಿದ್ದರು. ಆದರೆ ವಾದ ಗಟ್ಟಿಯಾಗಿತ್ತು: "ನಾನು ಊರಾಗೇ ಇರೋ ಆಳು. ಹೈದರಾಬಾದು-ದಿಲ್ಲಿ ಅಂತ ಫಿರಕಿ ಲಗಾಯಿಸೋನಲ್ಲ. ನಮಗೆ ಗಾಂವನಾಗ ಕ್ಯಾ

ಹೋನಾ ತಿಳದದ. ನಾನು ದೊಡ್ಡ ಇಂದ್ರ-ಚಂದ್ರ ನೈ ದಿಖಾತಾ. ನಿಮ್ಮ ಬೀಚ್ ನಾಗೇ ಇರೋ ನಾನೇ ನಿಮ್ಮವ... ನರೇಂದರ್ ತೋ ಚಲೇ ಜಾತಾ. ಅವನ ದಿಲ್ ದಿಲ್ಲೀಲಿ... ಇಲ್ಲಿಲ್ಲ." ಕಳೆದ ಸ್ವಲ್ಪಕಾಲದಿಂದ ನರೇಂದರ್‌ನ ಕಾರ್ಯಕ್ಷೇತ್ರ ಹಿರಿದಾಗುತ್ತಾ, ಹಿಗ್ಗುತ್ತಾ ಮಹತ್ವಾಕಾಂಕ್ಷೆಯದ್ದಾಗುತ್ತಾ ಹೋಗುತ್ತಿದ್ದಂತೆ ಅಪ್ಪಲರೆಡ್ಡಿಯ ಪ್ರಾಮುಖ್ಯತೆಯೂ ದನಿಯೂ ಗ್ರಾಮಸ್ಥರಿಗೆ ಪ್ರಸ್ತುತವಾಗುತ್ತಾ ಹೋಗುತ್ತಿತ್ತು. ಕಳೆದವಾರ ಗ್ರಾಮದವಲ್ಲಿ ಮಾತಾಡುತ್ತಾ ಅಪ್ಪಲರೆಡ್ಡಿ ಈ ಮಾತುಗಳನ್ನು ಹೇಳಿದ್ದರು "ಮೈ ಇಧರ್ ಹೂಂ. ಉನೋ ಬೀವಿಕೋ ಕುರ್ಸಿನಾಗ ಬೈಠಾಯಿಸಿ ಗಾಯಬ್ ಆಗ್ಯಾನ. ನೀವೇ ನೋಡ್ರಿ.. ದಿಮಾಕು ಉಪಯೋಗ ಮಾಡ್ರಿ, ಯಾರು ಇಲ್ಲಿ. ಯಾರು ಡಿಲ್ಲಿ ಅಂತ ನಿಮಗೇ ಗೊತ್ತಾಗ್ತದ...."

ಎಲ್ಲರೂ ದಖ್ಖನಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ನರೇಂದರ್ ತನ್ನ ಮಾತನ್ನು ಶಿಷ್ಟವಾಗಿ ಅಳೆದು ಸುರಿದು ಹೇಳಿದ.

"ಈ ಪುಸ್ತಕಗದಲ್ಲಿ ಕೊಟ್ಟಿರೋ ಯೋಜನೆಯ ಪ್ರಕಾರ ಎರಡು ಸಾಧ್ಯತೆಗಳಿವೆ. ಭೂಸ್ವಾಧೀನ ಯೋಜನೆಯಡಿಯಲ್ಲಿ ನಮ್ಮ ಗ್ರಾಮವನ್ನು ಸರಕಾರಕ್ಕೆ ಕೊಟ್ಟು, ಬರುವ (ಮಾರುಕಟ್ಟೆ ಬೆಲೆಯ ನಾಲ್ಕು ಪಟ್ಟು) ರಖಮನ್ನು ತೆಗೆದು ವಿಸ್ಥಾಪಿತರಾಗೋದು. ಜೇಲು ಕಟ್ಟುವುದರಿಂದ ಪರಿಸರನಾಶ ಇಲ್ಲವಾದ್ದರಿಂದ ಪರ್ಯಾವರಣ ಮಂತ್ರಾಲಯದ ಅನುಮತಿಗೆ ತೊಂದರೆಯಿಲ್ಲ. ಇನ್ನು ಸಾಮಾಜಿಕ ಒಮ್ಮತದ ಪ್ರಶ್ನೆ... ಅದನ್ನು ಸುಲಭವಾಗಿ ಮಾಡಿಸಬಹುದು. ಇದರಿಂದ ನಮ್ಮ ಗ್ರಾಮ ಮಾತ್ರ ಪೀಡಿತರಾಗುವುದರಿಂದ ಆ ಬಗ್ಗೆ ಯೋಚಿಸಬಹುದು. ಆದರೆ ಅದಕ್ಕಿಂತ ಹೆಚ್ಚು ಆಕರ್ಷಕವಾದ ಯೋಜನೆ ಈ ಪುಸ್ತಕದ ಎರಡನೆ ಆಯ್ಕೆಯಲ್ಲಿದೆ. ಅದು ಬೂಟ್ ಯೋಜನೆ... ನಾವೇ ಜೈಲನ್ನು ಕಟ್ಟಿ, ಅದನ್ನು ನಿಭಾಯಿಸಿ, ಅದರಿಂದ ಬರೋ ಆದಾಯವನ್ನು ಗ್ರಾಮ ಪ್ರಜೆಗಳಿಗಾಗಿ ಉಪಯೋಗಿಸೋದು. ಇದರಿಂದ ಜೀವನ ಪರ್ಯಂತ ನಮಗೆ ಆದಾಯ ಬರುವ ಏರ್ಪಾಟು ಮಾಡಬಹುದು. ಬೇಕಿದ್ದರೆ ನಾವು ಈ ಸಂಸ್ಥೆಯನ್ನ ಸಹಕಾರ ಸಂಘವಾಗಿಯೂ ಏರ್ಪಡಿಸಬಹುದು. ಸರಕಾರ ಇದಕ್ಕೆ ದೀರ್ಘಕಾಲಿಕ ಸಾಲವನ್ನು ಕೊಡುತ್ತೆ. ಪ್ಲಾನು, ಆರ್ಕಿಟೆಕ್ಟುಗಳನ್ನು ಕೊಡುತ್ತದೆ, ನಾವು ಸಮೂಹಿಕವಾಗಿ ಅದರ ಮಾಲೀಕರಾಗಿರುತ್ತೇವೆ. ಜೇಲಿನಲ್ಲಿ ಎಲ್ಲವೂ ಇರುತ್ತದೆ... ನಮ್ಮದೇ ಕೃಷಿಭೂಮಿಯಲ್ಲಿ ಕೈದಿಗಳ ಕೈಲಿ ಕೃಷಿ ಮಾಡಿಸುತ್ತಾರೆ. ಇಲ್ಲಿ ಕೈದಿಗಳು ಉತ್ಪಾದಿಸಿದ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ವ್ಯವಸ್ಥೆ, ಮತ್ತು ಅದರಲ್ಲಿನ ಲಾಭವೂ ನಮಗೇ ಬರುವಂತೆ ಏರ್ಪಾಟು ಮಾಡಲಿಕ್ಕೆ ಬರುತ್ತದೆ. ಇದೇನೂ ಹವಾಹವಾ ಮಾತಲ್ಲ. ಅಹಮದಾಬಾದಿನಲ್ಲಿ ಸಾಬರಮತಿ ಜೈಲಿನ ಕೈದಿಗಳು ತಯಾರಿಸುವ ಬುಜಿಯಾ ಕೊಳ್ಳುವುದಕ್ಕೆ ಸಂಜೆ ಜನ ಸಾಲುನಿಲ್ಲುತ್ತಾರೆ. ನಮ್ಮ ವ್ಯಾಪಾರ ಹಾಗಿರುತ್ತೆ..

"ನಿಜಕ್ಕೂ ಇದು ನೂತನವಾದ ಪ್ರಯೋಗ... ಇಲ್ಲಿ ಕೈದಿಗಳನ್ನು ಸಕಾರಾತ್ಮಕವಾಗಿ ಅವರು ಸುಧಾರಣೆಗೆ ಒಳಗಾಗಲು ಕಳುಹಿಸುವುದರಿಂದ ಇದನ್ನು ಜೈಲೆಂದೂ ಕರೆಯುತ್ತಿಲ್ಲ. ಅದಕ್ಕೇ 'ಸತ್ಯಾಗ್ರಹ ಸೌಧ' ಎನ್ನುವ ಹೆಸರನ್ನು ನಮ್ಮ ನಾಯಕರು ಯೋಚಿಸಿದ್ದಾರೆ.... ನಾವು ಬೇಕಿದ್ದರೆ ಇದನ್ನು ಬೋಯಿನಪಲ್ಲಿ ಸತ್ಯಾಗ್ರಹ ಸೌಧವೆಂದು ಕರೆಯೋಣ... ನಮ್ಮ ಗ್ರಾಮದ ಹೆಸರೂ ಇದರೊಂದಿಗೆ ಜೋಡಿಸಿದಂತಾಗುತ್ತದೆ."

"ದವಾಖಾನೆ, ಇಸ್ಕೂಲು, ರೈಲು, ಸಡಕ್, ಅಣಕಟ್ಟು, ಏರ್ಪೋರ್ಟು, ಬಸ್ ಸ್ಟಾಂಡು.... ಏನೇನಕ್ಕೋ ಭೂಸ್ವಾಧೀನ ಮಾಡೋದನ್ನ ಕಂಡೀವಿ. ಜೈಲು... ಯಾಕೋ ಸರಿಯಿಲ್ಲ.. ಜೈಲು ಕಟ್ಟಿ ನಾಮ್ ರೋಷನಾಗಬೇಕೆ....."

"ನಮಗೆ ಪ್ರತ್ಯೇಕವಾಗಿ ಆಧುನಿಕ ಮನೆಗಳನ್ನು ಈ ಯೋಜನೆ ಕಟ್ಟಿಸಿಕೊಡುತ್ತದೆ. ಜೊತೆಗೆ ಈ ಸಂಕೀರ್ಣದಲ್ಲಿ ಉದ್ಯೋಗಾವಕಾಶಗಳೂ ಉಂಟಾಗುತ್ತವೆ. ಕಟ್ಟಡದ ಸಮಯಕ್ಕೆ ನಮಗೆ ಕಾಂಟ್ರಾಕ್ಟೂ ಸಿಗುವ ಸಾಧ್ಯತೆಯಿದೆ. ಇದರಿಂದ ಫಾಯಿದೆಯಿದೆ ಅಂತ ನಾನು ಪ್ರತ್ಯೇಕವಾಗಿ ಅಪ್ಪಲರೆಡ್ಡಿಯವರಿಗೆ ಹೇಳಬೇಕಿಲ್ಲ. ಇದಕ್ಕಿಂತ ಹೆಚ್ಚು, ಜೈಲಿನಾಚೆ ಒಂದು ೫೦ ಕೋಣೆಗಳ ಸಣ್ಣ ಸ್ಟಾರ್ ಹೋಟೆಲು.. ಒಂದಿಷ್ಟು ಲಾಜುಗಳೂ ಬರುತ್ತವೆ. ಕೈದಿಗಳನ್ನು ಸಂದರ್ಶಿಸಲು ಬರುವವರು ಉಳಿಯುವ ವ್ಯವಸ್ಥೆ, ಅದಕ್ಕೆ ಒಂದು ವೇಳಾಪಟ್ಟಿ, ಜೈಲಿನೊಳಗಡೆ ಒಂದು ಕೋರ್ಟು, ಅಲ್ಲಿ ವಾದಿಸಲು ಬಂದ ವಕೀಲರಿಗೆ ವಸತಿ ವ್ಯವಸ್ಥೆ.... ಹೀಗೆ ಆರ್ಥಿಕವಾಗಿ ನಮ್ಮ ಗ್ರಾಮವಿಕಾಸವಾಗಲು ಅನೇಕ ಅವಕಾಶಗಳಿವೆ... "

ಅಂದಿನ ಸಭೆ ಅಲ್ಲಿಗೆ ಬರಖಾಸ್ತಾಯಿತು. ಮತ್ತು ಮೂರು ದಿನದ ನಂತರ ಗ್ರಾಮ ಸಭೆ ಸೇರುವುದೆಂದು ತೀರ್ಮಾನವಾಯಿತು.

ನರೇಂದರ್ ಯೋಜನೆಯ ಮುಖ್ಯಾಂಶಗಳನ್ನೆಲ್ಲಾ ದೊಡ್ಡ ಕಾಗದದಲ್ಲಿ ಛಪಾಯಿಸಿ ಪಂಚಾಯ್ತಿ ಆಫೀಸಿನ ಮೇಲೆ ಅಂಟಿಸಬೇಕೆಂದು ಯೋಚಿಸಿದ. ಸುರಳಿ ಬಂಧನವಿದ್ದ ಆ ಫೀಸಿಬಲಿಟಿ ರಿಪೋರ್ಟನ್ನು ಮತ್ತೆ ತಿರುವಿಹಾಕುತ್ತಿದ್ದಾಗ ಇಂದಿರಮ್ಮ ಬಂದಳು...

"ನೀವು ಮಾಡ್ಲಿಕತ್ತಿರೋದು ಸರಿ ಅದಾ ಏನ... ಇದರಿಂದ ಖರೇ ನಮ್ಮೂರಿಗೆ ಫಾಯಿದಾ ಆಗ್ತದ ಹೇಳ್ರಿ.. ಜೇಲು ಕಟ್ಟಿಸಿ ಕೀರ್ತಿ ಸಂಪಾದಿಸೂದು... ಯಾಕೋ ಸರಿಯಿಲ್ಲ ಅನ್ನಿಸಾಂಗಿಲ್ಲ?"

"ಏ ಜೈಲಲ್ಲ... ಸತ್ಯಾಗ್ರಹ ಸೌಧ. ನೋಡು ಇದರಾಗೆ ಒಂದು ಗಲ್ಲುಗಂಬವೂ ಅದ... ಅಜ್ಮಲ್ ಕಸಾಬ್ ನನ್ಮಗನ್ನ ಇಲ್ಲೇ ಗಲ್ಲಿಗೇರಿಸಿ ದಫನ್ ಮಾಡ್ಬೋದಿತ್ತು... ಇದಕ್ಕಿಂತ ದೊಡ್ಡ ದೇಶಸೇವೆ ಏನದ ಹೇಳು... ದಫನ್ ಮಾಡಲಿಕ್ಕ ಕಬ್ರಸ್ತಾನ. ಸುಡೋದಕ್ಕೆ ವಿದ್ಯುತ್ ಚಿತಾಗಾರ... ಈ ಯೋಜನೆ.. ಏಸ್-ಏಸ್ ಅಂತ ವಿಶ್ವವಿಖ್ಯಾತ ಡಿಬಿಜಿ ಕನ್ಸಲ್ಟೆಂಟುಗಳು ಹೇಳಾರ. ನಾವೇ ಜೈಲು ನಡೆಸೋದರಿಂದ ಅಲ್ಲಿರೋ ಸವಲತ್ತುಗಳು ನಮಗೂ ಸಿಗಾಂಗೆ ಮಾಡಬೌದು.. ನೋಡು... ಇದರ ಕೀರ್ತಿ ನನಗಲ್ಲ.. ಸರಪಂಚಳಾಗಿ ನಿನಗೇ ಬರ್ತದ.. ನನ ರಾಣಿ....ನಮಗೂ ಫಾಯಿದೆ. ಶುದ್ಧ ದೇಶನಿರ್ಮಾಣದಲ್ಲಿ ನಮ್ಮ ಸೇವೆ. ಜೊತೆಗೆ ಇದರಿಂದ ನನಗೆ ಹೈದರಾಬಾದು-ದಿಲ್ಲಿಗೆ ಟಿಕೆಟ್ಟೂ ಸಿಗುತ್ತೆ... ಮರೀಬೇಡ. ಇದರಲ್ಲಿ ನಷ್ಟ ಯಾರಿಗದ ಹೇಳು...."

"ಅಲ್ಲ. ನಮ್ಮ ಗ್ರಾಮದಾಗ ೪೫೦ ಸಂಸಾರ ಅದಾವ. ೨೦೭೬ ಮಂದಿ ಅದೀವಿ. ಈ ಜಾಗಕ್ಕೆ ೫೦,೦೦೦ ಜನ ಬರ್ತಾರಂದರ ಮಜಾಕೇನು.. ಸರಕಾರ ಇಷ್ಟು ದೊಡ್ಡ ಜೇಲು ಯಾಕ ಕಟ್ಟಿಸ್ತಿದೆ... ದೇಸದಾಗ ಅತೀ ದೊಡ್ಡ ಜೇಲಿನಾಗ ೧೦,೦೦೦ ಮಂದಿ ಅದಾರ ಅಂತ ಹೇಳ್ಳಿಕ್ಕತ್ತೀ.. ಮತ್ತ ಇಷ್ಟು ದೊಡ್ಡ ಜೇಲು ತಯಾರಾದರ ಯಾರನ್ನ ಅದರಾಗ ತುಂಬತಾರ.... ಯೋಚನೆ ಮಾಡು ಇಂಥದ್ದು ನಾಲ್ಕು ಜೇಲುಗಳು... ಅಂದರ್ ಎರಡು ಲಕ್ಷ ಮಂದಿ...ಮಜಾಕಲ್ಲ ನರೇಂದರ್... ಮಜಾಕಲ್ಲ"

"ಏ ಈ ರಿಪೋರ್ಟು ನೋಡು... ಇದರಾಗ ಎಲ್ಲ ಲೆಕ್ಕಪತ್ರನೂ ಅದ... ಹೌ... ಈಗ ದೇಶದ ಸೆಂಟ್ರಲ್ ಜೇಲುಗಳಲ್ಲಿ ಎರಡು ಲಕ್ಷ ಜನ ಅದಾರ.. ಜಾಮೀನಿನ ಮೇಲಿರೋರನ್ನು ಲೆಕ್ಕ ಹಾಕು... ತಾನೇ ಎಲ್ರೂ ಒಳಗ ಬರ್ತಾರ... ಸುಮ್ಮನೆ ಕೂತು ಭಾಷಣ ಮಾಡ್ತಿರೋರ ಕೈಲಿ ಕೂಲಿ ಕೆಲಸ ಮಾಡಿಸಿದರೆ ದೇಶಕ್ಕೆ ಒಳ್ಳೇದಾಗ್ತದ. ಸುಮ್ಮನೆ ಧರಣಿ, ಸತ್ಯಾಗ್ರಹ, ಭಾಷಣ ಮಾಡ್ಕಂಡು ಟೈಂಪಾಸ್ ಮಾಡೋರ್ಗೆ, ಕೆಲಸಾನೂ ಈ ಜೇಲೇ ಕೊಡ್ತದ... ಮತ್ತ ಹ್ಯುಮನ್ ರೈಟ್ಸ್ ಅನ್ನೋ ಭಾಗದಾಗ ಪ್ರತಿಭಟನೆಗೂ ಈ ರಿಪೋರ್ಟಿನಲ್ಲಿ ಸಮಯ ಮತ್ತು ಜಾಗ ಮಾಡಿಕೊಟ್ಟಾರ... ಪ್ರತೀ ಸೋಮವಾರ ಅದಕ್ಕ, ಭಾಷಣಕ್ಕ, ಜಾಗ ಮಾಡಿಕೊಟ್ಟಾರ...ಈ ರಿಪೋರ್ಟ್ ಸಾಮಾನ್ಯದ್ದಲ್ಲ... ಹಾರ್ಡವರ್ಕೂ ಹಾರ್ವರ್ಡೂ ಸೇರಿದರೆ ಏನಾಗ್ತದ ಅನ್ನೂದಕ್ಕೆ ಇದೇ ಸಾಕ್ಷಿ ನೋಡು...."

"ಕಳೆದ ವರ್ಷ ಉಳ್ಳಾಗಡ್ಡಿಗೆ ಬೆಲೆ ಇಲ್ಲದಾಗ ನೀನು ಉಳ್ಳಗಾಡ್ಡಿಯನ್ನು ಟ್ರೇಲರ್ ತುಂಬಾ ತುಂಬಿಸಿ ಟ್ರಾಕ್ಟರ್‌ಗೆ ಜೋಡಿಸಿ ಎಲ್ಲಿ ಖಾಲಿ ಮಾಡಿಬಂದೆ?.. ಜೇಲಿನಾಗೇನು?... ಅಥವಾ ಮುಖ್ಯಮಂತ್ರಿಯ ಮನಿ ಮುಂದಾ?...ಜೈಲಿನಾಗ ಪ್ರತಿಭಟನೆಗೆ ಅವಕಾಶ ಮಾಡಿಕೊಡಲಿಕ್ಕತ್ತಾರಂತ... ಇದು ಸರಿಯಿಲ್ಲ... ನಾವು ಇದರಲ್ಲಿ ಷಾಮೀಲಾಗೋದು ಪಾಪ. "

"ಏ ಗವಾರ್ ಲಡ್ಕೀ... ಇದರಾಗ ಏನೇನಿದೆ ಗೊತ್ತಿಲ್ಲದೇ ಮಳ್ಳಮಳ್ಳಾಗಿ ವದರ್ಯಾಡ್ಬೇಡ... ಹಮ್ ಆಗೇ ಬಢ್ರೇ.. ಬಸ್...." ಎನ್ನುತ್ತಾ ಹಲವಾರು ಪೋಸ್ಟರುಗಳನ್ನು ತಯಾರಿಸಿ ಪಂಚಾಯ್ತಿ ಗೋಡೆಗೆ ಮೆತ್ತಲು ತಯಾರಾದ.

***

ಮತ್ತೆ ಗ್ರಾಮಸಭೆ ಸೇರುವ ಮುನ್ನವೇ ಅಪ್ಪಲರೆಡ್ಡಿ ನರೇಂದರ್ ಮನೆಗೆ ಬಂದು ಕಂಟ್ರಾಕ್ಟಿನ ವಿವರ, ಅದರಲ್ಲಿನ ಹೂಡಿಕೆಯ ಮೊತ್ತದ ವಿಷಯ ವಿಚಾರಿಸಿ ಅವನ ಜೊತೆ ಕೈ ಮಿಲಾಯಿಸಿ ಹೋದ. ಜನರಿಗೆ ನಾನು ಹೇಳುತ್ತೇನೆ. ನಾವು ಕಂಟ್ರಾಕ್ಟನ್ನು ನಮ್ಮ ಕೈವಶ ಮಾಡಿಕೊಳ್ಳೋಣ... ದೇಶ ನಿರ್ಮಾಣದಲ್ಲಿ ನಾವು ಯಾಕೆ ಹಿಂದುಳಿಯಬೇಕು ಎಂದು ಅಪ್ಪಲರೆಡ್ಡಿ ಹೇಳಿದ್ದ. ಬೋಯಿನಪಲ್ಲಿ ಸತ್ಯಾಗ್ರಹ ಸೌಧಕ್ಕೆ ಒಪ್ಪಿದ ಸುದ್ದಿ, ಎಲ್ಲೆಡೆಯೂ ಹಬ್ಬಿತು. ಸತ್ಯಾಗ್ರಹ ಸೌಧದ ಬಗೆಗಿನ ಚರ್ಚೆ ಪತ್ರಿಕೆಗಳಲ್ಲಿ ಪ್ರಾರಂಭವಾಯಿತು. ದೇಶಭಕ್ತ ಪರ, ಮತ್ತು ಎಡಪಂಥೀಯ ವಿರೋಧಿಗಳೆಂಬ ಎರಡು ಗುಂಪುಗಳ ವಾಹಿನಿ ಚರ್ಚೆ, ಸಂಪಾದಕೀಯ, ಪ್ರತಿಭಟನೆ ಎಲ್ಲವೂ ಪ್ರಾರಂಭವಾದುವು...

ಬುದ್ಧಿಜೀವಿಗಳ ಒಂದು ಗುಂಪು ಬಂದು ಗ್ರಾಮದಲ್ಲಿ ಧರಣಿ ಕೂತು ಇದರಲ್ಲಿರಬಹುದಾದ ಪಿತೂರಿಯ ಮಾತುಗಳನ್ನಾಡಿದರು. ಒಟ್ಟಾರೆ ಎಲ್ಲ ಕೇಂದ್ರೀಯ ಕಾರಾಗೃಹಗಳನ್ನೂ ಸೇರಿಸಿ ಎರಡು ಲಕ್ಷ ಕೈದಿಗಳು, ಜಿಲ್ಲಾ ಕಾರಾಗೃಹದಲ್ಲಿ ಎರಡು ಲಕ್ಷ, ಮತ್ತು ಮಿಕ್ಕೆಲ್ಲ ಸಬ್ ಜೈಲುಗಳನ್ನು ಸೇರಿಸಿ ಒಂದು ಲಕ್ಷಕ್ಕಿಂತ ಕಡಿಮೆಯಿರುವ ದೇಶದಲ್ಲಿ ಸುಮಾರು ಎರಡು ಲಕ್ಷ ಹೊಸ ಕೈದಿಗಳನ್ನು ಬಂಧಿಸಿಡುವ ಏರ್ಪಾಟು ಸರಕಾರ ಮಾಡುತ್ತಿದೆ ಎಂದರೆ ಅದರಲ್ಲಿ ಯಾವುದೋ ಫ್ಯಾಸಿಸ್ಟ್ ಪಿತೂರಿಯೇ ಇದೆಯೆಂದು ಭಾಷಣಗಳನ್ನು ಕುಟ್ಟಿದರು. ಬೋಯಿನಪಲ್ಲಿ ಒಬಿ ವ್ಯಾನುಗಳ

ಆಗರವಾಯಿತು. ಮಾರನೆಯ ದಿನದ ಗ್ರಾಮಸಭೆ ಬುದ್ಧಿಜೀವಿಗಳ ಪ್ರತಿಭಟನೆ ಮತ್ತು ಗ್ರಾಮಸ್ಥರ ಭಾಷಣಗಳ ನಡುವೆ ಲೈವ್ ಟೆಲಿಕಾಸ್ಟಿನಲ್ಲಿ ಆಯಿತು.

ಮಾಜಿ ಸರಪಂಚ್ ನರೇಂದರ್. ಮಾಜಿ ಮಾಜಿ ಸರಪಂಚ್ ಅಪ್ಪಲರೆಡ್ಡಿ ಸತ್ಯಾಗ್ರಹ ಸೌಧದ ಪರವಾಗಿ ಮಾತನಾಡಿದರು. ಇಂದಿರಮ್ಮ ಮೊದಲ ಬಾರಿಗೆ ನರೇಂದರ್ ಬರೆದು ಕೊಟ್ಟಿದ್ದ ಭಾಷಣವನ್ನು ಬಿಟ್ಟು, ಪ್ರತಿಭಟನಕಾರರು ಬರೆದುಕೊಟ್ಟಿದ್ದ ಭಾಷಣವನ್ನು ಓದಿದಳು. ಗ್ರಾಮವು ಏಕಾನುಮತದಿಂದ ಊರನ್ನು ಜೈಲಾಗಿ ಪರಿವರ್ತಿಸಿ ದೇಶಸೇವೆಯಲ್ಲಿ ತಮ್ಮ ಯೋಗದಾನ ನೀಡುವ ಠರಾವನ್ನು ಪಾಸುಮಾಡಿತು. ಭಿನ್ನಮತ ವ್ಯಕ್ತಪಡಿಸುತ್ತಾ ಇಂದಿರಮ್ಮ ತನ್ನ ಸರಪಂಚ ಹುದ್ದೆಗೆ ರಾಜೀನಾಮೆಯನ್ನು ಕೊಟ್ಟಳು. ಒಟ್ಟಾರೆ ಬೋಯಿನಪಲ್ಲಿ ಸತ್ಯಾಗ್ರಹ ಸೌಧಕ್ಕೆ ಮುಂದಿನ ಜನವರಿ ತಿಂಗಳಿನಲ್ಲಿ ಅಡಿಗಲ್ಲು ಹಾಕುವುದಾಗಿಯೂ, ಸಾಧ್ಯವಾದರೆ ಪ್ರಧಾನ ಮಂತ್ರಿಗಳನ್ನು, ಇಲ್ಲವಾದರೆ ಗೃಹಮಂತ್ರಿಗಳನ್ನು ಆಹ್ವಾನಿಸುವ ಠರಾವು ಪಾಸಾಯಿತು.

ಇತ್ತ, ಮಾನವಾಧಿಕಾರಗಳ ಬಗ್ಗೆ ಮಾತನಾಡುತ್ತಿದ್ದ ಬುದ್ಧಿಜೀವಿಗಳ ಮಾತಿಗೆ ಕಿವಿಗೊಡುವವರು ಇರಲೇಯಿಲ್ಲ. ದೇಶದ್ರೋಹಿಗಳನ್ನು ಹದ್ದುಬಸ್ತಿನಲ್ಲಿಡಲು ಜೈಲು ಕಟ್ಟಿಸುತ್ತಿದ್ದರೆ ಅದನ್ನು ವಿರೋಧಿಸುವವರೂ ದೇಶದ್ರೋಹಿಗಳೇ ಇರಬೇಕು ಎನ್ನುವ ಮಾತಿನ ಗುಸುಗುಸು ನಡೆಯಿತು. ಅವರ ದೇಶಭಕ್ತಿ, ಸಕಾರಾತ್ಮಕತೆಯನ್ನು ಪ್ರಶ್ನಿಸುತ್ತಾ ಬಂದ ವಾಟ್ಸಾಪ್ ಮೆಸೇಜನ್ನು ನರೇಂದರ್ ಟೀಂ ಬೋಯಿನಪಲ್ಲಿಯ ಗುಂಪುಗಳಿಗೆ ಫಾರ್ವಾರ್ಡ್ ಮಾಡಿದ. ಅಂದು ಸಂಜೆ ಮೊದಲ ಬಾರಿಗೆ ನರೇಂದರ್ ಇಂದಿರಮ್ಮನ ಮೇಲೆ ಕೈಮಾಡಿದ್ದ.

ಬಾತ ಕೆನ್ನೆ... ತಲೆಯ ಮೇಲೆ ಬೋರೆ, ಕಪ್ಪು ಕಣ್ಣು ಹೊತ್ತ ಮತ್ತು ಯಾವತ್ತೂ ಮಾತಾಡದೇ ಅಂದು ಮಾತಾಡಿದ್ದ ಮಾಜಿ ಸರಪಂಚ್ ಇಂದಿರಮ್ಮ ನೋವಿನಿಂದಲೇ ಹೇಳಿದಳು... "ನೀನು ನನ್ನನ್ನ ಬಡಿದಾಗ ... ತುರಂತ್... ಬಗೇರ್ ಜಾಮೀನು ಬಂಧಿಸಿಡುವ ಜೈಲಿನ ಅವಶ್ಯಕತೆ ಗೊತ್ತಾತು.... ಜೈಲಿನ ನಾಲ್ಕೂ ದಿಕ್ಕಿಗೆ ನಾಲ್ಕು ಠಾಣೆಗಳೂ ಇರೂಹಾಂಗ ಪ್ಲಾನ್ ಮಾಡ್ಲಿಕ್ಕ ಹೇಳು... ಒಂದು ಕಂಪ್ಲೇಂಟಾದರೂ ಕೊಡೂದಕ್ಕ ಬರ್ತದ... ಇಲ್ಲಾಂದ್ರ ಹತ್ತು ಮೈಲಿ ದೂರದ ಠಾಣೆಗೆ ಹೋಗ್ಬೇಕಾಗದ."

ಜನೇವರಿ ೩೦ಕ್ಕ ಸತ್ಯಾಗ್ರಹ ಸೌಧಕ್ಕೆ ಅಡಿಗಲ್ಲು ಹಾಕುವುದಾಗಿಯೂ, ಅದಾದ ಇಪ್ಪತ್ತು ತಿಂಗಳುಗಳಲ್ಲಿ ಅಕ್ಟೋಬರ್ ೨ಕ್ಕ ಸತ್ಯಾಗ್ರಹ ಸೌಧ'ದ ಪ್ರಾರಂಭೋತ್ಸವ ಆಗುತ್ತದೆಂದು ಘೋಷಿಸಲಾಯಿತು. ಅದಕ್ಕೆ ಗ್ರಾಮಸ್ಥರ ಲ್ಯಾಂಡ್ ಪೂಲಿಂಗ್ ಕಾರ್ಯಕ್ರಮ ಸುರುವಾಯಿತು.



(ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿರುವ ಎಂ ಎಸ್ ಶ್ರೀರಾಮ್ ಕನ್ನಡದ ಖ್ಯಾತ ಕಥೆಗಾರ ಹಾಗೂ ಆರ್ಥಿಕ ಚಿಂತಕರೂ ಹೌದು)

(೨೯ನೇ ಪುಟದಿಂದ)

ಇತ್ಯಾದಿ. ಸರಳಾದೇವಿಯವರಿಗೆ ತಮ್ಮ ಹುಟ್ಟು ಶ್ರೀಮಂತ ಜೀವನಶೈಲಿಯನ್ನು ಬಿಡುವುದು ಕಷ್ಟವೆನಿಸಿ, ಗಾಂಧಿಯ ಪಾಠ ಹೇಳುವ ಪ್ರವೃತ್ತಿಯನ್ನು ಪ್ರತಿಭಟಿಸಿದರಲ್ಲದೆ, ಪತ್ರ ವ್ಯವಹಾರದ ಮೂಲಕ ಇವೆಲ್ಲ ಪರಿಹಾರವಾಗದ ಸಮಸ್ಯೆಗಳೆಂದು ಹೇಳಿ ಪರಸ್ಪರ ಭೇಟಿಯ ಸಲಹೆ ಇತ್ತರು. ಅದರಂತೆ ಗಾಂಧಿ ಅಕ್ಟೋಬರ್‌ನಲ್ಲಿ ಒಮ್ಮೆ ಎರಡು ದಿನಗಳ ಬಿಡುವು ಮಾಡಿಕೊಂಡು ಲಾಹೋರ್‌ಗೆ ಹೋಗಿ ರಾಮ್‌ಭುಜ್‌ರ ಮನೆಯಲ್ಲೇ ತಂಗಿದರು. ಆದರೆ ಆಗ್ಗೆ ಗಾಂಧಿ ಗಳಿಸಿದ್ದ ಜನಪ್ರಿಯತೆಯಿಂದಾಗಿ ಆ ಮನೆಗೆ ನಿರಂತರ ಜನಜಂಗುಳಿಯೇ ಹರಿದು ಬಂದು, ಈ ಇಬ್ಬರ ಖಾಸಗಿ ಭೇಟಿ ಸಾಧ್ಯವೇ ಆಗಲಿಲ್ಲ. ಈ ಮಧ್ಯೆ 'ಅಸಹಕಾರ ಚಳುವಳಿ'ಯ ರೂಪ ಪಡೆದಿದ್ದ ಗಾಂಧಿಯವರ ರಾಜಕಾರಣದ ರೀತಿ ನೀತಿಗಳ ಬಗ್ಗೆ ಸರಳಾದೇವಿಯವರಲ್ಲಿ ಅಸಮಾಧಾನ ಆರಂಭವಾಗಿತ್ತು. ಇದಕ್ಕೆ ಅವರ ಚಿಕ್ಕಪ್ಪ ಈ ಚಳುವಳಿಯ ಬಗ್ಗೆ ವ್ಯಕ್ತಪಡಿಸಿದ್ದ 'ಇದು ಬ್ರಿಟಿಷ್ ಪ್ರಭುತ್ವದ ವಿರುದ್ಧ ದ್ವೇಷ ಬೆಳೆಸುವ ರಾಜಕಾರಣ' ಎಂಬ ಅಭಿಪ್ರಾಯವೂ ಕಾರಣವಾಗಿರಬಹುದು.

ಮುಂದಿನ ತಲೆಮಾರಿನಲ್ಲಿ ಮುಂದುವರೆದ ಸಂಬಂಧ

ಗಾಂಧಿ ರಾಜಕಾರಣ ಕುರಿತ ತಮ್ಮ ಈ ನಿಲುವನ್ನು ಸರಳಾದೇವಿ ತಮ್ಮ ಡಿಸೆಂಬರ್ ೧೯೨೦ರ ಪತ್ರದ ಮೂಲಕ ತಿಳಿಸಿದಾಗ ಗಾಂಧಿಯವರಿಗೆ ಈ ಸಂಬಂಧದ ಬಗ್ಗೆ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುವ ಕಾಲ ಬಂದಿದೆ ಎನ್ನಿಸಿರಬೇಕು. ಕೂಡಲೇ ಅವರು ಒಂದು ದೀರ್ಘ ಉತ್ತರ ಬರೆದು ಈ ಸಂಬಂಧಕ್ಕೆ ಕೊನೆ ಹಾಡಿದರು. ಈ ಪತ್ರದ ಬಹು ಅರ್ಥಪೂರ್ಣವೆನಿಸುವ ಬಹು ಮುಖ್ಯ ಮಾತುಗಳೆಂದರೆ ನಮ್ಮದು ದೈಹಿಕ ಸಂಬಂಧ ಮೀರಿದ ಅಧ್ಯಾತ್ಮಿಕ ಪ್ರೇಮವಾಗಿದ್ದು, ಅದರ ಪರಿಪೂರ್ಣತೆಗೆ ಅಗತ್ಯವಾದ ಯಾವ ಗುಣಗಳೂ–ಅವು ಆಶೋತ್ತರಗಳಾಗಿವೆಯೇ ಹೊರತು–ಸಾಕಾರಗೊಳ್ಳುವಷ್ಟು ನಾವು ಅಪೂರ್ಣರಾಗಿರುವುದರಿಂದ ಈ ಸಂಬಂಧದ ವಿಸ್ತರಣೆಗೆ ಯೋಗ್ಯರಾಗಿರುವುದಿಲ್ಲ.' ಆದರೆ ಈ ಸಂಬಂಧ ಸಂಪೂರ್ಣ ಕೊನೆಗೊಳ್ಳಲಿಲ್ಲ ಎಂದೇ ಹೇಳಬೇಕು. ಏಕೆಂದರೆ ಎಷ್ಟೋ ವರ್ಷಗಳ ನಂತರ ಗಾಂಧಿ ಸರಳಾದೇವಿ ಇಬ್ಬರೂ ಈ ಲೋಕ ಬಿಟ್ಟು ಹೋದ ನಂತರ ಸರಳಾದೇವಿಯವರ ಮಗ ದೀಪಕ್ ಮತ್ತು ಮಗನ್‌ಲಾಲ್‌ರ ಮಗಳು ರಾಧಾ ಪ್ರೀತಿಸಿ ಮದುವೆಯಾದರು. ಗಾಂಧಿಯವರ ಸಂಪರ್ಕ ತಪ್ಪಿದ ನಂತರ ಸರಳಾದೇವಿ ಒಬ್ಬ ಗುರುವಿನ ಮಾರ್ಗದರ್ಶನದಲ್ಲಿ ಅಧ್ಯಾತ್ಮದ ಕಡೆ ತಿರುಗಿ, ಕೊನೆಯ ವರ್ಷಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡು ೧೯೪೫ರಲ್ಲಿ ಕೊನೆಯುಸಿರೆಳೆದರು.

ಗಾಂಧಿಯವರ ಈ ಪ್ರೇಮ ಪ್ರಸಂಗದ ಬಗ್ಗೆ ಅವರ ಮೊಮ್ಮಗ ರಾಜಮೋಹನ ಗಾಂಧಿಯವರು ತಮ್ಮ 'ಮೋಹನದಾಸ' ಪುಸ್ತಕದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಈ ಪ್ರೇಮ ಪ್ರಸಂಗದ ಹಿನ್ನೆಲೆಯಲ್ಲಿ ಮನ್ಮಥನ ಆಟ ಇದ್ದರೂ ಇರಬಹುದು ಎನ್ನುತ್ತಾರೆ. ಏಕೆಂದರೆ ಅವರ ಪ್ರಕಾರ ಆ ಸಂದರ್ಭದಲ್ಲಿ ಗಾಂಧಿ ಕೌಟುಂಬಿಕವಾಗಿ ಮತ್ತು ಸಾರ್ವಜನಿಕವಾಗಿ ತುಂಬ ಒತ್ತಡದಲ್ಲಿದ್ದು, ಚೇತನದ ಪುನರುಜ್ಜೀವನಕ್ಕೆ ಬೇಕಾದ ಎದೆಗುದಿಗಳನ್ನು ಸಹಾನುಭೂತಿಯಿಂದ ಆಲಿಸುವ, ಪ್ರೀತಿಪೂರ್ವಕವಾದ ಪಾಲನೆಯ, ಸೃಷ್ಟಿಶೀಲ ಶಕ್ತಿಯೇ ಅವರ ಪರಿಸರದಲ್ಲಿ ಸಂಪೂರ್ಣ ಕಾಣೆಯಾಗಿತ್ತು. ಸರಳಾದೇವಿಯವರ ಸಹವಾಸದಲ್ಲಿ ಅವರು ತಮ್ಮ ಸುತ್ತಲಿನ ಶುಷ್ಕ ಪರಿಸರದಿಂದ ಹೊರಬಂದು ಬದುಕಿನ ಸವಿಗಾಗಿ ಹಂಬಲಿಸಿದರು. ಸಂಬಂಧದ ಸಾಮರಸ್ಯ ಮತ್ತು ಮಾಧುರ್ಯಗಳ ಸವಿಯಲ್ಲಿ ಇಬ್ಬರೂ ಸೇರಿ ಹೊಸ ಭಾರತವನ್ನು ಕಟ್ಟುವ ಕನಸುಗಳನ್ನು ಕಟ್ಟಿಕೊಂಡಿರಬೇಕು. ಆದರೆ ಈ ಸಂಬಂಧದಲ್ಲಿ ಲೈಂಗಿಕತೆ ಇತ್ತೆ? ದೇಹದ ಮಟ್ಟದಲ್ಲಿ ಇರಲಾರದು ಎಂದು ಅವರು ಹೇಳುತ್ತಾರೆ.

ರಾಮಚಂದ್ರ ಗುಹಾ ಅವರು ಕೂಡ ತಮ್ಮ 'ಗಾಂಧಿ' ಪುಸ್ತಕದಲ್ಲಿ ಅದರ ಎಲ್ಲ ಸಾಧ್ಯತೆಗಳನ್ನೂ ಪರಿಶೀಲಿಸುತ್ತಾ, ವಿದೇಶದಲ್ಲಿ ಬಹುಕಾಲ ಕಳೆದಿದ್ದ ಗಾಂಧಿ, ಗಂಡು ಹೆಣ್ಣಿನ ಸಂಬಂಧವನ್ನು ಗ್ರಹಿಸಿದ್ದ ಮಟ್ಟದಲ್ಲಿ ಆ ಕಾಲದ ಸಾಂಪ್ರದಾಯಿಕ ಭಾರತದ ಸಮಾಜ ಗ್ರಹಿಸಲಾಗದಿರಬಹುದು ಎಂದು ಅಭಿಪ್ರಾಯಪಡುತ್ತಾ, ಗಾಂಧಿ ಈ ಪ್ರಸಂಗದ ಕೆಲವು ವರ್ಷಗಳ ನಂತರ ಬಲವಂತರಾಯ್ ಮೆಹ್ತಾ ಎಂಬ ತಮ್ಮ ಸ್ನೇಹಿತರೊಬ್ಬರೊಂದಿಗೆ ಬ್ರಹ್ಮಚರ್ಯದ ಕಷ್ಟ–ಸುಖಗಳ ಬಗ್ಗೆ ಚರ್ಚಿಸುತ್ತಾ ಬರೆದ ಪತ್ರದ ಈ ಮುಂದಿನ ಸಾಲುಗಳನ್ನು ಉಲ್ಲೇಖಿಸುವ ಮೂಲಕ ಗಾಂಧಿ ಹೆಚ್ಚೂಕಡಿಮೆ ಅದರ ಹತ್ತಿರ ಬಂದಿರಬಹುದಾದರೂ ಅದರಿಂದ ಪ್ರಜ್ಞಾಪೂರ್ವಕವಾಗಿ ದೂರ ಉಳಿದರು ಎನ್ನುತ್ತಾರೆ: 'ಕಾಮಕ್ಕೆ ವಯಸ್ಸಿನ ತಾರತಮ್ಯವಿಲ್ಲ. ಅದರ ಕಾಟದಿಂದ ತಪ್ಪಿಸಿಕೊಳ್ಳಲು ನಾನು ಇಂದಿಗೂ ನನ್ನ ಸುತ್ತ ತರತರದ ಗೋಡೆಗಳನ್ನು ಕಟ್ಟಿಕೊಳ್ಳುತ್ತಿರುವೆ. ಆದರೂ ಒಂದು ವರ್ಷದ ಹಿಂದಷ್ಟೇ ನಾನು ಅದಕ್ಕೆ ಶರಣಾಗುವ ಅಪಾಯಕ್ಕೆ ಸಿಲುಕಿ ಪಾರಾದೆ'

ಆತ್ಮಚರಿತ್ರೆಗಳಲ್ಲಿ ಕಾಣೆಯಾದ ಈ ಪ್ರಸಂಗ!

ಈ ಪ್ರಸಂಗದ ಗಾಂಧಿಯ ಎಲ್ಲ ಪ್ರೇಮ ಪತ್ರಗಳೂ ಗಾಂಧಿ ಸಾಹಿತ್ಯ ಸಂಗ್ರಹಾಗಾರದಲ್ಲಿವೆ. ಆದರೆ ಸರಳಾದೇವಿಯವರ ಪತ್ರಗಳು ಮಾತ್ರ ಇಲ್ಲ. ಅದಕ್ಕೆ ಕಾರಣ ಗಾಂಧಿ ಕುಟುಂಬ ಅದನ್ನು ನಾಶ ಮಾಡಿದ್ದು ಎಂದು ರಾಮಚಂದ್ರ ಗುಹಾ ಹೇಳುತ್ತಾರೆ. ಆದರೂ ಒಂದು ಪ್ರಶ್ನೆ ಕೇಳಬಹುದು. ತಮ್ಮ ಬದುಕು ಒಂದು ತೆರೆದ ಪುಸ್ತಕ ಎನ್ನುವ ಗಾಂಧಿ, ಈ ಪ್ರೇಮ ಪ್ರಸಂಗವನ್ನೇಕೆ ಅವರ ಆತ್ಮಚರಿತ್ರೆಯಲ್ಲಿ ಪ್ರಸ್ತಾಪಿಸಿಲ್ಲ ಎಂಬುದೇ ಆ ಪ್ರಶ್ನೆ. ಇದನ್ನು ಗಾಂಧಿ ಪರೋಕ್ಷವಾಗಿ ತಮ್ಮ ಆತ್ಮಚರಿತ್ರೆಯಲ್ಲಿ ದ.ಆಫ್ರಿಕಾದಿಂದ ಬಂದ ನಂತರ ಹಲವು ವರ್ಷಗಳ ಕಾಲ ತಾವು ಕಾಮದ ಸೆಳವುಗಳಿಗೆ ಸಿಕ್ಕಿಕೊಂಡಿದ್ದೆ ಎಂದು ಬರೆದಿದ್ದಾರೆ. ಅಲ್ಲದೆ ಮಾರ್ಗರೆಟ್ ಸ್ಯಾಂಗರ್ ಮತ್ತು ಮಾರ್ಟಿನ್ ಗ್ರೀನ್‌ರಂತಹ ಅವರ ಜೀವನಚರಿತ್ರೆಕಾರರ ಬಳಿ ಈ ಬಗ್ಗೆ ಮಾತನಾಡಿದ್ದಾರೆ. ಆದರೆ ತಮ್ಮ ಆತ್ಮಚರಿತ್ರೆಯಲ್ಲಿ ಇದನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸದಿರಲು ಕಾರಣ, ಅದನ್ನು ಬರೆಯುತ್ತಿದ್ದಾಗ ಸರಳಾದೇವಿ ಮತ್ತು ಅವರ ಮಗ ದೀಪಕ್ ಬದುಕಿದ್ದು, ಅವರು ಅವರ ಮನಸ್ಸನ್ನು ಘಾಸಿಗೊಳಿಸಲು ಇಚ್ಛಿಸದೇ ಇದ್ದುದಿರಬಹುದೆ ಎಂದು ರಾಜಮೋಹನ ಗಾಂಧಿ ಹೇಳುತ್ತಾರೆ.

ಆಶ್ಚರ್ಯವೆಂದರೆ ಸರಳಾದೇವಿಯವರೂ ತಮ್ಮ ಆತ್ಮಚರಿತ್ರೆ ಬರೆದು ಪ್ರಕಟಿಸಿದ್ದು ಅವರು ಕೂಡ ಈ ಪ್ರೇಮ ಪ್ರಸಂಗದ ಬಗ್ಗೆ ಒಂದು ಮಾತೂ ಬರೆದಿಲ್ಲ!

ನವೋದಯದ ಮರು ಓದಿನ ಸುತ್ತಮುತ್ತ...


– ಕೆ. ಸತ್ಯನಾರಾಯಣ

ನವೋದಯ ಸಾಹಿತ್ಯ ತನ್ನ ಸಾಧನೆಯ ಉತ್ತುಂಗವನ್ನು ತಲುಪಿ ಸ್ಥಗಿತತೆಗೆ ಈಡಾದಾಗ ಸಾಹಿತ್ಯವನ್ನು ಕುರಿತಂತೆ ಓದುಗನ ಅರಿವಿನ ದಿಗಂತಗಳನ್ನು ವಿಸ್ತರಿಸುವ ವ್ರತನಿಷ್ಠೆಯೊಂದಿಗೆ ಬಂದಿರುವುದಾಗಿ ಘೋಷಿಸಿಕೊಂಡ ನವ್ಯವು ಓದುಗ ವರ್ಗದಿಂದ ಒಂದು ನಿರ್ದಿಷ್ಟ ರೀತಿಯ ಪರಿಣಿತಿಯನ್ನು ಬಯಸಿದ್ದರಿಂದಾಗಿ ಕನ್ನಡದ ವಿಶಾಲ ಓದುಗ ಸಮೂಹ ದಿಕ್ಕೆಟ್ಟಂತಾಗಿ ಮತ್ತೆ ನವೋದಯದ ಓದಿಗೆ ಮರಳಿದ ಒಂದು ವಿದ್ಯಮಾನ ಕನ್ನಡದಲ್ಲಿ ನಡೆಯಿತು. ಇದರ ಹಿಂದೆ ಲೇಖಕರ ಮತ್ತು ಕಲಾವಿದರ ಒಕ್ಕೂಟ ಮಂಡಿಸಿದ ಹೊಸ ಸಾಹಿತ್ಯ ಮೀಮಾಂಸೆಯ ಪ್ರಭಾವವೂ, ಆನಂತರ ಹುಟ್ಟಿಕೊಂಡ ದಲಿತ–ಬಂಡಾಯ ಸಾಹಿತ್ಯಗಳು ಉಂಟು ಮಾಡಿದ ಸುಸ್ತೂ ಇದ್ದಿತೆಂಬುದೂ ನಿಜ. ಈ ಮರು ಓದು ಇಡೀ ಆಧುನಿಕ ಕನ್ನಡ ಸಾಹಿತ್ಯದ ಮರುಮೌಲ್ಯಮಾಪನಕ್ಕೆ ಕಾರಣವಾದ ಸೂಕ್ಷ್ಮಗಳನ್ನು ಹಿಡಿದಿಡುವ ಪ್ರಯತ್ನವಾಗಿ ಈ ಲೇಖನ ನಮ್ಮ ಗಮನ ಸೆಳೆಯಬಹುದಾಗಿದೆ–ಸಂ

೧೯೮೦ರ ದಶಕದಲ್ಲಿ ಮೂಡಿ ಬಂದ ಸಾಹಿತ್ಯ ಲೋಕದ ಪಲ್ಲಟಗಳನ್ನು ಕುರಿತು ಪ್ರತಿಕ್ರಿಯಿಸುವಾಗ ನಾವು ದಲಿತ–ಬಂಡಾಯ ಚಳುವಳಿಯ ಸುತ್ತಮುತ್ತ ನಡೆದ ಬೆಳವಣಿಗೆ–ಬರವಣಿಗೆಗಳನ್ನು ಮಾತ್ರ ಗಮನಿಸುತ್ತೇವೆ. ಈ ಚಳುವಳಿ ಒಂದು ಪ್ರಮುಖವಾದ ಬೆಳವಣಿಗೆಯಾದರೂ ಸಾಂಸ್ಕೃತಿಕ ಲೋಕದ ಪಲ್ಲಟಗಳು ಯಾವಾಗಲೂ ಏಕಮುಖವಾಗಿರುವುದಿಲ್ಲ. ಅನೇಕ ಪದರುಗಳಿರುತ್ತವೆ. ಎಲ್ಲ ಪದರಗಳು ಮುನ್ನೆಲೆಗೆ ಬರುವುದಿಲ್ಲ. ಸ್ವಘೋಷಿತ ಸ್ವರೂಪದ್ದಾಗಿರುವುದಿಲ್ಲ. ಆದರೆ ಒಟ್ಟು ಸಾಂಸ್ಕೃತಿಕ ತಾತಾವರಣವನ್ನು ಗಮನಿಸುವಾಗ ನಮ್ಮ ಪೂರ್ವಗ್ರಹಗಳನ್ನು ಮೀರಿ ಕೂಡ ಆದಷ್ಟು ಎಲ್ಲ ಪದರಗಳನ್ನು ಗಮನಿಸಬೇಕಾಗುತ್ತದೆ. ದಲಿತ–ಬಂಡಾಯ ಚಳುವಳಿಯ ಜೊತೆ ಜೊತೆಯಲ್ಲೇ ಮೊದಮೊದಲು ಗುಪ್ತಗಾಮಿನಿಯಾಗಿ, ನಂತರ ಸಾರ್ವಜನಿಕವಾಗಿಯೇ ರೂಪುಗೊಂಡ ನವೋದಯದ ಮರು ಓದಿನ ನೆಲೆಗಳ ಪ್ರೇರಣೆ–ಪರಿಣಾಮಗಳನ್ನು ಗುರುತಿಸುವುದು ಈ ಟಿಪ್ಪಣಿಗಳ ಉದ್ದೇಶ. ಹೀಗೆ ಗುರುತಿಸುವಾಗ, ನಾನು ನನ್ನ ಓದು–ಬರವಣಿಗೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡಿಲ್ಲ; ಅನೇಕ ಸಮಾನ ಮನಸ್ಕ ಗೆಳೆಯರ ಓದು–ಬರಹ–ಆಲೋಚನೆಗಳನ್ನು ಕೂಡ ಗಮನದಲ್ಲಿಟ್ಟುಕೊಂಡಿದ್ದೇನೆ.

ಒಂದು ಎಚ್ಚರಿಕೆಯ ಮಾತು. ಒಂದು ಸಮುದಾಯದ ಓದುಗಾರಿಕೆಯಲ್ಲಿ ಸಾಹಿತ್ಯ ವಲಯದ ಓದುಗಾರಿಕೆ ಒಂದು ಸಣ್ಣ ಭಾಗ ಮಾತ್ರ. ನವ್ಯ ಸಾಹಿತ್ಯ ಪ್ರಸಿದ್ಧವಾಗಿದ್ದ–ಪ್ರಭಾವಿಯಾಗಿದ್ದ ಕಾಲದಲ್ಲೂ ಸಾಹಿತ್ಯ ವಲಯದಿಂದಾಚೆಗಿನ ವಿಶಾಲವಾದ ಓದುಗ ಸಮುದಾಯವು ತನ್ನ ಪಾಡಿಗೆ ತಾನು, ತನಗೆ ತಿಳಿದ ಹಾಗೆ ನವೋದಯ ಮತ್ತು ಪ್ರಗತಿಶೀಲರನ್ನು ಮಾತ್ರವಲ್ಲ, ಹಳೆಗನ್ನಡ–ನಡುಗನ್ನಡ ಸಾಹಿತ್ಯವನ್ನು ದಾಸರು, ವಚನಕಾರರನ್ನು ಓದುತ್ತಿತ್ತು ಮತ್ತು ಸಾಂಸ್ಕೃತಿಕ ಲೋಕದ "ಆಚರಣೆ"ಯ ಭಾಗವನ್ನಾಗಿ ಕೂಡ ಮಾಡಿಕೊಂಡಿತ್ತು. ಸಾಹಿತ್ಯ–ಸಂಸ್ಕೃತಿಯ ವಿದ್ಯಾರ್ಥಿಗಳಾಗಿ, ಅಧ್ಯಯನಕಾರರಾಗಿ ನಮ್ಮ ಗಮನವೆಲ್ಲ ಯಾವಾಗಲೂ ಸಾಹಿತ್ಯವನ್ನು ಅಧಿಕಾರ ಕೇಂದ್ರವಾಗಿ ಗ್ರಹಿಸುವ, ರೂಪಿಸುವ ಜೀವನ ನಿರ್ವಹಣೆಯ ಮಾರ್ಗವನ್ನಾಗಿ ಮಾಡಿಕೊಳ್ಳುವ ವೃತ್ತಿಪರರಾದ ಸಾಹಿತಿಗಳು, ಅವರ ಹಿತಾಸಕ್ತಿಗಳು, ಅವರು ನಿಯಂತ್ರಿಸುವ ಸಂಘ–ಸಂಸ್ಥೆಗಳು, ಕೇವಲ ಬರೆಯುವ ಆಸಕ್ತಿ–ಅವಶ್ಯಕತೆಗನುಗುಣವಾಗಿ ಲೇಖಕರು ರೂಪಿಸಿಕೊಂಡ ಮಾನದಂಡಗಳು – ಇವುಗಳಿಂದೆಲ್ಲ ಪ್ರೇರಿತವಾದ ಓದುಗಾರಿಕೆಯ ಕಡೆಗೇ ಇರುತ್ತದೆ. ಇದರಲ್ಲಿ ತಪ್ಪೇನಿಲ್ಲ. ಎಲ್ಲ ಕಾಲದ ಸಾಂಸ್ಕೃತಿಕ ಲೋಕವು ಇರುವುದೇ ಹೀಗೆ. ಆದರೆ ಅದೊಂದೇ ಸರ್ವಸ್ವ ಎಂದು ಭಾವಿಸಬಾರದು.

ವೈಯಕ್ತಿಕ ಅನುಭವದ ಹಿನ್ನೆಲೆಯಲ್ಲೇ ಹೇಳುವುದಾದರೆ, ೧೯೬೦, ೧೯೭೦ರ ದಶಕಗಳಲ್ಲೇ ನಾನು, ನನ್ನ ಅನೇಕ ಗೆಳೆಯರು, ಕಾರಂತರ ಕಾದಂಬರಿಗಳನ್ನು ಓದಿದ್ದೆವು, ಓದುತ್ತಿದ್ದೆವು. ಪುತಿನರ ಪ್ರಬಂಧಗಳು, ಕಾವ್ಯ ಮೀಮಾಂಸೆ ಕೂಡ ನಮ್ಮ ಓದುವ ಆಸಕ್ತಿಯ ಭಾಗವಾಗಿತ್ತು. ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿಯಂತವರು, ಸಮುದಾಯದ ಓದಿನ ಭಾಗ ಮಾತ್ರವಾಗದೆ, ಹಾಡುಗಾರಿಕೆ, ವ್ಯಾಖ್ಯಾನಗಳ ಭಾಗವೇ ಆಗಿದ್ದರು. ಕಾರಂತರಿಗೆ ಕಾದಂಬರಿ ಪ್ರಕಾರದ ಪ್ರಜ್ಞೆಯಿಲ್ಲವೆಂದಾಗ, ಮಾಸ್ತಿಯ ಎಲ್ಲ ಕತೆಗಳು ಒಂದೇ ರೀತಿಯಲ್ಲಿ ಇವೆ ಎಂದು ಹೇಳಿದಾಗ, ಕುವೆಂಪು ಕಾದಂಬರಿಗಳಲ್ಲಿ ಕೇಂದ್ರ ಪ್ರಜ್ಞೆ, ರೂಪಕಶಕ್ತಿ ಇಲ್ಲವೆಂದಾಗ – ಅದೆಲ್ಲ ಅಷ್ಟು ಸಮಂಜಸವಲ್ಲ ಎಂಬುದು ಕೂಡ ಗೊತ್ತಾಗುತ್ತಿತ್ತು. ಆದರೆ ಅದನ್ನು ಹೇಳುವ ಧೈರ್ಯ ಮಾತ್ರ ನಮ್ಮಲ್ಲೂ ಇರಲಿಲ್ಲ; ಸಾಂಸ್ಕೃತಿಕ ವಾತಾವರಣದಲ್ಲೂ ಇರಲಿಲ್ಲ. ಆಗ ಮಾತ್ರವಲ್ಲ, ಈಗಲೂ ಕೂಡ ನವ್ಯರ ಯಜಮಾನಿಕೆಯ ಧೋರಣೆಯನ್ನು ಮುಂದುವರೆಸುತ್ತಿರುವ ಒಂದು ಗುಂಪಿನ ಮುಂದೆ ಎದುರೀಜು ಸ್ವಲ್ಪ ಕಷ್ಟವೇ. ದಲಿತ–ಬಂಡಾಯ ಚಳುವಳಿಯ ಭಾಗವಾಗಿದ್ದವರು, ಈ ಧೈರ್ಯವನ್ನು ತಮ್ಮ ಆಶಯಗಳ ಮೂಲಕ ಹಾಗೂ ತಮ್ಮ ಬರವಣಿಗೆಯ ಸಾಂಸ್ಕೃತಿಕ–ಐತಿಹಾಸಿಹ



ಮಹತ್ವ ಮತ್ತು ಅನಿವಾರ್ಯತೆಯನ್ನು ಕರಾರುವಾಕ್ಕಾಗಿ ಗುರುತಿಸುವ ಮೂಲಕ ಪಡೆದುಕೊಂಡರು. ಸ್ವಲ್ಪ ಹೆಚ್ಚಾಗಿಯೇ ಪಡೆದುಕೊಂಡು ಸಾಹಿತ್ಯ ಸೃಷ್ಟಿಗೆ ಬೇಕಾದ ಆತ್ಮ ವಿಮರ್ಶೆಯ ಅಂಶವನ್ನು ಹಿನ್ನೆಲೆಗೆ ಸರಿಸಿಕೊಂಡರು. ಎರಡು ಮತ್ತು ಮೂರನೆಯ ತಲೆಮಾರಿನ ದಲಿತ ಲೇಖಕರಲ್ಲಿ ಈ ಆತ್ಮಮಿರ್ಶೆಯ ಅಂಶ ಮುನ್ನೆಲೆಗೆ ಬಂದಿರುವುದು ಮಾತ್ರವಲ್ಲ, ಅವರು ತಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಒಟ್ಟು ಸಾಹಿತ್ಯಿಕ ಪರಂಪರೆಯ ಅನುಸಂಧಾನ ಮಾಡುವ ರೀತಿ ಕೂಡ ಭಿನ್ನವಾಗಿದೆ.

ನವೋದಯದ ಮರು ಓದು ಕೇವಲ ಸದ್ಯದ ಸಾಹಿತ್ಯಿಕ ಕಾರಣಗಳಿಂದ ಮಾತ್ರ ಪ್ರೇರಿತವಾಗಿರದೆ ಹೋಗಿರಬಹುದು. ನಮ್ಮ ಓದು ಪ್ರಾರಂಭವಾಗುವುದೇ ಸುತ್ತಮುತ್ತಲ ಬದುಕಿನ ವೈಶಾಲ್ಯ–ವೈವಿಧ್ಯತೆಯನ್ನು ಅರ್ಥ ಮಾಡಿಕೊಳ್ಳಲು. ಸಾಹಿತ್ಯ ಕೃತಿಗಳ ಓದು, ಈ ವೈವಿಧ್ಯತೆ, ವೈಶಾಲ್ಯವನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ ಮತ್ತು ಆ ಕೃತಿಗಳ ಸಾದರಪಡಿಸುವ ವೈವಿಧ್ಯತೆ, ವೈಶಾಲ್ಯ ನಮಗೆ ಇನ್ನೊಂದು ಲೋಕವನ್ನು ಕೂಡ ಪರಿಚಯಿಸಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ನವ್ಯ ಸಾಹಿತ್ಯದ ಓದು ಒಬ್ಬ ಸಾಮಾನ್ಯ ಓದುಗನಿಗೂ ಕೂಡ ವೈವಿಧ್ಯತೆಯ, ವಿಶಾಲವಾದ ಬದುಕಿನ ಅನುಭವವನ್ನು ನೀಡುವುದಿಲ್ಲ; ಓದುವ ಅನುಭವದ, ಕಲ್ಪನೆಯ ಹಸಿವನ್ನು ಇಂಗಿಸುವುದಿಲ್ಲ. ಹಾಗಾಗಿ ನವ್ಯ ಕೃತಿಗಳಿಂದಾಚೆಗೆ ಗಮನ ಹರಿಸುವುದು ಓದುಗನ ಬೆಳವಣಿಗೆಯಲ್ಲಿ ಒಂದು ಸಹಜವಾದ ಪ್ರತಿಕ್ರಿಯೆ. ಇದು ನವ್ಯದ ಮೇಲೆ ಮಾಡುವ ಆಪಾದನೆಯಲ್ಲ. ಓದುಗ ಸುಮದಾಯದ ಹಸಿವು–ಆಸಕ್ತಿಗಳನ್ನು ಒಂದಿಷ್ಟು ಸಣ್ಣ ಕಥೆಗಳು ಮತ್ತು ಒಂದಿಬ್ಬರ ಕಾವ್ಯದ ಮೂಲಕ ಇಂಗಿಸುವುದಾದರೂ ಹೇಗೆ? ಕತೆ–ಕಾದಂಬರಿ–ಕಾವ್ಯವನ್ನಲದೆ ಓದುಗರು ಬಯಸುವ ಪ್ರಬಂಧ, ಪ್ರಸಂಗ, ಪ್ರವಾಸ ಕಥನ, ಜೀವನ ಚರಿತ್ರೆ, ಆತ್ಮಚರಿತ್ರೆ – ಇವುಗಳನ್ನೆಲ್ಲ ಓದಲು ಆತ ಏನು ಮಾಡಬೇಕು? ಈ ಪ್ರಶ್ನೆಗೆ ಎದುರಾಗದೆ ಕಾವ್ಯ ಪ್ರಕಾರದ ಮಾನದಂಡಗಳನ್ನೇ ಸಮಸ್ತ ಬರವಣಿಗೆಗೂ ಅನ್ವಯಿಸಿ ಒಂದೆರಡು ಪ್ರಕಾರಗಳಲ್ಲದೆ, ಬೇರೆ ಪ್ರಕಾರಗಳು ಎರಡನೇ ದರ್ಜೆಯವು ಎಂಬ ಮನೋಧರ್ಮವನ್ನು "ಸ್ಥಾಪಿಸ"ಲಾಯಿತು. ನವೋದಯದವರು ಕನ್ನಡ ಭಾಷೆಯನ್ನು ಸ್ಥಾಪಿಸುವ ದೃಷ್ಟಿಯಿಂದ ಬೇರೆ ಬೇರೆ ಪ್ರಕಾರಗಳಲ್ಲಿ ಬರೆಯುವುದು ಅನಿವಾರ್ಯವಾಗಿತ್ತು. ನಂತರದ ತಲೆಮಾರಿನ ಲೇಖಕರಿಗೆ ಈ ಅನಿವಾರ್ಯತೆಯಿಲ್ಲ. ಅವರವರಿಗೆ ಒಲಿದ ಪ್ರಕಾರದಲ್ಲಿ ಸಾಧನೆ ಮಾಡಿದರೆ ಸಾಕು ಎಂದಿದ್ದ ತೇಜಸ್ವಿಯವರೇ ಕೊನೆ ಕೊನೆಗೆ ಗದ್ಯದ ಎಲ್ಲ ಪ್ರಕಾರಗಳಲ್ಲೂ ಬರೆಯುತ್ತಾ ಹೋದರು ಅಥವಾ ಪ್ರಕಾರಗಳನ್ನು ಬೆರೆಸುತ್ತಾ ಹೋದರು.

ಸಾಹಿತ್ಯವನ್ನು ಅದು ಮಂಡಿಸುವ ಅನುಭವಕ್ಕಾಗಿ ಮಾತ್ರ ಓದದೆ, ಆ ಅನುಭವದ ಹಿಂದಿರುವ ತಾತ್ವಿಕ ಪ್ರೇರಣೆಗಳನ್ನು ಗ್ರಹಿಸಲು ಕೂಡ ಓದುತ್ತೇವೆ. ಇಂತಹ ಓದು, ಸಾಹಿತ್ಯ ಕೃತಿಗಳಲ್ಲಿ ತಾತ್ವಿಕತೆ ಮತ್ತು ಬೌದ್ಧಿಕತೆಯ ಅಂಶವನ್ನು ಕೂಡ ಬಯಸುತ್ತದೆ. ಒಬ್ಬ ಕೃತಿಕಾರ ಆತವಾ ಒಂದು ಸಾಹಿತ್ಯಿಕ ಚಳುವಳಿ ತನ್ನ ತಾತ್ವಿಕ ಕಾಳಜಿಗಳನ್ನು ಯಾವ ಸ್ತರದಲ್ಲಿ ರೂಪಿಸಿಕೊಂಡಿರುತ್ತದೆ ಎನ್ನುವ ಅಂಶದ ಮೇಲೆ ಕೃತಿಯ ಒಡಲಿನಲ್ಲಿನ ತಾತ್ವಿಕತೆ, ಬೌದ್ಧಿಕತೆ ಓದುಗನಿಗೆ ಅನುಭವಕ್ಕೆ ಬರುತ್ತದೆ.

ನವ್ಯ ಲೇಖಕರು ಚಿಂತನಶೀಲರೆಂದು ಹೆಸರು ಮಾಡಿಕೊಂಡರೂ ಅವರ ಚಿಂತನಶೀಲತೆ ಬಹುಪಾಲು ರೂಪಗೊಂಡದ್ದು ಸಾಹಿತ್ಯ ಕೃತಿಗಳ ಓದಿನಿಂದ. ವಿಜ್ಞಾನ, ಧರ್ಮಶಾಸ್ತ್ರ, ತತ್ವಶಾಸ್ತ್ರ, ಮಹಾಕಾವ್ಯಗಳು, ಸಮಾಜಶಾಸ್ತ್ರಗಳೊಡನೆ ಅವರ ಸೃಜನಶೀಲ ಮನಸ್ಸು ನಡೆಸಿದ ಅನುಸಂಧಾನದಿಂದಲ್ಲ. ಹಾಗಾಗಿ, ಮೂರ್ತ ಮತ್ತು ವರ್ತಮಾನದ ಬದುಕಿನ ಜೊತೆಯೇ ಅವರಿಗೆ ಹೆಚ್ಚು ಅನುಸಂಧಾನ. ಕಾಲದ ಬೇರೆ ಬೇರೆ ಆಯಾಮಗಳು, ಅನಂತದೊಡನೆ ಅನುಸಂಧಾನ, ಸೃಷ್ಟಿಯ ಸಕಲ ಸ್ತರಗಳಿಗೆ ಲಗ್ಗೆ – ಈ ದಿಕ್ಕಿನಲ್ಲಿ ಪಯಣಿಸಲು ಕೇವಲ ಸಾಹಿತ್ಯಿಕ ಕೃತಿಗಳ ಓದಿನಿಂದ ಮೂಡಿದ ಚಿಂತನಶೀಲತೆಗೆ ಸಾಧ್ಯವಾಗುವುದಿಲ್ಲ. ಈ ಕಾರಣಕ್ಕಾಗಿ ನಮ್ಮ ತಲೆಮಾರಿನವರ ಓದು ಕೊಂಚ ಆಳವಾಗಲು, ಗಾಢವಾಗಲು ಬಯಸಿದಾಗ ಸಹಜವಾಗಿಯೇ ನವ್ಯದಿಂದಾಚೆಗೂ ಹೋಗಬೇಕಾಯಿತು. ಬೇರೆ ಭಾಷೆಗಳನ್ನು ಬಲ್ಲವರಿಗೆ, ಅನುವಾದ ಸಾಹಿತ್ಯವನ್ನು ಬಯಸುವವರಿಗೆ – ಈ ಸಮಸ್ಯೆ ಬೇರೊಂದು ರೀತಿಯಲ್ಲಿ ಎದುರಾಗಬಹುದು. ತಪ್ಪೇನಿಲ್ಲ. ಆದರೆ ನಮ್ಮ ಭಾಷೆಯೊಳಗೇ ಇರುವ ಪರ್ಯಾಯಗಳು ನಮಗೆ ಹೆಚ್ಚು ಆತ್ಮೀಯವಾಗುತ್ತವೆ. ಯಾವುದಾದರೂ ವಿಶ್ವವಿದ್ಯಾಲಯದವರು, ಕುವೆಂಪು, ಬೇಂದ್ರೆ, ಕಾರಂತ ಇವರೆಲ್ಲರೂ ಓದಿದ ಪುಸ್ತಕಗಳ ಪಟ್ಟಿಯನ್ನು ಕುರಿತು ಸಂಶೋಧನೆ ಮಾಡಿ ಪ್ರಕಟಿಸಬೇಕು. ಅದು ಸಾಧ್ಯವಾಗುವ ತನಕ ಈ ಲೇಖಕರೇ ಅವರ ಓದುಗಾರಿಕೆಯ ಬಗ್ಗೆ ಬರೆದುಕೊಂಡಿರುವುದನ್ನು ಗಮನಿಸಬಹುದು (ನೋಡಿ – ಕುವೆಂಪು ಓದಿನ ರೀತಿ – ಕೆ. ಸತ್ಯನಾರಾಯಣ – ಸುಮ್ಮನೆ ಓದೋಣ – ೨೦೧೩, ಐಬಿಹೆಚ್ ಪ್ರಕಾಶನ, ಬೆಂಗಳೂರು).

ನವ್ಯದ ಸಂದರ್ಭವನ್ನು ಸ್ವಲ್ಪ ಸಹಾನುಭೂತಿಯಿಂದ ಗ್ರಹಿಸುವುದರಿಂದಲೂ ನಮ್ಮ ತಲೆಮಾರಿನವರ ನವೋದಯದ ಒಲವು ಅರ್ಥವಾಗಬಹುದು. ನವೋದಯದ ಬಹುಪಾಲು ಸಾಧನೆಯೆಲ್ಲ ಒಂದು ಶಿಖರಸ್ಥಿತಿ ತಲುಪಿದ ಮೇಲೆ ಬರೆಯಬೇಕಾಗಿದ್ದ ನವ್ಯರಿಗೆ ಅಭಿವ್ಯಕ್ತಿಯ ಸಮಸ್ಯೆಯೇ ಮುಖ್ಯವಾಯಿತು. ಅವರು ಸಾಧಿಸಿ ತೋರಿಸಿಕೊಟ್ಟಂತೆ, ಭಾಷೆಗೆ ಹೊಸ ಕಸುವು, ತೀವ್ರತೆ ನೀಡುವ ಅವಶ್ಯಕತೆಯೂ ಇತ್ತು. ನವೋದಯದವರನ್ನು 'ಭಾಷಿಕ' ನೆಲೆಗಳಲ್ಲೇ ಹೆಚ್ಚು ಪ್ರಶ್ನಿಸುವ ಮತ್ತು ಅಷ್ಟರ ಮಟ್ಟಿಗೇ ಅವರನ್ನು ಅರ್ಥ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರು ಸಿಕ್ಕಿ ಹಾಕಿಕೊಂಡಿದ್ದರು ಅಥವಾ ತಮ್ಮನ್ನು ತಾವೇ ಸಿಕ್ಕಿ ಹಾಕಿಸಿಕೊಂಡರು. ೧೯೭೦, ೧೯೮೦ರ ದಶಕಗಳಲ್ಲಿ ಸಾಹಿತ್ಯಿಕ ಓದನ್ನು ಪ್ರಾರಂಭಿಸಿದವರಿಗೆ, ನವ್ಯ, ನವೋದಯ, ಪ್ರಗತಿಶೀಲ ಬರಹಗಳೆಲ್ಲ ಒಟ್ಟಿಗೇ ಎದುರಿಗಿದ್ದವು. ಹೋಲಿಕೆ, ವಿಸ್ತರಣೆ, ಆಯ್ಕೆ, ಎಲ್ಲವೂ ಸಾಧ್ಯವಿತ್ತು. ಆದರೆ ನವ್ಯದವರು ನವೋದಯಕ್ಕೆ ಮಾತ್ರ ಪ್ರತಿಕ್ರಿಯೆಯನ್ನು ಸೂಚಿಸುತ್ತಾ ತಮ್ಮ ಬರವಣಿಗೆಯನ್ನು ಮಿತಿಗೊಳಿಸಿಕೊಂಡಂತೆ ನಾವು ಕೂಡ ಒಂದು ತಪ್ಪು ಮಾಡಿದೆವು. ನವ್ಯರನ್ನು ವಿರೋಧಿಸುವ ಭರದಲ್ಲಿ ನಾವು ಅವರಿಗೆ ಮಾತ್ರ ಪ್ರತಿಕ್ರಿಯಿಸುತ್ತಾ ನವೋದಯದ ಕಡೆಗೆ ಮಾತ್ರ ಕೈ ಚಾಚಿದೆವು. ಅದರಿಂದಾಚೆಗೆ ಅಥವಾ ಹಿಂದಿನ ಸಾಹಿತ್ಯದ ಓದಿಗೆ, ಗ್ರಹಿಕೆಗೆ ನಾವು ಗಮನ ಕೊಡಲಿಲ್ಲ. ಎಲ್ಲವೂ ತಮ್ಮಿಂದಲೇ ಪ್ರಾರಂಭವಾಗುತ್ತದೆ; ತಮ್ಮಿಂದಲೇ ಮುಕ್ತಾಯವಾಗುತ್ತದೆ ಎಂದು ತಾವೂ ನಂಬಿ ಇತರರನ್ನೂ ನಂಬಿಸುವ ದಲಿತ–ಬಂಡಾಯಗಾರರಿಗೆ ಇದೆಲ್ಲ ಹೇಗೆ ಕಾಣುತ್ತದೆ? ಕಂಡರೆ ಹೇಗೆಂದು ಪರಿಭಾವಿಸುವಷ್ಟು ವ್ಯವಧಾನ ಮತ್ತು ಅನ್ಯಮನಸ್ಕತೆ ಇದೆಯೇ ಎಂಬುದು ಕುತೂಹಲಕರ ಸಂಗತಿ. [ಅನ್ಯಮನಸ್ಕತೆ ಎನ್ನುವ ಪದವನ್ನು ತನ್ನದಲ್ಲದರ ಬಗ್ಗೆ, ತನ್ನನ್ನು ಮೀರಿದ್ದರ ಬಗ್ಗೆ ಆಸಕ್ತಿ ಎಂಬ ಸಕಾರಾತ್ಮಕ ಅರ್ಥದಲ್ಲಿ ಬಳಸಿದ್ದೇನೆ.]

ಪ್ರತಿಭಾವಂತರಾದ ನವ್ಯರು ಚಳುವಳಿಯ ಕಾವು ಆರಿದ ನಂತರ ನವೋದಯಕ್ಕೆ ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ನೋಡುತ್ತಾ ಕಲಿಯುವುದು ಕೂಡ ನಮ್ಮ ಗ್ರಹಿಕೆಯ ಭಾಗವಾಗಿತ್ತು. ೧೯೮೦ರ ದಶಕದಿಂದ ಈಚೆಗೆ ನವೋದಯದ ದಿಗ್ಗಜಗಳನ್ನು ಒಪ್ಪುವ, ಸ್ವೀಕರಿಸುವ ಮನೋಭಾವವನ್ನು ನವ್ಯರು ತೋರಿಸಿದರಾದರೂ ರಾಜೀವ ತಾರಾನಾಥರು ಹೇಳುವಂತೆ, ಲೇಖರಾಗಿ ತಾವು ಸ್ಥಾಪನೆಗೊಂಡ ಮೇಲೆ, ತಮ್ಮನ್ನು ಕೂಡ ಒಂದು ಪರಂಪರೆಯೊಡನೆ ಗುರುತಿಸಿಕೊಂಡು, ಸ್ಥಾನ ಗಟ್ಟಿ ಮಾಡಿಕೊಳ್ಳುವ ನವ್ಯರ ಉಪಾಯವೂ ಇದಾಗಿತ್ತು. ಇದು ಬಹುಪಾಲು ನವ್ಯ ಲೇಖಕರ ಮಟ್ಟಿಗೆ ನಿಜವಾದರೂ, ವಿಮರ್ಶಕರಾದ ಅಮೂರ, ಗಿರಡ್ಡಿಯಂತವರು ನವ್ಯ ಮನೋಧರ್ಮದ ಆಚೆಗಿನ ಕೃತಿಗಳನ್ನು, ವಿದ್ಯಮಾನಗಳನ್ನು ಗುರುತಿಸುವಲ್ಲಿ ಸಾಂಸ್ಕೃತಿಕ ಔದಾರ್ಯವನ್ನು, ಪರಂಪರೆ, ಸಾಹಿತ್ಯದ ಬಗ್ಗೆ ಗೌರವವನ್ನು ತೋರಿದರು. ಗಣ್ಯ ವಿಮರ್ಶಕರ ಈ ಪರಿವರ್ತನೆ, ಕೈ ಚಾಚುವಿಕೆಯನ್ನು ಕನ್ನಡ ಚಿಂತನೆ ಸಾಕಷ್ಟು ವ್ಯವಧಾನದಿಂದ ಗುರುತಿಸಿಲ್ಲವೆನಿಸುತ್ತದೆ.

ನಮ್ಮ ತಲೆಮಾರಿನವರ ನವೋದಯದ ಪುನರ್ ಓದಿನಲ್ಲಿ, ನವ್ಯರ ಕೃತಿಗಳಿಂದ ಸಿಗದ ಅನುಭವ, ಕಾಣ್ಕೆಯನ್ನು ತುಂಬಿಕೊಳ್ಳುವ ಆತುರ ಮಾತ್ರವಿತ್ತೇ. ಇಲ್ಲ ಅವರನ್ನು ಪುನರ್ ಅನ್ವೇಷಿಸುವ ತವಕವೂ ಇತ್ತೇ? ಎರಡನೆಯ ಕ್ರಮವನ್ನೇ ನಮ್ಮ ತಲೆಮಾರಿನವರ ಓದು ಹಿಡಿದಿದೆಯೆನಿಸುತ್ತದೆ. ಮಾಸ್ತಿ, ಕುವೆಂಪು, ಕಾರಂತರ ಬಗ್ಗೆ ಪುನರ್ ಓದಿನ ನೆಲೆಗಳನ್ನು ನಿರ್ಮಿಸುವಲ್ಲಿ ನಮ್ಮ ತಲೆಮಾರಿನ ಓದು ಸಕ್ರಿಯವಾಗಿ ಕೆಲಸ ಮಾಡಿದೆ. ನಮ್ಮ ತಲೆಮಾರಿನ ಕೆಲವು ಲೇಖಕರಿಗಾದರೂ ಮಾಸ್ತಿ, ಕಾರಂತರ ಕಥನ ಶೈಲಿಯಿಂದ ಕಲಿಯುವುದು ಇದೆಯೆಂದು ಅನಿಸಿದೆ. ಕುವೆಂಪುರವರ ತಾತ್ವಿಕತೆಯನ್ನು ಕೂಡ ಹೆಚ್ಚು ಗಾಢವಾಗಿ ಕಟ್ಟಿಕೊಡಲು ಓದು ಪ್ರಯತ್ನಿಸಿದೆ. ಪುತಿನರವರ ಕಾವ್ಯ, ಪ್ರಬಂಧ, ಮೀಮಾಂಸೆಯ ಓದುಗಳು ಇನ್ನಷ್ಟು ಮುನ್ನೆಲೆಗೆ ಬಂದಿವೆ.


ಇಂತಹ ಬಹುಪಾಲು ಪ್ರಯತ್ನಗಳು ಅಧಿಕೃತ ಸಾಹಿತ್ಯಿಕ ಸಂಸ್ಥೆಗಳ, ವಿಶ್ವವಿದ್ಯಾಲಯಗಳ ಪರಿಧಿಯ ಆಚೆಗೆ ಆಗಿವೆಯೆಂಬುದು ಕೂಡ ಮುಖ್ಯ. ಕಿರು ಪತ್ರಿಕೆಗಳು, ಸಣ್ಣ–ಪುಟ್ಟ ಸಾಹಿತ್ಯಿಕ ಗುಂಪುಗಳು, ಸಮಾನ ಮನಸ್ಕ ಗೆಳೆಯರ ಬಳಗಗಳು – ಈ ದಿಕ್ಕಿನಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಿವೆ. ಇವುಗಳನ್ನೆಲ್ಲ ಪಟ್ಟಿ ಮಾಡುವ ಉದ್ದೇಶ ಇಲ್ಲವಾದರೂ, ಕಳೆದೆರಡು ಮೂರು ದಶಕಗಳಲ್ಲಿ ನವೋದಯದ ಹಿರಿಯರನ್ನು ಕುರಿತ ಬಂದಿರುವ ಮೌಲಿಕ ಕೃತಿಗಳ, ಲೇಖಕರ ಪಟ್ಟಿಯನ್ನು ಯಾರಾದರೂ ತಯಾರಿಸಿದರೆ, ಈ ಅಂಶ ಸ್ಪಷ್ಟವಾಗುತ್ತದೆ.

ಲೇಖಕರನ್ನು, ಚಳುವಳಿಯ ಬರವಣಿಗೆಯನ್ನು ಅದು ಪ್ರಕಟವಾಗುತ್ತಿದ್ದ ಹಾಗೆಯೇ ಓದುವುದು ಸಮಕಾಲೀನ ಓದಾಗುತ್ತದೆ ಮತ್ತು ಅದಕ್ಕೆ ತನ್ನದೇ ಆದ ಒಂದು ರೀತಿಯ ತುರ್ತಿರುತ್ತದೆ. ನಂತರದ ಓದು ಹಿಂದಿನ ಎಲ್ಲ ಕೃತಿಗಳನ್ನು, ಲೇಖಕರನ್ನು ಓದುವುದಿಲ್ಲ. ಹಾಗಾಗಿ ನಮ್ಮ ತಲೆಮಾರಿನವರು ನವೋದಯದ ಕೃತಿಗಳನ್ನು ಪುನರ್ ಓದಿಗೆ ಒಳಪಡಿಸಿದೆವು ಎಂದು ಹೇಳುವಾಗ, ನಮ್ಮ ಗಮನವು ಕೂಡ ಆ ಮನೋಧರ್ಮದ ಮುಖ್ಯ ಲೇಖಕರ ಬಗ್ಗೆ ಅಥವಾ ನಮ್ಮ ವಾಗ್ವಾದಕ್ಕೆ, ಅಭಿರುಚಿಗೆ ಸಂವಾದಿಯಾಗುವ ಲೇಖಕರನ್ನು ಕುರಿತು ಮಾತ್ರವಾಗಿರುತ್ತದೆ. ಪ್ರಸಿದ್ಧರು, ಪ್ರಮುಖರು ಆದ ನಾಲ್ಕಾರು ಮಂದಿ ನವೋದಯದ ಲೇಖಕರಾಚೆಗೂ ಉಳಿದಿರುವ ಎಷ್ಟೋ ಮುಖ್ಯವಾದ ಕೃತಿಗಳು ನಮ್ಮ ಗಮನಕ್ಕೆ ಬರದೆ ಕೂಡ ಹೋಗಿರಬಹುದು. ಶ್ರೀರಂಗರ ಕಾದಂಬರಿಗಳು ಈ ರೀತಿಯ ಅವಗಣನೆಗೆ ಒಳಗಾದವು. ಮೆಟ್ರಿಕ್ ಓದಿಕೊಂಡು, ಸಣ್ಣ–ಪುಟ್ಟ ನೌಕರಿಗಳನ್ನು ಮಾಡುತ್ತಾ, ಗ್ರಾಮಾಂತರ ಪ್ರದೇಶಗಳಲ್ಲಿದ್ದವರು ಕೂಡ ಚೆನ್ನಾಗಿ ಬರೆಯುವಂತಹ ವಾತಾವರಣ ಆವಾಗ ಇತ್ತಂತೆ. ಅವರಲ್ಲೂ ಕೆಲವು ಒಳ್ಳೆಯ ಲೇಖಕರು ಮೂಡಿ ಬಂದಿದ್ದು ಈವತ್ತು ಕಷ್ಟಪಟ್ಟರೂ ಅವರುಗಳ ಕನಿಷ್ಠ ಖಾನೇಷುಮಾರಿಯೂ ಸಿಗದೆ ಹೋಗಬಹುದು.

ನವೋದಯದ ಓದಾಗಲೀ, ಪುನರ್ ಓದಾಗಲೀ ಈಗ ಪ್ರತ್ಯೇಕವಾಗಿ ಉಳಿದಿಲ್ಲ. ಈಗ ಅದು ನಮ್ಮ ಒಟ್ಟು ಓದಿನ ಭಾಗವಾಗಿದೆ. ಈ ಮಧ್ಯೆ ನಾವು ಬೇರೆ ಬೇರೆ ಭಾಷೆಗಳ ಕೃತಿಗಳನ್ನು ಓದಿರಬಹುದು. ಇಷ್ಟೆಲ್ಲಾ ಆದ ಮೇಲೂ, ನಮ್ಮ ತಲೆಮಾರಿನ ಒಂದು ವರ್ಗದ ಸಾಹಿತ್ಯಾಸಕ್ತರ ಸಂವೇದನೆಯನ್ನು ರೂಪಿಸುವಲ್ಲಿ ನವೋದಯ ಕೃತಿಗಳು ಗಣನೀಯ ಪಾತ್ರ ವಹಿಸಿವೆ ಮತ್ತು ನವ್ಯವೂ ಸೇರಿದಂತೆ ಮುಂದಿನ ಕೃತಿಗಳ ಬೆಲೆ ಕಟ್ಟುವಲ್ಲಿ ಮಾನದಂಡವಾಗಿ, ನಿಕಷವಾಗಿ ಕೆಲಸ ಕೂಡ ಮಾಡಿವೆ. ಇದು ನವ್ಯರು ಬಯಸದ ಒಂದು ವಿದ್ಯಮಾನ. ಹಿಂದಿನ ಮತ್ತು ಮುಂದಿನ ಎಲ್ಲ ಕೃತಿಗಳಿಗೂ ತಮ್ಮದೇ ಸಾರ್ವಕಾಲಿಕ ಮಾನದಂಡವಾಗಬೇಕೆಂದು ಅವರು ಬಯಸಿದ್ದಂತೆ ಕಾಣುತ್ತದೆ. ಸಾಹಿತ್ಯ, ಚರಿತ್ರೆ ಇಂತಹ ಯಾವ ಬಯಕೆಗಳನ್ನೂ ಮಾನ್ಯ ಮಾಡುವುದಿಲ್ಲ.

ಒಂದು ಕಾಲದ ಸಾಹಿತ್ಯಿಕ ಚಳುವಳಿಯೆಂದರೆ, ಆ ಕಾಲದಲ್ಲಿ ಬರೆಯುವವರ ಕ್ರಮ ಮಾತ್ರವಾಗಿರುವುದಿಲ್ಲ; ಸಾಹಿತ್ಯಿಕ ಸಮುದಾಯ ಓದುವ ರೀತಿ, ವಿಶಾಲವಾದ ಓದುಗ ವರ್ಗ ಓದುವ ರೀತಿ ಎರಡೂ ಕೂಡ ಸಾಹಿತ್ಯಿಕ ಚಳುವಳಿಯ ಭಾಗವೇ. ಈವತ್ತಿನ ಬರಹಗಾರರ ಹಿನ್ನೆಲೆ, ಸಾಹಿತ್ಯಿಕ ಆಕಾಂಕ್ಷೆಯ ಸ್ವರೂಪ ತುಂಬಾ ವೈವಿಧ್ಯಮಯವಾದದ್ದು. ಹಾಗೆಯೇ ಅವರು ಓದುವ, ಓದಲು ಬಯಸುವ ನೆಲೆಗಳು ಕೂಡ ಭಿನ್ನವಾದದ್ದು. ಪರಸ್ಪರರ ಬರವಣಿಗೆಯ ಬಗ್ಗೆ ಮಾತ್ರವಲ್ಲ, ಓದುವಿಕೆಯ ಬಗ್ಗೆ ಕೂಡ ಸಹನೆ ಮತ್ತ ಗೌರವವಿಲ್ಲದ ಕಾಲ ಇದು. ಓದುಗ ವರ್ಗ ಕೂಡ ಹಿಂದಿಗಿಂತ ಹೆಚ್ಚು ವೈವಿಧ್ಯಮಯವಾಗಿದ್ದು, ಸಾಹಿತ್ಯಿಕ ವಲಯಕ್ಕಿಂತ ಭಿನ್ನವಾದ ನೆಲೆಗಳಲ್ಲೇ ಓದುತ್ತಿದೆ. ಎರಡೂ ರೀತಿಯ ಓದುಗಳ ನಡುವೆ ಕಂದಕ ಕೂಡ ಇದೆ. ಎರಡೂ ವರ್ಗಗಳ ಓದುವಿಕೆಯಲ್ಲಿ ಸಮಕಾಲೀನವಲ್ಲದ ಕೃತಿಗಳ, ಲೇಖಕರ ಮರು ಓದು, ಪುನರ್ ಅನ್ವೇಷಣೆ, ಯಾವ ರೀತಿ ಸಾಗಿದೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ, ಆದರೆ ಕಷ್ಟ.

ಓದುಗ ವರ್ಗದ ಅರಾಜಕತೆಯೆಂದು ನಾವು ತಿಳಿದಿರುವಂತದ್ದು ಆ ವರ್ಗವು ತನ್ನ ಸ್ವಾತಂತ್ರ್ಯ, ಸ್ವಾಯತ್ತತೆಯನ್ನು ಉಳಿಸಿಕೊಳ್ಳುವ ಒಂದು ಮಾರ್ಗವೂ ಆಗಿರಬಹುದು.



(ವರಮಾನ ತೆರಿಗೆ ಇಲಾಖೆಯ ನಿವೃತ್ತ ಆಯುಕ್ತರಾದ ಕೆ.ಸತ್ಯನಾರಾಯಣ ಕನ್ನಡ ಸಾಹಿತ್ಯದ ಬಹು ಪ್ರಕಾರಗಳಲ್ಲಿ ಪರಿಶ್ರಮ ಮತ್ತು ಪ್ರತಿಭೆಗೆ ಹೆಸರಾದವರು)

'ವಿಶ್ವ ಮಾನವ' ಮತ್ತು 'ಗ್ಲೋಬಲ್ ವಿಲೇಜ್':

ಇವುಗಳ ಹಗ್ಗ ಜಗ್ಗಾಟದಲ್ಲಿ ಕನ್ನಡ ಸಾಹಿತ್ಯ

-ಎಚ್. ಎಸ್. ರಾಘವೇಂದ್ರ ರಾವ್

ಜಾಗತೀಕರಣ ನಮ್ಮ ಕನ್ನಡ ಸಾಹಿತ್ಯ ಸಂಸ್ಕೃತಿಯ ಲಂಗರುಗಳನ್ನೇ ಜಿಜ್ಜಿ ಬದಲಾಯಿಸಿರುವ ದುರಂತದ ಈ ದಿನಗಳ ಒಂದು ವಿಶ್ಲೇಷಣೆ ನೀಡುವ ಈ ಲೇಖನ ಸಾಹಿತ್ಯ ಕ್ಷೇತ್ರದ ವಾಣಿಜ್ಯೀಕರಣದ ಪರಿಣಾಮಗಳ ಅಶ್ಲೀಲತೆಗಳನ್ನು ನಿರೂಪಿಸುವ ಒಂದು ಪ್ರಯತ್ನ ಮಾಡುತ್ತದೆ.-ಸಂ.

ಕಳೆದ ಮೂರು ದಶಕಗಳಲ್ಲಿ ನಾಡಿನ ಸಮುದಾಯಗಳು, ರಾಜ್ಯಭಾರಗಳು, ಸಾಂಸ್ಕೃತಿಕ ಚಲನವಲನಗಳು, ಕಲಾವಿದರು ಹಾಗೂ ಕಲಾಕೃತಿಗಳು ಅನುಭವಿಸಿದ ಬದಲಾವಣೆಗಳನ್ನು ಕಂಡುಕೊಳ್ಳುವ ಗಂಭೀರಪ್ರಯತ್ನವು ಇನ್ನೂ ನಡೆಯಬೇಕಾಗಿದೆ. ಪ್ರೇಕ್ಷಕರು, ಪಾತ್ರಧಾರಿಗಳು, ಫಲಾನುಭವಿಗಳು ಎಲ್ಲವೂ ನಾವೇ ಆಗಿರುವಾಗ ದಿಟವನ್ನು ಕಂಡುಕೊಳ್ಳಲು ಬೇಕಾದ ಧೈರ್ಯ, ಪ್ರಾಮಾಣಿಕತೆ, ತಿಳಿವಳಿಕೆ ಮತ್ತು ತೆರೆದ ಮನಸ್ಸುಗಳು ಅಪರೂಪ. ಅದು ತಂತಿಯ ಮೇಲೆ ನಡೆಯುವ ಕೆಲಸ. ಯಾರೋ ಕೇಳುತ್ತಾರೆ, ಬದಲಾಗುತ್ತಾರೆ ಎಂಬ ಭ್ರಮೆಗಳಿಂದ ಮುಕ್ತರಾಗಿ, ಆದರೂ ಸಿನಿಕತೆ/ಕಹಿತನಗಳಿಲ್ಲದೆ ಪ್ರೀತಿಯಿಂದಲೇ ಮಾಡಬೇಕಾದ ಕೆಲಸ ಅದು. ಅದರಲ್ಲಿಯೂ ಕಳೆದ ಕಾಲದ ಕನಸುಗಳನ್ನು/ಹೊರೆಗಳನ್ನು ಹೆಗಲಿಗೇರಿಸಿಕೊಂಡಿರುವ ನನ್ನಂಥ ವಯಸ್ಸಾದವರು, ಎಲ್ಲ ಮಹತ್ವಾಕಾಂಕ್ಷೆ ಹಾಗೂ ಹುಸಿಹಂಬಲಗಳನ್ನು ತೊರೆದು ಮಾಡಬೇಕಾದ ಕೆಲಸ. ೨೦೧೯ ರ ತರುಣ-ತರುಣಿಯರ ಸುಡುವರ್ತಮಾನವನ್ನು ಹಿಡಿದು, ಕಲೆಯಾಗಿಸಿ ಸಮುದಾಯಗಳಿಗೆ ಕೊಡುವ ಹೊಣೆಗಾರಿಕೆ ಅವರದೂ ಹೌದು, ನಮ್ಮದೂ ಹೌದು.

ಜಾಗತೀಕರಣ ಎನ್ನುವುದು ಕೇವಲ ಬಹಿರಂಗದ ಬಾಬತ್ತಲ್ಲ. ಅದು ನಮ್ಮ ಒಳಗಡೆಯೇ ಮನೆಮಾಡಿ, ಅಂತರಂಗದ ಚಹರೆಗಳನ್ನು ಬದಲಿಸುತ್ತಿರುವ ಸಂಗತಿ. ಅದರ ಹಲವು ಕೈಗಳಲ್ಲಿ ಕೆಲವಾದ ತಂತ್ರಜ್ಞಾನ, ಸಂವಹನ ಮಾಧ್ಯಮಗಳು ಮತ್ತು 'ಲೀನಿಯರ್' ಆದ (ಮಕಾಲೆಯು ಬಯಸಿದ ಕಾರಕೂನರ ಬದಲು ಎಂಜಿನಿಯರು/ಮ್ಯಾನೇಜರುಗಳನ್ನು ರೂಪಿಸುತ್ತಿರುವ) ಶಿಕ್ಷಣ ಮತ್ತು 'ಸಂವಿಧಾನ'ವನ್ನೂ ತಿರುಚಬಲ್ಲ ನ್ಯಾಯಾಂಗಗಳ ಆಕ್ರಮಣಶೀಲವಾದ ಪರಿಣಾಮಗಳನ್ನು ಗಮನಿಸದೆ ಕಲೆ ಹಾಗೂ ಸಾಹಿತ್ಯಗಳ ಬಗ್ಗೆ ಮಾತನಾಡುವುದೂ ಸಾಧ್ಯವಿಲ್ಲ. ಏಕೆಂದರೆ ಇವೆಲ್ಲವೂ ನಾವು ಅನುಭವಿಸುವ, ಚಿಂತಿಸುವ, ಭಾವಿಸುವ, ರೂಪಿಸುವ ಬಗೆಗಳನ್ನು ಕಲುಷಿತಗೊಳಿಸುತ್ತಿದೆ. ಇದು 'ದೇವರಾಣೆ'ಯಾಗಿಯೂ(?) ನಾನು ನಮ್ಮ ಕಿರಿಯ ಪೀಳಿಗೆಗಳ ಮೇಲೆ ಮಾಡುತ್ತಿರುವ ಆಪಾದನೆಯಲ್ಲ. ಬದಲಾಗಿ ನನ್ನದೇ ಚಿತ್ತದ ಅತ್ತಿಯ ಹಣ್ಣನ್ನು ಬಿಡಿಸಿ ನೋಡುವ ಬಗೆ.

ಎಲ್ಲ ವಲಯಗಳಲ್ಲಿಯೂ 'ಅಮೆರಿಕನ್ ಮಾದರಿ'ಯ ಅ-ವಿಮರ್ಶಕವಾದ ಅನುಸರಣೆ, ಅನುಕರಣೆಗಳು ಮೊದಲ ರೋಗ. ಅಲ್ಲಿಂದ ಆಮದಾಗುತ್ತಿರುವುದು 'ತ್ಯಾಜ್ಯ'ವೇ ಹೊರತು ತಿರುಳು ಅಲ್ಲ. ವಸ್ತುಗಳೂ ಅಷ್ಟೆ, ವಿಚಾರಗಳೂ ಅಷ್ಟೆ. ನನ್ನ ಆಲೋಚನೆಗಳನ್ನು ಕಲೆಯ ವಲಯಕ್ಕೆ ಸೀಮಿತಗೊಳಿಸಿಕೊಳ್ಳುವುದು ಈ ಲೇಖನದ ಮಿತಿ. ಆದರೆ, ಕಲೆಯು ಲೋಕದಿಂದ ಕಲುಷಿತವಾಗುತ್ತಲೇ ಲೋಕವನ್ನು ನಿರ್ಮಲಗೊಳಿಸುವ ಕೆಲಸವನ್ನು ಮಾಡುತ್ತಿತ್ತೇ, ಮಾಡುತ್ತಿರಲಿಲ್ಲವೇ, ಹಾಗೆ ಮಾಡುವಾಗ ಅದು 'ತನ್ನನ್ನು ತಾನು ಸಂತವಿಸಿಕೊಳ್ಳುವ ಬಗೆ' ಯಾವುದು ಎಂಬ ಪ್ರಶ್ನೆ ಮುಖ್ಯವಾದುದು.

ದೈನಂದಿನ ಅಗತ್ಯಗಳ ಗಡಿಗರೆಗಳನ್ನು ಮೀರಿದ, ಭೋಗವಸ್ತುಗಳ ನಿರಂತರವಾದ ಉತ್ಪಾದನೆ, ವಿತರಣೆ ಮತ್ತು ಬಳಕೆಗಳು ಉಂಟುಮಾಡುವ ಜಡತ್ವವು ನಮ್ಮ ಸಮುದಾಯಗಳನ್ನು ಇಡಿಯಾಗಿ ಆವರಿಸುತ್ತಿದೆ. ಈ ಸುಖಗಳಲ್ಲಿ(?) ಯಾವುದನ್ನೂ ಪಡೆಯಲಾಗದ 'ಬಡವರ ಸಿಟ್ಟು', ಕುವೆಂಪು ಅವರ 'ಕಲ್ಕಿ'ಯಲ್ಲಿ ಬರುವಂತೆ ಹತ್ತಿ ಉರಿಯುತ್ತಿದೆ. ನಿಜಕ್ಕೂ 'ಕಲ್ಕಿ' ಕವಿತೆಯ ಪೂರ್ವಾರ್ಧ ಇಂದಿನ ವಾಸ್ತವ. ಇಂದು ಕುಣಿಯುತ್ತಿರುವುದು 'ಕುರುಡು ಕಾಂಚಾಣ'ವೇ ಸರಿ. ಇಂತಹ 'ಫಿಲಿಸ್ಟೀನ್' ಸನ್ನಿವೇಶದಲ್ಲಿ ಕಲೆಯ ಮೇಲೆಯೂ 'ಶ್ರೀಮಂತರ ಸೂಳೆ'ಯಾಗುವ(ಈ ಪದದ ಬಳಕೆಗಾಗಿ ನನ್ನನ್ನು ಕ್ಷಮಿಸಿ.), 'ಪ್ರೀ ಡೈಜೆಸ್ಟೆಡ್' ಆಹಾರದಂತೆ ನೀರು ನೀರಾಗುವ ಒತ್ತಡ, ಒತ್ತಾಯಗಳು ಇರುತ್ತವೆ. ಈಗ ಆಗುತ್ತಿರುವುದೂ ಹಾಗೆಯೇ. ಇದರ ಫಲವಾಗಿ ಮೈ, ಮನಸ್ಸು ಮತ್ತು ಹೃದಯಗಳ ಅ-ಮಾನವೀಕರಣ ನಡೆಯುತ್ತದೆ. 'ಇವ ನಮ್ಮವ, ಇವ ನಮ್ಮವ' ಎಂಬ ಸಂವೇದನೆಯು ಮೊಂಡಾಗುತ್ತದೆ. ಇವೆಲ್ಲದರ ಪರಿಣಾಮವು ಕಲೆಗಳ ಮೇಲೆ, ಅದರಲ್ಲಿಯೂ ಸಾಹಿತ್ಯದ ಮೇಲೆ ಹೇಗೆ ಆಗಿದೆ ಎನ್ನುವುದನ್ನು ಕೊಂಚ ವಿವರವಾಗಿ ನೋಡೋಣ.

'ಸಂವಹನ'ವು ನಡೆಯುವ ಹತ್ತು ಹಲವು ವಿಧಾನಗಳ ನಡುವಿನ ಸೂಕ್ಷ್ಮ ಅಂತರಗಳು ನಿಧಾನವಾಗಿ ಅಳಿಸಿ ಹೋಗುತ್ತಿವೆ. ಭಾಷೆಯು ಮಾಹಿತಿಗಳ,



ವಿಚಾರಗಳ, ಭಾವನೆಗಳ, ಪ್ರಚಾರ ಸಾಮಗ್ರಿಗಳ ವಿನಿಮಯಕ್ಕಾಗಿ ಬಳಕೆಯಾಗುವುದು ಒಂದು ನೆಲೆ. ಇದಕ್ಕಾಗಿ ಬಳಕೆಯಾಗುತ್ತಿರುವ ಪ್ರಿಂಟ್ ಮೀಡಿಯಾ, ವಿಷುಯಲ್ ಮೀಡಿಯಾ ಮತ್ತು ಸೋಷಿಯಲ್ ಮೀಡಿಯಾಗಳ ಚಹರೆಗಳು ನಮಗೆ ಅತಿಪರಿಚಿತವಾಗುತ್ತಿವೆ, ನಮ್ಮನ್ನು ಆವರಿಸುತ್ತಿವೆ. ತಂತ್ರಜ್ಞಾನವು ಇವೆಲ್ಲದರ ಸ್ವರೂಪವನ್ನು ಕ್ಷಣಕ್ಷಣಕ್ಕೂ ಬದಲಾಯಿಸುತ್ತಿದೆ. ವಾಟ್ಸಪ್ ಬಂದ ಮೇಲೆ ಈ-ಮೇಲುಗಳನ್ನು ಬಳಸುವವರೇ ಇಲ್ಲ. ಈ-ಮೇಲುಗಳು ಬಂದಾಗ ಕಾಗದ ಬರೆಯುವ ಅಭ್ಯಾಸವು ಕಾಣೆಯಾಯಿತು. ಹಾಗೆಯೇ ಶಾಲೆ-ಕಾಲೇಜುಗಳಲ್ಲಿ ಭಾಷೆಗಳು ಮತ್ತು ಸಾಹಿತ್ಯಕ್ಕೆ ಇರುವ ಆದ್ಯತೆಗಳೂ ಕಡಿಮೆಯಾದವು. ಇದೆಲ್ಲದರ ಫಲವಾಗಿ ಸಾಹಿತ್ಯವು ಭಾಷೆಯನ್ನು ಬಳಸುವ, ಬೆಳೆಸುವ ಬಗೆಗಳ ವಿಶಿಷ್ಟತೆಯು ಲೇಖಕರ ಮತ್ತು ಓದುಗರ ತಿಳಿವಳಿಕೆಯಿಂದ ಹೊರಗೆ ಉಳಿಯತೊಡಗಿತು. ಈ ಪ್ರಕ್ರಿಯೆಯ ಕಾರಣ-ಪರಿಣಾಮಗಳನ್ನು ಇನ್ನಷ್ಟು ಆಳವಾಗಿ ಅರಸಬೇಕು.

'ಕಲಾಮಾಧ್ಯಮಗಳ ಅಪಮೌಲ್ಯೀಕರಣ'ವು ಈ ಕಾಲದ ಮುಖ್ಯ ಲಕ್ಷಣ. ಇಲ್ಲಿ ಕಳೆದ ಕಾಲಗಳ ಕಲಾಕೃತಿಗಳನ್ನು ನಾವು ಸ್ವೀಕರಿಸುತ್ತಿರುವ ಬಗೆ ಮತ್ತು ಈ ಕಾಲದಲ್ಲಿ ಸೃಷ್ಟಿಯಾಗುತ್ತಿರುವ ಕಲಾಕೃತಿಗಳ ಸ್ವರೂಪ ಇವೆರಡನ್ನೂ ಎಚ್ಚರದಿಂದ ಗಮನಿಸಬೇಕು. ಹೊಸಬರು ಬರೆಯುತ್ತಿರುವುದನ್ನು ಓದದೆ, ಹಿರಿಯರ ಕಿರೀಟಗಳಿಗೆ ಗರಿ ಸೇರಿಸುವ ಚಪಲ ನನ್ನದಲ್ಲ. ರೋಗನಿದಾನ ಮತ್ತು ಚಿಕಿತ್ಸೆಗಳನ್ನು ನಾವೆಲ್ಲರೂ ಸೇರಿಯೇ ಮಾಡಬೇಕಾಗಿದೆ.

ಸಾಹಿತ್ಯದಲ್ಲಿ ಆಕೃತಿಯೇ ಆಶಯವನ್ನು ನಿರ್ಧರಿಸುತ್ತದೆ. ನಾವು ದಿನದಿನವೂ ಆಡುವ ಮಾತುಗಳನ್ನು ಅವು ಇರುವ ಹಾಗೆಯೇ ಬಳಸಿದರೆ, ಕಥೆ, ಕವಿತೆ, ನಾಟಕ ಯಾವುದೂ ಆಗುವುದಿಲ್ಲ. ಹಾಗೆಯೇ ಅನುಭವ, ವಿಚಾರ, ಭಾವನೆಗಳೂ ತಮ್ಮಷ್ಟಕ್ಕೆ ತಾವು ಸಾಹಿತ್ಯವಲ್ಲ. ಅವುಗಳನ್ನು ಕಟ್ಟಲು ಬಳಸುವ ಅನನ್ಯವಾದ ಭಾಷಿಕ ರಚನೆಗಳೇ ಅನುಭವ-ವಿಚಾರ-ಭಾವನೆಗಳನ್ನು ಬೆರೆಸುತ್ತವೆ, ಬದಲಿಸುತ್ತವೆ, ಬೆಳೆಸುತ್ತವೆ. ಅವು ಲೋಕಕ್ಕೆ ಹಿಡಿದ ಕನ್ನಡಿಯಲ್ಲ. ಬದಲಾಗಿ ಲೋಕದಿಂದ ಮೂಡಿದ 'ಅ-ಲೌಕಿಕ' ರಚನೆಗಳು. ಅವಕ್ಕೆ ತಮ್ಮದೇ ಲೋಕವನ್ನು ಸೃಷ್ಟಿಸುವ ಶಕ್ತಿ ಇರುತ್ತದೆ. ಒಂದೇ ತೋಟದ ಮಣ್ಣಿನಿಂದ ಹತ್ತು ಹಲವು ಬಗೆಯ ಹೂವು ಹಣ್ಣು ಚಿಮ್ಮುವಂತೆ ಈ ಹದ. ಕವಿಮನವೆಂಬ ನೆಲವು ಅನುಭವ ಬೀಜಗಳನ್ನು ಭಾವಬೀಜಗಳನ್ನು ಪೋಷಿಸಿ ಬೇರೇನೋ ಆಗಿಸಿ ಹೊರ ತರುತ್ತದೆ. ಆದರೆ, ಇದು ದೈವಕೃಪೆಯಾಗಲೀ ಪವಾಡವಾಗಲೀ ಅಲ್ಲ. ಸಾಹಿತ್ಯದಲ್ಲಿ ಭಾಷೆಯೇ ಮಣ್ಣು, ಭಾಷೆಯೇ ಹಣ್ಣು. ಅದು ಏಕಮುಖಿಯಲ್ಲ ಬಹುಮುಖಿ. ಅದು ಸರಳರೇಖಾತ್ಮಕವಲ್ಲ. ಭಾಷೆಯನ್ನು ಬಳಸಿ ಲೋಕವನ್ನು ಕಟ್ಟುವ, ಭಾಷೆಯನ್ನೇ ಲೋಕವಾಗಿಸುವ ಈ ಕಲೆಯನ್ನು ಲೇಖಕನೂ ಕಲಿಯಬೇಕು. ಅದನ್ನು ಒಳಗೊಳ್ಳುವ ಬಗೆಯನ್ನು ಓದುಗನೂ ಕಲಿಯಬೇಕು. ಇವುಗಳನ್ನು ಕಲಿಯುವ, ಕಲಿಸುವ ಬಗೆಗಳನ್ನು ಸಮಾಜವೇ ರೂಪಿಸಿಕೊಂಡಿರುತ್ತದೆ. ಆ ಬಗೆಯು ವ್ಯವಧಾನ, ಪರಿಶ್ರಮ ಮತ್ತು ಮರು ಓದುಗಳನ್ನು ಬಯಸುತ್ತವೆ. ನಮ್ಮ ಸಮುದಾಯವೂ ಇಂತಹ ಬಗೆಗಳನ್ನು ಬೆಳೆಸಿಕೊಂಡಿತ್ತು. ಆದರೆ, ಜಾಗತೀಕರಣದಂತಹ ಪ್ರಕ್ರಿಯೆಗಳು ಈ ಬಗೆಗಳನ್ನು ಇಲ್ಲವಾಗಿಸುತ್ತಿವೆ. ಈ ಮಾತು,


ಸಾಹಿತ್ಯಕ ಸಂಸ್ಥೆಗಳ ಆಡಳಿತ ನಡೆಸುವ, ಆಳುವ, ಐಡೆಂಟಿಟಿಗಳ ಹೆಸರಿನಲ್ಲಿ ಸ್ವಂತದ ಬೇಳೆ ಬೇಯಿಸಿಕೊಳ್ಳುವ, ಏನಕೇನ ಪ್ರಕಾರೇಣ ಸ್ಥಾನಮಾನಗಳನ್ನು ಪಡೆದುಕೊಳ್ಳುವ, ಪ್ರಶಸ್ತಿಗಳ ಹಂಚಿಕೆಯಿಂದ ಹೌದಪ್ಪಗಳ ಪಡೆಯನ್ನು ಕಟ್ಟಿಕೊಳ್ಳುವ, ಇಂದೋ ಎಂದೋ ಒಂದಿಷ್ಟು ಬರೆದೂ ಇರುವ ನಾಯಕ ಮಣಿಗಳ ಪರಸ್ಪರ ಸಹಕಾರ ಸಂಘಗಳು ಇಂದು ಸಾಹಿತ್ಯ ರಚನೆಯ ಸಾಹಿತ್ಯಾಭ್ಯಾಸದ ಶತ್ರುಗಳಾಗಿ ಪರಿಣಮಿಸಿವೆ. ಸರ್ಕಾರೀ ಕೃಪಾಪೋಷಿತರಾದ ಎಲ್ಲ ಬಿಳಿಯಾನೆಗಳೂ ಇದೇ ಗುಂಪಿಗೆ ಸೇರುತ್ತಾರೆ. ಕೆಲವು ಅಪವಾದಗಳನ್ನು ಹೊರತು ಪಡಿಸಿದರೆ ಉಳಿದಂತೆ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಕೂಡ ಇದೇ ಗುಂಪಿಗೆ ಸೇರುತ್ತವೆ. ನಾಡು, ನುಡಿ, ಕಲೆ, ಸಾಹಿತ್ಯಗಳಿಗೆ ಸಂಬಂಧಿಸಿದ ಎಲ್ಲ ಅಭಿಪ್ರಾಯಗಳೂ ತೀರ್ಮಾನಗಳೂ ಇವರಿಂದಲೇ ಆಗುತ್ತವೆ. ಇವರು ನಡೆಸುವ ಹಬ್ಬಗಳೇ ಸಾಹಿತ್ಯಚರ್ಚೆಯ ಕೇಂದ್ರವೆನ್ನಿಸಿಕೊಳ್ಳುತ್ತವೆ. ನಾನು ನಿಜವಾಗಿಯೂ ನಂಬಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆಗೂ ಈ ಸ್ವಯಂಘೋಷಿತ 'ನಾಯಕಮಣಿ'ಗಳಿಗೂ ಸಂಬಂಧವಿಲ್ಲ. ಗ್ರಂಥಾಲಯಗಳಿಗೆ ಪುಸ್ತಕ ಮಾರುವುದರಲ್ಲಿ ನಿಷ್ಣಾತರಾದ ತಿಮಿಂಗಿಲಗಳು ಇವರನ್ನು ಪೋಷಿಸುತ್ತಾ ತಾವೂ ಬೆಳೆಯುತ್ತಾರೆ.

ಸಾಹಿತ್ಯದ ಹಾಗೆಯೇ ಇತರ ಕಲೆಗಳಿಗೂ ಅನ್ವಯಿಸುತ್ತದೆ. ಹೀಗೆ ಆಗುವುದಕ್ಕೆ ನೆರವಾಗುತ್ತಿರುವ ಇನ್ನಷ್ಟು ಸಂಗತಿಗಳನ್ನು ಇಲ್ಲಿಯೇ ವಿವರಿಸುವ ಅಗತ್ಯವಿದೆ.

ಸಾಹಿತ್ಯದ ಸೃಷ್ಟಿ ಮತ್ತು ಓದಿಗೆ ನಮ್ಮ ಕಾಲದ ಆಗುಹೋಗುಗಳ ಫಲವಾಗಿಯೇ ಒದಗಿ ಬಂದಿರುವ ಕೆಲವು ಆತಂಕಗಳನ್ನು ನಾನು ನಾಯಕ ನಿಯಂತ್ರಣ, ಮಾಧ್ಯಮ ನಿಯಂತ್ರಣ, ವಿಚಾರ ನಿಯಂತ್ರಣ, ರಂಜನ ನಿಯಂತ್ರಣ ಮತ್ತು ವಿಗ್ರಹ ನಿಯಂತ್ರಣ ಎಂಬ ಪದಗಳ ಮೂಲಕ ವಿವರಿಸಲು ಬಯಸುತ್ತೇನೆ. ಇವು ನಾನೇ ಕಂಡುಕೊಂಡ ಸಂಗತಿಗಳೇನೂ ಅಲ್ಲ. ಇವು ಬುದ್ಧಿಪೂರ್ವಕವಾಗಿಯೇ ನಡೆಯುತ್ತಿರುವ ವಿದ್ಯಮಾನಗಳು. ಸರ್ಕಾರ ಮತ್ತು ಖಾಸಗೀ ವಲಯಗಳೆರಡೂ ಇವುಗಳನ್ನು ಪೋಷಿಸುತ್ತಿವೆ. ಇವುಗಳ ಹಿಂದೆ ಖಚಿತವಾದ ಉದ್ದೇಶಗಳು ಮತ್ತು ಹುನ್ನಾರಗಳು ಇವೆ. ಸಾಹಿತ್ಯವನ್ನು ಹಲ್ಲು ಉಗುರುಗಳೆರಡನ್ನೂ ಕಳೆದುಕೊಂಡ 'ಪೆಟ್ ಡಾಗ್'ಗಳಾಗಿ ಮಾಡುವ ಬಗೆ ಇದು. ಹಿರಿಯ–ಕಿರಿಯ 'ಸಾಹಿತಿ'ಗಳು ತಾವಾಗಿಯೇ ಇಂತಹ ಪ್ರಲೋಭನೆಗಳಿಗೆ ತುತ್ತಾಗುವುದನ್ನು ನಾವು ನೋಡಿದ್ದೇವೆ. ಇವು ಹಿಂದೆ ಇದ್ದರೂ ಈ ಪ್ರಮಾಣದಲ್ಲಿ ಈ ತೀವ್ರತೆಯಲ್ಲಿ ಇರಲಿಲ್ಲ. ಬರೆಯಬೇಕೆಂಬ ಅಪೇಕ್ಷೆ ಮತ್ತು ಬರೆಯುವವರ ಸಂಖ್ಯೆ ಜಾಸ್ತಿಯಾದರೆ ಸಂತೋಷವೇ. ಆದರೆ ಬರವಣಿಗೆಯೆನ್ನುವುದು ಅಮೆರಿಕಾದಲ್ಲಿ ಆಗುತ್ತಿರುವಂತೆಯೇ 'ಟ್ರಾಶ್ ಮೇಕಿಂಗ್ ಇಂಡಸ್ಟ್ರಿ' ಆಗಬಾರದು. ಇರಲಿ. ಇಂತಹ ನಿಯಂತ್ರಣಗಳನ್ನು ಕುರಿತು ಆಲೋಚಿಸೋಣ.

ಸಾಹಿತ್ಯಕ ಸಂಸ್ಥೆಗಳ ಆಡಳಿತ ನಡೆಸುವ, ಆಳುವ, ಐಡೆಂಟಿಟಿಗಳ ಹೆಸರಿನಲ್ಲಿ ಸ್ವಂತದ ಬೇಳೆ ಬೇಯಿಸಿಕೊಳ್ಳುವ, ಏನಕೇನ ಪ್ರಕಾರೇಣ ಸ್ಥಾನಮಾನಗಳನ್ನು ಪಡೆದುಕೊಳ್ಳುವ, ಪ್ರಶಸ್ತಿಗಳ ಹಂಚಿಕೆಯಿಂದ ಹೌದಪ್ಪಗಳ ಪಡೆಯನ್ನು ಕಟ್ಟಿಕೊಳ್ಳುವ, ಇಂದೋ ಎಂದೋ ಒಂದಿಷ್ಟು ಬರೆದೂ ಇರುವ ನಾಯಕ ಮಣಿಗಳ ಪರಸ್ಪರ ಸಹಕಾರ ಸಂಘಗಳು ಇಂದು ಸಾಹಿತ್ಯರಚನೆಯ ಸಾಹಿತ್ಯಾಭ್ಯಾಸದ ಶತ್ರುಗಳಾಗಿ ಪರಿಣಮಿಸಿವೆ. ಸರ್ಕಾರೀ ಕೃಪಾಪೋಷಿತರಾದ ಎಲ್ಲ ಬಿಳಿಯಾನೆಗಳೂ ಇದೇ ಗುಂಪಿಗೆ ಸೇರುತ್ತಾರೆ. ಕೆಲವು ಅಪವಾದಗಳನ್ನು ಹೊರತು ಪಡಿಸಿದರೆ ಉಳಿದಂತೆ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಕೂಡ ಇದೇ ಗುಂಪಿಗೆ ಸೇರುತ್ತವೆ. ನಾಡು, ನುಡಿ, ಕಲೆ, ಸಾಹಿತ್ಯಗಳಿಗೆ ಸಂಬಂಧಿಸಿದ ಎಲ್ಲ ಅಭಿಪ್ರಾಯಗಳೂ ತೀರ್ಮಾನಗಳೂ ಇವರಿಂದಲೇ ಆಗುತ್ತವೆ. ಇವರು ನಡೆಸುವ ಹಬ್ಬಗಳೇ ಸಾಹಿತ್ಯಚರ್ಚೆಯ ಕೇಂದ್ರವೆನ್ನಿಸಿಕೊಳ್ಳುತ್ತವೆ. ನಾನು ನಿಜವಾಗಿಯೂ ನಂಬಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆಗೂ ಈ ಸ್ವಯಂಘೋಷಿತ 'ನಾಯಕಮಣಿ'ಗಳಿಗೂ ಸಂಬಂಧವಿಲ್ಲ. ಗ್ರಂಥಾಲಯಗಳಿಗೆ ಪುಸ್ತಕ ಮಾರುವುದರಲ್ಲಿ ನಿಷ್ಣಾತರಾದ ತಿಮಿಂಗಿಲಗಳು ಇವರನ್ನು ಪೋಷಿಸುತ್ತಾ ತಾವೂ ಬೆಳೆಯುತ್ತಾರೆ.

'ಮಾಧ್ಯಮ ನಿಯಂತ್ರಣ'ವು ಇಂಥ ಅಪಾಯಗಳಲ್ಲಿ ಎರಡನೆಯದು. ಈ ಮಾತು ಮುದ್ರಣ, ದೃಶ್ಯ ಮತ್ತು ಸಾಮಾಜಿಕ ಮಾಧ್ಯಮಗಳೆಂಬ ಮೂರು ನೆಲೆಗಳಿಗೂ ಅನ್ವಯಿಸುತ್ತದೆ. ಸಂಸ್ಕೃತಿ ಮತ್ತು ಕಲೆಗಳನ್ನು ಪೋಷಿಸುವುದು ಎಂದಿಗೂ ಇವರ ಅಜೆಂಡಾದ ಕೇಂದ್ರವಾಗಿರಲಿಲ್ಲ. ಆದರೆ, ಈಗ ಆಗಿರುವಷ್ಟು 'ಪಕ್ಷ'ಪಾತ ಮತ್ತು ಹೂಡ ರಾಜ್ಯಭಾರಗಳು ಯಾವಾಗಲೂ ಇರಲಿಲ್ಲ. ಅಭಿರುಚಿಗಳನ್ನು ರೂಪಿಸುವುದಕ್ಕೂ ಅಭಿರುಚಿಗಳನ್ನು ವಲ್ಗರ್ ಮಾಡುವುದರ ಮೂಲಕವೇ, ರೋಚಕವಾಗುವುದರ



ಮೂಲಕವೇ, ಹೇಗೆ ಹೇಗೋ ಪುಟಗಳನ್ನು, ಗಂಟೆಗಳನ್ನು ತುಂಬುವ ಉದ್ಯಮಕ್ಕೂ ವ್ಯತ್ಯಾಸವಿದೆ. ಕಥೆ, ಕವಿತೆ, ಪ್ರಬಂಧ'ಗಳ ಗಾತ್ರ, ಗುಣ, ಸ್ವರೂಪಗಳನ್ನು ಮಾಧ್ಯಮ ಪ್ರಭುಗಳು ನಿಯಂತ್ರಿಸುವ ಈ ವಿದ್ಯಮಾನವು ಖಾಲಿಖಾಲಿಯಾದ ಸರಳತೆಗೆ ಮಣೆ ಹಾಕುತ್ತಿದೆ. ಇಂದು ಓದಿ/ಓದದೆ ಇಂದೇ ಮರೆಯುವ ಈ ಬರೆಹಗಳಿಂದ ಪುಣ್ಯವೂ ಇಲ್ಲ, ಪುರುಷಾರ್ಥವೂ ಇಲ್ಲ. ಅದಕ್ಕಿಂತ ಹೆಚ್ಚಾಗಿ ಎಲ್ಲೋ ಕುಳಿತು ತಮ್ಮ ಪಾಡಿಗೆ ತಾವು ಬರೆಯುವ ನಿಜವಾದ ಲೇಖಕರು ಈ ನಕ್ಷತ್ರಗಳನ್ನು ಎದುರಿಸಲಾರದ ಲಜ್ಜೆಯಿಂದ ಹಿಂದೆ ಸರಿಯುತ್ತಾರೆ. ಇದರಿಂದ, ಇಂದಿನ ಬರವಣಿಗೆ ಮಾತ್ರವಲ್ಲ, ಹಿಂದಿನ ಬರೆಹವೂ ಹಿನ್ನೆಲೆಗೆ ಸರಿಯುತ್ತದೆ. ಅಂತೆಯೇ ಇಂಗ್ಲಿಷಿನಲ್ಲಿ ಬರೆಯುವ ಲೇಖಕರನ್ನು ಮುಗಿಲಿಗೆ ಏರಿಸುವ ಪ್ರವೃತ್ತಿಯನ್ನೂ ಇಲ್ಲೇ ಹೇಳಬೇಕು.

ನನ್ನ ಪ್ರಕಾರ ವಿಚಾರ ನಿಯಂತ್ರಣವು ಇವುಗಳಷ್ಟೇ ಅಪಾಯಕಾರಿಯಾದುದು. ಏಕೆಂದರೆ, ಇದು ಆಶಯಗಳ ರಾಜ್ಯಭಾರಕ್ಕೆ ಅವಕಾಶ ಮಾಡಿಕೊಡುತ್ತದೆ. ಹೀಗಾದಾಗ ನಡೆಯುವುದು ಐಡಿಯಾಲಜಿಗಳ ಅಥವಾ ಕೆಲವು ಸ್ಥೂಲವಾದ ನಿಲುವುಗಳ ಪರ ಅಥವಾ ವಿರೋಧವಾದ ಬಡಿದಾಟ ಮಾತ್ರ. ನಾನು ಸಾಹಿತಿಗೆ ಇರಲೇಬೇಕಾದ ವೈಚಾರಿಕತೆ ಮತ್ತು ಬದ್ಧತೆಗಳ ವಿರೋಧವಾಗಿ ಮಾತಾಡುತ್ತಿಲ್ಲ. ಆದರೆ, ಅವು ಕೃತಿಯೊಳಗೆ ಮೈದಳೆಯಬೇಕಾದ ವಿಧಾನದ ಸೂಕ್ಷ್ಮತೆಯ ಬಗ್ಗೆ ಹೇಳುತ್ತಿದ್ದೇನೆ. ಪಿಕಾಸೋನ 'ಗರ್ನಿಕಾ', ಚಾರ್ಲಿ ಚಾಪ್ಲಿನ್ ನಿರ್ದೇಶಿಸಿದ 'ಗ್ರೇಟ್ ಡಿಕ್ಟೇಟರ್', ವೋಲೆ ಸೋಯಿಂಕಾನ 'ಡೆತ್ ಅಂಡ್ ದಿ ಕಿಂಗ್ಸ್ ಹಾರ್ಸ್‌ಮನ್' ಮುಂತಾದ ಕೃತಿಗಳು ಒಂದಿಷ್ಟೂ ರಾಜಿಯನ್ನು ಮಾಡಿಕೊಳ್ಳದೆ ಕಲೆ ಮತ್ತು ಸಾಮಾಜಿಕತೆ ಎರಡಕ್ಕೂ ನ್ಯಾಯ ಸಲ್ಲಿಸುತ್ತವೆ. ಅಷ್ಟೇಕೆ ಕನ್ನಡದ 'ಮಲೆಗಳಲ್ಲಿ ಮದುಮಗಳು', 'ಕುಸುಮಬಾಲೆ'ಗಳೂ ಇದೇ ಕೆಟಗರಿಗೆ ಸೇರುತ್ತವೆ. ಆದರೆ, ಬರವಣಿಗೆಯು ನಿರ್ದಿಷ್ಟವಾದ ಐಡೆಂಟಿಟಿಗಳ ಪರ ಅಥವಾ ವಿರೋಧವಾದ ವಕೀಲಿಯಾದಾಗ ಕಲೆಯ ಹುಟ್ಟಡಗುತ್ತದೆ. ಹೀಗೆಂದರೆ, ಯಾವುದೋ ಒಂದು ರಾಜಕೀಯ ವಿಚಾರಧಾರೆಗೆ ಬದ್ಧವಾಗುವುದು ತಪ್ಪೆಂದು ಅರ್ಥವಲ್ಲ. ಆದರೆ, ಲೋಕವನ್ನು ಕಾಣುವ ಮತ್ತು ಮರಳಿ ಕಟ್ಟುವ ಬಗೆಯ ನಿಗೂಢತೆ ಮತ್ತು ಸಂಕೀರ್ಣತೆಗೆ ಅಡ್ಡಿಯಾಗದಂತೆ ಅದನ್ನು ನಿರ್ವಹಿಸುವುದನ್ನು ಕಲಾವಿದರು ಕಲಿಯಬೇಕು. ತಮ್ಮ ಜಾಗೃತಚಿತ್ತವು ಸುಪ್ತಚಿತ್ತದ ಮೇಲೆ ಹಾಕುವ ನಿಯಂತ್ರಣವನ್ನು ಕಡಿಮೆ ಮಾಡಿದಷ್ಟೂ ಕಲೆಯ ಗಾರುಡಿಯು ಸಾಧ್ಯವಾಗುತ್ತದೆ. ಮಾಸ್ತಿಯವರ ಹಲವು ಕಥೆಗಳು ಅವರ ವಿಚಾರಗಳ ಹಿಡಿತವನ್ನು ಮೀರಿ ದಿಟವಾಗುವುದು ಹೀಗೆಯೇ. ಇದು ಲೋಕದೃಷ್ಟಿ ಮತ್ತು ಕಲಾಸೃಷ್ಟಿಗಳ ನಡುವೆ ಆರೋಗ್ಯಕರವಾದ ಸಮತೋಲನವನ್ನು ಕಾದುಕೊಳ್ಳುವ ಕೆಲಸ. ಅಂತೆಯೇ ಇಂತಹ ಮನೋಧರ್ಮವು ನಮ್ಮ ಅನಿಸಿಕೆಗಳಿಗೆ ಹೊಂದಿಕೊಳ್ಳುವ ಬರವಣಿಗೆಯನ್ನು ಮತ್ತು ಅದನ್ನು ಮಾತ್ರ ಉತ್ತೇಜಿಸುವ ಧೋರಣೆಗೆ ಎಡೆ ಮಾಡಿಕೊಡುತ್ತದೆ.

ಸಾಹಿತ್ಯವು ಸಂತೋಷವಾಗಿ ಕಾಲಕಳೆಯಲು ನೆರವಾಗುವ ಸಾಮಗ್ರಿ, ಅದು ಮನೋರಂಜನೆ ಎಂಬ ತಿಳಿವಳಿಕೆಯು ಹಲವು ತಪ್ಪುಗಳಿಗೆ ಎಡೆ ಮಾಡಿಕೊಡುತ್ತದೆ. ಕಲೆಯು ಕೊಡುವ ಅನುಭವವು ಐಂದ್ರಿಯಿಕವಾದ ಸಂತೋಷ ಹಾಗೂ ಭಾವುಕವಾದ ಪ್ರತಿಕ್ರಿಯೆಗಳನ್ನು ಮೀರಿದ್ದು ಎಂಬ ತಿಳಿವಳಿಕೆಯನ್ನು ಜಾಗತೀಕರಣದ ಫಲವಾದ ಇಂಡಸ್ಟ್ರಿಗಳು ನಾಶಮಾಡುತ್ತಿವೆ. ಇಂಥ ನಿಲುವು ಸರಳೀಕರಣ ಹಾಗೂ ಥ್ರಿಲ್‌ಗಳನ್ನು ಮಾತ್ರ ಕೊಡುತ್ತದೆ. ನಮ್ಮ ಗ್ರಹಿಕೆಯ ಶಕ್ತಿಗೆ ಸವಾಲಾಗಿ ಆ ಮೂಲಕವೇ ನಮ್ಮನ್ನು ಅರಳಿಸುವ ಹಿಗ್ಗಿಸುವ ಬರವಣಿಗೆ ಬದಿಗೆ ಸರಿಯುವುದು ಇದರ ಫಲವಾದ ದುರಂತ. ಕನ್ನಡ ರಂಗಭೂಮಿಯು ಸೀರಿಯಲ್ಲುಗಳಿಗೆ ಸರಿಸಮನಾದ 'ರಂಜನೆ'ಯನ್ನು ಕೊಡುವ ದಿಕ್ಕಿನಲ್ಲಿ ಚಲಿಸುತ್ತಿರುವುದು ನನ್ನ ಮಾತಿಗೆ ಒಂದು ಸಾಕ್ಷಿ.


'ವಿಗ್ರಹ ನಿಯಂತ್ರಣ' ಎನ್ನುವ ಪರಿಕಲ್ಪನೆಯನ್ನು ಕೊಂಚ ವಿವರಿಸಬೇಕು. ನಾನು ವಿಗ್ರಹ ಎನ್ನುವ ಪದವನ್ನು ಐಕಾನ್ ಎನ್ನುವ ಅರ್ಥದಲ್ಲಿ ಬಳಸುತ್ತಿದ್ದೇನೆ. ಸಂಸ್ಕೃತಿಯು ಕೇವಲ ಕೆಲವು 'ನಾಯಕ'ರನ್ನು ಆರಿಸಿಕೊಂಡು ಉಳಿದವರನ್ನೆಲ್ಲ ಬದಿಗೆ ತಳ್ಳುವ ಪ್ರಕ್ರಿಯೆಯು ಸತತವಾಗಿ ನಡೆಯುತ್ತಿದೆ. ಇಂಥ ಆಯ್ಕೆಯು ಹುಸಿ ಮತ್ತು ದಿಟ ಮತ್ತು ಹುನ್ನಾರಗಳ ಮೇಲೆ ನಿಂತಿರುತ್ತದೆ. ಕುವೆಂಪು ಅವರು ಐಕಾನ್ ಆಗುವುದಕ್ಕೂ ನಮ್ಮ ಕಾಲದ 'ದೇಶಭಕ್ತ', 'ಪ್ರಗತಿಪರ', 'ಜನಪರ'ರು ಐಕಾನುಗಳಾಗುವುದಕ್ಕೂ ಅಜಗಜಾಂತರ ಇದೆ. ಇದಕ್ಕೆ ಎಡ ಬಲಗಳ ಅಂತರವೇನೂ ಇಲ್ಲ. 'ಜೈ ಶ್ರೀರಾಮ' ಎಂದವರೆಲ್ಲ ಧಾರ್ಮಿಕರಾಗುವುದಿಲ್ಲ. 'ನಾನು ನಕ್ಸಲ್', 'ನಾನೂ ಗೌರಿ' ಎಂಬ ಪ್ಲಕಾರ್ಡುಗಳನ್ನು ತಗುಲಿಹಾಕಿಕೊಂಡವರು ನಕ್ಸಲರೋ ಹುತಾತ್ಮರೋ ಆಗಿಬಿಡುವುದಿಲ್ಲ. ಎಷ್ಟೋ ಸಲ ಜಾಣ ಕುರುಡು ಜಾಣ ಕಿವುಡುಗಳು

ಇರುತ್ತವೆ. ಹೀಗಾದಾಗ 'ಕೃತಿ' (ಬರವಣಿಗೆ) ಹಿಂದೆ ಸರಿದು ವ್ಯಕ್ತಿ ಮುನ್ನೆಲೆಗೆ ಬರುತ್ತಾನೆ. ಹಿರಿಯ ಸಾಹಿತಿಗಳು, ಹಿರಿಯ ಚಿಂತಕರು ಹುಟ್ಟಿಕೊಳ್ಳುತ್ತಿರುವುದು ಹೀಗೆಯೇ. ಇವರಲ್ಲಿ ಹಲವರು ಮಾಜಿ ಸಾಹಿತಿಗಳು, ಕೆಲವರು ಅ–ಸಾಹಿತಿಗಳು. ಕೆಲವರು ಮಾತ್ರವೇ ಈ ಮಾತಿಗೆ ಅಪವಾದ. ಇವೆಲ್ಲವೂ ಆಧುನಿಕತೆಯ ಅಪಸವ್ಯಗಳೆಂದು ನಾನು ಹೇಳುತ್ತಿಲ್ಲ. ಆದರೂ ನಮ್ಮ ಕಾಲ ಇದಕ್ಕೆ ನೀರೆರೆಯುತ್ತಿದೆ.

ಜಾಗತೀಕರಣದ ಫಲಾನುಭವಿಗಳಾದ ದೇಶಗಳು/ಸಮುದಾಯಗಳು ಮತ್ತು ವರ್ಗಗಳು ತಮ್ಮ ರಕ್ಷಣೆಗಾಗಿ ರೂಪಿಸಿಕೊಂಡಿರುವ 'ಪೋಸ್ಟ್ ಮಾಡರ್ನ್' ಎಂದು ಕರೆಸಿಕೊಳ್ಳುವ ತಾತ್ವಿಕತೆಯು ಅತ್ಯಂತ ಅಪಾಯಕಾರಿಯಾದುದು. ಇದು ಜನಪರವಾದ ಎಲ್ಲ ನಿಲುವುಗಳನ್ನೂ, ಚಟುವಟಿಕೆಗಳನ್ನು ಅಪ್ರಸ್ತುತವಾಗಿಸುವ ಹುನ್ನಾರ. ಸತ್ಯವೆಂಬುದೇ ಸಾಪೇಕ್ಷವೆಂದು ಹೊರಟಾಗ ಕಣ್ಣೀರು ಕೂಡ ಕಾಣುವುದಿಲ್ಲ. ಇಂಥದೊಂದು ನಿಲುವು ನಮ್ಮ ಎದುರಿನಲ್ಲಿಯೇ ಬಹಳ ವ್ಯಾಪಕವಾಗಿ ಬೆಳೆಯುತ್ತಿರುವುದನ್ನು ನಾವೇ ನೋಡುತ್ತಿದ್ದೇವೆ. ಅಷ್ಟೇಕೆ, ಸ್ವತಃ ನಾವೇ ನಮಗೂ ತಿಳಿಯದಂತೆ ಹಾಗೆ ಆಗುತ್ತಿದ್ದೇವೆ. ಇದು ಕಲೆಯ ಶಕ್ತಿಯನ್ನು ಕುಂದಿಸುವ, ಅದರ ಪ್ರಯೋಜನಗಳನ್ನು ಇಲ್ಲವಾಗಿಸುವ ವಿಷವ್ಯೂಹ.

ಕಥೆ, ಕಾದಂಬರಿ, ನಾಟಕ ಮುಂತಾದ ಪ್ರಕಾರಗಳು ಪಡೆಯುತ್ತಿರುವ ಹೊಸ ಹುಟ್ಟುಗಳನ್ನು ಕುರಿತು ನಾನು ವಿವರವಾಗಿ ಚರ್ಚಿಸುತ್ತಿಲ್ಲ. ಆದರೆ, ನಾನು ನಾಳೆಗಳ ಬಗ್ಗೆ ನಿರಾಸೆ ತಳೆಯುವವನಲ್ಲ. ನಿಜವಾದ ಸೃಜನಶೀಲರು ಯಾವಾಗಲೂ ಕಡಿಮೆಯೇ. ಅಂಥವರು ಈಗಲೂ ಇದ್ದಾರೆ, ಮುಂದೆಯೂ ಬರುತ್ತಾರೆ. ಇಂದಿನ ಆಧುನಿಕತೆಯ ಒತ್ತಡಗಳನ್ನು ಮೀರಿಯೂ ಅವರು ಬರೆಯುತ್ತಾರೆ. ಭಾಷೆಯು ತನ್ನೊಳಗಡೆಯೇ ಇರುವ, ಬೆಳೆಯುತ್ತಿರುವ ಸೃಜನಶೀಲ ಸಾಧ್ಯತೆಗಳನ್ನು ಅನಾವರಣ ಮಾಡಿಕೊಳ್ಳುತ್ತದೆ. ಬೇಂದ್ರೆಯವರು ಹೇಳಿದಂತೆ ನನ್ನ ಕವನ ಅವನ ಕವನ ಎನ್ನುವುದು ದಿಟವಲ್ಲ. ಇವು ಕನ್ನಡದ ಕವನಗಳು. ಕನ್ನಡವು ತನ್ನನ್ನು ತಾನೇ ಬರೆಸಿಕೊಳ್ಳುತ್ತದೆ. ಈ ತಿಳಿವಳಿಕೆಯನ್ನು ಹೊಂದಿರುವ ಲೇಖಕರು ಈಗಲೂ ಬರೆಯುತ್ತಿದ್ದಾರೆ. ಇದು ಲೋಕದ ಬಗೆಗಿನ ಭರವಸೆ ಅಲ್ಲದಿದ್ದರೂ ಕಲೆಯ ಬಗೆಗಿನ ಭರವಸೆ.

'ಅನಿಕೇತನ'ನಾದ ವಿಶ್ವಮಾನವ ಎನ್ನುವುದು ಕುವೆಂಪು ಕಂಡ ಕನಸು. ಗ್ಲೋಬಲ್ ವಿಲೇಜ್ ಎನ್ನುವುದು ನಮ್ಮ ಕಾಲದ ಆಸೆಬುರುಕರು ಸೃಷ್ಟಿಸುತ್ತಿರುವ ಕೆಂಗನಸು. (ನೈಟ್ ಮೇರ್) ನಮ್ಮಲ್ಲಿ ಇವೆರಡರ ನಡುವೆ ವಿಚಿತ್ರವಾದ ಹಗ್ಗಜಗ್ಗಾಟ ನಡೆಯುತ್ತಿದೆ. ಯಾವ ಕಲಾವಿದರು ಯಾವುದರ ಕಡೆಯೋ ತಿಳಿಯಲಾರದ ಗೊಂದಲ ಇದೆ. 'ಕರುಣಾಳು ಬಾ ಬೆಳಕೇ..' ಎಂದು ಕರೆಯೋಣವೇ? ಅದು ದೇವರು ಕೊಡುವ ಬೆಳಕಲ್ಲ. ನಮ್ಮೊಳಗಡೆಯೇ ಮೂಡಬೇಕಾದ, ಸಮುದಾಯಗಳ ನಡುವೆಯೇ ಇದ್ದ/ಇರುವ ತಿಳಿವಳಿಕೆ.



(ನಿವೃತ್ತ ಕನ್ನಡ ಅಧ್ಯಾಪಕರಾದ, ಬೆಂಗಳೂರು ನಿವಾಸಿ ಎಚ್ಚೆಸ್ಸಾರ್ ಕನ್ನಡದ ಬಹುಮುಖ್ಯ ಸಾಹಿತ್ಯ ಚಿಂತಕರಲ್ಲೊಬ್ಬರು)

೧೯ನೇ ಪುಟದಿಂದ)

ಪರಿಕಲ್ಪನೆಗಳನ್ನು ಹೊಸ ಚೌಕಟ್ಟಿನಲ್ಲಿಟ್ಟು ಪುನರ್ ರೂಪಿಸುತ್ತವೆ. ಅದು ಸಿದ್ಧಾಂತದ ಪಲ್ಲಟವಲ್ಲ; ಸಿದ್ಧಾಂತದಲ್ಲಿ ಪಲ್ಲಟ ಸಂಭವಿಸುವುದಕ್ಕೆ ಅರ್ಥಗಳು ಸ್ಥಿರವಾಗಿರಬೇಕು. ತೀವ್ರ ಪಲ್ಲಟಗಳಲ್ಲಿ ಅರ್ಥಗಳೇ ಪರಿಷ್ಕರಿಸಲ್ಪಡುತ್ತವೆ. ಉದಾಹರಣೆಗೆ ಐನ್‌ಸ್ಟೀನ್‌ನ ಭೌತಶಾಸ್ತ್ರದ mass. ನ್ಯೂಟನ್‌ನ ಮೆಕ್ಯಾನಿಕ್ಸ್‌ನ ಅದೇ ಪರಿಕಲ್ಪನೆಗಿಂತ ಭಿನ್ನವಾದದ್ದು. ಆದರೆ ನ್ಯೂಟನ್‌ನ ಮೆಕ್ಯಾನಿಕ್ಸ್ ಅನ್ನು ಐನ್‌ಸ್ಟೀನ್‌ನ ಭೌತಶಾಸ್ತ್ರ ಪರಿಷ್ಕರಿಸುವುದಿಲ್ಲ. ಈ ಪಲ್ಲಟ ನಿಜಕ್ಕೂ ವಿಷಯವನ್ನು ಬದಲಾಯಿಸುತ್ತದೆಯೇ ಹೊರತು ಆ ವಿಷಯದ ಕುರಿತ ಸಿದ್ಧಾಂತವನ್ನೇನೂ ಮೇಲ್ದರ್ಜೆಗೇರಿಸುವುದಿಲ್ಲ. ಸ್ವಾತಂತ್ರ್ಯ ಮತ್ತು ಸಮಾನತೆಗಳ ವಿಷಯಕ್ಕೆ ಬರುವುದಾದರೆ, ಆ ಆದರ್ಶಗಳ ಕುರಿತು ನಮ್ಮ ಸಲಹೆಯೂ ಅದೇ. ಜ್ಞಾನ ಪುನರುಜ್ಜೀವನದ ಮೌಲ್ಯಗಳನ್ನು ಪರಿಷ್ಕರಿಸಲು ನಾವು ಯತ್ನಿಸಕೂಡದು. ಆ ಮೌಲ್ಯಗಳು ಅಯೋಗ್ಯ ಮತ್ತು ನಿರುಪಯುಕ್ತ ಆದರ್ಶಗಳನ್ನು ಅವಲಂಬಿಸಿರುವುದರಿಂದ [ಮಾರ್ಕ್ಸ್ ಅವನ್ನು ಬೂರ್ಜ್ವಾ ಆದರ್ಶಗಳು ಎಂದು ಜರಿಯುತ್ತಾನೆ] ನಾವು ಅವುಗಳನ್ನು ತ್ಯಜಿಸಿಬಿಡಬೇಕು.

ಈ ನುಡಿಗಟ್ಟುಗಳಲ್ಲಿ ಅರ್ಥಪಲ್ಲಟವನ್ನು ಹೇಗೆ ಸಾಧಿಸುವುದು ಎಂಬುದು ಮುಂದಿನ ಪ್ರಶ್ನೆ. ಆ ಕುರಿತು ನನ್ನ ಯೋಚನೆ ಏನೆಂದರೆ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಅವುಗಳ ನಡುವಣ ಬಿಕ್ಕಟ್ಟು ಮತ್ತು ಘರ್ಷಣೆ ಏನೇ ಇರಲಿ ಯುರೋಪಿನಲ್ಲಿ ಅವು ಹಿಂದೆ, ಐರೋಪ್ಯ ಆಧುನಿಕ ಯುಗದಲ್ಲಿ ಸ್ಥಾಪಿತವಾಗಿದ್ದ ಸೈದ್ಧಾಂತಿಕ ಕೇಂದ್ರದಿಂದ ಅವನ್ನು ಈಚೆಗೆಳೆದು, ಆ ಸ್ಥಾನದಲ್ಲಿ ಪರಕೀಯತೆಯಿಂದ ಮುಕ್ತವಾದ ಬದುಕಿನ ಪರಿಕಲ್ಪನೆಯನ್ನು ನೆಲೆಗೊಳಿಸಿದರೆ, ಆಗ ನಾವು ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಮರಳಿ ತರಬಹುದು[ಒಂಬಾಗಿಲಿನ ಮುಖಾಂತರ]. ಆದರೆ ಮೊದಲಿನಂತೆ ಸೈದ್ಧಾಂತಿಕ ಕೇಂದ್ರವನ್ನು ಹಿಡಿದುಕೊಂಡ ಮೌಲ್ಯಗಳಾಗಿ ಅಲ್ಲ; ಬದಲಿಗೆ ಆ ಕೇಂದ್ರದಲ್ಲಿ ಈಗ ಸ್ಥಾಪಿತವಾಗಿರುವ ಬಹುಮುಖ್ಯವಾದ ಪರಕೀಯತೆಯಿಂದ ಮುಕ್ತವಾದ ಬದುಕಿನ ಪರಿಕಲ್ಪನೆಗೆ ಅನುಕೂಲವಾದ ವಾತಾವರಣವನ್ನು ಕಲ್ಪಿಸುವ ಉದ್ದೇಶದಿಂದ ಈ ಸ್ಥಾನಪಲ್ಲಟವನ್ನು ನಾವು ಕೈಗೊಳ್ಳಬೇಕಾಗಿದೆ. ಈ ಕೆಲಸವನ್ನು ತಾವು ಸಮರ್ಪಕವಾಗಿ ನಿರ್ವಹಿಸಿದರೆ ಸ್ವಾತಂತ್ರ್ಯ ಮತ್ತು ಸಮಾನತೆಗಳು ಕೇಂದ್ರದಲ್ಲಿ ಸ್ಥಾಪಿತವಾಗಿದ್ದಾಗ ಅವುಗಳ ನಡುವೆ ತಲೆದೋರಿದ ಬಿಕ್ಕಟ್ಟು ಮತ್ತು ಘರ್ಷಣೆಯನ್ನು ತೊಡೆದುಹಾಕುವ ಸಾಧ್ಯತೆ ನಿಜಕ್ಕೂ ಉಜ್ವಲವಾಗಿರುತ್ತದೆ. ಈ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವುದು ಎಂದರೆ ಏನು? ಎಂಬುದರ ಮೇಲೆ ಎಲ್ಲವೂ ಅವಲಂಬಿಸಿದೆ. ನನ್ನ ಇತ್ತೀಚೆಗಿನ ಬಹುಪಾಲು ಸೈದ್ಧಾಂತಿಕ ಚಿಂತನೆ ಹಾಗೂ ಶ್ರಮ ಈ ಪ್ರಶ್ನೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಮೀಸಲಾಗಿದೆ. ಮುಂದೆ ನಾವು ನಿರ್ವಹಿಸಬೇಕಾದ ಮೊದಲ ಕರ್ತವ್ಯವೆಂದರೆ ಪರಕೀಯತೆ ಎಂದರೆ ಏನು ಎಂಬುದರ ಬಗ್ಗೆ ನಮ್ಮ ನಿಖರವಾದ ಅಭಿಪ್ರಾಯವನ್ನು ಮುಂದಿಡುವುದು. ಇದು ಯಾಕೆ ಅಗತ್ಯವೆಂದರೆ ಪರಕೀಯತೆಯಿಂದ ಮುಕ್ತವಾದ ಬದುಕಿನ ಆದರ್ಶವನ್ನು ಸಾಧಿಸುವುದು ಹೇಗೆ ಎಂಬುದರ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕು.

ಮೊದಲಿಗೆ ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕು. ನೀವು ಈ ಎರಡು ಆದರ್ಶಗಳ ನಡುವೆ ಇರುವ ದ್ವಂದ್ವ ಮತ್ತು ಬಿಕ್ಕಟ್ಟಿನ ಸಂಬಂಧದ ಕುರಿತು ಯೋಚಿಸತೊಡಗಿದರೆ ಪರಕೀಯತೆಯ ಪರಿಕಲ್ಪನೆ ತನ್ನ ಖಚಿತತೆಯನ್ನು ಕಳೆದುಕೊಂಡು ಅಸ್ಪಷ್ಟವಾಗುತ್ತದೆ. ಅದು ಯಾಕೆ?

ಪರಕೀಯತೆಯ ಕುರಿತ ಒಂದು ಸ್ವಾರಸ್ಯಕರವಾದ ಸಂಗತಿ ಎಂದರೆ ಅದರ ಎಲ್ಲ ಖ್ಯಾತ ಸೈದ್ಧಾಂತಿಕ ಚಿಂತಕರು. [ಅವರಲ್ಲಿ ಕೇವಲ ಕೆಲವರನ್ನು ಮಾತ್ರ ಹೆಸರಿಸುವುದಾದರೆ, ರುಸ್ಸೋ, ಮಾರ್ಕ್ಸ್, ಗಾಂಧಿ, ಸಾರ್ತ್ರೆ] ಈ ವಿಕಾರವನ್ನು ಆಧುನಿಕ ಯುಗದಲ್ಲಿ ಮಾತ್ರ ಗುರುತಿಸಿದರು. ಆಧುನಿಕಪೂರ್ವ ಕಾಲಘಟ್ಟದಲ್ಲಿ ಹಲವು ಗಂಭೀರ ಕೆಡುಕುಗಳು ಇದ್ದವು. ಆದರೆ ಆ ಪೈಕಿ ಪರಕೀಯತೆ ಒಂದಲ್ಲ. ಗುಲಾಮರು ಮತ್ತು ಪಾಳೆಯಗಾರಿ ಯುಗದ ಭೂಮಾಲಕರ ಆಳುಗಳು ಸಹ ತಮ್ಮ ಪರಿಸರ ಮತ್ತು ತಮ್ಮ ಒಡನಾಡಿಗಳ ಜೊತೆ ತಮ್ಮನ್ನು ಗುರುತಿಸಿಕೊಂಡಿದ್ದರು. ತಮ್ಮ ಹುಟ್ಟಿನ ಕಾರಣದಿಂದ ಅವರ ಬದುಕಿನಲ್ಲಿ ತಲೆದೋರಿದ ಸಮಸ್ಯೆಗಳು ಏನೇ ಇರಲಿ, ತಮ್ಮ ಪರಿಸರ ಮತ್ತು ಸಮುದಾಯದಿಂದ ಪರಕೀಯತೆ ಅವುಗಳಲ್ಲಿ ಸೇರಿರಲಿಲ್ಲ. ವಾಸ್ತವವಾಗಿ ಆಧುನಿಕ ಯುಗದ ಕೇಂದ್ರ ಆದರ್ಶಗಳನ್ನಾಗಿ ಸ್ವಾತಂತ್ರ್ಯ ಮತ್ತು ಸಮಾನತೆಯ ಆದರ್ಶಗಳನ್ನು ಅಳವಡಿಸಿಕೊಂಡದ್ದೇ ಈ ಕೊರತೆಗಳು, ದಾರಿದ್ರ್ಯ ಮತ್ತು ಗುಲಾಮಗಿರಿಗೆ ಭಾಗಶಃ ಪರಿಹಾರವನ್ನಾದರೂ ಕಂಡುಕೊಳ್ಳುವ ಉದ್ದೇಶದಿಂದ. ಆದರೆ ಈಗ ನನ್ನ ಪರಿಕಲ್ಪನೆಯ ಸ್ವಾತಂತ್ರ್ಯ ಮತ್ತು ಸಮಾನತೆಯ ಆದರ್ಶಗಳು ಎದುರಿಸುತ್ತಿರುವ ಬಿಕ್ಕಟ್ಟು ಮತ್ತು ಘರ್ಷಣೆಯ ಸ್ಥಿತಿಯಲ್ಲಿ ಪರಕೀಯತೆಯಿಂದ ಮುಕ್ತವಾದ ಬದುಕನ್ನು ಸಾಧಿಸಿಕೊಳ್ಳಲು ಅಗತ್ಯವೆಂದಾದರೆ ಅದು, ಆಧುನಿಕಪೂರ್ವ ಯುಗದ ಅದೇ ಆದರ್ಶಕ್ಕೆ ಎಷ್ಟು ಮಾತ್ರಕ್ಕೂ ಸರಿಹೊಂದುವುದಿಲ್ಲ. ಯಾಕೆಂದರೆ ಆಧುನಿಕಪೂರ್ವ ಯುಗದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗಳ ಪ್ರಜ್ಞೆಯೂ ಇರಲಿಲ್ಲ. ಹಾಗಾಗಿ ಪರಕೀಯತೆಯಿಂದ ಮುಕ್ತವಾದ ಬದುಕು ಎಂಬ ನುಡಿಗಟ್ಟನ್ನು ನಾವು ಬಳಸುವ ವಿಧಾನ ಸ್ಪಷ್ಟವೂ ಅಲ್ಲ; ಖಚಿತವೂ ಅಲ್ಲ.

ಈ ಸಮಸ್ಯೆಯನ್ನು ಬಗೆಹರಿಸಲು ಅಗತ್ಯವಾದ ಸೈದ್ಧಾಂತಿಕ ತಯಾರಿ ತುಂಬ ಮಹತ್ವಾಕಾಂಕ್ಷಿಯಾಗಿರುವಂತಹದ್ದು. ಅದು ಹೇಗೆಂದರೆ ನಾನು ಮೂರು ಸೈದ್ಧಾಂತಿಕ ಪರಿಕಲ್ಪನೆಗಳನ್ನು ಒಮ್ಮೆಗೇ ಪರಿವರ್ತಿಸಲು ಯತ್ನಿಸುತ್ತಿದ್ದೇನೆ. ಸ್ವಾತಂತ್ರ್ಯ ಮತ್ತು ಸಮಾನತೆಗಳ ಪರಿಕಲ್ಪನೆಗಳನ್ನು ಪರಿವರ್ತಿಸಲು ಅವುಗಳನ್ನು ಆಧುನಿಕ ಯುಗದ ಕೇಂದ್ರದಿಂದ ಹೊರತಂದು ಪರಕೀಯತೆಯಿಂದ ಮುಕ್ತವಾದ ಬದುಕಿನ ಆದರ್ಶದ ಅನಿವಾರ್ಯ ಅಗತ್ಯವನ್ನಾಗಿ ಮುಂದುವರಿಸಲು ಯತ್ನಿಸುತ್ತಿದ್ದೇನೆ. ಈಗ ನಾನು ಪರಕೀಯತೆಯ ಮುಕ್ತವಾದ ಬದುಕಿನ ಪರಿಕಲ್ಪನೆಯನ್ನು, ಆಧುನಿಕಪೂರ್ವ ಯುಗದಲ್ಲಿ ಅದು ಇದ್ದ ಸ್ಥಿತಿಯಿಂದ ಪರಿವರ್ತಿಸಲು ಹೆಣಗುತ್ತಿದ್ದೇನೆ. ಹಾಗಾಗಿ ಇದು ಒಂದು ತ್ರಿಕೋಣದ ಆಯಾಮಗಳನ್ನು ಪಡೆದ ಮೂರು ವಿಭಿನ್ನ ಪರಿಕಲ್ಪನೆಗಳ ಏಕಕಾಲದಲ್ಲಿ ಮೊಳಗಬೇಕಾದ ಪರಿವರ್ತನೆಯ ಒಂದು ಸ್ವರಮೇಳ.

(ಸಂದರ್ಶಕರಾದ ಜಿಪ್ಸನ್ ಜಾನ್ ಮತ್ತು ಜಿತೇಶ್ ಪಿ ಎಂ ಅವರು ನವದೆಹಲಿಯ ಟ್ರೈಕಾಂಟಿನೆಂಟಲ್ ಸಾಮಾಜಿಕ ಸಂಶೋಧನಾ ಸಂಸ್ಥೆಯ ಫೆಲೋಗಳಾಗಿದ್ದಾರೆ)

(ಕೃಪೆ: **ಜನತಾ**, ಜನವರಿ ೨೭, ೨೦೧೯)

ಕವಿ ಕಾವ್ಯ ವಿಚಾರ

ಕುಮಾರವ್ಯಾಸನ ಕೋಳಿವಾಡಕ್ಕೊಂದು ಭೇಟಿ

–ಕೃಷ್ಣಮೂರ್ತಿ ಹನೂರು

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು
ಭಾರತ ಕಣ್ಣಲಿ ಕುಣಿಯುವುದು
ಮೈಯಲಿ ಮಿಂಚಿನ ಹೊಳೆ ಹರಿಯುವುದು
–ಕುವೆಂಪು


೧೮೫೦ರ ಸುಮಾರಿನಿಂದ ೨೦೧೦ರವರೆಗೆ ಕುಮಾರವ್ಯಾಸನ ಕಾವ್ಯದ ಭಾಗ ಭಾಗಗಳು ದೇಶಿ, ವಿದೇಶಿ ವಿದ್ವಾಂಸರಿಂದ ಇಡಿಯಾಗಿಯೂ, ಬಿಡಿಬಿಡಿಯಾಗಿಯೂ ಅರವತ್ತಕ್ಕೂ ಮಿಕ್ಕ ಆವೃತ್ತಿಗಳು ಪ್ರಕಟವಾಗಿರುತ್ತವೆ. ಪಂಪನ ವಿಕ್ರಮಾರ್ಜುನ ವಿಜಯದ ಪ್ರತಿಗಳು ದೊರಕಿರುವುದು ಮೂರು ಮಾತ್ರವಾದರೆ, ಸಂಗ್ರಹವಾಗಿರುವ ಕುಮಾರವ್ಯಾಸನ ತಾಳೆಯೋಲೆಯ ಪ್ರತಿಗಳು ಸರಿ ಸುಮಾರು ನೂರ ಇಪ್ಪತ್ತಕ್ಕೂ ಹೆಚ್ಚು ಸಿಕ್ಕಿವೆ. ಶುದ್ಧ ಪ್ರತಿ ಪ್ರಕಟವಾಗುವುದರ ಮೊದಲೇ ತಾಳೆಗರಿ ಪ್ರತಿ ಮೂಲಕವೋ, ಕಲ್ಲಚ್ಚಿನ ಪ್ರತಿಯಿಂದಲೋ, ತದನಂತರ ಪ್ರಕಟವಾದ ಪುಸ್ತಕ ಪ್ರತಿಗಳಿಂದಲೋ ಕುಮಾರವ್ಯಾಸನು ಕರ್ನಾಟಕದಾದ್ಯಂತ ಓದಲ್ಪಟ್ಟದ್ದು ಮಾತ್ರ ಆಶ್ಚರ್ಯ ಹುಟ್ಟಿಸುತ್ತದೆ. ಬಹುಶಃ ಕನ್ನಡದ ಮತ್ತಾವ ಕವಿಗೂ ಈ ಬಗೆಯ ಓದು, ವ್ಯಾಖ್ಯಾನ, ಸಂಶೋಧನಾವಕಾಶ ಲಭಿಸಿರುವುದಿಲ್ಲವೆಂದೇ ಹೇಳಬೇಕು.

೨೦ನೇ ಶತಮಾನದ ಆದಿಯಿಂದಲೂ ಅನೇಕ ಸಂಘ ಸಂಸ್ಥೆಗಳು ಕುಮಾರವ್ಯಾಸನನ್ನು ಓದುವ ಸಲುವಾಗಿಯೇ ಕರ್ನಾಟಕದಾದ್ಯಂತ ಹುಟ್ಟಿಕೊಂಡಿದ್ದವು. ಚನ್ನರಾಯ ಪಟ್ಟಣದಲ್ಲಿ ೧೯೩೪ರಲ್ಲಿಯೇ ಕರ್ನಾಟಕ ಸಂಘವೊಂದು ಕುಮಾರವ್ಯಾಸ ಜಯಂತಿಯನ್ನು ಆಚರಿಸಿದ ದಾಖಲೆಯಿದೆ. ೧೯೫೬ರಲ್ಲಿ ಮೈಸೂರಿನಲ್ಲಿ ಕುಮಾರವ್ಯಾಸ ಗುರುಕುಲವನ್ನು ಆರಂಭಿಸಿದ ಸುಪ್ರಸಿದ್ಧ ಗಮಕಿ ಕೃಷ್ಣಗಿರಿ ಕೃಷ್ಣರಾಯರು ತಮ್ಮ ಸುತ್ತಮುತ್ತಲ ಆಸಕ್ತರಿಗೆ ಕುಮಾರವ್ಯಾಸನ ಓದನ್ನು ಗಮಕ ಮುಖೇಣ ಕಲಿಸುತ್ತಿದ್ದರು. ೧೯೧೧ರಲ್ಲಿ ಒಮ್ಮೆ ಮುಳಿಯ ತಿಮ್ಮಪ್ಪಯ್ಯ ಅವರ ಕಾವ್ಯವಾಚನ ಕೇಳಿದ ಅಮ್ಮೆಂಬಳ ಶ್ರೀನಿವಾಸ ಪೈಗಳು ಇವರನ್ನು ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ನೇಮಕಗೊಳ್ಳಲು ಕಾರಣರಾದರಂತೆ. ಅಂದರೆ ಗಮಕವಾಚನವೇ ಮುಳಿಯ ತಿಮ್ಮಪ್ಪಯ್ಯನವರಿಗೆ ಉದ್ಯೋಗ ಕೊಡಿಸಿತು!

ಇದು ೧೯೩೪ರ ಸಂಗತಿ. ಮೈಸೂರಿನಲ್ಲಿದ್ದ ಕುವೆಂಪು ಅವರು ಆಗಾಗ ಶಿವಮೊಗ್ಗದ ತೀರ್ಥಹಳ್ಳಿ, ಕುಪ್ಪಳಿ ಕಡೆ ಹೋದಾಗ ಮೈಸೂರಿನ ಪ್ರಸಿದ್ಧ ಗಮಕಿಗಳಾದ ಕೃಷ್ಣರಾಯರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರಂತೆ. ಅವರು 'ಅದ್ಭುತವಾಗಿ ಭಾರತ ವಾಚನ ಮಾಡಿದರು. ಆಗಲೇ ನಾನು 'ಹಾಡಿದನು ಗಮಕಿ, ನಾಡು ನಲಿದುದು ರಸದ ಕಡಲಿನಲಿ ಧುಮುಕಿ....' ಎಂದು ಪ್ರಾರಂಭವಾಗುವ ಅಸಮ ಪಂಕ್ತಿ ಛಂದಸ್ಸಿನ ಕವನ ರಚನೆ ಮಾಡಿದೆ' ಎನ್ನುತ್ತಾರೆ. ಕೃಷ್ಣರಾಯರು ೧೯೩೪ರ ವೇಳೆ ಮಹಾರಾಜಾ ಕಾಲೇಜಿನಲ್ಲಿ ಗ್ರಂಥ ಭಂಡಾರಿಯಾಗಿದ್ದರು. ಆಗ ಕಾಲೇಜಿನ ಪ್ರಾಂಶುಪಾಲರಾಗಿದ್ದ ಜೆ.ಸಿ.ರಾಲೋ ಅವರಿಗೆ ಕನ್ನಡದಲ್ಲಿ ಬೇರೆಬೇರೆಯ ರಾಗಗಳ ಷಟ್ಪದಿಗಳನ್ನು ಓದಿ ಇಂಗ್ಲಿಷಿನಲ್ಲಿ ಅರ್ಥ ಮಾಡಿಸಿ ಹೇಳುತ್ತಿದ್ದರಂತೆ.

ಹರಿಕಥೆಯವರಾಗಿದ್ದ ಭದ್ರಗಿರಿ ಕೇಶವದಾಸರು ವಿದೇಶದಲ್ಲಿ ಕುಮಾರವ್ಯಾಸನ ಕರ್ಣ ಪರ್ವವನ್ನು ಕನ್ನಡದಲ್ಲಿ ಹಾಡಿ ಇಂಗ್ಲಿಷಿನಲ್ಲಿ ವ್ಯಾಖ್ಯಾನ ಮಾಡುತ್ತಿದ್ದರಂತೆ. ಇಂಥ ಕವಿಯು ಹುಟ್ಟಿ ಬೆಳೆದ ಪ್ರದೇಶ ಇನ್ನೆಂಥ ಚಂದ್ರಲೋಕದಲ್ಲಿರಬಹುದೆಂದು ಹುಬ್ಬಳ್ಳಿಯ ಸ್ಟ್ಯಾಂಡಿಗೆ ಬರುವಲ್ಲಿ ಬೆಳಗಿನ ೧೦ ಗಂಟೆಯಾಗಿತ್ತು. ಅಲ್ಲಿಯೇ ಇದ್ದ ಒಬ್ಬ ಅಜ್ಜನನ್ನು ಕೋಳಿವಾಡಕ್ಕೆ ಹೋಗುವ ಬಸ್ಸು ಎಷ್ಟು ಹೊತ್ತಿಗೆ ಬರುವುದೆಂದು ಕೇಳಿದೆ. ಅಜ್ಜ 'ಕೋಳಿಂಗನ ಪುರ ಅಲ್ಲೇನ್ರೀ. ಇದೀಗ ಬರತೈತ್ರಿ' ಅಂದ. ನಾನು ಕೇಳಿದ ಊರು ಬಿಟ್ಟು ಈ ಅಜ್ಜ ಹೇಳಿದ ಬಸ್ಸು ಹಿಡಿದರೆ ದಾರಿ ತಪ್ಪಿದಂತೆಯೇ ಸರಿ ಎಂದು ಕಂಡಕ್ಟರನಲ್ಲಿ ವಿಚಾರಿಸಿದೆ. ಕಂಡಕ್ಟರನು ಶಿರಹಟ್ಟಿಯ ಕಡೆ ಬಸ್ಸು ಇದೀಗ ಬರಲಿದೆ ಎಂದ. ಕೋಳಿಂಗನಪುರದ ಬಸ್ಸೋ, ಕೋಳಿವಾಡದ ಬಸ್ಸೋ ಅನುಮಾನವಾಗಿ ಇನ್ನೂ ಒಬ್ಬಿಬ್ಬರನ್ನು ವಿಚಾರಿಸುವಲ್ಲಿ, ಬಂದ ಬಸ್ಸು ಕವಿಯ ಊರಿನ ಕಡೆಗೆ ಹೋಗುತ್ತದೆಂದು ಗ್ಯಾರಂಟಿ ಮಾಡಿಕೊಂಡು ಹತ್ತಿದೆ.

ಹುಬ್ಬಳ್ಳಿ–ಗದಗು ಮುಖ್ಯರಸ್ತೆಯಲ್ಲಿ ಹೋಗುತ್ತ ಶಿರಹಟ್ಟಿಯ ಅಡ್ಡರಸ್ತೆ ಹಿಡಿದು ಐದು ಕಿ.ಮೀ. ಸರಿದರೆ ಸುಮಾರು ಎಂಟು ಸಾವಿರ ಜನಸಂಖ್ಯೆಯ ಕೋಳಿವಾಡ ಗ್ರಾಮ ಸಿಗುತ್ತದೆ. ಇದು ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆಗೆ ಸೇರಿದೆ. ಇಲ್ಲಿ




ಕುಮಾರವ್ಯಾಸನು ವಾಸ ಮಾಡುತ್ತಿದ್ದನೆಂದು ಹೇಳಲಾಗುವ ಮನೆ ಮತ್ತು ಅದರಲ್ಲಿನ ಕುಮಾರವ್ಯಾಸನ ಚಿತ್ರ

ಲಿಂಗಾಯತರು, ಕುಂಬಾರರು, ಬಣಜಿಗಶೆಟ್ಟರು, ಮಡಿವಾಳರು, ವಾಲ್ಮೀಕಿ ನಾಯಕರು, ಕುರುಬರು, ದಲಿತರು, ಬೋವಿಗಳು, ಹರಿಣ ಶಿಕಾರಿಗಳು ಇದ್ದಾರೆ. ಹರಿಣ ಶಿಕಾರಿಗಳು ಎಂದರೆ ಬಹುಮಟ್ಟಿಗೆ ಹಕ್ಕಿಪಿಕ್ಕಿಯವರು ಇರಬೇಕು.. ಜತೆಗೆ ಮುಸ್ಲಿಮರ ಐವತ್ತು ಕುಟುಂಬಗಳಿವೆ. ಹಿಂದೂ, ಮುಸ್ಲಿಂ ನಡುವಣ ಗದ್ದಲ ಎಂದೂ ಆಗಿಲ್ಲವೆಂದು ಜನ ಹೇಳಿದರು. ಊರ ಬಸ್‌ಸ್ಟಾಂಡಿನ ಬಳಿ ಇರುವ ಮುಸಲ್ಮಾನರ ಹೋಟೆಲಿಗೆ ಊರ ಇತರೇ ಜಾತಿಮತಸ್ಥರು ತಿಂಡಿ, ಕಾಫಿಗಾಗಿ ಹೋಗುವುದುಂಟು.

ಬಸ್‌ಸ್ಟ್ಯಾಂಡಿನಲ್ಲಿ ಇಳಿದು ಹೋಟೆಲ್ ಬಳಿ ಕವಿ ಮನೆಯ ದಾರಿಗಾಗಿ ಕೇಳಿದೆ. ಅಲ್ಲೇ ಟೀ ಕುಡಿಯುತ್ತಿದ್ದವರೊಬ್ಬರು ಊರ ಓಣಿಯ ಕಡೆ ಓಡುತ್ತಿದ್ದ ಹುಡುಗನನ್ನು 'ಲೇ ಮಡಿವಾಳಿ ಬಾರಲೇ ಇಲ್ಲಿ, ಇವರಿಗೆ ಕವಿ ಮನೆ ತೋರಿಸು' ಎಂದರು. ಹುಡುಗ ಸಣ್ಣ ಓಣಿಯಲ್ಲಿ ಸ್ವಲ್ಪ ದೂರವಷ್ಟೇ ಕರೆದುಕೊಂಡು ಹೋಗಿ ಅಲ್ಲೇ ಒಂದು ಕಡೆ ಪಾಳುಬಿದ್ದ, ಇನ್ನೊಂದು ಕಡೆ ಸುಮಾರಾಗಿ ಚೆನ್ನಾಗಿದ್ದ ಹಳೆಯ ತಾರಸಿ ಮನೆ ತೋರಿಸಿದ. ಅಕಸ್ಮಾತಾಗಿ ದತ್ತಾತ್ರೇಯ ಪಾಟೀಲರು ಮನೆಯಲ್ಲೇ ಇದ್ದರು. ಪಾಟೀಲರು ಕುಮಾರವ್ಯಾಸನ ಹದಿನೈದನೇ ತಲೆಮಾರಿನವರಂತೆ.

ಅವರ ಮನೆಯ ಪಕ್ಕಕ್ಕೆ ಇದ್ದ ಕುಮಾರವ್ಯಾಸನ ಚಿತ್ರಪಟ, ತಾಳೆಗರಿ ಹಸ್ತಪ್ರತಿ ಮತ್ತು ಬಖೈರು ಇರುವ ಖಾಲಿ ಮನೆಯ ಬೀಗ ತೆರೆದರು. ಅದರ ಒಳಭಾಗ ಆಗಾಗ ಜನ ಬಂದು ನೋಡುವುದರಿಂದಲೋ ಏನೋ ಸ್ವಚ್ಛವಾಗಿಯೇ ಇತ್ತು. ಎಲ್ಲಕ್ಕಿಂತ ಮುಖ್ಯ ಗಾಜಿನ ಪೆಟ್ಟಿಗೆಯಲ್ಲಿರಿಸಿದ ಹಸ್ತಪ್ರತಿಯೊಂದನ್ನು ಇದು ಕವಿಯದೇ ಎಂದು ಪಾಟೀಲರು ತೋರಿಸಿದರು. ಅದರ ಸ್ವರೂಪವನ್ನು ನೋಡಿದರೆ ಇದ್ದರೂ ಇರಬಹುದೇನೋ ಎನಿಸಿತು. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗಡೆ ಅವರು ಅದನ್ನು ತಮ್ಮ ತಾಳೆಯೋಲೆಯ ಸಂಗ್ರಹಾಲಯದ ವತಿಯಿಂದ ಶುದ್ಧ ಮಾಡಿಸಿ, ಬಟ್ಟೆಯಲ್ಲಿ ಸುತ್ತಿಸಿ ಇದ್ದುದರಲ್ಲಿ ರಕ್ಷಣೆ ಒದಗಿಸಿ ಕೊಟ್ಟಿರುತ್ತಾರೆ ಎಂದರು ಪಾಟೀಲರು. ಈಗ ಇರುವಂತೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಮತ್ತು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿರುವ ತಾಳೆಗರಿಯ ಪ್ರತಿಗಳು ಅತ್ಯಂತ ಹಳೆಯವು. ಒಂದು ಸಾವಿರದ ಐನೂರ ಐವತ್ತರದು. ಇನ್ನೊಂದು ಸಾವಿರದ ಐನೂರ ಮೂವತ್ತರಲ್ಲಿ ಪ್ರತಿಯಾದುದು. ಆಮೇಲೆ ಪಾಟೀಲರು ೧೯೫೮ರಲ್ಲಿ ತಮ್ಮ ಮನೆತನದ ಬಖೈರೊಂದನ್ನು ತೋರಿಸಿದರು. ಅದು ಸುಮಾರು ೩೦ ಪುಟಗಳಷ್ಟಿತ್ತು. ಅಲ್ಲೇ ಒಂದು ಘಳಿಗೆ ಅದರ ಮೇಲೆ ಕಣ್ಣಾಡಿಸಿದೆ. ಅದರೊಳಗೆ ಕುಮಾರವ್ಯಾಸನ ತಾತ ಚಿನ್ನದ ಕೈ ಮಾಧವರಸನು ಹುಣಸಗಿ ದೇವಲಾಪುರದ ಕಡೆಯಿಂದ ಬಂದು ಕೋಳಿಂಗನಪುರವನ್ನು ಹನ್ನೆರಡು ಸಾವಿರ ವರಹಕ್ಕೆ ವೆಂಕಟರಸಯ್ಯನಿಂದ ಕೊಂಡುಕೊಂಡನಂತೆ. ಬಖೈರಿನಲ್ಲಿ ಕೋಳಿವಾಡದ ಮೂಲ ಹೆಸರು ಇದ್ದುದನ್ನು ಕಂಡು ಎಲಾ ಹುಬ್ಬಳ್ಳಿಯ ಬಸ್ ಸ್ಟ್ಯಾಂಡಿನಲ್ಲಿ ನಾನು ಕೋಳಿವಾಡ ಎಂದು ಕೇಳಿದ್ದನ್ನು ಆ ಅಜ್ಜ ಸರಿಯಾಗಿಯೇ ಕೋಳಿಂಗನಪುರವೆಂದು ಉಚ್ಚರಿಸಿದ್ದನಲ್ಲ ಎನಿಸಿತು!

ಗೋವಿಂದ ಪೈ ಅವರು ಕುಮಾರವ್ಯಾಸನ ಕಾಲವನ್ನು ನಿಗದಿಗೊಳಿಸಿದ ನಂತರದಲ್ಲಿ ಕವಿ ಮನೆತನದವರು ಬಖೈರನ್ನು ಪ್ರಕಟಿಸುತ್ತಾರೆ. [illegible] ರಲ್ಲಿ ಪ್ರಕಟವಾದ ಈ ವಂಶಾವಳಿ ಬಖೈರು ಗೋವಿಂದ ಪೈ ಅವರ ಗಮನಕ್ಕೆ ಬಂದಂತಿಲ್ಲ. ಈ ಕಿರು ಪುಸ್ತಕದ ಪ್ರಕಾರ ಕುಮಾರವ್ಯಾಸನ ಮೂಲಪುರುಷನಾದ ಚಿನ್ನದ ಕೈ



ಗದಗಿನ ಭಾರತದ ಮೂಲ ಹಸ್ತಪ್ರತಿ

ಮಾಧವರಸನು ರಾಜಾ ನರಸಿಂಗರಾಯನಲ್ಲಿ ದಂಡಾಳುವೂ ಅಂಗರಕ್ಷಕನೂ ಆಗಿದ್ದನಂತೆ.

ಅದೇ ಬಖೈರಿನಲ್ಲಿ ಚಿನ್ನದ ಕೈ ಮಾಧವರಸನ ೧೫ ತಲೆಮಾರಿನ ಸಂತಾನದ ವಿವರವೂ ಇದೆ. ಅಗ್ಗಳಿಕೆಯ ವ್ಯಕ್ತಿಯಾದ ಮೂಲಪುರುಷ ಚಿನ್ನದ ಕೈ ಮಾಧವರಸಯ್ಯ, ಈತನ ಮಗ ತಿರುಮಲಯ್ಯ, ಇವನ ಮಗ ಲಕ್ಕರಸಯ್ಯ. ಈತನಿಗೆ ಐದು ಮಂದಿ ಮಕ್ಕಳು. ಮೊದಲನೆಯವ ವೀರನಾರಾಯಣಯ್ಯ, ತದನಂತರ ಕೃಷ್ಣರಸಯ್ಯ, ಶಂಕರಸಯ್ಯ, ತಿಮ್ಮರಸಯ್ಯ ಮತ್ತು ಅಶ್ವತ್ಥರಸಯ್ಯ.

ಈಗ ಕೋಳಿವಾಡದಲ್ಲಿರುವ ದತ್ತಾತ್ರೇಯ ಪಾಟೀಲರು ತಮ್ಮದು ಕುಮಾರವ್ಯಾಸನ ನಂತರದ ಹದಿನೈದನೆಯ ತಲೆಮಾರು ಎನ್ನುತ್ತಾರೆ. ಚಿನ್ನದ ಕೈ ಮಾಧವರಸನು ಕೋಳಿವಾಡ ಉಂಬಳಿಯನ್ನು ಕೊಂಡಾಗ ತಮ್ಮ ಮನತನಕ್ಕಿದ್ದ ಭೂಮಿ ಸುಮಾರು ಸಾವಿರದ ಆರುನೂರು ಎಕರೆ. ಅದು ಕಾಲಾನುಕಾಲದಲ್ಲಿ ವಂಶಸ್ಥರಿಗೆಲ್ಲ ಭಾಗವಾಗುತ್ತ ಇದೀಗ ತಮ್ಮ ಪಾಲಿಗೆ ಉಳಿದಿರುವ ಭೂಮಿ ಇಪ್ಪತ್ತು ಎಕರೆ ಎನ್ನುತ್ತಾರೆ. ಈಗಲೂ ಅಲ್ಲಿರುವ ಕುಮಾರವ್ಯಾಸನ ಹದಿನೈದನೇ ತಲೆಮಾರಿನಲ್ಲಿ ಮೂರ್‍ನಾಲ್ಕು ಕುಟುಂಬಗಳ ಭೂಮಿ ಆಸ್ತಿ ಒಟ್ಟು ಮುನ್ನೂರೈವತ್ತು ಎಕರೆ. ಹದಿನೈದು ತಲೆಮಾರಿನಲ್ಲಿ ಸುಮಾರು ನಾಲ್ಕು ಜನ ವೀರನಾರಾಯಣ ಗೌಡರುಗಳು ಆಗಿಹೋಗಿದ್ದಾರೆ. ದತ್ತಾತ್ರೇಯ ಪಾಟೀಲರೊಡನೆ ಕೋಳಿವಾಡ ಗ್ರಾಮದಲ್ಲಿ ಒಂದು ಸುತ್ತು ಹೊರಡುವಲ್ಲಿ ಎದುರಾದ ಜನ ಅವರನ್ನು ಏನು ಗೌಡರೇ ಆರಾಮವೇ ಎನ್ನುತ್ತಿದ್ದರು.

ಗ್ರಾಮದಲ್ಲಿರುವ ಮಾಧವ ಜನಾರ್ದನ ದೇವಾಲಯದ ನಿರ್ಮಾಣವನ್ನು ಕುಮಾರವ್ಯಾಸನ ತಂದೆ ಲಕ್ಕರಸಯ್ಯನು ಮಾಡಿಸಿದ್ದಾಗಿ ಬಖೈರಿನಲ್ಲಿ ಪ್ರಸ್ತಾಪವಿದೆ. ಈ ಮಾಧವ ಜನಾರ್ಧನ ದೇವಾಲಯದ ವಿಗ್ರಹವು ಪೂರ್ಣವಾಗಿ ಗದುಗಿನ ವೀರನಾರಾಯಣ ವಿಗ್ರಹವನ್ನೇ ಹೋಲುತ್ತದೆ ಮತ್ತು ಪೀಠದಲ್ಲಿ ಹೊಯ್ಸಳ ಲಾಂಛನ ಸಿಂಹಮುಖವಿದೆ. ದೇವಾಲಯದ ಕಂಬದಲ್ಲಿರುವ ಶಾಸನದಲ್ಲಿ ಉಲ್ಲೇಖವಾಗಿರುವ ಆನೆ ದೇವಪ್ಪಯ್ಯನ ಹೆಸರು ಈ ಮನೆತನದವರ ಬಖೈರಿನಲ್ಲಿಯೂ ಪ್ರಸ್ತಾಪವಾಗಿರುತ್ತದೆ. ಈತ ಕುಮಾರವ್ಯಾಸನ ಮೊಮ್ಮಗ. ಈ ದೇವಪ್ಪಯ್ಯ ದೇವರಿಗೆ ಕಾಣಾಚಿ ಪಾತ್ರದವಳಾಗಿ ಹೆಣ್ಣೊಬ್ಬಳನ್ನು ದಾನ ಮಾಡಿದ್ದು ಪುಷ್ಯಮಾಸದ ಹುಣ್ಣಿಮೆಯಲ್ಲಿ. ಕುಮಾರವ್ಯಾಸನ ಜಯಂತಿಯ ಉತ್ಸವವೂ ಇದೇ ಪುಷ್ಯ ಮಾಸದ ಹುಣ್ಣಿಮೆಯಲ್ಲಿ ಈಗಲೂ ಕೋಳಿವಾಡದಲ್ಲಿ ಜರುಗುತ್ತ ಇದಕ್ಕೆ ಹೊರಗೆ ಇರುವ ಈ ಮನೆತನದ ಮುನ್ನೂರು ನಾನೂರು ಜನ ಬಂದು ಸೇರುವರು. ೧೯೦೦ರ ಸುಮಾರಿನಲ್ಲಿ ನಲವತ್ತು ಕುಟುಂಬಗಳ ಅಗ್ರಹಾರವಾಗಿದ್ದ ಇದು ಈಗ ಅಲ್ಲಿ ಕೇವಲ ಮೂರ್‍ನಾಲ್ಕು ಕುಟುಂಬಗಳು ಮಾತ್ರ ಉಳಿದುಕೊಂಡಿರುತ್ತವೆ.

ಊರ ಪೂರ್ವಕ್ಕೆ ಇರುವ ಮಹಾಮಾಯಿ ಹಬ್ಬ ಉತ್ಸವಗಳಲ್ಲಿ ಮುಸ್ಲಿಮರು ಭಾಗವಹಿಸುವುದಿದೆ. ದಸರಾ ನವರಾತ್ರಿಯ ವೇಳೆ ಬನ್ನಿ ಸ್ವೀಕರಿಸುತ್ತಾರೆ. ಗ್ರಾಮದೇವತೆ ಮಹಾಮಾಯಿಯ ಗುಡಿಯ ಮುಂದೆ ಶಿರಹಟ್ಟಿ ಫಕೀರೇಶ್ವರರು ಆ ದೇವತೆಯಿಂದ ಆಶೀರ್ವಾದ ಪಡೆಯುತ್ತಿರುವ ಬಹುದೊಡ್ಡ ಗಾತ್ರದ ಬಣ್ಣದ ಚಿತ್ರಪಟವಿದೆ. ಊರ ಹೊರವಲಯದಲ್ಲಿ ಕುಮಾರವ್ಯಾಸ ಸ್ಮಾರಕ ಭವನವೂ ನಿರ್ಮಾಣವಾಗಿದೆ. ಇಡಿ ಗ್ರಾಮ ಜೀವನ ನಿರ್ವಹಣೆಗಾಗಿ ವ್ಯವಸಾಯವನ್ನು ಅವಲಂಬಿಸಿದೆ. ಊರ ಸುತ್ತಿನಲ್ಲಿರುವುದು ಕಪ್ಪು ಮಣ್ಣಿನ ಸಾರವತ್ತಾದ ನೆಲ. ಮೂರು ಮಳೆಯಾದರೂ ಸಾಕು ಸಮೃದ್ಧ ಜೋಳ, ಶೇಂಗಾ ಬೆಳೆ ಆಗುತ್ತದೆ.

ಕೋಳಿವಾಡ ಸನಿಹದ ಗದುಗು ಪಟ್ಟಣ ಶತಶತಮಾನಗಳಿಂದಲೂ ಒಂದು ಸಾಂಸ್ಕೃತಿಕ, ಜಾಗೃತ ಪ್ರದೇಶದಂತೆ ತೋರುತ್ತದೆ. ಕನ್ನಡದ ಪ್ರಮುಖ ಜೈನ, ವೈಷ್ಣವ, ವೀರಶೈವ ಕವಿಗಳು ಬಂದದ್ದು ಈ ಪ್ರದೇಶದಲ್ಲೇ. ಹುಬ್ಬಳ್ಳಿಯಿಂದ ಗದುಗಿಗೆ ಹೋಗುವ ಮುಖ್ಯರಸ್ತೆಯಲ್ಲೇ ಕುಮಾರವ್ಯಾಸನ ಕೋಳಿವಾಡ, ಪಂಪನ ಅಣ್ಣಿಗೇರಿ, ಚಾಮರಸನ ನಾರಣಪುರ ಮತ್ತು ಗದುಗಿನ ಪೂರ್ವಕ್ಕೆ ಅತ್ತಿಮಬ್ಬೆಯ ಆಶ್ರಯದಲ್ಲಿದ್ದ ರನ್ನನ ಸ್ಥಳ ಲಕ್ಕುಂಡಿ ಇವೆಲ್ಲವು ಒಂದೊಂದರ ಸನಿಹದಲ್ಲೇ ಇವೆ. ಅತ್ತಿಮಬ್ಬೆ ಮತ್ತು ರನ್ನ ಜೀವಿಸಿದ್ದ ಮುನ್ನೂರು ವರ್ಷಗಳ ನಂತರ ಲಕ್ಕುಂಡಿ ಮತ್ತು ಗದುಗಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕುಮಾರವ್ಯಾಸನು ನೋಡಿರಬೇಕು.

ಸೇವುಣರ ಕಾಲಕ್ಕೆ ಗದುಗು ಪ್ರದೇಶ ಒಂದು ದೊಡ್ಡ ಅಗ್ರಹಾರವಾಗಿತ್ತು, ಅಲ್ಲಿಯ ವೀರನಾರಾಯಣನ ದೇವಾಲಯವು ಸೇವುಣರ ಸಿಂಘಣನ ಕಾಲದಲ್ಲೇ ಇದ್ದಿತ್ತೆನ್ನುತ್ತಾರೆ ಸಂಶೋಧಕರು. ಆ ಕಾಲದ **ಅಸ್ತಿ ದಕ್ಷಿಣಾಪಥೇ ಬೆಳ್ವಲ ತ್ರಿಶತ ಮಧ್ಯೆ** ಎಂದು ಆರಂಭವಾಗುವ ಗದುಗಿನ ಒಂದು ಶಾಸನದಲ್ಲಿ ಪ್ರಸ್ತಾಪವಾಗಿರುವ **'ಕೃತುಕವೇ'** ಗದುಗು ಪಟ್ಟಣದ ಮೂಲನಾಮಧೇಯ ಎಂದಿದ್ದಾರೆ.

ಕೋಳಿವಾಡದ ಕುಮಾರವ್ಯಾಸನ ಮನೆತನದವರಿಗೆ ಗದುಗಿನ ವೀರ ನಾರಾಯಣ ಈಗಲೂ ಕುಲದೇವರು, ಮನೆದೇವರು. ದೇವಾಲಯ ಒಳಗೆ ಇರುವ ಕುಮಾರವ್ಯಾಸನ ಕೊಳದಲ್ಲಿ ಈಗಲೂ ನೀರಿದೆ. ಇಲ್ಲಿಯ ಜನ ಹೇಳುವುದೆಂದರೆ ಗದುಗು ಪಟ್ಟಣದಿಂದ ಮುಂಡರಗಿಗೆ ಹೋಗುವ ರಸ್ತೆಯ ಕಡೆ ಭೀಷ್ಮನ ಕೆರೆ ಇದೆ. ಅಲ್ಲಿ ನೀರಿನ ವಸತಿ ಸ್ವಲ್ಪ ಇದ್ದರೂ ಸಾಕು ಗದುಗಿನ ಕೊಳವೆ ಬಾವಿ, ಇನ್ನಿತರ ಕೆರೆಗಳಲ್ಲಿ ನೀರಿನ ವಸತಿ ಇರುತ್ತದಂತೆ. ಅಂತೆಯೇ ವೀರ ನಾರಾಯಣನ ಗುಡಿಯ ಒಳಗಿನ ಕುಮಾರವ್ಯಾಸನ ಕೊಳದಲ್ಲಿ ನೀರು ಇರುತ್ತದೆ. ದೇವಾಲಯದ ಕಟ್ಟಡ ವಿಜಯನಗರೋತ್ತರ ರಚನೆ ಎನಿಸುತ್ತದೆ. ಆದರೆ ಇದು ಚಾಲುಕ್ಯರ ಕಾಲಕ್ಕೆ ನಿರ್ಮಾಣವಾಗಿ ಕ್ರಮೇಣ ಯುದ್ಧದ ದಾಳಿಗಳಲ್ಲಿ ನಾಶವಾಗಿರಬೇಕು. ಬಿದ್ದುಹೋದ ಗುಡಿಯನ್ನು ಮತ್ತೆ ಪುನರ್ನಿರ್ಮಿಸಿರುವುದರಿಂದ ಇದು ೧೫ನೇ ಶತಮಾನದ ರಚನೆಯಂತೆ ತೋರುತ್ತದೆ. ಈ ಬಗೆಯ ಒಂದೇ ಮಾದರಿಯ, ಒಂದೇ ಕಾಲದ ರಚನೆಗಳು ಕರ್ನಾಟಕದಲ್ಲಿ ಹಲವು ಕಡೆ ಕಾಣಿಸುತ್ತವೆ. ಆದರೆ ವೀರನಾರಾಯಣನ ದೇವಾಲಯವು ತುಂಬ ಪ್ರಾಚೀನ ಕಾಲದ್ದು, ಚಾಲುಕ್ಯರು ನಿರ್ಮಿಸಿದ್ದು ಎಂಬುದಕ್ಕೆ ಸಾಕ್ಷಿಯಾಗಿ ಗುಡಿಯ ದಕ್ಷಿಣ ಭಾಗದ ಚಾಲುಕ್ಯ ಶೈಲಿಯ ಬಳಪದ ಕಲ್ಲಿನ ನಿರ್ಮಾಣ ದ್ವಾರ ಶಿಥಿಲ ಸ್ವರೂಪದಲ್ಲಿದೆ.



ಮಾಧವ ಜನಾರ್ದನ ಗುಡಿ


ಕಳೆದ ನಲವತ್ತು ವರ್ಷಗಳಿಂದ ಗದುಗಿನ ನಾಲ್ಕು ಪ್ರಾಚೀನ ಹಿಂದೂ ದೇವಾಲಯಗಳು ಮತ್ತು ಜುಮ್ಮಾ ಮಸೀದಿ ಸೇರಿದಂತೆ ಒಂದು ಪಂಚಸಮಿತಿ ಇತ್ತು. ಈ ದೇವಾಲಯ ನಿರ್ವಹಣಾ ಸಮಿತಿಯಲ್ಲಿ ಸಹಜವಾಗಿಯೇ ಮುಸ್ಲಿಮರೂ ಇದ್ದರಂತೆ. ಈಗ ಎರಡು ವರ್ಷಗಳಿಂದ ನಾಲ್ಕು ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರಿ, ಜುಮ್ಮಾ ಮಸೀದಿಯೂ ವಕ್ಫ್ ಮಂಡಳಿಗೆ ಸೇರಿಕೊಂಡಿದೆ.

ಬೆಳಗ್ಗೆ ಹೊರಟು ಕೋಳಿವಾಡ ಗ್ರಾಮ ಸುತ್ತಿನಲ್ಲಿ ಮತ್ತು ಗದುಗಿನ ಬೀದಿಗಳಲ್ಲಿ ಅಡ್ಡಾಡಿದ ನಾನು ಸಂಜೆ ಗುಡಿಯ ಉತ್ತರ ದಿಕ್ಕಿಗಿರುವ ಭಾರಿ ಅರಳಿಮರದ ಜಗಲಿ ಕಟ್ಟೆಯ ಮೇಲೆ ಕೂತೆ. ೧೫ನೇ ಶತಮಾನದಲ್ಲಿ ಬಂದ ಕವಿ ನಾರಾಯಣಪ್ಪ ಕನ್ನಡ ಪರಂಪರೆಯ ಹಿಂದಿನ ಐದು ಶತಮಾನ ಮುಂದಿನ ಈವರೆಗಿನ ಐದು ಶತಮಾನಗಳನ್ನು ಜೀರ್ಣಿಸಿಕೊಂಡು ತನ್ನ ಕೃತಿ ಕರ್ಣಾಟ ಭಾರತ ಕಥಾಮಂಜರಿಯಲ್ಲಿ ಹೇಳದೇ ಬಿಟ್ಟಿರುವುದು ಏನು ಎನಿಸಿತು. ಬಿಟ್ಟಿರುವುದೆಂದರೆ ಅವನ ಊರು, ಕೇರಿ, ಕುಲ, ಗೋತ್ರ, ತಂದೆ-ತಾಯಿಗಳ ಸ್ವಂತ ವಿಚಾರ. ಕನ್ನಡ ವಿದ್ವಾಂಸರು ಈ ವಿಚಾರದಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿರುತ್ತಾರೆ. ಆದರೆ ಕುಮಾರವ್ಯಾಸ ಎಲ್ಲ ಕಾಲಕ್ಕೂ ಕನ್ನಡದ ಅಸಾಧಾರಣ ಕಾವ್ಯಶಕ್ತಿಯ, ಮಾತೃಹೃದಯದ ಗಂಡು ಕವಿ. ಈ ಅರ್ಥದಲ್ಲಿ ಇವನು ಜನಪದ ಕವಿಗಳಂತೆ, ಬಯಲಲ್ಲಿ ಹಾಡುತ್ತಾ ಎಲ್ಲವನ್ನು ಪ್ರಕೃತಿಗೆ ಸಮರ್ಪಿಸಿಬಿಟ್ಟವನು.

'ಅರಸು ರಾಕ್ಷಸ ಮಂತ್ರಿ ಮೊರೆವ ಹುಲಿ ಪರಿವಾರ ಹದ್ದಿನ ನೆರವಿ ಉರಿಉರಿಯುತಿದೆ ದೇಶ..., ಸತ್ಯವೇ ಧರ್ಮಾಧಿಕತೆ..., ಕೃಷಿಯೇ ಮೊದಲು ಸರ್ವಕ್ಕೆ, ಕೃಷಿವಿಹೀನ ದೇಶ ದುರ್ದೇಶ..., ಜಾತಿ ಮಾತ್ರದ ಮೇಲೆ ಬಂದ ಖ್ಯಾತಿ ವಿಖ್ಯಾತಿಗಳು..., ಅಬಲಾವೃಂದ ಸಮಸುಖ ದುಃಖಿಗಳಲಾ..., ಹೀಗೆ ಅವನ ಕಾವ್ಯ ವಾಕ್ಯಗಳು ನೆನಪಿಗೆ ಬರತೊಡಗಿದವು. ನನ್ನ ಬೆನ್ನಿಗಿದ್ದ ಭಾರೀ ಅರಳಿಮರ ಕುಮಾರವ್ಯಾಸನನ್ನು ಕಂಡಿದ್ದಿರಬಹುದೆ ಎನಿಸಿತು. ಸಂಜೆಯ ಮೇಲುಗಾಳಿಗೆ ಮರದ ಎಲೆಗಳು ಅವನ ಪದ್ಯಗಳನ್ನು ಪಲುಕುತ್ತಿರುವಂತೆ ಕಂಡಿತು.

ಇದೀಗ ಕೋಳಿವಾಡದಲ್ಲಿ ಎದ್ದಿರುವ ಕುಮಾರವ್ಯಾಸ ಭವನದಲ್ಲಿ ವರ್ಷಕ್ಕೊಮ್ಮೆಯಾದರೂ ಕನ್ನಡ ಲೇಖಕರು ಕೂಡಿ ಅವನ ಕಾವ್ಯವನ್ನು ಹಾಡಿಸುವುದು, ಕೇಳುವುದು, ಮಾತಾಡುವಂತೆ ಆಗುವುದಾದರೆ ಅವನ ಜನ್ಮಸ್ಥಳವೂ ಇದೇ ವೀರ ನಾರಾಯಣನ ಐತಿಹಾಸಿಕ ಗುಡಿಯಂತೆ ಯಾತ್ರಾಸ್ಥಳವಾಗಬಹುದು ಎನಿಸಿತು.

(ಮೈಸೂರಿನ ನಿವಾಸಿಗಳಾದ ಕೃಷ್ಣಮೂರ್ತಿ ಹನೂರು ಅವರು ನಿವೃತ್ತಕನ್ನಡ ಅಧ್ಯಾಪಕರಾಗಿದ್ದು, ಪ್ರಸಿದ್ಧ ಜಾನಪದ ವಿದ್ವಾಂಸ ಮತ್ತು ಕಥೆ-ಕಾದಂಬರಿಕಾರರಾಗಿದ್ದಾರೆ.)



ಇವರು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕಾಗಿ ಸಂಪಾದಿಸಿರುವ 'ಸರಸ ಸೌಗಂಧಿಕದ 'ಪರಿಮಳ' ಎಂಬ ಆಯ್ದ ಒಂದೂವರೆ ಸಾವಿರ ಪದ್ಯಗಳ ಕುಮಾರವ್ಯಾಸ ಭಾರತ ವಾಚಿಕೆ ಇಷ್ಟರಲ್ಲೇ ಪ್ರಕಟವಾಗಲಿದೆ.

ಯೂರೋಪ್‌ನಲ್ಲಿ ಹರಡಿರುವ ಕನ್ನಡದ ಕಂಪು

–ಬಿ.ಎ. ವಿವೇಕ ರೈ

ಹತ್ತು ವರ್ಷಗಳಿಂದ ಜರ್ಮನಿಯ ವ್ಯೂರ್ತ್ಸ್‌ಬುರ್ಗ್ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಪ್ರಾಧ್ಯಾಪಕರಾಗಿ ಯೂರೋಪ್‌ನ ವಿವಿಧ ದೇಶಗಳಿಗೆ ಸೇರಿದ ಅಲ್ಲಿನ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುತ್ತಿರುವ ವಿವೇಕ ರೈ ಅವರು ಈ ಭಾಷಾ ಕಲಿಕೆ ಕೇವಲ ಭಾಷೆಗಷ್ಟೇ ಸೀಮಿತವಾಗದ ಕನ್ನಡ ನಾಡು ಮತ್ತು ಸಂಸ್ಕೃತಿಗಳ ಬಗೆಗಿನ ಕುತೂಹಲ ಮತ್ತು ಅಧ್ಯಯನಗಳಿಗೂ ಹರಡಿರುವ ಬೆರಗಿನ ಕಥೆಯೊಂದನ್ನು ಇಲ್ಲಿ ಹೇಳಿದ್ದಾರೆ.-ಸಂ.

ಯುರೋಪಿನ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಇಂಡಾಲಜಿ ವಿಷಯದ ಅಧ್ಯಯನ ಈಗಲೂ ನಡೆಯುತ್ತಿದೆ. ೧೯ನೇ ಶತಮಾನದಲ್ಲಿ ಜರ್ಮನಿಯಲ್ಲಿ ಆರಂಭವಾದ 'ಇಂಡಾಲಜಿ' (ಭಾರತಶಾಸ್ತ್ರ)ಯ ಶೈಕ್ಷಣಿಕ ಸ್ವರೂಪ ಸಾಕಷ್ಟು ಬದಲಾಗಿದೆ. ಸಂಸ್ಕೃತದ ಸಾಹಿತ್ಯ ಮತ್ತು ಶಾಸ್ತ್ರಗಳ ಅಧ್ಯಯನವು ಇಂಡಾಲಜಿಯ ತಳಹದಿಯಲ್ಲಿ ಇದ್ದರೂ ಭಾರತದ ಆಧುನಿಕ ಭಾಷೆಗಳು, ಅವುಗಳ ಸಾಹಿತ್ಯ – ಸಂಸ್ಕೃತಿಗಳ ಬಗೆಗಿನ ಆಸಕ್ತಿ ಹೆಚ್ಚುತ್ತಿದೆ; ಭಾರತದ ಸಾಮಾಜಿಕ ಸಾಂಸ್ಕೃತಿಕ ವಿದ್ಯಮಾನಗಳ ಮತ್ತು ಅಂತರ್ ಸಾಂಸ್ಕೃತಿಕ ಸಂವಹನದ ಸಂಗತಿಗಳನ್ನು ಚರ್ಚಿಸಲಾಗುತ್ತಿದೆ. ಸ್ತ್ರೀವಾದಿ ಮತ್ತು ದಲಿತಚಿಂತನೆಗಳ ವಿಚಾರಗಳು ಅಧ್ಯಯನಕ್ಕೆ ಒಳಗಾಗಿವೆ. ಗಾಂಧಿಯಂತೆ ಅಂಬೇಡ್ಕರ್ ಕೂಡಾ ಪರಿಚಿತರಾಗಿದ್ದಾರೆ. ಭಾರತದ ಮೌಖಿಕ ಪರಂಪರೆಯ ಸಾಹಿತ್ಯ ಮತ್ತು ಜನಪದ ಧರ್ಮದ ಬಗ್ಗೆ ಕ್ಷೇತ್ರಕಾರ್ಯಗಳ ಮೂಲಕ ಸಂಶೋಧನೆಗಳು ನಡೆಯುತ್ತಿವೆ. ಜರ್ಮನಿಯ ವಿಶ್ವವಿದ್ಯಾನಿಲಯಗಳ ಇಂಡಾಲಜಿ ವಿದ್ಯಾರ್ಥಿಗಳು ಭಾರತಕ್ಕೆ ಬಂದು ಅಧ್ಯಯನ ನಡೆಸಿ/ಕ್ಷೇತ್ರಕಾರ್ಯ ಮಾಡಿ ತಮ್ಮ ಎಂಎ ಮತ್ತು ಪಿಎಚ್.ಡಿ. ಥೀಸಿಸ್ ಸಿದ್ಧಪಡಿಸುತ್ತಿದ್ದಾರೆ. ಅನೇಕ ಇಂಡಾಲಜಿ ಪ್ರಾಧ್ಯಾಪಕರು ಬೌದ್ಧ ಮತ್ತು ಜೈನ ಧರ್ಮಗಳ ಶಾಸ್ತ್ರ, ಸಿದ್ಧಾಂತ ಮತ್ತು ಸಾಹಿತ್ಯಗಳಲ್ಲಿ ವಿಶೇಷ ಅಧ್ಯಯನ ನಡೆಸಿದ ವಿದ್ವಾಂಸರಾಗಿದ್ದಾರೆ.

ಇಂಡಾಲಜಿಯ ಸಿಲೆಬಸ್‌ನಲ್ಲಿ ಈಗ ಸಂಸ್ಕೃತದ ಜೊತೆಗೆ ಇರುವ ಇನ್ನೊಂದು ಭಾರತೀಯ ಭಾಷೆ 'ಹಿಂದಿ'. ಜರ್ಮನಿಯಲ್ಲಿ ಹಿಂದಿ ಜನಪ್ರಿಯವಾಗಲು ಬಾಲಿವುಡ್ ಸಿನೆಮಾಗಳು ಕೂಡಾ ಕಾರಣ. ಜೊತೆಗೆ ಜರ್ಮನ್ ವಿದ್ಯಾರ್ಥಿಗಳಿಗೆ ಹಿಂದಿಯನ್ನು ಕಲಿಸುವ ಸಂಸ್ಥೆಗಳು ರಾಜಸ್ಥಾನದ ಜಯಪುರ ಸಹಿತ ಉತ್ತರಭಾರತದ ಅನೇಕ ಕಡೆ ಇವೆ. ಇಂಡಾಲಜಿಯ ವಿದ್ಯಾರ್ಥಿಗಳು ಹಿಂದಿಯ ಕಡೆಗೆ ಹೆಚ್ಚು ಒಲವು ತೋರಿಸುತ್ತಿರುವಲ್ಲಿ ಆಧುನಿಕ ಹಿಂದಿ ಸಾಹಿತ್ಯದ, ಮುಖ್ಯವಾಗಿ ಕತೆ ಕಾದಂಬರಿಗಳ ಜರ್ಮನ್ ಅನುವಾದಗಳ ಪ್ರಕಟಣೆಗಳ ಪಾತ್ರವೂ ಇದೆ. ಇಂತಹ ಸನ್ನಿವೇಶದಲ್ಲಿ ಕನ್ನಡದ ಕಲಿಕೆಯ ಅವಕಾಶ ಪ್ರಾಪ್ತವಾದದ್ದು ಜರ್ಮನ್ ಪ್ರಾಧ್ಯಾಪಕರ ವೈಯಕ್ತಿಕ ಆಸಕ್ತಿಯ ಫಲವಾಗಿ. ಹೈಡ್ರೂನ್ ಬ್ರೂಕ್ನರ್ ಅವರು ಜರ್ಮನಿಯಲ್ಲಿ ಈಗ ಇರುವ ಅತಿ ಹಿರಿಯ ಇಂಡಾಲಜಿ ಪ್ರಾಧ್ಯಾಪಕಿ. ಅವರು ಜರ್ಮನಿಯ ಹೈಡಲ್ ಬರ್ಗ್, ಮೈಂಝ್, ತ್ಯೂಬಿಂಗನ್ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮತ್ತು ಅಧ್ಯಾಪನ ನಡೆಸಿ ೨೦೦೧ರಿಂದ ವ್ಯೂರ್ತ್ಸ್ ಬುರ್ಗ್ ವಿಶ್ವವಿದ್ಯಾಲಯದಲ್ಲಿ ಇಂಡಾಲಜಿ ಪೀಠದ ಮುಖ್ಯಸ್ಥರಾಗಿ ಅಲ್ಲಿನ ಸಿಲೆಬಸ್‌ನಲ್ಲಿ ಕನ್ನಡದ ಕಲಿಕೆಗೆ ಅಧಿಕೃತವಾಗಿ ಅವಕಾಶ ಕಲ್ಪಿಸಿದವರು. ಬ್ರೂಕ್ನರ್ ಅವರು ೧೯೮೦ರ ವೇಳೆಗೆ ಕರ್ನಾಟಕಕ್ಕೆ ಬಂದವರು ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಆಸಕ್ತಿಯನ್ನು ತಾಳಿದ ಪರಿಣಾಮವಾಗಿ ಕನ್ನಡವನ್ನು ಕಲಿತು ಅನಂತಮೂರ್ತಿ, ಕಾರ್ನಾಡ್ ರ ಕೃತಿಗಳನ್ನು ಕುರಿತು ಜರ್ಮನ್ನಲ್ಲಿ ಲೇಖನಗಳನ್ನು ಬರೆದರು. ಕನ್ನಡ ಸಾಹಿತ್ಯದ ಪರಿಚಯ ಲೇಖನಗಳನ್ನು ಜರ್ಮನ್ ವಿಶ್ವಕೋಶಗಳಿಗೆ ಬರೆದರು. ತುಳು ಪಾಡ್ದನಗಳ ಬಗ್ಗೆ ಕರಾವಳಿಯಲ್ಲಿ ವ್ಯಾಪಕ ಕ್ಷೇತ್ರಕಾರ್ಯ ನಡೆಸಿ, ೨೫ ತುಳು ಪಾಡ್ದನಗಳನ್ನು ಜರ್ಮನ್ ಭಾಷೆಗೆ ಅನುವಾದ ಮಾಡಿ, ಅದರ ಬಗ್ಗೆ ತಮ್ಮ ಎರಡನೆಯ ಸಂಶೋಧನಾ ಪ್ರಬಂಧವನ್ನು ರಚಿಸಿದರು.

.ಕನ್ನಡ ತರಗತಿಗಳ ಮೊದಲ ದಿನಗಳು

ಹೈಡ್ರೂನ್ ಬ್ರೂಕ್ನರ್ ಅವರು ಜರ್ಮನಿಯ ವ್ಯೂರ್ತ್ಸ್ ಬುರ್ಗ್ ವಿವಿಯ ಇಂಡಾಲಜಿ ವಿಭಾಗದ ಬಿಎ. ಎಂಎ. ಪದವಿಗಳಲ್ಲಿ ಕನ್ನಡ ಭಾಷೆ/ಸಾಹಿತ್ಯ/ಸಂಸ್ಕೃತಿಯನ್ನು ಸೇರಿಸಿದ ಫಲವಾಗಿ ನಾನು ೨೦೦೯ರಿಂದ ೨೦೧೨ರವರೆಗೆ ಅಲ್ಲಿ ಕನ್ನಡ ಭಾಷೆ ಸಾಹಿತ್ಯಗಳನ್ನು ಬೋಧಿಸುವ ಅವಕಾಶ ದೊರೆಯಿತು. ಅಲ್ಲಿ ವರ್ಷಕ್ಕೆ ಎರಡು ಸೆಮೆಸ್ಟರ್‌ಗಳು: ಚಳಿಗಾಲದ್ದು ಮತ್ತು ಬೇಸಗೆ ಕಾಲದ್ದು. ಮೊದಲನೆಯ ಸೆಮೆಸ್ಟರ್‌ನಲ್ಲಿ ನಾಲ್ಕು ತರಗತಿಗಳಿಗೆ ಕನ್ನಡ ಪಾಠ ಮಾಡುವ ಅವಕಾಶ ದೊರೆಯಿತು. ಕನ್ನಡ–೧ ತರಗತಿಯಲ್ಲಿ ಇದ್ದ ವಿದ್ಯಾರ್ಥಿಗಳು: ಲೀಸಾ, ಮರ್ತಿನ, ಲೌರ, ನದ್ಯಾ, ಮರಿಯಾನ್ ಮತ್ತು ಸ್ಟೆಫನ್. ಕನ್ನಡ–೪ ತರಗತಿಯಲ್ಲಿ ಇದ್ದ ವಿದ್ಯಾರ್ಥಿಗಳು: ಫ್ರಾನ್ಸಿಸ್ಕ, ಕತ್ರಿನ್, ಲರಿಸಾ, ವೆನ್ ಜೆಲ್, ಮಿಗುವೆಲ್. ಇವರಿಗೆ ಕನ್ನಡ ಕಲಿಯಲು ಪಠ್ಯವಾಗಿ ಇದ್ದದ್ದು –ಲಿಂಗದೇವರು ಹಳೆಮನೆ ಮತ್ತು ಲೀಲಾವತಿ ಅವರ ಪುಸ್ತಕ 'Intensive Course in Kannada'(ಭಾರತೀಯ ಭಾಷಾ ಸಂಸ್ಥಾನ, ಮೈಸೂರು) ಕನ್ನಡ ಪ್ರಾಧ್ಯಾಪಕನಾಗಿ ಕನ್ನಡ ಭಾಷೆಯನ್ನು ಕಲಿಸುವುದು ಸುಲಭ ಎಂದು ತಿಳಿದುಕೊಂಡಿದ್ದ ನನಗೆ ಭಾಷಾಪಾಠದ ಪ್ರಾಯೋಗಿಕ ಸಮಸ್ಯೆಗಳ ಅರಿವಾಯಿತು. ಜರ್ಮನ್ ವಿದ್ಯಾರ್ಥಿಗಳಿಗೆ ನಾನು ಕನ್ನಡ ಪಾಠ ಮಾಡಬೇಕಾದದ್ದು ಇಂಗ್ಲಿಷ್‌ನಲ್ಲಿ. ಹಳೆಮನೆಯವರ ಪುಸ್ತಕ ಸಿದ್ಧವಾದದ್ದು ಕನ್ನಡೇತರ ಭಾರತೀಯರಿಗೆ ಕನ್ನಡ ಕಲಿಯಲು. ಆ ಪುಸ್ತಕದಲ್ಲಿ ಬಳಸಿದ ಕನ್ನಡ ವಾಕ್ಯಗಳು ಸಂಭಾಷಣೆಗಳು ಹಳೆಯ ಮೈಸೂರಿನ ಆಡುಭಾಷೆಯವು, ವ್ಯಾಕರಣಬದ್ಧವಾದ ಭಾಷೆ ಅಲ್ಲ. ಕನ್ನಡ ವ್ಯಾಕರಣದ ಅನೇಕ ಪರಿಭಾಷೆಗಳಿಗೆ ಸಂವಾದಿಯಾದ ಇಂಗ್ಲಿಷ್ ಪದಗಳನ್ನು ಕೊಟ್ಟಿಲ್ಲ. ಕನ್ನಡ ಕಲಿಕೆಯನ್ನು ಇಂಗ್ಲಿಷ್‌ನಲ್ಲಿ ಹೇಳುವ ಸಾಕಷ್ಟು ಪುಸ್ತಕಗಳು ಇವೆ. ಆದರೆ ಅವುಗಳಿಂದ ಪೂರ್ಣ ಪ್ರಯೋಜನ ದೊರೆಯಲಿಲ್ಲ. ಕೊನೆಗೆ ನನ್ನದೇ ಆದ ಪಾಠಗಳನ್ನು ಸಿದ್ಧಪಡಿಸಿದೆ.



ವ್ಯೂರ್ತ್ಸ್‌ಬುರ್ಗ್‌ನ 'ಕನ್ನಡ ಬಳಗ'ದೊಂದಿಗೆ ವಿವೇಕ ರೈ

ತಲೆ ತಿಂದ ಕನ್ನಡ ವ್ಯಾಕರಣ!

ಜರ್ಮನ್ ವಿದ್ಯಾರ್ಥಿಗಳು ಬಹುಭಾಷೆಗಳ ಕಲಿಕೆಯಲ್ಲಿ ಬಹಳ ಪರಿಣತಿ ಹೊಂದಿದವರು. ಹೆಚ್ಚಿನವರು ಎಂಟು–ಹತ್ತು ಭಾಷೆಗಳನ್ನು ಕಲಿತಿರುತ್ತಾರೆ; ವ್ಯಾಕರಣದಲ್ಲಿ ವಿಶೇಷ ನುರಿತವರಾಗಿರುತ್ತಾರೆ. ಹುಡುಗಿಯರು ತಮಗೆ ವಿಷಯ ಪೂರ್ಣ ಮನವರಿಕೆ ಆಗದೆ ಅಧ್ಯಾಪಕರನ್ನು ಪಾಠ ಮುಂದುವರಿಸಲು ಬಿಡುವುದಿಲ್ಲ. ಅಂತಹ ಇಬ್ಬರು ನನ್ನ ವಿದ್ಯಾರ್ಥಿನಿಯರು–ಮರ್ತಿನ ಮತ್ತು ಫ್ರಾನ್ಸಿಸ್ಕ. ಚೀನಾದಲ್ಲಿ ಅಧ್ಯಯನ ನಡೆಸಿ ಚೀನೀ ಸಹಿತ ಬಹುಭಾಷೆಗಳನ್ನು ಬಲ್ಲ ಫ್ರಾನ್ಸಿಸ್ಕಳ ಪ್ರಶ್ನೆಗಳಿಗೆ ಉತ್ತರಿಸಲು ಯುವ ಅಧ್ಯಾಪಕರು ತಡವರಿಸುತ್ತಿದ್ದರು. ನನ್ನ ಕನ್ನಡ ತರಗತಿಗಳಲ್ಲಿ ಈ ಹುಡುಗಿಯರು ಒಂದು ವ್ಯಾಕರಣ ಪ್ರಕ್ರಿಯೆಯ ಬಗ್ಗೆ ಒಂದು ಗಂಟೆ ಕಾಲ ನನ್ನ ಜೊತೆಗೆ ಬಿರುಸಿನ ಚರ್ಚೆ ನಡೆಸಿದ ಸಂದರ್ಭಗಳು ಇವೆ. ಕನ್ನಡದ ವರ್ತಮಾನ ಕಾಲದ ಪ್ರಯೋಗ, ಭೂತಕಾಲದ ಕ್ರಿಯಾರೂಪಗಳು, ಪ್ರೇರಣಾರ್ಥದ 'ಇಸು' 'ಪ್ರತ್ಯಯ–ಇಂತಹ ಅನೇಕ ವ್ಯಾಕರಣ ಸಂಗತಿಗಳ ಬಗ್ಗೆ ಅವರು ಪ್ರಶ್ನೆಗಳ ಸುರಿಮಳೆಗರೆದಿದ್ದಾರೆ. 'ನಾನು ಊಟ ಮಾಡುತ್ತೇನೆ' ಎನ್ನುವ ವಾಕ್ಯ ಯಾಕೆ ವರ್ತಮಾನ ಮತ್ತು ಭವಿಷ್ಯತ್ ಕಾಲಗಳಿಗೆ ಎರಡಕ್ಕೂ ಅನ್ವಯವಾಗುತ್ತದೆ, ಕ್ರಿಯಾಪದಗಳು ಭೂತಕಾಲ ಆಗುವ ಸಂದರ್ಭಗಳಲ್ಲಿ – 'ಹೋಗು' – 'ಹೋದೆನು' ಆಗುವ ಹಾಗೆ 'ಬಾಗು' ಯಾಕೆ 'ಬಾದೆನು 'ಆಗುವುದಿಲ್ಲ, 'ಇಸು' ಪ್ರತ್ಯಯವು ಪ್ರೇರಣಾರ್ಥಕ್ಕೆ ಮತ್ತು ಕ್ರಿಯಾಪದಕ್ಕೆ ಎರಡಕ್ಕೂ ಬಳಕೆ ಆಗುವುದರಿಂದ ವ್ಯತ್ಯಾಸ ಗೊತ್ತಾಗುವುದು ಹೇಗೆ, 'ಅಲ್ಲಿ' ಎಂಬ ಸಪ್ತಮಿ ವಿಭಕ್ತಿ ಪ್ರತ್ಯಯವು 'ಕರಣ'ದ ಅರ್ಥದಲ್ಲಿ ತೃತೀಯಾ ವಿಭಕ್ತಿಯ ರೂಪದಲ್ಲಿ ಪ್ರಯೋಗವಾಗುವುದು ಯಾಕೆ?– ಇಂತಹ ಪ್ರಶ್ನೆಗಳ ಸರಮಾಲೆಯನ್ನು ನಾನು ಎದುರಿಸಿದ್ದೇನೆ. ತಾಳ್ಮೆಯನ್ನು

ಕಳೆದುಕೊಳ್ಳದೆ ಕನ್ನಡ ವ್ಯಾಕರಣ ಸೂತ್ರಗಳ ಭಿನ್ನ ನಡೆಗಳನ್ನು ವಿವರಿಸಿದ್ದೇನೆ. ಒಮ್ಮೆಯಂತೂ ಹೇಳಿಯೇ ಬಿಟ್ಟೆ: 'ನಿಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ನಾನು ಕನ್ನಡ ಭಾಷೆಯನ್ನು ಸೃಷ್ಟಿಸಿದವನಲ್ಲ, ನಾನು ಇರುವ ಕನ್ನಡ ಭಾಷೆಯನ್ನು ಕಲಿಸುವವನಷ್ಟೇ!'

ಜರ್ಮನಿಯಲ್ಲಿ ಅನುರಣಿಸಿದ ಕನ್ನಡ ಕವಿತೆಗಳು

ಕನ್ನಡ ಭಾಷೆಯನ್ನು ಈಗಾಗಲೇ ಓದಲು ಬರೆಯಲು ಕಲಿತ ಜರ್ಮನ್ ವಿದ್ಯಾರ್ಥಿಗಳ ತರಗತಿಗೆ ಆಧುನಿಕ ಕನ್ನಡ ಸಾಹಿತ್ಯದ ಕೆಲವು ಪದ್ಯಗಳನ್ನು ಪಾಠ ಮಾಡಿದೆ: ಬಸವಣ್ಣ ವಚನ (ಉಳ್ಳವರು ಶಿವಾಲಯವ ಮಾಡುವರು), ಅಕ್ಕಮಹಾದೇವಿ ವಚನ (ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ), ಕನಕದಾಸರ ಕೀರ್ತನೆ(ಕುಲಕುಲಕುಲವೆನ್ನುತಿಹರು), ಕುವೆಂಪು(ಅನಿಕೇತನ), ಬೇಂದ್ರೆ(ಕುರುಡು ಕಾಂಚಾಣ), ಸಿದ್ದಲಿಂಗಯ್ಯ(ಸಾವಿರಾರು ನದಿಗಳು). ಕನ್ನಡ ಪದ್ಯಗಳನ್ನು ಮೂಲದಲ್ಲಿ ಓದಿ, ಇಂಗ್ಲಿಷ್ನಲ್ಲಿ ಅರ್ಥವಿವರಣೆ ಕೊಟ್ಟು, ಪ್ರಕಟವಾಗಿರುವ ಅವುಗಳ ಇಂಗ್ಲಿಷ್ ಅನುವಾದಗಳನ್ನು ಕೊಡುತ್ತಿದ್ದೆ. ಆ ಕಾಲಕ್ಕೆ ದೊರೆಯುತ್ತಿದ್ದ ಕೆಲವು ಕವನಗಳ ರೆಕಾರ್ಡ್ ಆದ ಹಾಡುಗಳನ್ನು ಕ್ಲಾಸ್‌ನಲ್ಲಿ ಪ್ಲೇ ಮಾಡುತ್ತಿದ್ದೆ. ಬೇಂದ್ರೆಯವರ 'ಕುರುಡು ಕಾಂಚಾಣ'ವನ್ನು ಸಿ. ಅಶ್ವತ್ ಮತ್ತು ಯಶವಂತ ಹಳಬಂಡಿ ಹಾಡಿದ್ದನ್ನು ಪ್ಲೇ ಮಾಡಿದಾಗ ವಿದ್ಯಾರ್ಥಿಗಳು ಬಹಳ ಖುಷಿ ಪಟ್ಟರು. ಇದು ಕುಣಿತಕ್ಕೆ ಒಳ್ಳೆಯ ಹಾಡು ಎಂದರು. ಜೊತೆಗೆ ಹಾಡಿನ ನೋವನ್ನು ಚೆನ್ನಾಗಿ ಅರ್ಥಮಾಡಿಕೊಂಡರು. ಆ ತಂಡದಲ್ಲಿ ಇದ್ದ ವಿದ್ಯಾರ್ಥಿಗಳು: ಸಾರಾ ಮೆರ್ಕ್ಲೆ, ಸೀನಾ ಸೊಮ್ಮೆರ್, ಯೂಲಿಯಾ, ಮರೀನಾ, ಅನೀಕಾ, ಸ್ಟೀಫನ್ ಪಾಪ್. ಅವರಲ್ಲಿ ಕೆಲವರು ವಚನಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿಯನ್ನು ತಾಳಿದರು.

ಒಂದು ಜರ್ಮನ್ ಹಳ್ಳಿ ಕಥೆ

೨೦೦೯-೨೦೧೨ರ ಅವಧಿಯಲ್ಲಿ ಬೇರೆಬೇರೆ ತರಗತಿಗಳಲ್ಲಿ ಕರ್ನಾಟಕ ಅಧ್ಯಯನ, ಕನ್ನಡ ಸಾಹಿತ್ಯ ಚರಿತ್ರೆ, ಕರ್ನಾಟಕದ ಮೌಖಿಕ ಪರಂಪರೆ, ಕರ್ನಾಟಕದ ಧಾರ್ಮಿಕ ಪರಂಪರೆ, ಸಾಂಸ್ಕೃತಿಕ ಅನನ್ಯತೆ-ಈ ವಿಷಯಗಳನ್ನು ಬೋಧಿಸಿದೆ. ಇವುಗಳಿಗೆ ಸಿಲೆಬಸ್ ತಯಾರಿಸುವುದು, ಮೂಲ ಪಠ್ಯಗಳನ್ನು ಕನ್ನಡದಲ್ಲಿ ಓದುವುದು, ಇಂಗ್ಲಿಷ್‌ನಲ್ಲಿ ವಿವರಿಸುವುದು, ಪರೀಕ್ಷೆ ನಡೆಸುವುದು – ಈ ಎಲ್ಲ ವಿಷಯಗಳಲ್ಲಿ ನನಗೆ ಪೂರ್ಣ ಸ್ವಾಯತ್ತೆ ಇತ್ತು. 'ಮೌಖಿಕ ಪರಂಪರೆ' ವಿಷಯದ ಕ್ಲಾಸಿನಲ್ಲಿ ವಿದ್ಯಾರ್ಥಿಗಳಿಗೆ ಒಂದು ಅಸೈನ್‌ಮೆಂಟ್ ಕೊಟ್ಟೆ. ತಮ್ಮ ತಮ್ಮ ಊರಿನ ಹೆಸರುಗಳ ಹಿನ್ನೆಲೆಯ ಐತಿಹ್ಯಗಳನ್ನು ಸಂಗ್ರಹಿಸಿ ಪ್ರಬಂಧ ಬರೆಯಲು. ಆ ತರಗತಿಯ ವಿದ್ಯಾರ್ಥಿನಿ ಕತ್ರಿನ್ ಹೋಲ್ಜ್ ತನ್ನ ಚಿಕ್ಕ ಹಳ್ಳಿಗೆ 'ಮಾರ್ಗೆತ್ಸ್ ಹ್ಯೂಶ್ ಹೈಮ್' ಎಂಬ ಹೆಸರು ಬಂದ ಕತೆಯನ್ನು ಬರೆದು ತಂದಳು: "ಮಾಯಿನ್ ಎಂಬ ನದಿಯಲ್ಲಿ ದೋಣಿಯಲ್ಲಿ ಸಾಗುತ್ತಿದ್ದರು ಗಂಡು ಹೆಣ್ಣು ಜೋಡಿಗಳು. ಗಂಡಿನ ಹೆಸರು 'ಫಾಯಿತ್', ಹೆಣ್ಣಿನ ಹೆಸರು 'ಮಾರ್ಗರೇತ್'. ಆಕಸ್ಮಿಕವಾಗಿ ಬಿರುಗಾಳಿ ಬೀಸಿ, ಜಡಿಮಳೆ ಸುರಿದು ಇವರು ಚಲಿಸುತ್ತಿದ್ದ ದೋಣಿ ಅಡಿಮೇಲಾಯಿತು. ಗಂಡು ಮತ್ತು ಹೆಣ್ಣು ನದಿಯ ನೀರಲ್ಲಿ ಬೇರೆಬೇರೆ ಆದರು. ಫಾಯಿತ್ ಈಜುತ್ತಾ ನದಿಯ ಒಂದು ದಡವನ್ನು ಸೇರಿದ. ಮಾರ್ಗರೇತ್ ಈಜುತ್ತಾ ನದಿಯ ಇನ್ನೊಂದು ದಡವನ್ನು ಸೇರಿದಳು. ಮಾರ್ಗರೇತ್‌ಳನ್ನು ಕಾಣದೆ ಫಾಯಿತ್ ಆ ದಡದಿಂದ ಕೂಗಿದ: 'ಎಲ್ಲಿದ್ದೀಯೆ ಮಾರ್ಗರೇತ್?' ಅದರ ಜರ್ಮನ್ ರೂಪ 'ಮಾರ್ಗೆತ್ ಹ್ಯೂಶ್ ಹೈಮ್'. ಅದೇ ಆ ಊರಿನ ಹೆಸರು ಆಯಿತು."

ಕತ್ರಿನ್ ಪ್ರಬಂಧವನ್ನು ಓದಿದ ಮೇಲೆ ಅವಳ ಊರನ್ನು ನೋಡಬೇಕು ಅನ್ನಿಸಿತು. ಒಂದು ಭಾನುವಾರ ಮಾರ್ಗೆತ್ ಹ್ಯೂಶ್ ಹೈಮ್‌ಗೆ ಹೋದೆ. ಕತ್ರಿನ್ ಸಂಭ್ರಮದಿಂದ ನನ್ನನ್ನು ತನ್ನ ಹಳ್ಳಿಯಲ್ಲಿ ಸುತ್ತಾಡಿಸಿದಳು. ಸಣ್ಣಗೆ ಮಳೆ ಜೀಳುತ್ತಿತ್ತು. ಮಾಯಿನ್ ನದಿಯ ಬದಿಯಲ್ಲಿ ನಿಂತು ಆಚೆಬದಿಗೆ ಕಣ್ಣು ಹಾಯಿಸಿದಾಗ 'ಎಲ್ಲಿದ್ದೀಯೆ?' ಎನ್ನುವ ಸೈದ್ಧಾಂತಿಕ ಪ್ರಶ್ನೆ ನದಿಯ ಅಲೆಗಳಲ್ಲಿ ಅನುರಣಿಸಿತು.

ಕನ್ನಡ ಅಧ್ಯಯನದ ವಿಷಯ ವೈವಿಧ್ಯ

ವ್ಯೂರ್ತ್ಸ್‌ಬುರ್ಗ್ ವಿವಿಯ ಇಂಡಾಲಜಿ ಎಂ.ಎ.ಯ ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಕೊನೆಯಲ್ಲಿ ಒಂದು ವಿಷಯದ ಬಗ್ಗೆ ಅಧ್ಯಯನ ನಡೆಸಿ ಥೀಸಿಸ್ ಸಲ್ಲಿಸಬೇಕು. ನಾನು ಅಲ್ಲಿಗೆ ಅತಿಥಿ ಪ್ರಾಧ್ಯಾಪಕನಾಗಿ ಹೋದ ಬಳಿಕ ಕೆಲವು ವಿದ್ಯಾರ್ಥಿಗಳು ಕರ್ನಾಟಕ ಸಂಬಂಧಿ ವಿಷಯಗಳನ್ನು ಆರಿಸಿಕೊಂಡು, ಕರ್ನಾಟಕಕ್ಕೆ ಬಂದು ಅಧ್ಯಯನ ನಡೆಸಿ ಥೀಸಿಸ್ ಬರೆದು ಸಲ್ಲಿಸಿ ಪದವಿ ಪಡೆದರು: ಆ ಥೀಸಿಸ್‌ಗಳು ಜರ್ಮನ್ ಭಾಷೆಯಲ್ಲಿ ಇವೆ: ಫಾಬಿಯಾನ್– 'ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿ ಮತ್ತು ಸಂಸ್ಕಾರ ಸಿನೆಮಾ.' ಬೆಂಜಮಿನ್– 'ಕರ್ನಾಟಕದ ಎಲ್ಲಮ್ಮ ದೇವತೆಯ ಆರಾಧನೆ.' ಸಾರಾ ಮೆರ್ಕ್ಲೆ– 'ಕರ್ನಾಟಕದ ತೃತೀಯ ಲಿಂಗಿಗಳ ಸಾಂಸ್ಕೃತಿಕ ಅಧ್ಯಯನ', ಯೂಲಿಯ ಹೆಲ್ಮೆರಿಶ್ – 'ಕರ್ನಾಟಕದ ಪರಿಸರ ಪ್ರವಾಸೋದ್ಯಮದ ಒಂದು ಮಾದರಿ'. ಮಿಗುವೆಲ್ ಕೊಲೊಮೊ– 'ಕರ್ನಾಟಕದ ಧಾರ್ಮಿಕ ಮತ್ತು ಆಧುನಿಕ ಶಿಲ್ಪಕಲೆ', ಪೌಲಿನೆ– 'ಮಲೆಮಾದೇಶ್ವರ ಮತ್ತು ಸಿರಿ ಜನಪದ ಮಹಾಕಾವ್ಯಗಳಲ್ಲಿ ಹೆಣ್ಣಿನ ಪ್ರತಿನಿಧೀಕರಣದ ವಿಶ್ಲೇಷಣೆ.' ಈ ವಿದ್ಯಾರ್ಥಿಗಳಲ್ಲಿ ಇಬ್ಬರು ತಮ್ಮ ಪಿಎಚ್.ಡಿ. ಪದವಿಗಾಗಿ ಕರ್ನಾಟಕದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಥೀಸಿಸ್ ಬರೆದಿದ್ದಾರೆ. ಪೌಲಿನೆ 'ಸಿರಿ ಕಾವ್ಯ ಮತ್ತು ಆರಾಧನೆಗಳಲ್ಲಿ ಹೆಣ್ಣಿನ ಅನನ್ಯತೆ' ಎಂಬ ವಿಷಯದ ಬಗ್ಗೆ ನಾಲ್ಕು ವರ್ಷಗಳ ಕಾಲ ಕ್ಷೇತ್ರಕಾರ್ಯ ಸಹಿತ ಅಧ್ಯಯನ ನಡೆಸಿ ಥೀಸಿಸ್ ಸಲ್ಲಿಸಿ ಕಳೆದ ಮೇ ತಿಂಗಳಿನಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾಳೆ. ಸಾರಾ ಮೆರ್ಕ್ಲೆ ಉತ್ತರ ಕರ್ನಾಟಕದ ಜೋಗಮ್ಮರ ಬಗ್ಗೆ ಕಳೆದ ಐದು ವರ್ಷಗಳಿಂದ ಅವರ ನಡುವೆ ವಾಸಮಾಡಿ ಅಧ್ಯಯನ ನಡೆಸಿ ಥೀಸಿಸ್ ಸಲ್ಲಿಸುತ್ತಿದ್ದಾಳೆ.

ಕನ್ನಡ ಬೇಸಿಗೆ ಶಿಬಿರ-ಬೆಂಡೆ ಕಾಯಿ ಬೆಲೆಡೆ ಜಗಳ!

ವ್ಯೂರ್ತ್ಸ್‌ಬುರ್ಗ್ ವಿವಿಯ ಇಂಡಾಲಜಿ ವಿಭಾಗದಲ್ಲಿ ಪ್ರೊ. ಬ್ರೂಕ್ನರ್ ಆರಂಭಿಸಿದ ಕನ್ನಡ ಕಲಿಕೆಯ ಇನ್ನೊಂದು ವಿಶಿಷ್ಟ ಕಾರ್ಯಕ್ರಮವೆಂದರೆ 'ಕನ್ನಡ ಬೇಸಿಗೆ ಶಿಬಿರ'. ಕನ್ನಡದ ಯಾವುದೇ ಅರಿವು ಇಲ್ಲದ ಯುರೋಪಿಯನ್ನರಿಗೆ ಪ್ರಾಥಮಿಕ ಹಂತದಲ್ಲಿ ಕನ್ನಡವನ್ನು ಮಾತನಾಡಲು, ಓದಲು ಮತ್ತು ಬರೆಯಲು ಕಲಿಸುವ ಎರಡು ವಾರಗಳ ತೀವ್ರಕಲಿಕೆಯ ಶಿಬಿರ ಇದು. ೨೦೧೨ರಲ್ಲಿ ಆರಂಭವಾದ ಈ ಮಾದರಿಯ 'ಕನ್ನಡ ಬೇಸಗೆ/ ಚಳಿಗಾಲದ ಶಿಬಿರಗಳು' ಸಾಮಾನ್ಯವಾಗಿ ಅಲ್ಲಿ ವರ್ಷಕ್ಕೊಮ್ಮೆ ನಡೆಯುತ್ತಿವೆ. ಆರಂಭದ ಶಿಬಿರಗಳಲ್ಲಿ ನಾನು ಮತ್ತು ಜರ್ಮನ್ ಅಧ್ಯಾಪಕಿ ಡಾ.ಕತ್ರಿನ್ ಬಿಂದರ್ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದೆವು. ಕತ್ರಿನ್ ಬಿಂದರ್ ಇಂಡಾಲಜಿ ಎಂಎ ಮಾಡಿ, ಯಕ್ಷಗಾನದಲ್ಲಿ ಪಿಎಚ್.ಡಿ ಪದವಿ ಪಡೆದವರು. ಕನ್ನಡದಲ್ಲಿ ಒಳ್ಳೆಯ ಪ್ರವೇಶ ಉಳ್ಳವರು. ಈ ಶಿಬಿರಗಳಲ್ಲಿ ಬಳಸಲು ನಾವೇ ಒಂದು ಕೈಪಿಡಿಯನ್ನು ಸಿದ್ಧಪಡಿಸಿದ್ದೇವೆ. ಕನ್ನಡದ ಧ್ವನಿಮಾಗಳ ಪರಿಚಯ ಮಾಡಿಸಿ ಉಚ್ಚಾರಣೆಯ ಅಭ್ಯಾಸದ ತರಬೇತಿಯನ್ನು ನಾನು ಕೊಡಿಸುತ್ತೇನೆ. ಸಾಮಾನ್ಯವಾಗಿ ಯುರೋಪಿಯನ್ನರಿಗೆ ಹೆಚ್ಚು ತೊಡಕಾಗುವುದು ಮೂರ್ಧನ್ಯ ಧ್ವನಿಮಾಗಳ ಉಚ್ಚಾರಣೆ; ಟ, ಡ, ಣ, ಳ– ಇವುಗಳ ಉಚ್ಚಾರಣೆಯನ್ನು ದಂತ್ಯ ಧ್ವನಿಮಾಗಳಾದ 'ತ, ದ, ನ, ಲ' ಗಳ ಜೊತೆಗೆ ಹೋಲಿಸಿ ಅಭ್ಯಾಸ ಮಾಡಿಸಲಾಗುತ್ತದೆ. ಕ್ರಿಯಾಪದಗಳ ಪಟ್ಟಿ ಒಂದು ಕಡೆ ಇರುತ್ತದೆ. ವಿಭಕ್ತಿ ಪ್ರತ್ಯಯಗಳನ್ನು ಷಷ್ಠೀ, ಚತುರ್ಥಿ, ದ್ವಿತೀಯಾ, ಸಪ್ತಮಿ, ತೃತೀಯ ಮತ್ತು ಪಂಚಮೀ –ಈ ಅನುಕ್ರಮಣಿಕೆಯಲ್ಲಿ ಹಂತಹಂತವಾಗಿ ಪರಿಚಯ ಮಾಡಿಕೊಡುತ್ತಾ ವಾಕ್ಯರಚನೆಯನ್ನು ಅವರೇ ಮಾಡಲು ಉತ್ತೇಜನ ಕೊಡಲಾಗುತ್ತದೆ. ಎರಡನೆಯ ವಾರದ ಕೊನೆಯಲ್ಲಿ ಅಭ್ಯರ್ಥಿಗಳ ಕನ್ನಡ ಕಲಿಕೆಯ ಮಟ್ಟವನ್ನು ಲವಲವಿಕೆಯ ಸರಳ ವಿಧಾನಗಳಿಂದ ಅಳೆಯಲಾಗುತ್ತದೆ. ಇಬ್ಬರು ಅಭ್ಯರ್ಥಿಗಳು ಸಂತೆಯಲ್ಲಿ, ಅಂಗಡಿಯಲ್ಲಿ, ಹೋಟೆಲಿನಲ್ಲಿ ವ್ಯಾಪಾರದ ರೂಪದಲ್ಲಿ ಮಾತುಕತೆ ಆಡುವ ಪ್ರಸಂಗಗಳನ್ನು ಅವರೇ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಈ ಪ್ರಸಂಗಗಳು ಒಳ್ಳೆಯ ಮನೋರಂಜನೆಯನ್ನು ಕೊಡುತ್ತವೆ ತರಕಾರಿ ಮಾರ್ಕೆಟ್‌ನಲ್ಲಿ ಬೆಂಡೆಕಾಯಿಯ ಬೆಲೆಯ ಚೌಕಾಶಿಯ ಚರ್ಚೆ ವಿಪರೀತಕ್ಕೆ ಹೋಗಿ ಅರ್ಧ ಗಂಟೆಯಾದರೂ ಜಗಳ ನಿಲ್ಲದೆ ಹೋದಾಗ ಕೊನೆಗೆ ನಾವು ಅಧ್ಯಾಪಕರೇ ಬೆಂಡೆಕಾಯಿಯ ಬೆಲೆ ನಿಗದಿಮಾಡಿದ್ದೂ ಇದೆ! ಅಂಗಡಿಯಲ್ಲಿ ಮಾರಾಟಗಾರ್ತಿ ಮತ್ತು ಗ್ರಾಹಕಿಯರ ನಡುವೆ ಏರುಧ್ವನಿಯಲ್ಲಿ ಜಗಳದ ಮಾತುಕತೆ ನಡೆದಾಗ ಪ್ರಾಧ್ಯಾಪಕರೊಬ್ಬರು ಹೊರಗಿನಿಂದ ಬಂದು ವಿಚಾರಿಸಿದ ತಮಾಷೆಯ ಪ್ರಸಂಗಗಳೂ ಇವೆ! ಎರಡು ವಾರಗಳ ಈ ಶಿಬಿರಗಳಲ್ಲಿ ನಮ್ಮ ನಿರೀಕ್ಷೆಗೂ ಮೀರಿ, ಯುರೋಪಿಯನ್ನರು ಕನ್ನಡವನ್ನು ಮಾತನಾಡಲು, ಓದಲು ಮತ್ತು ಬರೆಯಲು ಕಲಿತುಕೊಳ್ಳುತ್ತಾರೆ. ಕರ್ನಾಟಕದಲ್ಲಿ ನಮ್ಮ ಶಾಲೆಗಳಲ್ಲಿ ಕನ್ನಡವನ್ನು ಕಲಿಸುವ ಕ್ರಮ ಬದಲಾಗಬೇಕು.

ಐರೋಪ್ಯರಿಗೆ ವಡ್ಡಾರಾಧನೆ-ಪಂಪ ಭಾರತ ಪಾಠಗಳು!

ಕನ್ನಡ ಬೇಸಿಗೆ/ಚಳಿಗಾಲದ ಶಿಬಿರಗಳಿಗೆ ಯುರೋಪಿನ ಬೇರೆ ಬೇರೆ ದೇಶಗಳಿಂದ ನಾನಾ ಹಿನ್ನೆಲೆಯವರು ಬರುತ್ತಾರೆ. ಜರ್ಮನಿ, ಇಟೆಲಿ, ಸ್ವಿಜರ್ಲೆಂಡ್, ಆಸ್ಟ್ರಿಯ, ಫ್ರಾನ್ಸ್, ಇಂಗ್ಲೆಂಡ್, ಬೆಲ್ಜಿಯಮ್, ಪೋಲೆಂಡ್ ದೇಶಗಳಿಂದ ಬರುತ್ತಿರುವವರಲ್ಲಿ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು, ಸಂಶೋಧಕರು, ವಿದ್ಯಾರ್ಥಿಗಳು, ಭಾಷೆ ಕಲಿಯುವ ಆಸಕ್ತರು ಹೀಗೆ ಭಿನ್ನ ಹಿನ್ನೆಲೆಯವರು ಇರುತ್ತಾರೆ. ಕೆಲವರಿಗೆ ಭಾರತದ ಆಧುನಿಕ ಭಾಷೆಯೊಂದನ್ನು ಕಲಿಯುವ ಆಸಕ್ತಿ. ಇನ್ನು ಕೆಲವರಿಗೆ ಕರ್ನಾಟಕ ಸಂಬಂಧಿ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಹಂಬಲ. ಕರ್ನಾಟಕದಲ್ಲಿ ಕಂಪೆನಿಗಳಲ್ಲಿ ಸ್ವಯಂಸೇವಾ ಸಂಸ್ಥೆಗಳಲ್ಲಿ ಕೆಲಸಮಾಡಲು ಬಯಸುವವರಿಗೆ ಕನ್ನಡ ಕಲಿಯುವ ಅವಶ್ಯಕತೆ. ಕೆಲವು ಪ್ರಾಧ್ಯಾಪಕರು ಕನ್ನಡ



ಚಳಿಗಾಲದ ಒಂದು ಕನ್ನಡ ಅಧ್ಯಯನ ಶಿಬಿರ

ಭಾಷೆ ಸಾಹಿತ್ಯ ಕಲಿತು ತಮ್ಮ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕೋರ್ಸ್‌ಗಳನ್ನು ಆರಂಭಿಸುವ ಉತ್ಸಾಹ ತೋರಿಸಿದ್ದಾರೆ.

ಹೀಗಾಗಿಯೇ ೨೦೧೪ರ ಕನ್ನಡ ಶಿಬಿರದಲ್ಲೇ ನಾನು ಪ್ರಾಚೀನ ಕನ್ನಡ ಸಾಹಿತ್ಯದ ಶಿಬಿರ(ಕ್ಲಾಸಿಕಲ್ ಕನ್ನಡ)ಗಳನ್ನು ನಡೆಸಬೇಕು ಎಂಬ ಕೋರಿಕೆ ಶಿಬಿರಾರ್ಥಿಗಳಿಂದ ಬಂತು. ಮುಖ್ಯವಾಗಿ ಇಟೆಲಿಯ ಹುಡುಗಿಯರು ಎಲೆನಾ ಮುಸ್ಸಿಯರೆಲ್ಲಿ ಮತ್ತು ಫ್ಲೋರಿಂಡ ಸಿಮಿನಿ ಅವರಿಂದ. ಅವರು ಈಗಾಗಲೇ ಹಿಂದಿನ ಶಿಬಿರಗಳಿಂದ ಕನ್ನಡವನ್ನು ಚೆನ್ನಾಗಿ ಓದಲು ಅರ್ಥಮಾಡಿಕೊಳ್ಳಲು ಕಲಿತಿದ್ದರು. ಹಾಗಾಗಿ ೨೦೧೬ರಲ್ಲಿ ಮೊದಲಬಾರಿ ಕ್ಲಾಸಿಕಲ್ ಕನ್ನಡದ ಬೇಸಗೆ ಶಿಬಿರವನ್ನು ಆರಂಭಮಾಡಿದೆ. ಅದು ಎರಡು ವಾರಗಳ ಅವಧಿಯ ಪ್ರಾಚೀನ ಕನ್ನಡ ಸಾಹಿತ್ಯದ ತೀವ್ರ ಕಲಿಕೆಯ ಶಿಬಿರ. ಅದರಲ್ಲಿ ಓದಲು ಮೊದಲು ಎತ್ತಿಕೊಂಡದ್ದು ವಡ್ಡಾರಾಧನೆಯನ್ನು. ವಡ್ಡಾರಾಧನೆಯಲ್ಲಿ 'ವಿದ್ಯುಚ್ಚೋರನ ಕತೆ'ಯನ್ನು ನಾನು ಮೊದಲು ಓದಿ, ಬಳಿಕ ಶಿಬಿರಾರ್ಥಿಗಳಿಂದ ಓದಿಸಿ, ಅವರೇ ಅರ್ಥವಿವರಣೆ ಮಾಡುವಷ್ಟು ತರಬೇತಿ ಕೊಟ್ಟೆ. ಬಳಿಕ ಓದಲು ತೊಡಗಿದ್ದು ಪಂಪ ಭಾರತವನ್ನು. ಹಳಗನ್ನಡ ಭಾಷೆಯ ಸ್ವರೂಪ, ವರ್ಣವೃತ್ತಗಳ ವಿನ್ಯಾಸ, ಸಂಧಿ ವಿಂಗಡಿಸುವ ಕ್ರಮ, ಅರ್ಥಕ್ಕೆ ಅನುಗುಣವಾಗಿ ಪದಗಳನ್ನು ಅನ್ವಯ ಮಾಡುವ ವಿಧಾನ, ಮಾರ್ಗ ದೇಸಿಗಳನ್ನು ಗುರುತಿಸುವ ಬಗೆ, ಕಾವ್ಯದ ಧ್ವನಿಯನ್ನು ಗ್ರಹಿಸುವ ಒಳನೋಟಗಳು– ಹೀಗೆ ಪಂಪಭಾರತ ಅವರಿಗೆ ಆಪ್ತವಾಗುವಂತೆ ಮಾಡಿದೆ. ಹಾಗಾಗಿಯೆ ಬಳಿಕದ ಎರಡು ಕನ್ನಡ ಶಿಬಿರಗಳಲ್ಲೂ 'ಪಂಪ ಭಾರತ'ದ ಬೇರೆಬೇರೆ ಭಾಗಗಳ ಓದಿಗೆ ಒತ್ತಾಸೆ ದೊರಕಿತು. ಬನವಾಸಿಯ ವರ್ಣನೆ, ಗೆಳೆತನದ ಎರಡು ವೈದೃಶ ಮಾದರಿಗಳು :ದ್ರುಪದ–ದ್ರೋಣ ಮತ್ತು ದುರ್ಯೋಧನ–ಕರ್ಣ, ಸಿರಿ ಮತ್ತು ಕಳ್ಳಿನ ಒಡಹುಟ್ಟಿನ ಸಂಬಂಧ, ದುರ್ಯೋಧನ ಮತ್ತು ಕರ್ಣರು ಎತ್ತುವ' ಕುಲ ಯಾವುದು' ಎನ್ನುವ ಪ್ರಶ್ನೆ –ಇಂತಹ ಭಾಗಗಳನ್ನು ಮೂಲ ಪಠ್ಯದ ಓದಿನ ಮೂಲಕವೇ ಅರ್ಥಮಾಡಿಸಿದೆ. ಹಳಗನ್ನಡದ ಪದ್ಯಗಳನ್ನು ಅವರೇ ಓದಿ, ಸಂಧಿ ವಿಂಗಡಿಸಿ, ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದು ನನ್ನ ಪಾಲಿಗೆ ಧನ್ಯತೆಯ ಕ್ಷಣ. ೨೦೧೬ರ ಬಳಿಕ ಈ ವರ್ಷದ ಜನವರಿವರೆಗೆ ಪ್ರತೀ ವರ್ಷ 'ಕ್ಲಾಸಿಕಲ್ ಕನ್ನಡ ಶಿಬಿರ'ಗಳನ್ನು ನಡೆಸಿದಾಗ ಪ್ರಾಚೀನ ಸಾಹಿತ್ಯದ ಬೇರೆ ಪಠ್ಯಗಳನ್ನು ಓದಿಸಿದ್ದೇನೆ. ಜನ್ನನ 'ಯಶೋಧರ ಚರಿತೆ'ವು ನಮ್ಮ ಕನ್ನಡ ಶಿಬಿರಗಳಲ್ಲಿ ಹೆಚ್ಚು ಜನಪ್ರಿಯವಾದ ಇನ್ನೊಂದು ಪಠ್ಯ. ಇದರಲ್ಲಿನ ಮಾರಿಗುಡಿಯ ವರ್ಣನೆಯ ಭಾಗವನ್ನು ಓದುವಾಗ ವಿದ್ಯಾರ್ಥಿಗಳು ತಲ್ಲಣಗೊಂಡಿದ್ದಾರೆ. ಕ್ರೌರ್ಯದ ಅತಿರೇಕಕ್ಕೆ ಬೆಚ್ಚಿಬಿದ್ದಿದ್ದಾರೆ. ಹಿಟ್ಟಿನ ಕೋಳಿಯನ್ನು ಬೆಂತರ ಹೊಕ್ಕು ಕುಕ್ಕೂಕೂ ಎಂದು ಕೂಗಿದಾಗ ಬೆರಗಾಗಿದ್ದಾರೆ. ಕಾವ್ಯದ ಕೊನೆಗೆ ಹಿಂಸೆಯ ವಿರುದ್ಧ ಅಹಿಂಸೆ ಗೆದ್ದಾಗ ಸಂತಸ ಪ್ರಕಟಿಸಿದ್ದಾರೆ.

ಕಳೆದ ಎರಡು ಕನ್ನಡ ಶಿಬಿರಗಳಲ್ಲಿ ಕುಮಾರವ್ಯಾಸ ಭಾರತ ಮತ್ತು ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ' ಕಾವ್ಯಗಳ ಓದುವಿಕೆಯನ್ನು ಪರಿಚಯಿಸಿದೆ. ಕುಮಾರವ್ಯಾಸ ಭಾರತದ 'ಪಾಂಡುವಿನ ಮರಣ'ದ ಪ್ರಸಂಗವು ಮಾದ್ರಿಯ ಚಿತೆಯ ದುರಂತ ಕಥನ. ಸತಿಸಹಗಮನದ ಜ್ವಲಂತ ನಿದರ್ಶನ. ಸಾವಿನ ನೋವನ್ನು ಹೆಣ್ಣಿನ ಅಸಹಾಯಕತೆಯನ್ನು ಕಟ್ಟಿಕೊಡುವ ಸಂಕಥನ. ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ'ದ ಇಂಗ್ಲಿಷ್ ಅನುವಾದ ವನಮಾಲ ವಿಶ್ವನಾಥ್ ಅವರದ್ದು ಪ್ರಕಟವಾಗಿದೆ. ಆ ಕಾವ್ಯದ ದ್ವಾದಶ ಸ್ಥಲದಲ್ಲಿ ಹರಿಶ್ಚಂದ್ರನ ಮಡದಿ ಚಂದ್ರಮತಿ ಮತ್ತು ಮಗ ಲೋಹಿತಾಶ್ವರು ಬ್ರಾಹ್ಮಣನ ಮನೆಯಲ್ಲಿ ಪಡುವ ಸಂಕಷ್ಟಗಳ ಘೋರ ವರ್ಣನೆ ಇದೆ. ದರ್ಭೆಹುಲ್ಲನ್ನು ಹುತ್ತದಿಂದ ಕೀಳಲು ಹೋಗಿ ಲೋಹಿತಾಶ್ವನು ಸರ್ಪದಿಂದ ಕಚ್ಚಲ್ಪಟ್ಟು ಸಾಯುವ ದಾರುಣ ಚಿತ್ರವಿದೆ. ಇವುಗಳ ವರ್ಣನೆ ಕೇಳುತ್ತಿದ್ದಂತೆ ತರಗತಿಯಲ್ಲಿ ಇದ್ದ ಹೆಣ್ಣುಮಕ್ಕಳು ಕಣ್ಣೀರು ಸುರಿಸಿದ ದೃಶ್ಯ ಈಗಲೂ ನನ್ನ ಕಣ್ಣನ್ನು ಮಂಜುಮಾಡುತ್ತದೆ.

ಜೆರೂಸಲೆಮ್‌ನಲ್ಲಿ ಜನ್ನ–ಪೋಲೆಂಡ್‌ನಲ್ಲಿ ಪಂಪ!

ಕನ್ನಡ ಶಿಬಿರಗಳಲ್ಲಿ ಕಲಿತ ಇಟೆಲಿಯ ಎಲೆನಾ ಕನ್ನಡದ ಕೆಲಸವನ್ನು ಗಂಭೀರವಾಗಿ ತೆಗೆದುಕೊಂಡು ಮುಂದುವರಿಸಿಕೊಂಡು ಬರುತ್ತಿದ್ದಾಳೆ. ಅವಳು ಜರ್ಮನಿಯ ತ್ಯೂಬಿಂಗನ್ ವಿವಿಯಲ್ಲಿ ಎಪಿಗ್ರಾಫಿಯಾ ಕರ್ನಾಟಕದ ಕನ್ನಡ ಶಾಸನಗಳನ್ನು ಡಿಜಿಟಲೈಸ್ ಮಾಡುವ ಸಂಶೋಧನಾ ಯೋಜನೆಯನ್ನು ಪೂರ್ಣಗೊಳಿಸಿದ್ದಾಳೆ. ಈಗ ಇಸ್ರೇಲ್‌ನ ಜೆರುಸಲೇಮ್‌ನಲ್ಲಿ ಡೇವಿಡ್ ಶುಲ್ಮನ್ ಅವರ ಸಂಶೋಧನ ಯೋಜನೆಯಲ್ಲಿ ಸೇರಿಕೊಂಡು ಅದರಲ್ಲಿ ಕನ್ನಡ ಸಾಹಿತ್ಯದ ಪಠ್ಯಗಳನ್ನು ಸೇರಿಸಿದ್ದಾಳೆ. ಕಳೆದ ಶಿಬಿರದಲ್ಲಿ ಸಿಕ್ಕಾಗ ಎಲೆನಾಳಲ್ಲಿ ತಮಾಷೆಯಾಗಿ ಹೇಳಿದೆ: 'ಜನ್ನನನ್ನು ಜೆರುಸಲೆಮ್‌ಗೆ ಕೊಂಡುಹೋದಿ ನೀನು. ಅಲ್ಲಿ ಸಂಕಲ್ಪ ಹಿಂಸೆ ಮಾಡಬೇಡ' ಎಂದು! ಇಟೆಲಿಯ ಫ್ಲೋರಿಂಡಾಳು ನೇಪಲ್ಸ್‌ನ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಷಯವನ್ನು ಸೇರಿಸಿದ್ದೇನೆ ಎಂದು ತಿಳಿಸಿದಾಗ ಸಂತಸವಾಯಿತು. ಮೂಲತಃ ಡೆನ್ಮಾರ್ಕ್‌ನ ಕೇಟ್ ಕ್ರಾಗ್ ನನ್ನ ಪಂಪಭಾರತದ ಪಾಠ ಕೇಳಿ, ಅದನ್ನು ಪೋಲೆಂಡ್‌ನ ಪೋಸ್ನನ್‌ನ ವಿವಿಯಲ್ಲಿ ಸಂಶೋಧನಾ ಯೋಜನೆಯ ನಿರ್ದೇಶಕ ಅಗಿರುವ ತನ್ನ ಗಂಡ ಪ್ರೊ. ಉಲ್ರಿಕ್ ಕ್ರಾಗ್ ಅವರಿಗೆ ತಿಳಿಸಿದ ಪರಿಣಾಮವಾಗಿ ಪ್ರೊ.ಕ್ರಾಗ್ ಅವರು ತಮ್ಮ ಸಂಶೋಧನಾ ಯೋಜನೆ 'ಏಷ್ಯಾದ ಚಾರಿತ್ರಿಕ ಕಥನದ ಮಾದರಿಗಳು' ಇದರಲ್ಲಿ ಚೀನಾ, ಟಿಬೆಟ್ ಮತ್ತು ಭಾರತದ ಪ್ರಾಚೀನ ಕ್ಲಾಸಿಕಲ್ ಸಾಹಿತ್ಯಕೃತಿಗಳಲ್ಲಿ ಪಂಪ ಭಾರತವನ್ನೂ ಸೇರಿಸಿದ್ದಾರೆ. ಕಳೆದ ಮೇ–ಜೂನ್ ನಲ್ಲಿ ನಾನು ಪೋಲೆಂಡ್ ನ ಪೋಸ್ನನ್‌ನಲ್ಲಿ ಅವರಿಗೆ ಪಂಪ ಭಾರತವನ್ನು ಓದಿ ಹೇಳಿ ವಿವರಿಸಿದ್ದೇನೆ.

ಕ್ಲಾಸಿಕಲ್ ಕನ್ನಡದ ಬಗೆಗಿನ ಯುರೋಪಿಯನ್ನರ ಆಸಕ್ತಿಗೆ ಪೂರಕವಾಗಿ ಪ್ರೊ. ಸಿ.ಎನ್. ರಾಮಚಂದ್ರನ್ ಮತ್ತು ನಾನು 'Classical Kannada Poetry and Prose: A Reader' ಸಿದ್ಧಪಡಿಸಿ ಪ್ರಕಟಿಸಿದ್ದೇವೆ. (ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೫). ಈ ರೀಡರ್ ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಯುರೋಪಿನಲ್ಲಿ ಜನಪ್ರಿಯ ಆಕರ ಗ್ರಂಥವಾಗಿದೆ. ಪ್ರೊ.ಹೈಡ್ರೂನ್ ಬ್ರೂಕ್ನರ್ ಮತ್ತು ಡಾ.ಕತ್ರಿನ್ ಬಿಂದರ್ ಅವರು ಯು.ಆರ್. ಅನಂತಮೂರ್ತಿ ಅವರ ನಾಲ್ಕು ಕತೆಗಳನ್ನು ('ಸೂರ್ಯನ ಕುದುರೆ' , 'ಆಕಾಶ ಮತ್ತು ಬೆಕ್ಕು', 'ಘಟಶ್ರಾದ್ಧ', 'ಮೌನಿ') ಜರ್ಮನ್ ಭಾಷೆಗೆ ಅನುವಾದಿಸಿದ್ದು ಅದನ್ನು ಜರ್ಮನ್ ಪ್ರಕಾಶನ ಸಂಸ್ಥೆ ೨೦೧೭ರಲ್ಲಿ ಪ್ರಕಟಿಸಿದೆ. ಇದರಲ್ಲಿ ಅನುವಾದಕ್ಕೆ ಸ್ವಲ್ಪಮಟ್ಟಿನ ಸಹಾಯ ಮಾಡುವ ಅವಕಾಶ ನನಗೆ ದೊರಕಿತ್ತು. ನಾನು ಮತ್ತು ಡಾ.ಕತ್ರಿನ್ ಬಿಂದರ್ ಸೇರಿಕೊಂಡು ತೇಜಸ್ವಿ ಅವರ 'ಕರ್ವಾಲೊ 'ಕಾದಂಬರಿಯನ್ನು ಕನ್ನಡದಿಂದ ನೇರವಾಗಿ ಜರ್ಮನ್ ಭಾಷೆಗೆ ಅನುವಾದ ಮಾಡಿದ್ದು ಅದನ್ನು ಜರ್ಮನಿಯ ಪ್ರಕಾಶನ ಸಂಸ್ಥೆ 'ದ್ರೌಪದಿ ವೆರ್ಲಾಗ್' ೨೦೧೮ರಲ್ಲಿ ಪ್ರಕಟ ಮಾಡಿದೆ.

ನಾನು ಜರ್ಮನಿಗೆ ಮೊದಲು ಹೋದಾಗ 'ಕನಡ' ಎಂದರೆ 'ಕೆನಡ' ದೇಶ ಎಂದು ಭಾವಿಸಿದ್ದರು. ಜರ್ಮನರು 'ಕೆನಡ'ವನ್ನು 'ಕನಡ' ಎಂದು ಕರೆಯುತ್ತಾರೆ. ಈ ಹೆಸರಿನ ಒಂದು ಭಾಷೆ ಇದೆ ಎಂಬ ಕಲ್ಪನೆಯೇ ಅವರಿಗೆ ಇರಲಿಲ್ಲ. ಆದರೆ ಈಗ 'ಕನ್ನಡ' ಎಂಬ ಪದವು ಯುರೋಪಿನಲ್ಲಿ ಪರಿಗಣಿಸಬೇಕಾದ ಒಂದು ಭಾಷೆ, ಓದಬೇಕಾದ ಒಂದು ಸಾಹಿತ್ಯ, ನೋಡಬೇಕಾದ ಒಂದು ನಾಡು ಎಂಬ ಅರಿವು ಮೂಡುತ್ತಿದೆ. ಅದಕ್ಕೆ ಅನುಗುಣವಾಗಿ ನಾವು ಕನ್ನಡಿಗರು ಕವಿರಾಜಮಾರ್ಗಕಾರ ಹೇಳುವಂತೆ 'ಪಾಪಮಿದು ಪುಣ್ಯಮಿದು ಹಿತರೂಪಮಿದು ಅಹಿತಪ್ರಕಾರಮಿದು ಸುಖಮಿದು ದುಃಖೋಪಾತ್ತಮಿದು' ಎಂದು ಅರಿಯುವ ಅರಿವುಳ್ಳವರಾದಾಗ ಮಾತ್ರ ಕನ್ನಡ ವಿಶ್ವಮಾನ್ಯವಾಗುತ್ತದೆ.



(ಮಂಗಳೂರಿನಲ್ಲಿ ವಾಸಿಸುವ ವಿವೇಕ ರೈ ಅವರು ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನಂತರ ಕರ್ನಾಟಕದ ಎರಡು ವಿಶ್ವವಿದ್ಯಾನಿಲಯಗಳ ಕುಲಪತಿಗಳಾಗಿದ್ದ, ಕನ್ನಡ ಮತ್ತು ತುಳು ಭಾಷೆಗಳ ಹಿರಿಯ ವಿದ್ವಾಂಸರು)

ಗಮನಿಸಿ: ನಮ್ಮಸೆಪ್ಟಂಬರ್ ಸಂಚಿಕೆ ತಡವಾಗಲಿದೆ

ವಿಶೇಷ ಸಂಚಿಕೆಯ ಕೆಲಸಗಳ ಒತ್ತಡದಿಂದಾಗಿ ನಮ್ಮ ಮುಂದಿನ (ಸೆಪ್ಟಂಬರ್) ಸಂಚಿಕೆ ಆ ತಿಂಗಳ ಹತ್ತರ ಹೊತ್ತಿಗೆ ನಿಮ್ಮನ್ನು ತಲುಪಲಿದೆ. ದಯವಿಟ್ಟು ಓದುಗರು ಸಹಕರಿಸಬೇಕಾಗಿ ಕೋರುತ್ತೇವೆ–ಸಂ.

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



ಶ್ರೀ ಶಾರದಾ ವಿದ್ಯಾ ಸಂಸ್ಥೆ

ಗಾಂಧಿ ನಗರ ಚಳ್ಳಕೆರೆ
(ಚಿತ್ರದುರ್ಗ ಜಿ.)

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು




ಹಿಂದ್ ಮಜ್ದೂರ್ ಕಿಸಾನ್ ಪಂಚಾಯ್ತ್

ಮೈಕೇಲ್ ಬಿ. ಫರ್ನಾಂಡೀಸ್
ಅಧ್ಯಕ್ಷರು

ಎಲ್. ಕಾಳಪ್ಪ
ಪ್ರಧಾನ ಕಾರ್ಯದರ್ಶಿ

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು




ಶ್ರೀರಾಮ ಮೆಡಿಕಲ್ಸ್
ಔಷಧಿಗಳು ಮತ್ತು ಪಶು ಔಷಧಿಗಳ ಮಾರಾಟಗಾರರು
ಆರ್‌ಎಸ್‌ಎಸ್ ರಸ್ತೆ, ತ್ಯಾಮಗೊಂಡ್ಲು (ನೆಲಮಂಗಲ ತಾ.)

ಹೋಟೆಲ್ ಹಳ್ಳಿ ನೆನಪು
ರಾಷ್ಟ್ರೀಯ ಹೆದ್ದಾರಿ-೪ ಬೆಂಗಳೂರು-ತುಮಕೂರು ರಸ್ತೆ
ಕೆಂಗಲ್ ಕೆಂಚೋಹಳ್ಳಿ, ಸೋಂಪುರ ಹೋಬಳಿ

ಶಿವ ಮೆಡಿಕಲ್ಸ್
ಮಧುಗಿರಿ ರಸ್ತೆ, ಡಾಬಸ್‌ಪೇಟೆ,
ನೆಲಮಂಗಲ ತಾ.

ಶ್ರೀ ಲಕ್ಷ್ಮೀ ಪ್ರಿಂಟರ್ಸ್
ಆನೆಬೀದಿ, ತ್ಯಾಮಗೊಂಡ್ಲು,
ನೆಲಮಂಗಲ ತಾ.



ಅದೇನಾಯಿತೋ ಏನೋ..ಮೊನ್ನೆಯ ಎಳ್ಳಮಾಸ್ಯೆಯ ದಿನ ನಾವು ಸಾಲ ಕೊಟ್ಟ ರೈತನ ಹೊಲಕ್ಕೆ ಊಟಕ್ಕೆ ಹೋಗಿ, ಊಟ ಮಾಡಿ ತಿರುಗಾಡುತ್ತ, ತಿರುಗಾಡುತ್ತ ದೊಡ್ಡ ಹುಣಿಸೇಮರದ ಕೆಳಗೆ ಬಂದೆವಲ್ಲ, ಆಗ ನನಗೆ ಇದ್ದಕ್ಕಿದ್ದಂತೆ ದೆವ್ವಗಳ ಬಗ್ಗೆ ಒಂದು ಪ್ರಬಂಧ ಬರೆಯಬೇಕೆನ್ನಿಸಿಬಿಟ್ಟಿತು. ಸಾಹಿತಿಯಾದವನು ಸಾವಿನ ಬಗ್ಗೆ ಮತ್ತು ತಾಯಿಯ ಬಗ್ಗೆ ಬರೆಯಲೇಬೇಕಂತೆ. ನನಗೆ ದೆವ್ವಿನ ಬಗ್ಗೆ ಕೂಡ ಬರೆಯಬೇಕೆನ್ನಿಸಿದ್ದು ಮಾತ್ರ ವಿಚಿತ್ರ ಆದರೂ ನಿಜ. ಆದರೆ ಆಗ ಬರೆಯಲೇಬೇಕೆಂಬ ಅದಮ್ಯ ಹುಮ್ಮಸ್ಸು ಹೇಗೆ ತುಂಬಿತ್ತೆಂದರೆ ಮನಸ್ಸಿನ ತುಂಬ ದೆವ್ವಗಳೇ ಓಡಾಡತೊಡಗಿದ್ದವು. ಮುಖ ಮನಸ್ಸಿನ ಕನ್ನಡಿ ಎಂದು ಹೇಳುತ್ತಾರಲ್ಲ, ಬಹುಶಃ ಆ ರೈತನಿಗೆ ನನ್ನ ಮುಖದಲ್ಲಿ ಏನೋ ಕಂಡಂತಾಗಿರಬೇಕು. ಹುಣಿಸೇಮರದ ಕಡೆಗೆ ನೋಡಿದ. "ಸಾಹೇಬರ, ನಡೀರಿ. ಹೋಗೂಣು..." ಎಂದವನೇ ಅವಸರ ಮಾಡತೊಡಗಿದ. ನನ್ನನ್ನು ಮನೆಗೆ ತಂದು ಬಿಟ್ಟಾಗ ಅವನಿಗೆ ದೆವ್ವದಿಂದ ಬಿಡಿಸಿಕೊಂಡಂಥ ನಿರಾಳಭಾವ!

ನಾನು ಮೆಲ್ಲನೆ ಹೆಜ್ಜೆ ಹಾಕಿದರೂ ಅದು 'ದಪ್ ದಪ್' ಎಂದು ಶಬ್ದವಾಗುತ್ತಿತ್ತು. ಅಂಥದರಲ್ಲೇ ಬರೆಯುವ ಮೇಜು ತಲುಪಿ, ಕಾಗದ ಹೊಂದಿಸಿಕೊಂಡೆ. ಮಾರ್ಜಿನ್ ಬಿಟ್ಟು ಮಡಿಸಿದೆ. ಆಮೇಲೆ ದೊಡ್ಡ ಅಕ್ಷರಗಳಲ್ಲಿ 'ದೆವ್ವಗಳು' ಎಂದು ತಲೆಬರಹ ಕೊಟ್ಟು, ಅದರ ಎರಡೂ ಬದಿಗೆ ಎರಡೆರಡು ತಲೆಬುರುಡೆಯ ಚಿತ್ರ ಬರೆದೆ. ಮತ್ತು ಅವುಗಳಿಗೆ ಹೊಂದಿ ಗುಣಾಕಾರ ಚಿಹ್ನೆ ಬರೆದೆ. ಈ ಅಲಂಕೃತ ತಲೆಬರಹ ನಾನು ಪದಗಳಲ್ಲಿ ಹೇಳಲಾಗದ್ದನ್ನು ಹೇಳುತ್ತದೆ ಎಂದು ಸಂತೃಪ್ತನಾದೆ. ಈ ತಲೆ ಬುರುಡೆಯ ಚಿತ್ರ ಹಾಗೂ ಗುಣಾಕಾರ ಚಿಹ್ನೆಗಳೆರಡೂ ವಿದ್ಯುತ್ ಇಲಾಖೆಯ ಆಸ್ತಿಯಲ್ಲವೇ ಎಂದು ಅಂದುಕೊಳ್ಳುತ್ತಿದ್ದಂತೆಯೇ ತಲೆಯ ಮೇಲಿನ ದೀಪ ಆರಿಹೋಯಿತು. ಇಡೀ ಮನೆಯದು...! ನನ್ನ ಮೈಯಲ್ಲಿದ್ದ ಉತ್ಸಾಹ ನನಗೇ ಕಾಣುವಂತೆ ಕಿಟಕಿಯ ಮೂಲಕ ಹೊರಟು ಹೋಯಿತು. UPS ಹಾಳಾಗಿ, ಸೋಲಾರ್ ದೀಪ ತಂದದ್ದು. ಅದೂ ಹಾಳಾಗಿ ಈಗ ಮೇಣದ ಬತ್ತಿ ಬಳಸುತ್ತಿದ್ದೇವೆ...

ಇಂದು ಮೇಣದ ಬತ್ತಿ ಕೂಡ ಖಾಲಿಯಾಗಿದ್ದು ನೆನಪಾಗಿ, ಹೆಂಡತಿ ಇನ್ನೇನು ದೆವ್ವದಂತೆ ಕೂಗುತ್ತಾಳೆ ಎನಿಸುತ್ತಿದ್ದಂತೆಯೇ ದಿಂಗನೆದ್ದು ಅಂಗಡಿಯ ಕಡೆಗೆ ಹೊರಟೆ...

ಮನೆಗೆ ಬಂದಾಗ ವಿದ್ಯುತ್ ಬಂದಿತ್ತಾದರೂ 'ದೆವ್ವಗಳು' ತನ್ನ ತಲೆಬರಹದ ಕೆಳಗೆ ಏನೂ ಬರೆಸಿಕೊಳ್ಳಲಿಲ್ಲ. ಯಾರದೋ ಫೋನಿಗೆ ಹೆಂಡತಿ_____

'ಅವರು ದೆವ್ವಗಳ ಬಗ್ಗೆ ಬರೆಯುತ್ತಿದ್ದಾರೆ' ಎಂದು ಸುಳ್ಳು ಹೇಳುವುದು ಕೇಳಿಸಿತು. ಮಲಗಿದೆ.

ಮರುದಿನ ನಾನು ಪೇಪರ್ ಓದಿ, ತಿಂಡಿ ತಿಂದು ಬೆಳಗಿನ ವಾಡಿಕೆಯ ತೂಕಡಿಕೆಗೆ ಇಳಿದಿದ್ದಾಗ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ನನ್ನ ನಾಲ್ಕೈದು ಜನ ಗೆಳೆಯರು ಒಳಗೆ ಬಂದು ಮೆತ್ತಗೇ ಕುಳಿತರು. 'ನೀನು ಹೇಳು' 'ನೀನೇ ಹೇಳು' ಎಂಬಂತೆ ಪರಸ್ಪರರು ಕತ್ತು ಅಲ್ಲಾಡಿಸಿಕೊಂಡರು. ಕೊನೆಗೆ ಒಬ್ಬ ಬಾಯಿ ತೆಗೆದು ಒಂದು ಸಾಲಿನ ನಾಂದಿ ಹಾಡಿದ. 'ದೆವ್ವದ ಬಗ್ಗೆ ಬರೀಬೇಕಂತ ಮಾಡಿದ್ದೀಯಾ?'

ನನಗೆ ಆಶ್ಚರ್ಯವಾಯ್ತು. ನಿನ್ನೆ ನನ್ನ ಹೆಂಡತಿ ಫೋನ್‌ನಲ್ಲಿ ಒಬ್ಬರಿಗೆ ಮಾತ್ರ ಹೇಳಿದ್ದು, ಅದು ಎಲ್ಲರಿಗೂ ತಿಳಿದದ್ದು, ದೆವ್ವಿನ ಕೆಲಸವಂತೆಯೇ ನನಗೆ ಕಂಡಿತು. ನನ್ನ ಮೌನ ಅವರ ನಿರೀಕ್ಷೆಗೆ ಕೂಡಲೇ ಒಪ್ಪಿಗೆಯಾಯಿತು. ಈಗ ಇನ್ನೊಬ್ಬ ಬಾಯಿ ತೆರೆದ. 'ಯಾಕೆ ನೀನು ನಾಲ್ಕು ಜನರಂತೆ ಇಲ್ಲ...?' ಇವನ್ನು ಆತ ಮೊದಲಿನಿಂದಲೂ ಕೇಳುತ್ತಲೇ ಬಂದಿದ್ದಾನೆ. ಬಹಳ ಜನ ಈ ಪ್ರಶ್ನೆ ಕೇಳುವುದು ನಿಜ. ಇದಕ್ಕೂ ನಾನು ಮೌನತಾಳಿದೆ. ಅಷ್ಟಾಗುವಾಗ ವಕೀಲ ಗೆಳೆಯ ಮೈಕು ಕೈಗೆ ತೆಗೆದುಕೊಂಡಂತೆ ಮಾಡಿ, ಮುಷ್ಟಿಯಲ್ಲಿ ಕೆಮ್ಮಿ, ಕೋರ್ಟಿನಲ್ಲಿ ಕೇಳುವಂತೆ ಪಾಟೀಸವಾಲು ಹಾಕಿದ. "ನೀನು ದೇವರ ಬಗ್ಗೆ ಈ ಹಿಂದೆ ಬರೆದಿರುವಿ. ಈಗ ದೆವ್ವದ ಬಗ್ಗೆಯೂ ಬರೆಯಬೇಕೆನ್ನುತ್ತೀ. ನಿನಗೆ ದೇವರು ದೆವ್ವಗಳೆರಡೂ ಒಂದೇ ಏನು, ಹಾಗಾದರೆ..?". ನನಗೆ ಇದು ಹೊಳೆದಿರಲಿಲ್ಲ. ಹೇಗೆ ಒಂದು? ದೊಡ್ಡ ಸಾಹಿತಿಯೊಬ್ಬರು ಹೆಂಡತಿಯ ಬಗ್ಗೆ ಬರೆದಿದ್ದಾರೆ. ಪ್ರೇಯಸಿಯ ಬಗ್ಗೆಯೂ ಅಷ್ಟೇ ಚನ್ನಾಗಿ ಬರೆದಿದ್ದಾರೆ. ಹಾಗಂತ ಇಬ್ಬರೂ ಒಂದೇ ಆದಾರೆಯೇ? ಅದರ ಬರೆಯದಿರಲಾದೀತೇ? ರಾವ ಬಹಾದ್ದೂರರ ಒಂದು ಕಾದಂಬರಿಯಲ್ಲಿ ಬರುವ ಗೌಡನೊಬ್ಬ ಕೋರ್ಟಿನಲ್ಲಿ "... ಹ್ಯಾಂತಿ ಪ್ರೀತಿ ಹ್ಯಾಂತೀದರೀ ಮತ್ತ ರಂಡೀ(ಪ್ರೇಯಸಿ) ಪ್ರೀತಿ ರಂಡೀದರೀ..." ಎಂದು ಸಹಜವಾಗಿ ಹೇಳುತ್ತಾನೆ. ಆದರೆ ನನಗೆ ದೆವ್ವ ಮತ್ತು ದೇವರ ಸಮಾನತೆಯ ಪ್ರಶ್ನೆಗೆ ಗೌಡನಷ್ಟು ಪ್ರಾಮಾಣಿಕವಾಗಿ ಉತ್ತರ ಹೇಳಲು ಆಗಲಿಲ್ಲ. ದೇವರನ್ನು ಜನ ನಂಬುತ್ತಾರೆ ಮತ್ತು ದೆವ್ವಕ್ಕೆ ಹೆದರುತ್ತಾರೆ. ಆದರೆ ಇರುವಿಕೆಯನ್ನು ಒಪ್ಪುತ್ತಾರೆ. ನಾನು ಕೇಳಿದೆ. 'ದೆವ್ವಗಳಿದ್ದರೆ ಅವುಗಳ ಬಗ್ಗೆ ಕೂಡ ಬರೆಯಬಹುದಲ್ಲವೇ? ಬರೆದರೆ ಏನಾಗುತ್ತದೆ?'... 'ಬರೆದರೆ ಏನಾಗುತ್ತದೆ' ಎಂದು ಹೇಳುವಾಗಲೇ ನನ್ನೊಳಗೆ ಸಣ್ಣಗಿನ ಒಂದು ಭಯ ಸುಳಿದು ಹೋಯಿತು. ತೋರಗೊಡಲಿಲ್ಲ. ನಾನು ಬರೆಯುವವನೇ ಎಂದು ಅವರಿಗೆ ಅನಿಸಿದ್ದೇ ತಡ, ನಾನು ಹೇಳಿರಲಿಲ್ಲವೇ ಎಂಬಂತೆ ಒಬ್ಬರನ್ನೊಬ್ಬರು ನೋಡಿಕೊಂಡರು. ಇನ್ನೊಬ್ಬ ಗೆಳೆಯ ಬಂದಿದ್ದ. ಆತ ಒಂದಿಷ್ಟು ಓದು-ಬರಹ ಬಲ್ಲವ. ನಾನೇ ಅವನಿಗೆ ಮಾತಾಡು ಎಂಬಂತೆ ಕತ್ತು ಅಲ್ಲಾಡಿಸಿದೆ. ಆತ ನಿಧಾನವಾಗಿ ಕೇಳತೊಡಗಿದ. 'ಈ ದೆವ್ವಗಳ ಕುರಿತಂತೆ ಪ್ರಬಂಧ ಪಿತಾಮಹ ಮೂರ್ತಿರಾಯರು ಬರೆದಿದ್ದಾರೆ. ಇಂಗ್ಲೀಷ್, ಸಂಸ್ಕೃತ ಸಹಿತ ಎಲ್ಲಾ ಭಾಷೆಯಲ್ಲಿ, ನಾಟಕ, ಕತೆ, ಕಾದಂಬರಿ, ಕಾವ್ಯ ಎಲ್ಲಾ ಕಡೆಗೂ ದೆವ್ವಗಳು ಬಂದಿವೆ. ಹೀಗಿರುವಾಗ ನಿನ್ನ ದೆವ್ವ ಕೂಡ ಸಾಹಿತ್ಯಕ್ಕೆ ಯಾವ ರೀತಿಯಲ್ಲಿ ಅಗತ್ಯ?'

ನಾನು ನಗುತ್ತಲೇ ಹೇಳಿದೆ. 'ನನ್ನ ದಾಯಾದಿ, ನನ್ನ ಮೇಲಧಿಕಾರಿ, ನನ್ನ ಮಕ್ಕಳು, ನನ್ನ ಹೆಂಡತಿ ಅಂತ ಇರುವುದಿಲ್ಲವೇ, ಹಾಗೇ ಇದು ನನ್ನ ದೆವ್ವ. ಸೂಫಿ ಸಂತರು ಲೇಕುಂ ದೀನುಕುಂ ವಲ್ ಯೇ ದೀನ್ ಅಂದು ಹೇಳುವುದಿಲ್ಲವೇ? ಅಂದರೆ ನಿಮ್ಮ ಧರ್ಮ ನಿನಗೆ, ನಮ್ಮ ಧರ್ಮ ನನಗೆ ಅಂತ. ಹಾಗೇ ಇದು ಕೂಡ. ಮೂರ್ತಿರಾಯರ ದೆವ್ವ ಅವರದು, ನನ್ನ ದೆವ್ವ ನನ್ನದು ಮತ್ತು ನಿಮ್ಮ ದೆವ್ವ ನಿಮ್ಮದು. ಇವು ನಮ್ಮ ಜೊತೆಗೆ ಇರುವಂಥವೇ..' ಎಂದು ಸ್ಪಷ್ಟಪಡಿಸಿದೆ... 'ನಿಮ್ಮ ದೆವ್ವ ನಿಮ್ಮದು' ಎನ್ನುತ್ತಿದ್ದಂತೆಯೇ ಎಲ್ಲರೂ ಕುಳಿತಲ್ಲೇ ಹಿಂದೆ ಸರಿದರು. ಇಬ್ಬರು ಥಂಗನ ಎದ್ದೇ ನಿಂತರು. ಇಷ್ಟರಲ್ಲಿ ಹೆಂಡತಿ ಎಲ್ಲರಿಗೂ ಚಹ ತಂದಳು. ಗಾಣಗಾಪುರದಲ್ಲಿ ದೆವ್ವ ಹಿಡಿದ ಒಬ್ಬಳಿಗೆ ಭೂತ ಬಿಡಿಸುವವ ಮಾಡಬೇಕಾದ ಎಲ್ಲಾ 'ಚಿಕಿತ್ಸೆ' ಮಾಡಿಯಾದ ಮೇಲೆ, ಒಂದು ದೊಡ್ಡ ಲೋಟ ಟೀ ತರಿಸಿಕೊಟ್ಟಿದ್ದ. ಕುಡಿದಾದ ಮೇಲೆ ಅವಳ ಮುಖದಲ್ಲಿ ಅರ್ಧ ದೆವ್ವ ಬಿಟ್ಟು ಹೋದ ಕಳೆ ಬಂದಿತ್ತು. ಇಲ್ಲೂ ಹಾಗೇ ಆಯಿತು. ಚಹ ಕುಡಿದು ಗೆಳೆಯರು ಸ್ವಲ್ಪ ಪ್ರಸನ್ನರಾದರು. ಹೆಂಡತಿ ಚಹ ಕುಡಿದೇ ಬಂದಿದ್ದಳೇನೋ....ನಗುತ್ತಲೇ ಇದ್ದಳು ಮತ್ತು ಹೇಳಿದಳು. 'ಯಾರೂ ಬೇಸರ ಮಾಡಿಕೋ ಬೇಡಿ. ಸಂಸಾರ ಎಂಬುದೇ ದೆವ್ವಿನ ಜೊತೆ ಇದ್ದಂತೆ. ಅಲ್ಲವೇನು..? ಹೋಗಲಿ ಬಿಡಿ. ಇವರ ಮನಸ್ಸಿಗೆ ಒಂದು ಹೊಕ್ಕರೆ ದೆವ್ವ ಹೊಕ್ಕಂತೆಯೇ..' ಎಂದು ಹೇಳಿ ಒಳಗೆ ಹೋದಳು. ತಮಗೂ ದೆವ್ವದ ನಂಟಿದೆ, ಬಿಡಲಾರದ್ದು, ಎಂದು ಹೇಳಿಸಿಕೊಂಡು ಗೆಳೆಯರು ಹೊರಗೆ ಹೋದರು.

ಕಾಲು ಗಂಟೆ ಏನೋ ಯೋಚಿಸುತ್ತ ಕುಳಿತಿದ್ದೆ. ಇವರೆಲ್ಲ ದೆವ್ವಗಳಿಗೆ ಇಷ್ಟೇಕೆ ಹೆದರುತ್ತಾರೆ? ಇಷ್ಟಕ್ಕೂ ಒಂದು ಲೇಖನ ಬರೆದರೆ ಅವುಗಳಿಗಾಗಲಿ, ನಮಗಾಗಲೀ ಏನು ವ್ಯತ್ಯಾಸ ಆದೀತು?.... ಒಮ್ಮೆಗೇ ಗೆಳೆಯ ಮುರಾರಿ ಕುಳಿತಿದ್ದ ಜಾಗದಲ್ಲಿ ಚಹದ ಕಪ್ಪು ಕೆನೆಗಟ್ಟಿಕೊಂಡು ಹಾಗೇ ಕುಳಿತದ್ದು ಕಾಣಿಸಿತು. ಹಾಗಾದರೆ ಆತ ಚಹ ಕುಡಿದಿಲ್ಲ. ಮಾತಾಡಿರಲೂ ಇಲ್ಲ. ಒಂದಿಷ್ಟು ಸೂಕ್ಷ್ಮ ಜೀವಿ. ನೊಂದುಕೊಂಡನೋ ಏನೋ ಎಂದೆನ್ನಿಸಿ ಅವನ ಮನೆಗೆ ಫೋನ್ ಮಾಡಿದೆ. ಅವನ ಹೆಂಡತಿ ಫೋನ್ ತೆಗೆದುಕೊಂಡಳು. '....ಅವರು ಎಲ್ಲೋ ದೆವ್ವ ಬಡಿದವರ ಮನೆಗೆ ಮಾತಾಡಿಸಲು ಹೋಗಿದ್ದರಂತೆ. ಈಗಿನ್ನೂ ಬಂದು ಸ್ನಾನಕ್ಕೆ ತೊಡಗಿದ್ದಾರೆ. ಏನಾದರೂ ಹೇಳಬೇಕೇ..' ಎಂದು ಕೇಳಿದಳು. ನಾನೇನೂ ಹೇಳದಂತಾಗಿದ್ದೆ. ನನಗೆ ದೆವ್ವ ಬಡಿದಿದೆ ಎಂದು ಗೆಳೆಯರ ಜೊತೆಗೂ

ದೇವರನ್ನು ಮನುಷ್ಯನೇ ಬೇಕಾಗಿ ನಿರ್ಮಿಸಿಕೊಂಡ ಎಂದು ಬುದ್ಧಿಜೀವಿಗಳೆಲ್ಲ ಹೇಳುತ್ತಾರೆ. ತಾಯಿಯಂತೆ, ತಂದೆಯಂತೆ, ಗುರುವಿನಂತೆ ನೋಡಿಕೊಳ್ಳುವ ಒಬ್ಬ ದೇವರು ಯಾರಿಗೆ ಬೇಡ ಹೇಳಿ? ಮೂರ್ತಿರಾಯರು, ಅನಂತಮೂರ್ತಿಯವರು ಎಲ್ಲಾ ದೇವರು ಬೇಕು, ಇಲ್ಲದಿದ್ದರೆ ನಿರ್ಮಿಸಿಕೋಬೇಕು ಎಂದು ಹೇಳಿದವರೇ! ಆದರೆ ಚೋದ್ಯವೆಂದರೆ ಮನುಷ್ಯ ದೇವರನ್ನು ನಿರ್ಮಿಸಿಕೊಳ್ಳುವಲ್ಲಿ ತೋರಿಸುವ ಆಸ್ಥೆಗಿಂತ ದೆವ್ವವನ್ನು ನಿರ್ಮಿಸಿಕೊಳ್ಳುವಲ್ಲಿ ಹೆಚ್ಚಿನ ಆಸ್ಥೆಯನ್ನು ತೋರಿಸುತ್ತಾನೆ. ಹಣ– ಆಸ್ತಿಯ ಹುಚ್ಚಿರುವವಗೊಂದು ದೆವ್ವ, ರಾಜಕೀಯ– ಅಧಿಕಾರ ಮುಂತಾದವರಿಗೊಂದು ದೆವ್ವ, ಮಕ್ಕಳು–ಮೊಮ್ಮಕ್ಕಳ ವ್ಯಾಮೋಹದವರಿಗೊಂದು ದೆವ್ವ, ಪ್ರಶಸ್ತಿ–ಪುರಸ್ಕಾರಗಳ ಬೆನ್ನೇರಿದವರಿಗೊಂದು ದೆವ್ವ, ಮಡಿ–ಹುಡಿಯ ಹುಚ್ಚಿನವರಿಗೊಂದು ದೆವ್ವ....ಹೀಗೆ ಅಸಂಖ್ಯ ದೆವ್ವಗಳು. ಕೆಲವರ ವೈಯಕ್ತಿಕ ಖಯಾಲಿಗಾಗಿ ವೈಯಕ್ತಿಕ ದೆವ್ವಗಳು ಕೂಡ ಇರುತ್ತವೆ.

ತಿಳಿದುಹೋಗಿತ್ತು!

ನನಗೂ ಗೊತ್ತು. ದೆವ್ವಗಳ ಕುರಿತಂತೆ ಎಲ್ಲರೂ ಇರುವಾಗ ಮಾತಾಡುವುದು ಚಂದ. ಜೋಕ್ ಕೂಡ ಮಾಡಬಹುದು. ಆದರೆ ಒಬ್ಬರೇ ನಿರ್ಜನ ಪ್ರದೇಶದಲ್ಲಿದ್ದಾಗ ಅದೆಲ್ಲ ಆಗದು.... ಗೆಳೆಯರಿಗೆ ನಾನು ದೆವ್ವಗಳನ್ನು ಸುಖಾ ಸುಮ್ಮನೆ ಎದುರು ಹಾಕಿಕೊಂಡು ಕಷ್ಟ ಪಡಬಾರದು ಎಂಬ ಕಾಳಜಿ. ನಾನು ಅವರ ದೃಷ್ಟಿಯಲ್ಲಿ ಸ್ಥಾಪಿತವಾಗಿರುವ ದೆವ್ವಗಳ ಗೊಡವೆಗೆ ಹೋಗುವ ಆಲೋಚನೆಯಲ್ಲಿಲ್ಲ ಎಂಬುದು ಅವರಿಗೆ ತಿಳಿದಿರಲಿಲ್ಲ. ಮತ್ತು ನನ್ನ ದೆವ್ವಗಳೇ ಬೇರೆ ಎಂದು ನಾನೂ ಸ್ಪಷ್ಟವಾಗಿ ಹೇಳಿಲ್ಲ.

ದೇವರನ್ನು ಮನುಷ್ಯನೇ ಬೇಕಾಗಿ ನಿರ್ಮಿಸಿಕೊಂಡ ಎಂದು ಬುದ್ಧಿಜೀವಿಗಳೆಲ್ಲ ಹೇಳುತ್ತಾರೆ. ತಾಯಿಯಂತೆ, ತಂದೆಯಂತೆ, ಗುರುವಿನಂತೆ ನೋಡಿಕೊಳ್ಳುವ ಒಬ್ಬ ದೇವರು ಯಾರಿಗೆ ಬೇಡ ಹೇಳಿ? ಮೂರ್ತಿರಾಯರು, ಅನಂತಮೂರ್ತಿಯವರು ಎಲ್ಲಾ ದೇವರು ಬೇಕು, ಇಲ್ಲದಿದ್ದರೆ ನಿರ್ಮಿಸಿಕೋಬೇಕು ಎಂದು ಹೇಳಿದವರೇ! ಆದರೆ ಚೋದ್ಯವೆಂದರೆ ಮನುಷ್ಯ ದೇವರನ್ನು ನಿರ್ಮಿಸಿಕೊಳ್ಳುವಲ್ಲಿ ತೋರಿಸುವ ಆಸ್ಥೆಗಿಂತ ದೆವ್ವವನ್ನೂ ನಿರ್ಮಿಸಿಕೊಳ್ಳುವಲ್ಲಿ ಹೆಚ್ಚಿನ ಆಸ್ಥೆಯನ್ನು ತೋರಿಸುತ್ತಾನೆ. ಹಣ–ಆಸ್ತಿಯ ಹುಚ್ಚಿರುವವಗೊಂದು ದೆವ್ವ, ರಾಜಕೀಯ– ಅಧಿಕಾರ ಮುಂತಾದವರಿಗೊಂದು ದೆವ್ವ, ಮಕ್ಕಳು–ಮೊಮ್ಮಕ್ಕಳ ವ್ಯಾಮೋಹದವರಿಗೊಂದು ದೆವ್ವ, ಪ್ರಶಸ್ತಿ–ಪುರಸ್ಕಾರಗಳ ಬೆನ್ನೇರಿದವರಿಗೊಂದು ದೆವ್ವ, ಮಡಿ–ಹುಡಿಯ ಹುಚ್ಚಿನವರಿಗೊಂದು ದೆವ್ವ...ಹೀಗೆ ಅಸಂಖ್ಯ ದೆವ್ವಗಳು. ಕೆಲವರ ವೈಯಕ್ತಿಕ ಖಯಾಲಿಗಾಗಿ ವೈಯಕ್ತಿಕ ದೆವ್ವಗಳು ಕೂಡ ಇರುತ್ತವೆ...

ಮಧ್ಯಾಹ್ನದ ಊಟ ಮುಗಿಸಿದಾಗ ತಲೆಬುರುಡೆಗಳಿಂದ ಅಲಂಕೃತವಾದ 'ದೆವ್ವಗಳು' ತಲೆಬರೆಹ ಮತ್ತೆ ಕರೆಯತೊಡಗಿತು. ಒಂದಕ್ಷರವನ್ನೂ ಬರೆದಿರಲಿಲ್ಲ. ಬರೆಯುತ್ತಿದ್ದೆನೋ ಇಲ್ಲವೋ ಅದೂ ಗೊತ್ತಿರಲಿಲ್ಲ. ಆಗಲೇ ಗೆಳೆಯ ಮಾರಣ್ಣ ಬಂದ. ಮುಖ ಇಳಿದು ಹೋಗಿತ್ತು. ಹಾಗೆ ನೋಡಿದರೆ ಅವನ ಮುಖ ಹೀಗಾಗಿ ಸಾಕಷ್ಟು ದಿನಗಳೇ ಆಗಿದ್ದವು. ಅವನೇ ಸಾಕಿದ ದೆವ್ವ ಅವನನ್ನು ಹಿಡಿದುಕೊಂಡು ಕಾಡತೊಡಗಿತ್ತು. ಅದು ನಿಜಕ್ಕೂ ದೆವ್ವವಲ್ಲ. ಮೋಹಿನಿ! ಅವನು ಬಂದರೆ ಏಕೆ ಬಂದೆ ಎಂದು ನಾನೂ ಕೇಳುತ್ತಿರಲಿಲ್ಲ, ಅವನೂ ಹೇಳುತ್ತಿರಲಿಲ್ಲ. ಇಬ್ಬರಿಗೂ ತಿಳಿದ ವಿಷಯವೇ! ಮಾತಾಡದೆ ಮೊಬೈಲ್ ತೆಗೆದು ಬಂದ ಸಂದೇಶವೊಂದನ್ನು ತೋರಿಸಿದ. 'ತಕ್ಷಣವೇ ಬರದಿದ್ದರೆ ಸತ್ತು ಹೋಗುತ್ತೇನೆ. ಅಷ್ಟಕ್ಕೇ ಬಿಡುವುದಿಲ್ಲ. ದೆವ್ವವಾಗಿ ಕಾಡುತ್ತೇನೆ.' ಆತ 'ಸತ್ತು ಹೋಗುತ್ತೇನೆ' ಗೆ ಹೆದರಿರಲಿಲ್ಲ. 'ದೆವ್ವವಾಗಿ ಕಾಡುತ್ತೇನೆ' ಗೆ ಹೆದರಿದಂತಿದ್ದ. ನನಗೂ ಭಯವಾಯಿತು. ಸೀದಾ–ಸಾದಾ ಮನುಷ್ಯ ಸತ್ತರೇನೇ ದೆವ್ವವಾಗಿ ಸಾಕಷ್ಟು ಕಾಡುತ್ತಾನೆ. ಇನ್ನು ಮೋಹಿನಿಯಂಥ ಮೋಹಿನಿ ಸತ್ತರೆ ಎಂತಹ ದೆವ್ವವಾಗಬಹುದು...! ಆತನಿಗೆ 'ಹೋಗು' ಎಂದೆ. 'ನೀನೂ ಬಾ' ಎಂದು ಕೈ ಮುಗಿದ. ಆಕೆ ನನ್ನ ಸಹೋದ್ಯೋಗಿ ಆಗಿದ್ದವಳು. ನನ್ನ ಮೂಲಕವೇ ಅವಳ ಪರಿಚಯ. ಹೋಗಲೇಬೇಕಾದಂತಹ ತಪ್ಪನ್ನು ಭೂತಕಾಲದಲ್ಲಿ ಇವನಿಗೆ ಪರಿಚಯ ಮಾಡಿಸುವ ಮೂಲಕ ಮಾಡಿದ್ದೆ. ಹೊರಟೆವು. ಅವಳ ಗಂಡ ಯಾರೊಂದಿಗೋ ಹೋದ. ಹಾಗಾಗಿ ಇವಳು ಇವನೊಂದಿಗೆ ಬಂದಳು ಅಥವಾ ಇವನು ಇವಳಲ್ಲಿಗೆ ಹೋದ. ದೆವ್ವಗಳ ಸಂಗ ಕೂಡ ಆರಂಭದಲ್ಲಿ ಚಂದವೇ..! ಚಂದವಾಗಿಯೇ ಇದ್ದರು. ಆದರೆ ಈಗ ತೊಂದರೆ. ಆಕೆಯ ಸಿಟ್ಟು, ರೋಷಗಳಿಗೆ ಆತ ಈಡಾದ. ಅವಳ ಅಳುವಿನಲ್ಲಿ ಮಾತು ಕರಗಿ ಎಲ್ಲ ಆದಮೇಲೆ ಹೇಳಿದಳು. ಆಕೆಯ ಗಂಡ ಮರಳಿ ಬರುವ ಇರಾದೆ ವ್ಯಕ್ತಪಡಿಸಿ ಕಾಟ ಕೊಡುತ್ತಿದ್ದಾನಂತೆ. ಅಲ್ಲಿ ಅವಗೆ ಆ ದೆವ್ವಿನ ಕಾಟ ವಿಪರೀತವಾಗಿದೆಯಂತೆ. ಇವಳಿಗೆ ಮತ್ತೆ ಹಳೆಯ ಗಂಡನ ಅಥವಾ ದೆವ್ವದ ಪಾದದ ಜೊತೆ ಬಾಳುವುದು ಬೇಡವಾಗಿದೆ...

ಗೆಳೆಯನಿಗೆ, ಅವಳ ಗಂಡ ಮರಳಿ ಬರಲಿರುವ ಸುದ್ದಿ ಸಂತಸ ತಂದಿತ್ತು. ಆದರೆ ಮೋಹಿನಿಗೆ ಅದು ಇಷ್ಟವಿಲ್ಲದ್ದು ತಿಳಿದು ಬಂದ ಜೀವ ಮರಳಿ ಹೋದಂತಾಯ್ತು. ಅವನಿಗೆ ಈ ಮೋಹಿನಿಗಿಂತ ಮನೆಯ ರಾಕ್ಷಸಿ ದೇವತೆಯಾಗಿ ತೋರತೊಡಗಿದ್ದಳು. ನಿಜವಾದ ದೆವ್ವಗಳ ಲೋಕದಲ್ಲಿ ಹೀಗೆಲ್ಲ ಇರಲಿಕ್ಕಿಲ್ಲ. ಆದರೆ ಮಾನವ ನಿರ್ಮಿತ ದೆವ್ವಲೋಕದಲ್ಲಿ ಸಿಕ್ಕುಗಳು ಬಹಳ. ಅಷ್ಟಾದರೂ ದೆವ್ವಗಳನ್ನು ನಿರ್ಮಿಸುವ ಫ್ಯಾಕ್ಟರಿ ಇಲ್ಲಿ ಭರ್ಜರಿಯಾಗಿಯೇ ನಡೆದಿದೆ. 'ಏನಾದರೂ ಮಾಡಿಕೊಳ್ಳಿ' ಎಂದು ಮಾರಣ್ಣನನ್ನು ಮೋಹಿನಿಯ ಬಾಯಿಗೆ ಹಾಕಿ ವಾಪಸ್ ಬಂದೆ. ನನಗೆ ತಲೆಬುರುಡೆಯ ಪಕ್ಕದ ದೆವ್ವಗಳ ಬಗ್ಗೆ ಬರೆಯಬೇಕಾಗಿತ್ತು.

ರಾತ್ರಿ ಬರೆಯಲೆಂದು ಕೈಗೆ ಪೆನ್ ತೆಗೆದುಕೊಂಡ ಗಳಿಗೆಯೇ ನಿನ್ನಿನಂತೆ ಮತ್ತೆ ದೀಪವಾರಿತು. ನನಗೆ ಈ ವಿದ್ಯುತ್ ಕೂಡ ನಾವೇ ನಿರ್ಮಿಸಿಕೊಂಡ ಒಂದು ದೆವ್ವವಿರಬೇಕು ಅಂತ ಮೊದಲ ಬಾರಿ ಅನ್ನಿಸತೊಡಗಿತು. ಬೇಕಾದಾಗಲೆಲ್ಲ ಕೈ ಕೊಡುವ ಈ ದೆವ್ವ ಬೇಡವಾದಾಗ ಮಾತ್ರ ಧಾರಾಳಿಯಾಗಿರುತ್ತದೆ.

ಈ ದೆವ್ವ ಎಷ್ಟು ಅಭ್ಯಾಸವಾಗಿ ಹೋಗಿದೆಯೆಂದರೆ ಮೇಣದಬತ್ತಿ, ಸೀಮೆ ಎಣ್ಣೆಗೆ ನಾವು ಮರಳಿ ಹೋಗದಂತೆ ಮಾಡಿದೆ. ಮನೆಯ ಫೋನು, ಬೈಕು, ಮಿಕ್ಸರ್, ವಾಶಿಂಗ್ ಮಶೀನ್ ಮುಂತಾದವುಗಳು ಈ ವಿದ್ಯುತ್ ದೆವ್ವದ ಸಣ್ಣ ಪುಟ್ಟ ಮರಿಗಳು....! ಇಡೀ ಜಗತ್ತು ಈ ವಿದ್ಯುತ್ ದೆವ್ವಗಳ ಸಂಸಾರದ ನಿಯಂತ್ರಣದಲ್ಲಿದೆ..... ಒಟ್ಟಾರೆ, ನಾನು ದೆವ್ವಗಳ ಹಿಂದೆ ಬೀಳದಂತೆ ಏನೋ ಮಸಲತ್ತು ನಡೆದಿದೆ ಎಂಬ ಸಂದೇಹ ಬಲವಾಗತೊಡಗಿತು. ಇಂತಹ ಅಮಾನುಷ ಶಕ್ತಿಗಳ ಕಾಟ ತಡೆಯಬೇಕೆಂದರೆ ಶಂಭುವೇ ಬರಬೇಕು.! ಅವನ ಬಳಿ ಎಲ್ಲದಕ್ಕೂ ಉಪಾಯವಿದೆ..!

ಈ ಶಂಭು ನನ್ನ ಸಹೋದ್ಯೋಗಿಯಾಗಿದ್ದವ. ಬ್ಯಾಂಕ್ ಸಾಹಿತಿ ಕೂಡ. ಅದೇನಾಯ್ತೋ ಏನೋ, ಬ್ಯಾಂಕ್ ತಪ್ಪಿಸುತ್ತ, ಸಾಹಿತ್ಯ ಕಡಿಮೆಮಾಡಿ ಜ್ಯೋತಿಷ್ಯ ಕಲಿಯತೊಡಗಿದ. ಅದನ್ನು ದೆವ್ವದಂತೆ ಕಲಿತ. ಒಂದು ದಿನ ಮ್ಯಾನೇಜರ್ ಸಕಾರಣವಾಗಿ ಬೈದರು. ರಾಜೀನಾಮೆ ಕೊಟ್ಟ. ಹೋಗುವಾಗ 'ಈ ಬ್ಯಾಂಕ್‌ಗೇ ಭವಿಷ್ಯವಿಲ್ಲ' ಎಂದು ನುಡಿದು ನೇರವಾಗಿ ನಮ್ಮ ಅತ್ಯಂತ ದೊಡ್ಡ ಕಟಬಾಕಿ ಸಾಲಗಾರನ ಹತ್ತಿರ ಹೋಗಿ 'ಸಾಲ ಮನ್ನಾ ಆಗಲಿದೆ. ದುಡ್ಡು ಕಟ್ಟಬೇಡಿ' ಎಂಬ ಸಲಹೆ ಕೊಟ್ಟ. ಅವನ ಎರಡೂ ಭವಿಷ್ಯ ನಿಜವಾದವು. ಬ್ಯಾಂಕ್ ಮತ್ತೊಂದರಲ್ಲಿ ವಿಲೀನವಾಗಿ ಮ್ಯಾನೇಜರ್ ಅಂಡಮಾನಕ್ಕೆ ವರ್ಗವಾದರು. ಸಾಲಗಳು ಮನ್ನಾ ಆದವು. ಶಂಭು ಬದಲಾದ ಬ್ಯಾಂಕ್ ಎದುರುಗಡೆಯೇ ಇದ್ದ ಸಾಲಗಾರನ ಕಟ್ಟಡದಲ್ಲಿ 'ರಾಘವೇಂದ್ರ ಜ್ಯೋತಿಷ್ಯಾಲಯ' ತೆಗೆದು, ಜನರಿಗೆ ಭೂತ ಬಿಡಿಸುವುದು ಮೊದಲುಮಾಡಿ ಎಲ್ಲಾ ಸಲಹೆ ಕೊಡುತ್ತಿದ್ದಾನೆ.

ನಾನು ನೆನೆದಾಕ್ಷಣ ಅವನ ಫೋನ್ ಬಂತು. ಅವನಲ್ಲಿ ನಮಸ್ಕಾರ, ಚಮತ್ಕಾರ, ಪ್ರಸ್ತಾವನೆಗಳು ಇರುವುದಿಲ್ಲ. ಆತ ನೇರ, ದಿಟ್ಟ, ನಿರಂತರ. 'ದೆವ್ವಗಳ ಬಗ್ಗೆ ಬರೆಯುತ್ತೀಯಾ, ಬರೆ. ಆದರೆ ಸದ್ಯಕ್ಕೆ ಸಾಧ್ಯವಾಗದು. ಪ್ರಯತ್ನಿಸು. ದೆವ್ವಗಳ ಸಮಯ ರಾತ್ರಿಯ ೧೨ ರಿಂದ ಬೆಳಗಿನ ಮೂರು ಗಂಟೆ. ಆ ನಡುವೆ ಬರೆಯಬಹುದು. ಇನ್ನೊಂದು. ಬರಹಕ್ಕೆ ಈಗಲೇ ತಲೆಬರಹ ಕೊಡಬೇಡ. ದೆವ್ವಗಳು ಬರೆಯಗೊಡುವುದಿಲ್ಲ. ಅದೆಲ್ಲ ಇರಲಿ, ನಿನಗೇ ಒಂದು ದೊಡ್ಡ ದೆವ್ವದ ಕಾಟ ಇನ್ನೇನು ಆರಂಭವಾಗಲಿದೆ. ಜಾಗ್ರತೆ' ಎಂದು ಹೇಳಿ ಫೋನ್ ಇಟ್ಟ....

ಅವ ಹೇಳಿದ್ದು ನಿಜವಾಗಲೇ ಬೇಕು. ಆಯಿತು ಕೂಡ...... ನಮ್ಮ ಅಜ್ಜಿ ಕಷ್ಟ ಬಂದಾಗಲೆಲ್ಲ ತಿರುಪತಿಯ ದೇವರಿಗೆ ದುಡ್ಡು, ಅರ್ಧಾಣೆಯ ಮುಡಿಪು ತೆಗೆದಿರಿಸುತ್ತಿದ್ದಳು. ಎಷ್ಟು ತೆಗೆದಿಟ್ಟರೂ ಅದು ಒಂದು ರೂಪಾಯಿ ಕೂಡ ಆಗುತ್ತಿರಲಿಲ್ಲ. ನನ್ನ ಪ್ರಬಂಧ ಕೂಡ ಹಾಗೇ ಸಾಗಿತ್ತು. ರಾತ್ರಿ ಹನ್ನೆರಡು ಗಂಟೆಯವರೆಗೆ ಎಚ್ಚರವಿದ್ದರೂ ಸರಿಯಾಗಿ ಹನ್ನೆರಡಕ್ಕೆ ನಿದ್ದೆ ಎಳೆದು ಬರುತ್ತಿತ್ತು. ಮನಸ್ಸಿಗೆ ಬಂದ ಒಂದೆರಡು ಸಾಲು ಬರೆದು ಮಲಗುತ್ತಿದ್ದೆ. ಇಂಥದರಲ್ಲೇ ಅದು ಒಂದೆರಡು ತಿಂಗಳಲ್ಲಿ ಒಂದೂವರೆ ಪುಟದಷ್ಟಾಯಿತು..! ಆದರೆ ಶಂಭುವಿನ ಒಂದು ಮಾತು ಮಾತ್ರ ನಾನು ಮೀರಿದ್ದೆ. 'ದೆವ್ವಗಳು' ತಲೆಬರಹ ತೆಗೆದಿರಲಿಲ್ಲ! ಯಾವ ದೆವ್ವ ಬಂದು ತನ್ನ ಪ್ರಬಂಧ ಓದೀತು ಎಂಬುದು ನನ್ನ ಉಡಾಫೆಯ ಮೂಲ.

ಏನಾದರೂ ಬರೆದೇ ಮಲಗಬೇಕೆಂಬ ದಾರಿಯಲ್ಲಿ ಹನ್ನೆರಡರವರೆಗೆ ನನಗೆ ಎಚ್ಚರವಿರುವಂತೆ ನೋಡಿಕೊಂಡದ್ದು ಫೇಸ್‌ಬುಕ್. ಇದರ ರುಚಿ ಹತ್ತಿದ್ದೇ ತಡ, ಯಾವ ಓದು–ಬರಹ ಕೂಡ ಬೇಡವಾಗತೊಡಗಿತು. ರುಚಿ, ರೋಚಕತೆಗಳು ಮಾತ್ರ ಬದುಕಿಗೆ ಬೇಕು, ಮತ್ತೇನೂ ಬೇಡ ಎಂದು ಉಪದೇಶಿಸತೊಡಗಿದವು. ಯಾರು ಯಾರೊ ಗೆಳೆಯ–ಗೆಳತಿಯರಾದರು. ಭಿಡೆ ಬಿಟ್ಟು ಮಾತಾಡತೊಡಗಿದರು. ಅದು ಸುಳ್ಳೋ–ಖರೆಯೋ ತಿಳಿಯುತ್ತಿರಲಿಲ್ಲ. ಅದರ ಅಗತ್ಯ ಕೂಡ ಇರಲಿಲ್ಲ.

ಮಾತೆಂದರೆ ಜ್ಯೋತಿರ್ಲಿಂಗವೆಂಬಂತೆ ಆರಂಭವಾಗಿ ಕಡೆಗೆ ಲಿಂಗಕ್ಕೇ



ಬಂದು ನಿಲ್ಲುತ್ತಿತ್ತು. ಮಾಯೆಯಂತೆ ಹಿಂದೇ ಇರುತ್ತಿತ್ತು. ಯಾರು, ಯಾರು ಬೇಕಾದವರಿಗೆ ಬೇಕಾದಾಗ ಬೇಕಾದಾಗ ಏನು ಬೇಕಾದರೂ ಅನ್ನಬಹುದು. ಮೆಸೆಂಜರ್‌ನಲ್ಲಿ ಬಂದು ಅಡಗಿಕೊಂಡು ಕುಳಿತುಕೊಳ್ಳಬಹುದು.! ಮನೆ ಎಂಬುದಕ್ಕೆ ಬಾಗಿಲೇ ಇರದಂತಾಯ್ತು. ನನಗೆ ಈ ಫೇಸ್ ಬುಕ್ ದೆವ್ವ ಹಿಡಿದುಕೊಂಡದ್ದು ಸಾಕಷ್ಟು ತಡವಾಗಿ ತಿಳಿಯಿತು. ತಿಳಿಯುವ ಮೊದಲೇ ದೊಡ್ಡದಾಗಿಯೇ ನಿರ್ಮಿಸಿಕೊಂಡಿದ್ದೆ! ಈ ದೆವ್ವ ಲೋಕದಲ್ಲಿ ಮನಬಂದಂತೆ ವಿಹರಿಸುವಾಗ ನನಗೆ ನಾನೂ ಕೆಲವರಿಗೆ ದೆವ್ವವಾಗಿರಬಹುದು ಎಂಬುದು ತಿಳಿಯಲೇ ಇಲ್ಲ.!

ಬಸಪ್ಪ ಮಾಸ್ತರ್ ಎಂಬ ಹಿರಿಯರು ಚಂದದ ಲೇಖನ ಬರೆಯುತ್ತಿದ್ದರು. ಮೃದು ಮಾತು, ನಲ್ನುಡಿ, ತಲೆ ನೇವರಿಸುವಂತಹ ವಿಚಾರ. ಪ್ರತಿಕ್ರಿಯೆ ಕೂಡ ಅಷ್ಟೇ ಕೋಮಲ. ಅಂಥ ನನ್ನ ಗೆಳೆಯರು ಇದ್ದಕ್ಕಿದ್ದಂತೆ ಮೌನವಾದರು. ಅವರು ತೀರಿಕೊಂಡರೆಂದು ಆಮೇಲೆ ತಿಳಿಯಿತು. ಬೇಜಾರಾದದ್ದನ್ನು ಫೇಸ್‌ಬುಕ್‌ನಲ್ಲಿ ಬರೆದು ನೂರಾರು ಲೈಕ್ ಪಡೆದು ಸಮಾಧಾನ ಮಾಡಿಕೊಂಡೆ. ವಿಚಿತ್ರವೆಂದರೆ ಮುಂದಿನ ತಿಂಗಳಲ್ಲೇ ಅವರ ಪೋಸ್ಟ್ ಮತ್ತೆ ಬರತೊಡಗಿದವು. ಕ್ರೂರ, ಅಶ್ಲೀಲ, ಅಸಂಸ್ಕೃತ ಭಾಷೆಯವು. ನಾನು ಇವರು ತೀರಿಕೊಂಡು ಖಂಡಿತ ದೆವ್ವವಾಗಿದ್ದಾರೆಂದು ತಿಳಿದುಕೊಂಡೆ. ಆದರೆ ಆಮೇಲಾಮೇಲೆ ತಿಳಿಯಿತು. ಅವರಿಗೆ ಫೇಸ್‌ಬುಕ್ ನಿರ್ಮಿಸಿಕೊಟ್ಟ ಮಗನೇ ಅವರ ಹೆಸರಿನಲ್ಲಿ ಈ ಕೆಟ್ಟ ಕೆಲಸ ಮಾಡುತ್ತಿದ್ದ....

ಒಂದು ಕಾಲಕ್ಕೆ ಎಡವೆಂದರೆ ಜೀವ ಪೊರೆಯುವ ಮಾನವೀಯತೆ ಮತ್ತು ಬಲವೆಂದರೆ ಧರ್ಮವೆಂಬ ನೈತಿಕತೆ ಎಂದು ಬಹಳ ಜನ ನಂಬಿದ್ದರು. ಅವುಗಳು ಕೂಡ ಹಾಗೇ ನೇಮ-ನಿಷ್ಠೆಯೊಂದಿಗೆ ಜನರಿಗಾಗಿ ಬದುಕಿದ್ದವು. ಜಾಗತೀಕರಣ ಆರಂಭವಾಗಿ ಕೆಲದಿನಗಳಲ್ಲೇ ಅವು ಬರ್ಬರವಾಗಿ ಕೊಲೆಗೀಡಾದವು. ಅವುಗಳೆರಡೂ ದೆವ್ವವಾಗಿ ಹುಟ್ಟಿ ಸಾಮಾಜಿಕ ಜಾಲತಾಣಗಳಲ್ಲಿ ಓಡಾಡಿಕೊಂಡಿವೆ ಎಂದು ನಾನು ಬಲವಾಗಿ ನಂಬಿದ್ದೇನೆ. ಅವುಗಳೀಗ ಅತೃಪ್ತ ಆತ್ಮಗಳು. ಅವುಗಳ ಬಾಯಿಯೆಂದರೆ ಸಂಭಾವಿತರಿಗೆ ಎಲ್ಲಿಲ್ಲದ ಹೆದರಿಕೆ. ಅವುಗಳ ವಾದವಂತೂ ಯಾರೂ ತಡೆಯದಂಥದ್ದು. ಎದುರಾಡಿದರೆ ಪಾಕಿಸ್ತಾನಕ್ಕೋ, ಮಧ್ಯ ಏಷ್ಯಾಕ್ಕೋ ಟಿಕೆಟ್ ತೆಗೆಸಿ ಕಳಿಸಿ ಬಿಡಲು ತಯಾರು. ಒಂದೊಂದು ದೆವ್ವವೂ ತನಗನುಕೂಲವಾದ ಪಕ್ಷದಲ್ಲಿ ಬೀಡು ಬಿಟ್ಟಿವೆ. ಹೀಗಾಗಿ ಯಾರೂ ಏನೂ ಮಾಡಲಾಗದು. ತಮ್ಮ ಅನುಯಾಯಿಗಳು ಎಂಥವರಿದ್ದರೂ ರಕ್ಷಿಸಲು ಅವು ಸಿದ್ಧವೇ...! ಈ ಲೋಕದಲ್ಲೂ ನಾನು ಅರಿವಾಗದಂತೆಯೇ ಸೇರಿಕೊಂಡು ಬಿಟ್ಟಿದ್ದೆ! ಹೀಗಾಗಿ, ದೆವ್ವಗಳ ಬಗ್ಗೆ ನಾನು ಬರೆಯಬೇಕೆಂದುಕೊಂಡ ಪ್ರಬಂಧ ಬರೆಯುವ ವಿಷಯ ಬಿಡಿ, ಮೊದಲಿನಂತೆ ಏನನ್ನು ಓದಬೇಕೆಂದರೂ ಆಗುತ್ತಿರಲಿಲ್ಲ. ರೋಚಕತೆಯೇ ರುಚಿ. ಅದರ ಮುಂದೆ ಬೇರೆಲ್ಲಾ ಸಪ್ಪೆ ಎನಿಸತೊಡಗಿತ್ತು. ಮನಸ್ಸೇನೋ ಇದರಿಂದ ಹೊರಗೆ ಬರಲು ಇಚ್ಛಿಸುತ್ತಿತ್ತಾದರೂ ವ್ಯಾಮೋಹ ಅಲ್ಲೇ ಕರೆದೊಯ್ಯುತ್ತಿತ್ತು. ಚಟ ಅಂಟಿಸಿಗೊಂಡವರ ಕಷ್ಟ ಎಂಥದೆಂಬುದು ತಿಳಿಯತೊಡಗಿತ್ತು. ಶಂಭು ಹೇಳಿದ ದೆವ್ವದ ಜಾಲದಲ್ಲಿ ನಾನೂ ಸಿಲುಕಿದಂತಾಗಿತ್ತು.

ಇಂಥ ಒದ್ದಾಟದ ಒಂದು ಬೆಳಗಿನ ಜಾವ ನನ್ನ ಕನಸಿನಲ್ಲಿ ಸಾಕ್ಷಾತ್ ದೇವರೇ ಕಾಣಿಸಿಕೊಳ್ಳಬೇಕೇ...! "ದೆವ್ವಗಳ ಒಡನಾಡಿಯಾಗಿ ಎಲ್ಲವನ್ನೂ ಕಳೆದುಕೊಂಡ ಪಾಪಿ ನಾನು. ಅಂಥದರಲ್ಲಿ ನನ್ನ ಬಳಿ, ದೇವ ದೇವಾ, ನೀನು ಅದೇಗೆ ಬಂದೆ.." ಎಂದು ಸಾಧ್ಯವಾದಷ್ಟೂ ಪೌರಾಣಿಕ ಭಾಷೆಯ ಸ್ಟೈಲಿನಲ್ಲಿ ಕೇಳಿದೆ. ಆತ ಯಾವ ಕಾಲಕ್ಕೂ ಕರುಣಾಳುವೇ! ಹೇಳಿದ.

"ಅದಕ್ಕೇ ಬಂದೆ ಮಗು. ನೀನು ದೆವ್ವಗಳ ಬಗ್ಗೆ ಬರೆವ ಸಂಕಲ್ಪ ಮಾಡಿ ಅವರಿಂದ ವಿಮುಖನಾಗುತ್ತಿರುವೆ. ಈಗಲೂ ಕಾಲ ಮಿಂಚಿಲ್ಲ. ದೆವ್ವಗಳ ಕುರಿತಾಗಿ ಬರೆದಾಕ್ಷಣವೇ ನಿನಗೆ ಅವುಗಳಿಂದ ಮುಕ್ತಿ ಖಂಡಿತ. ಹಗಲು-ರಾತ್ರಿ ಎಂಬುದು ಮನುಷ್ಯನಿಗೆ ಮಾತ್ರ. ದೆವ್ವ- ದೇವರುಗಳಿಗಿಲ್ಲ. ಹಗಲಿನಲ್ಲೇ ಬರೆ. ಅಷ್ಟು ಮಾಡು" ಎಂದು ಹೇಳಿದವನೇ ದೇವರು ಮಾಯವಾದ.

ನನಗೆ ನಂಬಲೇ ಆಗಲಿಲ್ಲ. ದೇವರು ಮತ್ತು ದೆವ್ವ ಅನಾದಿಯಿಂದ ವೈರಿಗಳು. ಹೀಗಿರುವಾಗ ದೆವ್ವಗಳ ಬಗ್ಗೆ ಬರೆ ಎಂದು ಸಾಕ್ಷಾತ್ ಪರಮಾತ್ಮನೇ ಹೇಳಬೇಕೆಂದರೆ...? ಇಂಥ ಒಳ್ಳೆಯ ಕಾಲ ನಮ್ಮ ಜೀವಿತಾವಧಿಯಲ್ಲಿಯೇ ಬರಲು ಸಾಧ್ಯವಿಲ್ಲ ಎನ್ನಿಸಿ ದೇವರಿಗೆ ವಂದಿಸಿದೆ. ಮಲಗಿದಲ್ಲೇ ಏನೇನೋ ಹಳೆಯ ಕಾಲದ ರಾಜಕೀಯ ಆಲೋಚನೆಗಳು, ನೆನಪುಗಳು ಬಂದವು. ನಮ್ಮ ಒಬ್ಬ ಪ್ರಧಾನಿ ವಿರೋಧ ಪಕ್ಷದ ಮುಖಂಡನನ್ನು ಜೊತೆಯಾಗಿ ಕೆಲಸ ಮಾಡಲು ಸಂಪುಟಕ್ಕೆ ತೆಗೆದುಕೊಂಡಿದ್ದರಂತೆ. ಅನಂತರದ ಒಬ್ಬ ಪ್ರಧಾನಿ ವಿಶ್ವ ಸಂಸ್ಥೆಯಲ್ಲಿ ದೇಶವನ್ನು ಪ್ರತಿನಿಧಿಸಲು ಅಂದಿನ ವಿರೋಧ ಪಕ್ಷದ ನಾಯಕನನ್ನು ಕಳಿಸಿದ್ದರಂತೆ. ಅದು ನೆನಪಿಸಿಕೊಳ್ಳಬೇಕಾದ ಕಾಲ. ಅಂದಿನ ವಿರೋಧ ಪಕ್ಷದವರು ಕೂಡ ಕರಾವಳಿಯ ದೈವ ಅಥವಾ ಭೂತದಂಥವರಾಗಿ ಜನರ ಹಿತ ಕಾಪಾಡುವಂತಿದ್ದರು....! ಆಗಿನ ರಾಜಕಾರಣಿಗಳು ಕೂಡ ಪಾಪ! ಅಕಾಲ ಮೃತ್ಯುವಿಗೀಡಾಗಿ ದೆವ್ವಗಳಾಗಿ ಇಂದಿನ ರಾಜಕಾರಣಿಗಳಾಗಿ ಹುಟ್ಟಿ ಬಿಟ್ಟರೋ ಏನೊ...! ನಿಜವಾಗಿಯೂ ದೆವ್ವಗಳಾಗಿ ಕಾಡುತ್ತಿದ್ದಾರೆ.

'ದೆವ್ವಗಳು' ಲೇಖನವನ್ನು ಒಂದೂವರೆ ಪುಟದಷ್ಟು ಬರೆದು ಕಪಾಟಿನಲ್ಲಿಟ್ಟು ಕೀಲಿ ಹಾಕಿ ತಿಂಗಳುಗಳೇ ಕಳೆದಿದ್ದವೇನೋ. ಶಂಭುವಿನ ಭವಿಷ್ಯ ನಿಜವಾಗಿಸಲು ಏನೂ ಬರೆದಿರಲಿಲ್ಲ. ಆ 'ದೆವ್ವಗಳು' ಎಂಬ ಒಂದೂವರೆ ಪುಟ ನೋಡಲು ಕಪಾಟು ತೆಗೆದೆ. ಏನಾಶ್ಚರ್ಯ! ಅಲ್ಲಿ ಬರೆಯುವ ಪೆನ್ ಇದೆ. ಹಿಡಿಯುವ ರಟ್ಟೂ ಇದೆ. ಆದರೆ ಹಾಳೆಗಳಿಲ್ಲ! ತಲೆಬರಹ ಬರೆದದ್ದಕ್ಕೆ ದೆವ್ವ ಮಾಡಿದ ಕಮಾಯಿಯಿದು ಎಂಬ ಅರಿವಾಯಿತು. ಎಲ್ಲಿ ಮಾಯವಾದವೂ ಏನೋ! ಅವು ಎಲ್ಲಾದರೂ ಸಿಕ್ಕರೆ ಅವುಗಳ ಮುಖಾಂತರ ದೆವ್ವದ ಕೈ ಬೆರಳಚ್ಚು ಪಡೆಯಬಹುದು. ಹೀಗೆ ಯಾರ ಯಾರದೊ ಕಪಾಟಿನಿಂದ ಎಂಥ ಎಂಥದೊ ಸಾಹಿತ್ಯವನ್ನು ಇನ್ನೊಬ್ಬರಿಗೆ ದಾಟಿಸುವ ನಾವೇ ನಿರ್ಮಿಸಿಕೊಂಡ ದೆವ್ವಗಳು ಕೂಡ ಇದ್ದಿರಬಹುದು. ನಾನು ಕೇಳಿದ್ದೇನೆ; ಕೆಲವು ದೆವ್ವಗಳು ಪಿ.ಎಚ್.ಡಿ ಬರೆದು ಕೊಟ್ಟಿವೆಯಂತೆ. ಕಥೆ- ಕಾದಂಬರಿ ಕೂಡ ಬರೆದು ಕೊಟ್ಟಿವೆಯಂತೆ. ಯಾರ ಯಾರದನ್ನೋ ಯಾರದೋ ಹೆಸರಿನಲ್ಲಿ ಬರುವಂತೆ ಮಾಡಿವೆಯಂತೆ. ಹೀಗೆ, ಈ ದೆವ್ವ ನನ್ನ ಒಂದೂವರೆ ಪುಟದ ಭೂತ ಸಾಹಿತ್ಯವನ್ನು ಯಾರಿಗಾದರೂ ಕೊಟ್ಟಿರಲೂಬಹುದು!

ಹೋಗಲಿ ಬಿಡಿ. ನಮಗೀಗ ಇರುವ ಕಾಟ ಕೊಡುವ ದೆವ್ವದ ಗೊಡವೆ ಬೇಡ. ಬೇಕೇ ಅನಿಸಿದರೆ ಹೊಸದಾದ, ದೇವರಂಥ ದೆವ್ವಗಳನ್ನು ನಿರ್ಮಿಸಿಕೊಳ್ಳೋಣ. ದೆವ್ವಗಳ ಬಗ್ಗೆ ಕೂಡ ಬರೆಯುವಂತಹ ಸೌಹಾರ್ದದ ವಾತಾವರಣ ಸೃಷ್ಟಿಸೋಣ ಎಂಬುವಲ್ಲಿಗೆ ಈ ದೇವರು ಪ್ರತ್ಯಕ್ಷವಾಗಿ ಬರೆಯಿಸಿದ ಈ ಪ್ರಬಂಧ ಅಂತೂ ಇಂತೂ ಸಂಪೂರ್ಣಂ...!



(ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಪ್ರಬಂಧಕರಾದ ವಿಜಯೇಂದ್ರ ಪಾಟೀಲರು ಮೂಲತಃ ಬೆಳಗಾವಿ ಜಿಲ್ಲೆಯ ಬೆಟಗೇರಿಯವರಾಗಿದ್ದು, ನವಿರಾದ ಲಘುಶೈಲಿಯ ಬರವಣಿಗೆಯನ್ನು ರೂಢಿಸಿಕೊಂಡವರು.)

ಗಮನಿಸಿ: ನಿಮ್ಮ ಚಂದಾ ಮುಗಿಯುತ್ತಿದೆ

ಎರಡು ವರ್ಷಗಳ ಚಂದಾ ನೀಡಿರುವ ಬೆರಳೆಣಿಕೆಯ ಚಂದಾದಾರರ ಹೊರತಾಗಿ ಬಹುತೇಕ ಓದುಗರ ಚಂದಾ ಮುಂದಿನ ಸಂಚಿಕೆಯೊಂದಿಗೆ ಮುಗಿಯುತ್ತಿದೆ. ಹಾಗಾಗಿ ಓದುಗರು ಈ ಕೂಡಲೇ ಈ ವರ್ಷದ (ಅಕ್ಟೋ, ೨೦೧೯-ಸೆಪ್ಟಂ. ೨೦೨೦ರ ಚಂದಾ ಹಣ ಇನ್ನೂರು ರೂಪಾಯಿಗಳನ್ನು ಕಳಿಸಿಕೊಟ್ಟರೆ ಅನುಕೂಲವಾಗುವುದು. ನಿಮ್ಮ ಚಂದಾ ನಮಗೆ ತಡವೆಂದರೆ ಸೆಪ್ಟಂಬರ್ ೧೫ರೊಳಗೆ ತಲುಪಬೇಕು. ಚಂದಾ ಹಣಕಳಿಸದ ಓದುಗರಿಗೆ ಸೆಪ್ಟಂಬರ್ ಸಂಚಿಕೆಯಾಚೆ ಪತ್ರಿಕೆ ಕಳಿಸಲಾಗುವುದಿಲ್ಲ.

ಚಂದಾ ಹಣವನ್ನು ಚೆಕ್ ಅಥವಾ ಎಂ.ಓ. ಮೂಲಕ ಅಥವಾ ಈ ವಿವರಗಳ ಬ್ಯಾಂಕ್ ಖಾತೆಗೆ ನೆಫ್ಟ್ ಮೂಲಕ ಸಂದಾಯ ಮಾಡಬಹುದು. ಯಾವುದೇ ಕಾರಣಕ್ಕೂ ನಗದು ವರ್ಗಾವಣೆ ಮಾಡಬಾರದು : ಸಂಪಾದಕರು, ಹೊಸ ಮನುಷ್ಯ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಕೃಪಾ ಶಾಖೆಯಲ್ಲಿರುವ 64110358330 ಸಂಖ್ಯೆಯ ಚಾಲ್ತಿ ಖಾತೆ (ifsc code:sbin 0040444) ಚಂದಾ ಕಳಿಸಿದ ನಂತರ 9449242284ಈ ಸಂಖ್ಯೆಯ ಸಂಚಾರಿ ದೂರವಾಣಿ ಸಂಖ್ಯೆಗೆ ಸಂದೇಶ ಕಳಿಸಿ ಖಚಿತಪಡಿಸಬೇಕು.


ಪತ್ರಿಕೆ ಬೆಳೆಯಲು ಸಹಕಾರಿಯಾಗುವಂತೆ ನಮ್ಮ ಪ್ರತಿಯೊಬ್ಬ ಓದುಗರೂ ತಲಾ ಒಬ್ಬರು ಅಥವಾ ಇಬ್ಬರು ಹೊಸಬರನ್ನು ಚಂದಾ ಮಾಡಿಸಿಕೊಡಬೇಕೆಂದೂ ಈ ಮೂಲಕ ಕೋರುತ್ತೇವೆ-ಸಂ.

ಹಿರಿಯ ಸಮಾಜವಾದಿ ಮತ್ತು ಜಾನಪದ ವಿದ್ವಾಂಸ ಹುಚ್ಚಪ್ಪ ಮಾಸ್ತರ್ ಮತ್ತು ಮೈಸೂರಿನ ಸಾಂಸ್ಕೃತಿಕ ಲೋಕದ ಅದಮ್ಯ ದನಿಯಾಗಿದ್ದ ಮುದ್ದುಕೃಷ್ಣ ಅವರ ನಿಧನಕ್ಕಾಗಿ ;ಹೊಸ ಮನುಷ್ಯ; ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ-ಸಂ.

ಬ್ರಿಟಿಷ್ ವಸಾಹತುಶಾಹಿ ಕ್ರೌರ್ಯದ ಇನ್ನೊಂದು ಕಥನ

ವಿಲ್ ಡ್ಯುರಾಂಟ್‌ರ ಅಪರೂಪದ ಪುಸ್ತಕ: 'ದ ಕೇಸ್ ಫಾರ್ ಇಂಡಿಯಾ'

ಪುಸ್ತಕ ಪರಿಚಯ–ಡಾ. ರಾಜೇಂದ್ರ ಚೆನ್ನಿ



ತತ್ವಶಾಸ್ತ್ರದ ಇತಿಹಾಸವನ್ನು ಬರೆದ ವಿಲ್ ಡ್ಯೂರಂಟ್ ಒಬ್ಬ ಸುಪರಿಚಿತ ಬರಹಗಾರ. ಭಾರತದ ಶಿಕ್ಷಿತವರ್ಗವು ಗೌರವದಿಂದ ನೋಡುವ ವಿದ್ವಾಂಸ. ಆದರೆ ಆತ 1930 ರಲ್ಲಿ ಬ್ರಿಟಿಷ್ ವಸಾಹತುಶಾಹಿಯ ಕಾಲದ ಭಾರತದ ಬಗ್ಗೆ 'The Case for India' ಎನ್ನುವ ಅದ್ಭುತವಾದ ಕೃತಿಯನ್ನು ಬರೆದದ್ದು ಬಹಳ ಜನರಿಗೆ ಗೊತ್ತಿಲ್ಲ. ವಸಾಹತುಶಾಹಿಯ ಇಂಥ ತೀಕ್ಷ್ಣವಾದ ಕಟುವಾದ ಹಾಗೂ ಸರಿಯಾದ ವಿಶ್ಲೇಷಣೆಯನ್ನು, ಅಮೇರಿಕಾದ ಒಬ್ಬ ವಿದ್ವಾಂಸ ಭಾರತಕ್ಕೆ ಆ ಕಾರಣಕ್ಕಾಗಿ ಭೇಟಿಯಿತ್ತು ಬರೆದದ್ದು ಒಂದು ವಿಶಿಷ್ಟ ಘಟನೆ. 'ನಾಗರೀಕತೆಯ ಕಥೆ' ಎನ್ನುವ ಬಹುಸಂಪುಟಗಳ ಕೃತಿಯನ್ನು ಬರೆಯುತ್ತಿದ್ದಾಗ ಭಾರತಕ್ಕೆ ಬಂದು ಇಲ್ಲಿಯ ಕಲೆಗಳನ್ನು ನೋಡಿ ತನ್ನ ಗ್ರಂಥಕ್ಕೆ ಇನ್ನೊಂದಿಷ್ಟು ವಸ್ತು ಸಂಗ್ರಹಿಸುವ ಉದ್ದೇಶದಿಂದ ತಾನು ಭಾರತಕ್ಕೆ ಬಂದೆ ಎಂದು ಓದುಗರಿಗೆ ಬರೆದ ಒಂದು ಟಿಪ್ಪಣಿಯಲ್ಲಿ ಹೇಳಿಕೊಂಡಿದ್ದಾನೆ. ಆದರೆ 'ಇತಿಹಾಸಕಾರನಾದ ನನಗೆ ಸಮಕಾಲೀನ ಜಗತ್ತಿನ ಬಗ್ಗೆ ಅಷ್ಟೇನೂ ಆಸಕ್ತಿಯಿಲ್ಲ'ವೆಂದುಕೊಂಡಿದ್ದ ಅವನು, ಭಾರತದ ಸ್ಥಿತಿಯನ್ನು ನೋಡಿದಾಗ ಆಘಾತವಾಗುತ್ತದೆ. "ನಾನು ಭಾರತದಲ್ಲಿ ಎಂಥ ಸಂಗತಿಗಳನ್ನು ನೋಡಿದೆನೆಂದರೆ ಮನುಕುಲದ ಒಂದು ಐದಂಶದಷ್ಟು ಜನರು ಭೂಮಿಯ ಯಾವುದೇ ಭಾಗದಲ್ಲಿ ಕಾಣದಂಥ ಕಠೋರವಾದ ಬಡತನ ಮತ್ತು ದಬ್ಬಾಳಿಕೆಯಿಂದ ಪೀಡಿತರಾಗಿರುವಾಗ ಅವರೆದುರು ಅಧ್ಯಯನ ಮತ್ತು ಬರಹಗಳು ಕ್ಷುಲ್ಲಕ (frivolous) ಎನಿಸಿಬಿಟ್ಟವು. ನನಗೆ ಆಘಾತವಾಯಿತು. ಯಾವುದೇ ಸರಕಾರವು ತನ್ನ ಪ್ರಜೆಗಳನ್ನು ಇಂಥ ಬವಣೆಗೆ ನೂಕುವುದು ಸಾಧ್ಯವೆಂದು ಕಲ್ಪಿಸಿಕೊಂಡಿರಲಿಲ್ಲ.... ಈ ಬಗ್ಗೆ ಹೆಚ್ಚು ಓದಿದಷ್ಟು, ನೂರಾ ಐವತ್ತು ವರ್ಷಗಳ ಕಾಲ ಇಂಗ್ಲೆಂಡ್ ಉದ್ದೇಶಪೂರ್ವಕವಾಗಿ ಮತ್ತು ಪೂರ್ಣ ತಿಳುವಳಿಕೆಯಿಂದ ಭಾರತದ ರಕ್ತವನ್ನು ಹರಿಸಿದುದರ ಬಗ್ಗೆ ನನ್ನಲ್ಲಿ ಆಶ್ಚರ್ಯ ಹಾಗೂ ಕೋಪಗಳು ಹೆಚ್ಚಾದವು. ಇತಿಹಾಸದ ಅತಿ ದೊಡ್ಡ ಅಪರಾಧವನ್ನು ನಾನು ಕಂಡಿದ್ದೇನೆಂದು ಅನ್ನಿಸತೊಡಗಿತು."

ಈ ಆಳವಾದ, ಆಘಾತದಲ್ಲಿ ಹುಟ್ಟಿದ ತಳಮಳ ಹಾಗೂ ಅನ್ಯಾಯದ ವಿರುದ್ಧ ಸತ್ಯ ಹೇಳುವುದರ ಮೂಲಕ ವಸ್ತು ಸಂಗತಿಗಳನ್ನು ದಾಖಲಿಸುವ ಮೂಲಕ ಪ್ರತಿಭಟಿಸಬೇಕೆನ್ನುವ ಭಾವನೆಯು ಈ ಕೃತಿಯಲ್ಲಿ ಉದ್ದಕ್ಕೂ ನಮ್ಮ ಅನುಭವಕ್ಕೆ ಬರುತ್ತದೆ. ಅಂಕಿ–ಸಂಖ್ಯೆಗಳು ನಮ್ಮನ್ನು ವಿಚಲಿತಗೊಳಿಸಲಾರದ Post-truth ಸಂದರ್ಭದಲ್ಲಿ ನಾವು ಈ ಕೃತಿಯನ್ನು ಓದಿದರೂ ಅವು ನಮ್ಮನ್ನು ರೊಚ್ಚಿಗೆಬ್ಬಿಸುವಂತಿವೆ. ಎಲ್ಲೋ ಒಂದು ಕಡೆಗೆ ಪಶ್ಚಿಮದ(ಇಂಗ್ಲೆಂಡ್‌ನ) ಬಗ್ಗೆ ಅದು ಆಧುನಿಕತೆಯ ಹರಿಕಾರ, ನಮ್ಮ ಸಾಂಪ್ರದಾಯಿಕ ಅಸಮಾನತೆಗಳನ್ನು ಹೋಗಲಾಡಿಸಿದ ಅಥವಾ ಅವುಗಳ ಬಗ್ಗೆ ಎಚ್ಚರ ಮೂಡಿಸಿದ, ಆಧುನಿಕ ಶಿಕ್ಷಣ, ತಂತ್ರಜ್ಞಾನವನ್ನು ಪರಿಚಯಿಸಿದ ಚಾರಿತ್ರಿಕ ಶಕ್ತಿ ಎನ್ನುವ ಭಾವನೆ ನಮ್ಮಲ್ಲಿ ಇನ್ನೂ ಇದೆ. ಆದರೆ ವಸಾಹತುಶಾಹಿಯ ಆಗಮನದ ಮೊದಲು 'ರಾಜಕೀಯವಾಗಿ ದುರ್ಬಲವಾಗಿದ್ದರೂ ಆರ್ಥಿಕವಾಗಿ ಜಗತ್ತಿನ ಪ್ರಬಲ ದೇಶಗಳಲ್ಲಿ ಒಂದಾಗಿದ್ದ' ಭಾರತವನ್ನು ಅತ್ಯಂತ ದಟ್ಟ ದರಿದ್ರ, ಮನುಷ್ಯರ ಬದಲು ಅಸ್ಥಿಪಂಜರಗಳೇ ಓಡಾಡುವ ನರಕವನ್ನಾಗಿ ಮಾಡಿದ ಪಶ್ಚಿಮದ ಬಗ್ಗೆ ಬರೆಯುತ್ತಾ ವಿಲ್ ಡ್ಯೂರಂಟ್ 'ಒಂದು ಭೂಖಂಡದ ಮೇಲಿನ ಅತ್ಯಾಚಾರ (Rape)' ಎನ್ನುವ ಶೀರ್ಷಿಕೆಯನ್ನು ಒಂದು ಭಾಗಕ್ಕೆ ನೀಡಿದ್ದಾರೆ. ತುಂಬಾ ಸರಳವಾಗಿ ಹೇಳುವುದಾದರೆ ರೈತರು, ಜಮೀನ್ದಾರರು, ವ್ಯಾಪಾರಸ್ಥರು, ಕೈಗಾರಿಕಾ ಉದ್ಯಮಿಗಳು ಇವರೆಲ್ಲರ ಉತ್ಪಾದನೆಯನ್ನು ವಸಾಹತುಶಾಹಿ ಸರಕಾರವು ಹೇಗೆ ದೋಚಿತೆಂದರೆ ಮನುಷ್ಯರು ಇಂಥ ಕೆಡುಕನ್ನು ಮಾಡಬಲ್ಲರೆ ಎಂದು ತಬ್ಬಿಬ್ಬಾಗುತ್ತದೆ. ಭಾರತದ ಮಟ್ಟಿಗೆ ಇಂಗ್ಲೆಂಡ್ ಒಬ್ಬ ಪೈಶಾಚಿಕ ಕೊಲೆಗಾರನಲ್ಲದೆ ಏನೂ ಆಗಿರಲಿಲ್ಲ. ಇದಕ್ಕೆ ಸಾಕ್ಷಿಯೆಂದರೆ ಹಲವಾರು ಮಿಲಿಯನ್ ಸಂಖ್ಯೆಯ ಭಾರತೀಯರ ಸಾವಿಗೆ ಕಾರಣವಾದ ಭೀಕರವಾದ ಮಾನವ ನಿರ್ಮಿತ ಕ್ಷಾಮಗಳಿಗೆ ಅದು ಕಾರಣವಾಯಿತು. ಅಲ್ಲದೆ ಪ್ರತಿಯೊಂದು ಇಂಥ ಕ್ಷಾಮದ ಕಾಲದಲ್ಲಿ ಕಂದಾಯ, ತೆರಿಗೆ ವಸೂಲಿಯಲ್ಲಿ ಹೆಚ್ಚಳವಾಗಿದ್ದನ್ನು ಹೆಮ್ಮೆಯಿಂದ ದಾಖಲಿಸಿತು.

ವಿಲ್ ಡ್ಯೂರಂಟ್‌ರ ಗ್ರಂಥಸೂಚಿ ಹಾಗೂ ಉಲ್ಲೇಖಗಳನ್ನು ನೋಡಿದರೆ ವಸಾಹತುಶಾಹಿಯ ಬಗೆಗಿನ drain theoryಯು ಅನೇಕ ಭಾರತೀಯ ಹಾಗೂ ಇಂಗ್ಲೀಷ್ ವಿದ್ವಾಂಸರಿಂದ ರೂಪಗೊಂಡಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಈ ಸಿದ್ಧಾಂತದ ಸರಳ ವ್ಯಾಖ್ಯಾನವೆಂದರೆ ಭಾರತದ ಸಂಪನ್ಮೂಲಗಳು, ಉತ್ಪನ್ನಗಳು, ಧನಸಂಗ್ರಹ ಇವೆಲ್ಲವುಗಳನ್ನು ಕೊಳವೆ ಮೂಲಕ ಸೆಳೆದುಕೊಂಡಂತೆ ಇಂಗ್ಲೆಂಡ್ ಸೆಳೆದುಕೊಂಡಿತು. ಒಂದು ಕಡೆಗೆ ಕಡುಭ್ರಷ್ಟರಾಗಿದ್ದ ಇಂಗ್ಲೀಷ್ ಅಧಿಕಾರಿಗಳು ಹಾಗೂ ವ್ಯಾಪಾರಸ್ಥರು ಇತಿಹಾಸದಲ್ಲಿಯೇ ಕಂಡಿರದಂಥ ಶ್ರೀಮಂತಿಕೆಯನ್ನು ಇದರಿಂದ ಸಂಪಾದಿಸಿದರು. ಇನ್ನೊಂದು ಕಡೆಗೆ ಅದು ಇಂಗ್ಲೆಂಡ್‌ನಲ್ಲಿ ನಡೆದ ಔದ್ಯೋಗಿಕ ಕ್ರಾಂತಿ, ಅದರ ಜಾಗತಿಕ ಆರ್ಥಿಕ ನಾಯಕತ್ವ ಇವೆಲ್ಲವುಗಳ ಆಧಾರವಾಯಿತು. ವಿಶೇಷವೆಂದರೆ ಅಪಾರ ಸಂಖ್ಯೆಯ ಇಂಗ್ಲೀಷ್ ಅಧಿಕಾರಿಗಳು, ವಿದ್ವಾಂಸರು ಈ ಸಿದ್ಧಾಂತವನ್ನು ನಿರ್ದಿಷ್ಟವಾದ ಅಂಕಿ ಸಂಖ್ಯೆಗಳೊಂದಿಗೆ ಸಮರ್ಥಿಸುತ್ತಾ ಬಂದಿದ್ದರು. ಉದಾಹರಣೆಗೆ H.H.Wilson ಅವರ ದೀರ್ಘ ಹೇಳಿಕೆಯೊಂದೇ ಸಾಕು, ಭಾರತದ ಹತ್ತಿ, ಜವಳಿ, ಕೈಮಗ್ಗ ಇಂಥ ಕೈಗಾರಿಕೆಗಳನ್ನು ಇಂಗ್ಲೆಂಡ್ ಉದ್ದೇಶಪೂರ್ವಕವಾಗಿ ಸರ್ವನಾಶವನ್ನು ಮಾಡಿದ್ದನ್ನು ಅರ್ಥಮಾಡಿಕೊಳ್ಳಲು. ಇವರ ಜೊತೆ ನೆನಪು ಮಾಡಿಕೊಳ್ಳಬೇಕಾದವರಲ್ಲಿ ಭಾರತದ ಆರ್ಥಿಕ ಇತಿಹಾಸವನ್ನು ಬರೆದ R.C.Dutt ಹಾಗೂ Poverty and Unbritish Rule in India ಕೃತಿಯನ್ನು ಬರೆದ ದಾದಾಭಾಯಿ ನವರೋಜಿಯವರು.

'ಹಿಂದ್ ಸ್ವರಾಜ್'ನಲ್ಲಿ ಗಾಂಧಿ ದತ್ತ್ ಅವರ ಕೃತಿಯನ್ನು ಓದಿ ನಾನು ಅತ್ತೆ ಎಂದು ಹೇಳುತ್ತಾರೆ. ನಿಜವಾಗಿಯೂ ಈ ಪ್ರತಿಭಾಶಾಲಿಯ ಆರ್ಥಿಕ ಇತಿಹಾಸವು ಈಗಲೂ ಆಘಾತ, ಕೋಪ ಹಾಗೇ ಅಪಾರವಾದ ನೋವನ್ನು ಹುಟ್ಟಿಸುವ ಕೃತಿ. ಡ್ಯೂರಂಟ್ ಅವರ ಕೃತಿಯ ಒಂದು ಭಾಗವು ಇಂಥ ಬರಹದ ಮುಂದುವರಿಕೆಯಾಗಿದೆ. ಜೊತೆಗೆ ಗಾಂಧಿ 'ಹಿಂದ್ ಸ್ವರಾಜ್'ನಲ್ಲಿ ಪಶ್ಚಿಮದ ಯಂತ್ರನಾಗರೀಕತೆ ಹಾಗೂ ವಸಾಹತುಶಾಹಿಯನ್ನು ಅತ್ಯುಗ್ರವಾಗಿ ಟೀಕಿಸಿದ್ದು ಅತಿಯಾಯಿತು ಎನ್ನುವವರು ಆರ್.ಸಿ. ದತ್ತ್ ಹಾಗೂ ಡ್ಯೂರಂಟ್‌ರ ಈ ಕೃತಿಯನ್ನು ಓದಿದ ಮೇಲೆ ಗಾಂಧಿ ಯಾಕೆ ಇಷ್ಟು ಮೃದುವಾಗಿದ್ದರು ಎಂದು ಆಶ್ಚರ್ಯಪಡಬೇಕಾಗುತ್ತದೆ. ಸ್ವತಃ ಡ್ಯೂರಂಟ್ ಈ ಕೃತಿಯಲ್ಲಿ ಒಬ್ಬ ನ್ಯಾಯಪರವಾದ ನಿಜವಾದ ನ್ಯಾಯಾಧೀಶನಂತೆ ಒಂದು ಅಧ್ಯಾಯವನ್ನು 'The Case for England' ಎಂದು ಕರೆದು ಇಂಗ್ಲೀಷ್ ವಸಾಹತುಶಾಹಿ ತಂದಿರಬಹುದಾದ 'ಪ್ರಗತಿ'ಯ ಪರವಾಗಿರುವ ವಾದಗಳನ್ನು ಮಂಡಿಸುತ್ತಾರೆ. ಆದರೆ ಈ ವಾದಗಳು ಕ್ಷುಲ್ಲಕವೆನಿಸಲು ಎರಡು ಕಾರಣಗಳೆಂದರೆ ಒಂದು ಈ ಕೃತಿಯಲ್ಲಿ ಬರುವ ಗಾಂಧಿ ಕುರಿತ ವಿಶ್ಲೇಷಣೆ: "ಅಂದಿನ ಬುದ್ಧನ ಜೊತೆಗೆ ಇಂದಿನ ಗಾಂಧಿಯನ್ನು" ಓದಿದೆ ಎನ್ನುವ ಡ್ಯೂರಂಟ್ ಭಾರತದ ನಾಗರೀಕತೆಯ ಸಾಂಪ್ರದಾಯಿಕವಾದ ಅಸಮಾನತೆ ಹಾಗೂ ಅನ್ಯಾಯಗಳನ್ನು ವಸಾಹತುಶಾಹಿ ಸರಿಪಡಿಸುವುದು ಅಸಾಧ್ಯ; ಅದು ಗಾಂಧಿ ಮಾದರಿಯ ಚಿಂತನೆ ಹಾಗೂ ಕ್ರಿಯೆಗಳಿಂದ ಸಾಧ್ಯವೆಂದು ತೋರಿಸುತ್ತಾರೆ. ಇಷ್ಟೇ ಪ್ರಬಲವಾದ ಭಾಗವೆಂದರೆ ಒಬ್ಬ ಬ್ರಿಟಿಷ್ ಆ್ಯಡ್ಮಿರಲ್‌ನ ಮಗಳು ಆಗಿದ್ದ Madeline Slade (ಮೀರಾ ಬೆನ್ ಆದ) ಗಾಂಧಿ ಸಂಪಾದಕತ್ವದ 'Young India' ದಲ್ಲಿ ಅಹಿಂಸಾತ್ಮಕ ಹೋರಾಟದಲ್ಲಿ ತೊಡಗಿದ್ದ ಭಾರತೀಯ ಸತ್ಯಾಗ್ರಹಿಗಳನ್ನು, ದಂಡಿನ ಸತ್ಯಾಗ್ರಹದ ಮುಂದುವರಿಕೆಯಾಗಿ ಅದರ ಸಮೀಪದ ಧರ್ಸಾನಾ ಎನ್ನುವ ಸ್ಥಳದಲ್ಲಿ ಬ್ರಿಟಿಷ್ ಪೋಲಿಸರು ಹೊಡೆದು ಚಿತ್ರಹಿಂಸೆ ಮಾಡಿದ್ದರ ಬಗೆಗಿನ ಪ್ರತ್ಯಕ್ಷ ವರದಿ. "ಇಂಗ್ಲೆಂಡ್‌ನ ಗೌರವ, ನ್ಯಾಯಬುದ್ಧಿ ಇವೆಲ್ಲವೂ ಏನಾದವು?" ಎಂದು ಕೇಳುತ್ತ ಅವಳು ಅಲ್ಲಿ ನಡೆದ ಚಿತ್ರಹಿಂಸೆಯನ್ನು ವಿವರಿಸಿದ್ದನ್ನು ಎರಡನೇ ಬಾರಿ ಓದುವುದು ಕಷ್ಟ. ಒಮ್ಮೆ ಓದಿದ್ದನ್ನು ಮರೆಯಲು ಒಂದು ದಶಕವಾದರೂ ಬೇಕು. ಈ ವರದಿಯನ್ನು ಪ್ರಕಟಿಸಿದ್ದಕ್ಕಾಗಿ ಬ್ರಿಟಿಷ್ ಸರಕಾರವು ಈ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು.


ವಸಾಹತ್ತೋತರ ಚಿಂತನೆಯು ವಿಶ್ವವಿದ್ಯಾಲಯಗಳಲ್ಲಿ ಒಂದು ಫ್ಯಾಶನೇಬಲ್ ಸಿದ್ಧಾಂತವಾಗಿಬಿಟ್ಟಿದೆ. ಈ ಸಿದ್ಧಾಂತವನ್ನು ಬೆಳೆಸುವ ಮೂಲಕ ಭಾರತ ಮೂಲದ ಅನೇಕ ವಿದ್ವಾಂಸರು ಇಂದು ಜಗತ್ತಿನ ಸೆಲೆಬ್ರಿಟಿಗಳಾಗಿದ್ದಾರೆ. ಆದರೆ ಅವರಿಗೆ ವಸಾಹತುಶಾಹಿಯು ಕೇವಲ ಒಂದು ಸಂಕಥನವಾಗಿದೆ, Discourse ಆಗಿದೆ.

ಜ್ಞಾನ ಮತ್ತು ಅಧಿಕಾರದ ಸಂಬಂಧಗಳನ್ನು ಹೇಳುವ ಇವರ ಯಾವ ಕೃತಿಯಲ್ಲೂ ಬ್ರಿಟಿಷ್ ವಸಾಹತುಶಾಹಿ ಮಾಡಿದ ಆರ್ಥಿಕ ವಿನಾಶದ ಪ್ರಸ್ತಾಪವಿಲ್ಲ. ಇದೇ ಮಾದರಿಯಲ್ಲಿ ಬರೆಯುವ ಕೆಲವು ಪಶ್ಚಿಮ ಹಾಗೂ ಭಾರತೀಯ ವಿದ್ವಾಂಸರು ಕಂಡುಹಿಡಿದ ಮಹಾಸತ್ಯವೆಂದರೆ ಜಾತಿವ್ಯವಸ್ಥೆಯು ವಸಾಹತುಶಾಹಿಯ ಸೃಷ್ಟಿಯೆನ್ನುವ ಸಿದ್ಧಾಂತ. ದಾದಾಭಾಯಿ ನವರೋಜಿ, ಆರ್.ಸಿ. ದತ್ತ್‌ರು ಬ್ರಿಟಿಷ್ ಸರಕಾರದ ಉಗ್ರ ವಿರೋಧಿಗಳಾಗಿರಲಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗುವವರೆಗೆ ದತ್ತ್‌ರು ರಾಜಕೀಯ ಚಿಂತಕರು ಆಗಿರಲಿಲ್ಲ. ದಾದಾಬಾಯಿ ನವರೋಜಿಯವರ ಕೃತಿಯ ಶೀರ್ಷಿಕೆಯಲ್ಲಿರುವ Unbritish Ruleನ ತಾತ್ಪರ್ಯವೆಂದರೆ ಈ ಎಲ್ಲಾ ಆರ್ಥಿಕ ಅನ್ಯಾಯಗಳು ನೈಜ ಬ್ರಿಟಿಷ್ ಆಳ್ವಿಕೆಯ ಲಕ್ಷಣಗಳಲ್ಲ ಎಂದು. ಹೀಗಿದ್ದರೂ ಅವರ ಕೃತಿಗಳು ವಸಾಹತುಶಾಹಿಯ ಬಗ್ಗೆ ನಮ್ಮ ಕಣ್ತೆರೆಯುತ್ತವೆ. ವಿಲ್ ಡ್ಯೂರಂಟ್‌ರು ಅಮೇರಿಕಾದ ಲಿಬರಲ್ ಹಾಗೂ ಪ್ರಜಾಪ್ರಭುತ್ವವಾದಿ ಚಿಂತನಾಪರಂಪರೆಯ ಪರವಾಗಿ ಭಾರತದ ಸ್ಥಿತಿಗತಿಗಳ ಬಗ್ಗೆ ಬರೆದಿದ್ದಾರೆ. ಇಂದು ಅಮೇರಿಕವು ಚರಿತ್ರೆ ಕಂಡ ಅತ್ಯಂತ ಉಗ್ರ ಸಾಮ್ರಾಜ್ಯಶಾಹಿಯಾಗಿರುವುದನ್ನು ಈ ಚಿಂತನಾಪರಂಪರೆಯ ಮೂಲಕ ನೋಡಬೇಕಿದೆ.

ಇನ್ನೊಂದು ಅಪಾಯವನ್ನು ನಾವು ಗುರುತಿಸಲೇಬೇಕು. ಈ ಲೇಖನಕ್ಕಾಗಿ ನಾನು internet ನಲ್ಲಿ ಹುಡುಕುತ್ತಾ ಹೋದಾಗ ಮೊದಲು ಸಿಕ್ಕದ್ದು ಎಲ್. ಕೆ. ಅದ್ವಾನಿಯವರ blogನಲ್ಲಿ ಇದ್ದ ಈ ಕೃತಿಯ ಬಗೆಗಿನ ಪ್ರಶಂಸಾತ್ಮಕ ಬರಹ! ಹಾಗೇ ಹುಡುಕುತ್ತಾ ಹೋದ ಹಾಗೆ ಆಸ್ಟ್ರೇಲಿಯಾದ ಹಿಂದೂ ಕೌನ್ಸಿಲ್ ಹಾಗೂ ಭಾರತ ಹಾಗೂ ವಿದೇಶೀ ಮೂಲದ ಬಲಪಂಥೀಯ ತಾಣಗಳಲ್ಲಿ ಇದೇ ಪ್ರಶಂಸೆಯ ಮಾತುಗಳು! ಮೂಲತಃ ಬಂಡವಾಳಶಾಹಿಯನ್ನು ಬೆಂಬಲಿಸುವ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲೂ ಎಂದು ಭಾಗವಹಿಸದ ಬಲಬಂಥೀಯರಿಗೆ ವಿಲ್ ಡ್ಯೂರಂಟ್‌ರ ಈ ಕೃತಿ ಯಾಕೆ ಇಷ್ಟು ಅಪ್ಯಾಯಮಾನವಾಗಿದೆ? ಭಾರತದ ಎಲ್ಲಾ ದುಸ್ಥಿತಿಗಳಿಗೆ 'ಹೊರಗಿನಿಂದ ಬಂದ ದಾಳಿಕೋರರೇ ಕಾರಣ'ವೆನ್ನುವ ಚರಿತ್ರೆಯನ್ನೇ ನಂಬಿಕೊಂಡಿರುವ ಇವರು ಬ್ರಿಟಿಷ್ ವಸಾಹತುಶಾಹಿ ನಾಗರೀಕತೆಯ ಇತಿಹಾಸದಲ್ಲಿಯೇ ಅತಿದೊಡ್ಡ ಅಪರಾಧವೆನ್ನುವ ಕೃತಿಯನ್ನು ಹೇಗೆ ವ್ಯಾಖ್ಯಾನಿಸುತ್ತಾರೆ? 'ನಾವಂತೂ ಕಾರಣರಲ್ಲ' ಎನ್ನುವುದಕ್ಕಾಗಿಯೆ?

೧೯೩೦ರಲ್ಲಿ ವಿಲ್ ಡ್ಯೂರಂಟ್ ಈ ಕೃತಿಯನ್ನು ಬರೆಯುವಾಗ ಸಂಪೂರ್ಣ ಸ್ವರಾಜ್ಯ ಬೇಡಿಕೆಯ ಉಗ್ರವಾದವಿದ್ದಾಗ್ಯೂ ಈಸ್ಟ್ ಇಂಡಿಯಾ ಕಂಪನಿಯ ದಿನಗಳಿಂದ ಇಂಗ್ಲೆಂಡ್ ಸುಳ್ಳು ಭರವಸೆ ಹಾಗೂ ಕಠೋರವಾದ ಸಾಮ್ರಾಜ್ಯಶಾಹಿಯ ಧೋರಣೆಯನ್ನೇ ಮುಂದುವರೆಸಿತ್ತು. ಅನೇಕ ಅಧಿಕಾರಿಗಳು, ಕೆಲವು ವೈಸ್‌ರಾಯ್‌ಗಳು ಹಾಗೂ ಮುತ್ಸದ್ದಿಗಳು ಯಾವುದೇ ಭಾರತಪರ ಸೂಚನೆ/ನೀತಿಗಳನ್ನು ಕೊಟ್ಟರೆ ಅದನ್ನು ವಿರೋಧಿಸಲಾಗುತ್ತಿತ್ತು. ಪ್ರಸಿದ್ಧ ಬರಹಗಾರನಾದ ಎಡ್ಮಂಡ್ ಬರ್ಕ್ ಕೂಡ ಇಂಗ್ಲೆಂಡ್‌ನ ಪಾರ್ಲಿಮೆಂಟ್‌ನಲ್ಲಿ ವಸಾಹತುಶಾಹಿಯ ಭ್ರಷ್ಟ ಕ್ರೂರ ಮುಖದ ಬಗ್ಗೆ ಅದ್ಭುತವಾಗಿ ಮಾತನಾಡಿದ್ದ. ಇಪ್ಪತ್ತನೆಯ ಶತಮಾನದ ಆದಿಯಿಂದ ಹೋಮ್‌ರೂಲ್‌ಗೆ ಬೆಂಬಲಕೊಡುವ ಕೆಲವು ಆಯೋಗದ ಶಿಫಾರಸ್ಸುಗಳನ್ನು ಕೂಡ ತಿರುಚಲಾಯಿತು. ಹೀಗಾಗಿಯೇ ಮಹಾಯುದ್ಧದ ಕಾಲದಲ್ಲಿ ಗಾಂಧಿಯವರು ಅಸಹಕಾರದ ಸತ್ಯಾಗ್ರಹಗಳನ್ನು ಆರಂಭಿಸಿದರು. ತಮ್ಮ ಅನುಯಾಯಿಗಳು ಹಿಂಸೆಯನ್ನು ಕೈಕೊಂಡಾಗ ಗಾಂಧಿ ಚಳುವಳಿಗಳನ್ನು ವಾಪಸ್ಸು ತೆಗೆದುಕೊಂಡಿದ್ದನ್ನು ಡ್ಯೂರಂಟ್ ಆಳವಾದ ಮೆಚ್ಚುಗೆಯಿಂದ ಗುರುತಿಸುತ್ತಾರೆ. ಅವರಿಗೆ ಇದು ಪಶ್ಚಿಮ ಹಾಗೂ ಭಾರತೀಯ ನಾಗರೀಕತೆಗಳ ವಿಭಿನ್ನತೆಯಾಗಿಯೂ ಕಾಣುತ್ತದೆ. ಏಕೆಂದರೆ ಬ್ರಿಟಿಷ್ ಸರಕಾರವು ಸತ್ಯಾಗ್ರಹಿಗಳ ಮೇಲೆ ನಡೆಸಿದ ಹಿಂಸೆಯು ಗಾಂಧಿಯವರ ಅಹಿಂಸಾವಾದದ ಕ್ರೂರ ಅಣಕವಾಗಿತ್ತು. ಅವರ ಪ್ರಕಾರ ವಸಾಹತುಶಾಹಿಯಿಂದಾಗಿ ಭಾರತವೂ ಕೂಡ ಪಶ್ಚಿಮದ ಆದರ್ಶಗಳನ್ನು 'ಸ್ವೀಕರಿಸಿ ಮತ್ತವಾಗಿದೆ'. ಈ ಮದವನ್ನು ಗಾಂಧಿ ಚಿಂತನೆ ಮಾತ್ರ ಪರಿಹರಿಸಬಲ್ಲದು.

ಕೃತಿಯ ಸಮಾರೋಪದಲ್ಲಿ ಡ್ಯೂರಂಟ್ ತಕ್ಷಣವಲ್ಲದಿದ್ದರೂ ಆದಷ್ಟು ಬೇಗನೆ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವುದರಿಂದ ಎರಡೂ ದೇಶಗಳಿಗೆ ಒಳಿತು ಎನ್ನುತ್ತಾರೆ. ಇಲ್ಲದಿದ್ದರೆ ಇಂಗ್ಲೆಂಡ್ ಬಗ್ಗೆ ಇರುವ ಸಕಾರಣವಾದ ದ್ವೇಷವು ಗಾಂಧಿಯನ್ನು ಮೀರಿ ಹಿಂಸಾತ್ಮಕ ಪರಿಹಾರವನ್ನು ಹುಡುಕಬಹುದು. ಆದರೆ ಡ್ಯೂರಂಟ್ ಕೂಡ dominion status ಅಥವಾ ಆನಂತರ ಹುಟ್ಟಿಕೊಂಡ commonwealth ದೇಶಗಳ ಪರಿಕಲ್ಪನೆಯನ್ನು ಸಮರ್ಥಿಸುತ್ತಾರೆ. ವಿಶ್ವದ ಮುಂಚೂಣಿ ಅರ್ಥವ್ಯವಸ್ಥೆಯಾಗಿ ನಾಲ್ಕೇ ವರ್ಷದಲ್ಲಿ ಭಾರತವನ್ನು ಬದಲಾಯಿಸ ಹೊರಟವರು ತೀವ್ರ ಬಡತನ ಹಾಗೂ ಮಾನವನಿರ್ಮಿತ ದುರಂತಗಳು ಹೇಗೆ ಉಂಟಾಗುತ್ತವೆಯೆನ್ನುವುದನ್ನು ಈ ಕೃತಿಯಿಂದ ಕಲಿಯಬೇಕಿದೆ.




(ನಿವೃತ್ತ ಇಂಗ್ಲಿಷ್ ಅಧ್ಯಾಪಕರಾದ ಶಿವಮೊಗ್ಗ ನಿವಾಸಿ ರಾಜೇಂದ್ರ ಚೆನ್ನಿಯವರು ನಮ್ಮ ಹಿರಿಯ ಸಾಹಿತ್ಯ ಮತ್ತು ರಾಜಕೀಯ ಚಿಂತಕರು)

ಪುಸ್ತಕಾವಲೋಕನ

ಪು. ವಿಜಯಾ ಶ್ರೀಧರ್ ಸಮಗ್ರ ಕಥೆಗಳು ಪ್ರ: ಸ್ನೇಹ ಪಬ್ಲಿಷಿಂಗ್ ಹೌಸ್, ಬೆಂಗಳೂರು ಪು: ೫೦೦ ಬೆಲೆ: ರೂ. ೪೦೦/–

ಸರಳತೆಯೇ ಶಕ್ತಿ ಮತ್ತು ಮಿತಿಗಳು



ತೊಂಬತ್ತರ ದಶಕದಲ್ಲಿ ಕಥೆಗಳನ್ನು ಬರೆಯಲಾರಂಭಿಸಿದ ಶ್ರೀಮತಿ ವಿಜಯಾ ಶ್ರೀಧರ್ ಅವರ ಕತೆಗಳು ಇಲ್ಲಿ ಒಂದೆಡೆಗೆ ಸಂಕಲಿತಗೊಂಡಿವೆ. ಬಹುತೇಕ ಇವು ನಿಯತಕಾಲಿಕೆಗಳಿಗಾಗಿ ಬರೆದುವಾದವುಗಳಾದ್ದರಿಂದ ಸಹಜವಾಗಿಯೇ ಪುಟಮಿತಿಯನ್ನೂ ಸೀಮಿತ ಚೌಕಟ್ಟನ್ನೂ ತಮಗೆ ತಾವೇ ಹಾಕಿಕೊಂಡುಬಿಟ್ಟಿವೆ. ಹೀಗಾಗಿ ಈ ಕಥೆಗಳು ತುಂಬ ಮಹತ್ವಾಕಾಂಕ್ಷಿಯಾದ ಕಥೆಗಳಲ್ಲ. ಕಥೆಗಳನ್ನು ಕಲಾತ್ಮಕವಾಗಿ ಕಟ್ಟಬೇಕೆನ್ನುವ ಪ್ರಜ್ಞಾಪೂರ್ವಕತೆಯಿಲ್ಲದೆ ತವುಗನ್ನಿಸಿದ, ತಾವು ನೋಡಿದ ಜೀವನದ ಅನುಭವಗಳನ್ನು ಸರಳವಾಗಿ ನಿರೂಪಿಸಿದ್ದಾರೆ. ಹೀಗಾಗಿ ಸರಳತೆಯೇ ಈ ಕಥೆಗಳ ಶಕ್ತಿ ಮತ್ತು ಮಿತಿ ಎಂದು ಹೇಳಬಹುದು.

'ಕಳೆದುಕೊಂಡದ್ದು', 'ಕನ್ನಡಿಯಲ್ಲಿ ಕಂಡಾಗ', 'ನವನೀತ', 'ಆತಂತಾತನ ಹಸ್ತಾರಿಂಭ' ಹೀಗೆ ನಾಲ್ಕು ಸಂಕಲನಗಳಲ್ಲದೆ, ಬಿಡಿ ಕತೆಗಳು ಸಹ ಪ್ರಸ್ತುತ ಸಂಕಲನದಲ್ಲಿ ಅಡಕಗೊಂಡಿವೆ. ಮೂರು ದಶಕಗಳ ಒಟ್ಟು ಕಥೆಗಳ ಗತಿಯನ್ನು ಗಮನಿಸಿದರೆ ಕೆಲವು ಸಾಮಾನ್ಯ ಚಹರೆಗಳು ಕಾಣುತ್ತವೆ. ವಿಜಯಾ ಅವರ ಕಥೆಗಳಲ್ಲಿ ಪ್ರಧಾನವಾಗಿರುವುದು ಹೆಣ್ಣುಗಳು. ಅವರ ಕಥಾವಸ್ತುಗಳು ಹೆಣ್ಣಿನ ಜೀವನಕ್ಕೆ ಸಂಬಂಧಪಟ್ಟವೇ ಆಗಿರುತ್ತವೆ. ಇದೇನೂ ವಿಶೇಷವಲ್ಲ. ಈ ಕಥೆಗಳಲ್ಲಿ ಬರುವ ತಾಯಂದಿರು, ಹೆಂಡತಿಯರು ಜೀವನದಲ್ಲಿ ನುರಿತವರು, ಅನುಭವ ಪಡೆದವರು. ಆದರೆ ಈ ಹೆಣ್ಣಿನ ಅನುಭವಗಳು ಸಂಘರ್ಷದ ಅನುಭವಗಳನ್ನು ಒಳಗೊಂಡರೂ ಸಹ ಕೊನೆಗೆ ಕುಟುಂಬ ಸಾಮರಸ್ಯದ ನೆಲೆಗೆ ಬಂದು ಸಂಘರ್ಷದ ಭಾವಗಳನ್ನು ತಣಿಸಿಬಿಡುತ್ತವೆ. ಹೀಗಾಗಿ ವಿಜಯಾ ಅವರು ತಮ್ಮ ಕಥೆಗಳ ಮೂಲಕ ಹೇಳುವ ಮೌಲ್ಯಗಳು ಪುನಾ ಒಂದು ಗತಿ ಹಿಂದಕ್ಕೆ ಬಂದು ನಿಂತುಬಿಟ್ಟಂತೆ ಅನಿಸುತ್ತವೆ. ಉದಾಹರಣೆಗೆ 'ನವನೀತ' ಕಥೆಯಲ್ಲಿ ಮೂರು ಮಕ್ಕಳ ತಾಯಿ ಹೊರಗೆ ಸ್ತ್ರೀಸ್ವಾತಂತ್ರ್ಯದ ಬಗೆಗೆ ಭಾಷಣ ಮಾಡುತ್ತಾ ಇರುತ್ತಿದ್ದವಳು ಇದ್ದಕ್ಕಿದ್ದಂತೆ ತನ್ನ ಹೆಣ್ಣುಮಕ್ಕಳ ಬಗೆಗೆ ವ್ಯವಸ್ಥೆಯ ರೂಢಿಗತ ಧೋರಣೆಯಲ್ಲಿಯೇ ಯೋಚಿಸತೊಡುಗುವುದನ್ನು ಕಾಣಬಹುದು. ಆದರೆ 'ವಿಶ್ವಮಿತ್ರಾ ಗೋತ್ರ ಸಮಾಗತಾ' ಎನ್ನುವ ಕಥೆಯ ನಾಯಕಿ ಪ್ರಜ್ಞಾ, ಪಿತೃಪ್ರಧಾನ ವ್ಯವಸ್ಥೆಯ ಭಾಗವಾಗಲು ಮನಸ್ಸೊಪ್ಪದೆ ಇದ್ದರೂ ಅದೇ ವ್ಯವಸ್ಥೆಯ ಜೊತೆಗೆ ರಾಜಿಯಾಗಬೇಕಾಗುತ್ತದೆ. ಅವಳ ನಿಲುವು, ಧೋರಣೆಗಳನ್ನು ನುಂಗಿ ನೊಣೆಯುವಂತೆ ಅವಳ ಗಂಡನ ಮನೆಯವರು ತಮ್ಮ ಗೋತ್ರದವಳನ್ನಾಗಿ ಮಾಡಿಕೊಳ್ಳುವ ವಿಷಾದದ ಚಿತ್ರಣವಿದೆ. ಅಂದರೆ ಪಿತೃಪ್ರಧಾನ ವ್ಯವಸ್ಥೆಯನ್ನು ಗುರುತಿಸಿಕೊಂಡರೂ ಅದಕ್ಕೆ ಸರಿಯಾಗಿ ಮುಖಾಮುಖಿಯಾಗಲು ಬೇಕಾಗುವ ಪೂರ್ವಸಿದ್ಧತೆ ಕಾಣುವುದಿಲ್ಲ. ಆದರೆ ಅವರ 'ಸರ್ವಮಂಗಳೆ' ಕಥೆ ಮಾತ್ರ ಸಾಧಾರಣ ಜಾಡಿನಲ್ಲೇ ನಡೆದರೂ ಹೆಂಗಸಿನ ತಾಯ್ತನದ ಘನತೆಯನ್ನು ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿದೆ. ಹೀಗೆ ಅನೇಕ ಸುಂದರ ಅನುಭವಗಳ ನಿರೂಪಣೆಯಲ್ಲಿ ವಿಜಯಾ ಅವರಿಗೆ ಆಸಕ್ತಿ. ಜೊತೆಗೆ ಸಣ್ಣದಾಗಿ ಶೃತಿಗೂಡುವ ವಿಷಾದವನ್ನು ಅವರ ಕತೆಗಳು ಹೊಂದಿವೆ. ಇವು ಪಿಸುಮಾತಿನ ಮಟ್ಟಿಗೆ ಸಣ್ಣದಾಗಿ ಹುಟ್ಟಿ ಅಲ್ಲಿಯೇ ಅಡಗುವಂತವು. ಬದುಕಿನ ದೊಡ್ಡ ತಾತ್ವಿಕ ಪ್ರಶ್ನೆಗಳಿಗಿಂತ ಸಣ್ಣಪುಟ್ಟ ಸಂಗತಿಗಳ ಹೊಳಹುಗಳಲ್ಲಿಯೇ ತೃಪ್ತಿ ಕಂಡುಕೊಳ್ಳುವುದೇ ವಿಜಯಾ ಅವರ ಕಥೆಗಳ ಒಟ್ಟಾರೆ ನಿಲುವು.

ವಸುಮತಿ ಉಡುಪ, ಪ್ರೇಮಾಭಟ್, ಮುಂತಾದವರಂತೆ ಸಣ್ಣಕತೆಗಳನ್ನು ವಿಫುಲವಾಗಿ ಬರೆದಿರುವ ವಿಜಯಾ ಶ್ರೀಧರ್ ಅವರು ಪ್ರಬಂಧದ ಲಘುಧಾಟಿಯಲ್ಲಿ ಸ್ವಾರಸ್ಯಕರವಾಗಿ ಕಥೆ ಹೇಳಬಲ್ಲರು. ಆದರೆ ಕನ್ನಡ ಕಥಾಪರಂಪರೆಯಲ್ಲಿ ನಡೆದ ಪ್ರಯೋಗಗಳು, ಕಥಾತಂತ್ರದ ಬಳಕೆ ಇವುಗಳು ಅವರ ಕಥೆಗಳಲ್ಲಿ ಗೈರುಹಾಜರಾಗಿವೆ. ತಾವು ಕಂಡದ್ದನ್ನು ಮನಮುಟ್ಟುವಂತೆ ಹೇಳುವುದಕ್ಕೆ ಅವರು ತಮ್ಮ ಕಥನಾಶಕ್ತಿಯನ್ನು ಮಿತಿಗೊಳಿಸಿಕೊಂಡಿದ್ದಾರೆ. ಆದಕಾರಣವೇ ಅವರ ಮೂರು ದಶಕಗಳ ಕತೆಗಳು ಅಲ್ಲಿಂದ ಇಲ್ಲಿಯವರೆಗು ಒಂದೇ ಧಾಟಿಯಲ್ಲಿ ನಿರೂಪಿತವಾಗಿವೆ.

–ಆರ್.ತಾರಿಣಿ ಶುಭದಾಯಿನಿ

ಪು: ಶಂಕರ ವಿಹಾರ ಲೇ: ಅಕ್ಷರ ಕೆ.ವಿ. ಪ್ರ; ಅಕ್ಷರ ಪ್ರಕಾಶನ ಹೆಗ್ಗೋಡು ಪು: ೧೮೪ ಬೆಲೆ: ರೂ. ೧೮೦/-

ಅನಿರ್ವಚನೀಯವನ್ನು ನಿರ್ವಚಿಸುವ ಕಷ್ಟ ಕೋಟಲೆಗಳು



ಈ ಪುಸ್ತಕ ಭಾರತೀಯ ದರ್ಶನಗಳ ಕೇಂದ್ರ ತತ್ವವೆನಿಸಿರುವ ಅದ್ವೈತ ತತ್ವವನ್ನು ಅದರೆಲ್ಲ ಅನ್ವಯ-ಆವರಣಗಳೊಂದಿಗೆ ನಿರೂಪಿಸುವ ಒಂದು ಮಹತ್ವಾಕಾಂಕ್ಷೆಯ ಪ್ರಯತ್ನವಾಗಿದೆ. ನಮ್ಮ ದರ್ಶನಗಳೆಲ್ಲವೂ-ಬಹುಪಾಲು ವೈದಿಕವೆನ್ನಿಸಿಕೊಂಡವು-ಅವುಗಳ ನಿರೂಪಣೆಗೇ ಸಿದ್ಧವಾದ ಭಾಷೆಯಂತಿರುವ ಸಂಸ್ಕೃತದಲ್ಲೇ ಇರುವುದರಿಂದ ಅವನ್ನು ಕನ್ನಡದಂತಹ ಸಾಮಾನ್ಯರ ಭಾಷೆಯಲ್ಲಿ ಸ್ಫುಟವಾಗಿ ನಿರೂಪಿಸುವುದು ಬಹು ಕಷ್ಟದ ಕೆಲಸವೇ. ಆದರೆ ಅಕ್ಷರ ಅವರು ಅದನ್ನು ಸಾಕಷ್ಟು ಸಮರ್ಥವಾಗಿಯೇ ಮಾಡಿದ್ದಾರೆನ್ನಬಹುದು. ವಿಶೇಷವಾಗಿ, ಆದಿ ಶಂಕರರು ವೇದೋಪನಿಷತ್ತುಗಳಲ್ಲಿರುವ ಅದ್ವೈತ ತತ್ವಸಾರವನ್ನು ಸಂಗ್ರಹಿಸಿ ಅದನ್ನು ಒಂದು ಸ್ವಯಂಪೂರ್ಣ ಸಿದ್ಧಾಂತವಾಗಿ ಮಂಡಿಸಲು ಆವರೆಗಿನ ಭಾರತೀಯ ದರ್ಶನ-ಸಿದ್ಧಾಂತಗಳಿಗೆ ಮುಖಾಮುಖಿಯಾಗಿ ನಡೆಸಿರುವ ತತ್ವವಿಮರ್ಶೆಯನ್ನು ವಿವರಿಸುವಲ್ಲಿ ಕಾಣುವ ಲೇಖಕರ ಅಪಾರ ಓದು ಮತ್ತು ಭಾಷಾ ಕೌಶಲ ಮೆಚ್ಚುವಂಥದ್ದೇ ಆಗಿದೆ. ಆದರೆ ಅದ್ವೈತ ತತ್ವವು ಶಂಕರರ ಕಾಲದಿಂದಲೂ ಒಳಗಾಗುತ್ತಿರುವ ಹಲವು ಟೀಕೆ, ವಿರೋಧ, ವಿಸ್ತರಣೆಗಳಿಗೆ ಕಾರಣವಾಗಿರುವ ಅಂಶಗಳನ್ನು ಚರ್ಚಿಸುವಾಗ ಅಕ್ಷರ ಅವರು ಅನುಸರಿಸುವ ಅನುಸಂಧಾನ ಮಾರ್ಗ ಸಾಕಷ್ಟು ಸಮಸ್ಯಾತ್ಮಕವಾಗಿದೆ ಎಂಬುದನ್ನೂ ಇಲ್ಲಿ ಹೇಳಬೇಕು. ಹಾಗಾಗಿಯೇ ಈ ದೇಶದಲ್ಲಿನ ಬಹುತತ್ವಗಳ ಸಹಬಾಳ್ವೆ ಕುರಿತು ಅವರು ವ್ಯಕ್ತಪಡಿಸುವ ಸಹಾನುಭೂತಿಯ ಹೊರತಾಗಿಯೂ, ಶಂಕರ ಪ್ರಣೀತ ಅದ್ವೈತವು ತಮ್ಮ ಕುಲ ನಂಬಿಕೆಯೂ ಹೌದೆಂದು ಹೇಳುವ ಅಭಿಮಾನದ ನಿರೂಪಣೆಯಲ್ಲಿ ಹಲವು ತಾತ್ವಿಕ ಸಂದಿಗ್ಧತೆಗಳು ಎದ್ದು ಕಾಣುತ್ತವೆ. ಇದು ಅನಿರ್ವಚನೀಯವೆಂದು ಹೇಳಲಾಗುವ ಸತ್ಯವನ್ನು ಭಾಷೆಯ ಮೂಲಕ ನಿರ್ವಚನಗೊಳಿಸುವ ಪ್ರಯತ್ನದಲ್ಲಿ ಸಹಜವೂ ಹೌದು. ಅದೇ ವೇಳೆಗೆ ಅದು ನಿಜ ಮೌನದ ಅರ್ಥವನ್ನು ಬೌದ್ಧಿಕವಾಗಿ ಅರಿತ, ಆದರೆ ಆಚರಿಸಲಾಗದ ಮತ್ತು ಲೇಖಕರೇ ಈ ಪುಸ್ತಕದಲ್ಲಿ ನೆಪ ಸಿಕ್ಕೆಡೆಯಲ್ಲೆಲ್ಲಾ ಸಾರಾ ಸಗಟಾಗಿ ಟೀಕಿಸುವ ಆಧುನಿಕ ಭಾರತೀಯ ಬುದ್ಧಿಜೀವಿಯ ಪೀಕಲಾಟವೂ ಹೌದು.


ಅಕ್ಷರ ಅವರು ಈ ಪುಸ್ತಕದಲ್ಲಿ ವಿಭಿನ್ನ ನೋಟಗಳ ಭಾರತೀಯ ದರ್ಶನಗಳು ಜಗಳವೂ ಅಲ್ಲದ ಜುಗಲಬಂದಿಯೂ ಅಲ್ಲದ ಸಂಬಂಧದ ಸ್ವರೂಪವನ್ನು ಆಧುನಿಕರು ಅರ್ಥ ಮಾಡಿಕೊಳ್ಳಲಾಗದಿರುವ ಕಾರಣವನ್ನು ಪಶ್ಚಿಮದ ಇಮ್ಯಾನುಯಲ್ ಕಾಂಟ್‌ನ ವೈಚಾರಿಕತೆಯ ವಿಧಾನದಲ್ಲಿನ ದ್ವಿದಳ ನೋಟದ ಪ್ರಭಾವದಲ್ಲಿ ಕಾಣುತ್ತಾರೆ. ಆದರೆ ಈ ಸಂಬಂಧ ಸ್ವರೂಪ ಇಲ್ಲಿ ನಿರೂಪಿತವಾಗಿರುವ ರೀತಿ ಸಡಿಲ ತತ್ವಗಳ ಸುಲಭ ಹೊಂದಾಣಿಕೆಯಂತೆ ಮಾತ್ರ ಕಾಣುತ್ತದೆ.. ಬದುಕಿನ ಅರ್ಥವನ್ನು ಅನ್ವೇಷಿಸುವ ಅತ್ಯಂತ ಗಂಭೀರ ವ್ಯವಹಾರವಾದ ದರ್ಶನಗಳನ್ನು ದೇವೇಗೌಡರಂಥವರ 'ಧಾರ್ಮಿಕತೆ'ಯ ಮೊರೆ ಹೊಕ್ಕು ಕುಟ್ಟುವ ಮಾತಿನ ಮಂಟಪದ ಮೂಲಕ ಹೊಂದಾಣಿಸುವ ಉದ್ದೇಶವಾದರೂ ಏನು? ಭಾರತೀಯ ದರ್ಶನ ಪರಂಪರೆ ಪಶ್ಚಿಮದ ತತ್ವಶಾಸ್ತ್ರೀಯ ಪರಂಪರೆಗಿಂತ ಸಾಮಾಜಿಕವಾಗಿ ಶ್ರೇಷ್ಠವೆಂದು ಸಾಧಿಸುವುದೇ? ಅಂತಹ ಉದ್ದೇಶ ಈ ಪುಸ್ತಕದಲ್ಲಿ ಕಂಡೂ ಕಾಣದಂತೆ ಹರಿದಾಡುತ್ತಾ ಪುಸ್ತಕದ ದಿಗಂತ ದೃಷ್ಟಿಯನ್ನೇ ವಿಚಲಿತಗೊಳಿಸಿಬಿಟ್ಟಿದೆ.

ಅಕ್ಷರ ಅವರು ಪಶ್ಚಿಮದ ನೋಟಕ್ರಮ ಐಡಿಯಾಲಜಿಕಲ್; ಆದರೆ ನಮ್ಮದು ದರ್ಶನದ್ದು ಎನ್ನುತ್ತಾರೆ. ಆದರೆ ನಮ್ಮ ದರ್ಶನಗಳೂ ಕಾಲದಲ್ಲಿ ತುಕ್ಕು ಹಿಡಿದು ಐಡಿಯಾಲಜಿಗಳೇ ಆಗಿ ಮಾರ್ಪಟ್ಟು ಹಲವು ಸಾಮಾಜಿಕ ವಿಷಮತೆಗಳಿಗೆ ಕಾರಣವಾಗಿವೆ ಅಲ್ಲವೆ? ಶಂಕರಾಚಾರ್ಯರ ಕಾಲದಲ್ಲಿ ಯಾಕೆ ಜಾತಿಗಳಿದ್ದವೋ, ಅವರೇಕೆ ಅವುಗಳನ್ನನುಸರಿಸಿ ನೀತಿ ನಿಯಮಗಳನ್ನು ಹೇಳಿದರೋ ತಿಳಿಯದು. ಆದರೆ ಅವರ ತತ್ವ ಮಾತ್ರ ಅದ್ಭುತವಾದದ್ದು ಎನ್ನುವ ಲೇಖಕರ ವಾದ ಅವರು 'ಶಂಕರ ವಿಜಯ' ಎನ್ನುವ ಪುರಾಣವನ್ನು ಇಲ್ಲಿ ಪ್ರಸ್ತುತಪಡಿಸಿರುವ ಮತ್ತು ಮುಖಪುಟವನ್ನು ರವಿವರ್ಮನ ವರ್ಣನಾತ್ಮಕ ಚಿತ್ರದಿಂದ ಸಜ್ಜುಗೊಳಿಸಿರುವ ರೀತಿ ಈ ಪುಸ್ತಕದ ಒಟ್ಟು ಉದ್ದೇಶವನ್ನೇ ಸಂಕುಚಿತಗೊಳಿಸುವಂತಿದೆ. ಬುದ್ಧನ ಅನಾತ್ಮವಾದವು ಶಂಕರರ ಆತ್ಮವಾದದಿಂದ ವ್ಯಧಾನಿಕವಾಗಿ ಮಾತ್ರ ಭಿನ್ನವೆಂದು ತಿಳಿಯುವುದರಿಂದ ಉಂಟಾಗುವ ಸಮಸ್ಯೆ ಇದು ಇರಬಹುದು. ಅಂದಹಾಗೆ ಇಲ್ಲಿನ ಮುಖ್ಯ ಚರ್ಚೆಯಲ್ಲಿ ಜೈನ ದರ್ಶನ ಬಿಟ್ಟುಹೋಗಿದೆ ಏಕೆ?

-ಡಿಎಸ್ಸೆನ್

ಪು: ಶಿಖರ ಸಾಲು (ಶಿಖರ ವ್ಯಕ್ತಿಗಳ ಚಿತ್ರಣ) ಲೇ: ಜಿ.ಪಿ ಬಸವರಾಜು ಪ್ರ: ಸಂಸ್ಕೃತಿ ಬುಕ್ ಏಜೆನ್ಸಿ, ಮೈಸೂರು ಪು: ೨೨೪ ಬೆಲೆ :ರೂ. ೨೦೦/-

ಆಯ್ದ ಸಾಧಕರ ಆಪ್ತ ಚಿತ್ರಣ



ತಮ್ಮ ತಮ್ಮ ಆಸಕ್ತ ಕ್ಷೇತ್ರಗಳಲ್ಲಿ ಅಗಾಧ ಸಾಧನೆ ಮಾಡಿದ ಸಾಧಕರನ್ನು ಅಪಾರ ಮೆಚ್ಚುಗೆ, ಅಭಿಮಾನ ಮತ್ತು ಬೆರಗಿನಿಂದ ನೋಡಿ ಅವರ ಜೀವನ-ಸಾಧನೆಗಳನ್ನು ತಮ್ಮದೇ ಶೈಲಿಯಲ್ಲಿ ಬರೆದ ಜಿ.ಪಿ ಬಸವರಾಜು ಅವರ ಈ ಪುಸ್ತಕ ತನ್ನ ಆಪ್ತತೆಯಿಂದಾಗಿ ನಮ್ಮ ಗಮನ ಸೆಳೆಯುತ್ತದೆ. ಪುಸ್ತಕದ ಶಿರೋನಾಮೆಯೇ ತಿಳಿಸುವಂತೆ ಇದು ಮೇರು ಸಾಧಕರ ಜೀವನ-ಸಾಧನೆಗಳನ್ನು ದಾಖಲಿಸುವ, ತನ್ಮೂಲಕವಾಗಿ ನಮ್ಮ ದೇಶ-ರಾಜ್ಯದ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸುವ ಒಂದು ಪ್ರಯತ್ನ. ಇಲ್ಲಿ ಸಾಧಕರ ವೈಯಕ್ತಿಕ ಸಾಧನೆಯ ಜೊತೆಗೆ ಆ ಕಾಲಘಟ್ಟದ ಹಲವಾರು ಪ್ರಮುಖ ಅಂಶಗಳು ಕೂಡಾ ಮುನ್ನೆಲೆಗೆ ಬಂದಿವೆ. ಒಟ್ಟು ಐದು ಭಾಗಗಳಲ್ಲಿ ಸಂಗೀತ, ಸಾಹಿತ್ಯ, ರಂಗಭೂಮಿ, ಸಾಮಾಜಿಕ ಚಳವಳಿ, ಛಾಯಾಚಿತ್ರಗ್ರಹಣ, ರಾಜಕೀಯ ಹಾಗೂ ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಾಮಾಣಿಕವಾಗಿ ಮತ್ತು ನಿಸ್ವಾರ್ಥವಾಗಿ ತಮ್ಮನ್ನು ತೊಡಗಿಸಿಕೊಂಡ ಹಲವರ ಜೀವನ ಕ್ರಮ ಮತ್ತು ಜೀವನಶ್ರದ್ಧೆ ವಿವರವಾಗಿ ನಿರೂಪಿತವಾಗಿದೆ.

ಹೀಗೆ ಮಹಾನ್ ಸಾಧಕರ ಜೀವನ-ಸಾಧನೆಯನ್ನು ಕುರಿತು ದಾಖಲಿಸುವಾಗ ಲೇಖಕರು ತಮ್ಮ ದೃಷ್ಟಿಕೋನದ ಜತೆಗೆ ಆಯಾ ಸಾಧಕರ ರಾಜಕೀಯ-ಸಾಮಾಜಿಕ ದೃಷ್ಟಿಕೋನವನ್ನು ಬೆರೆಸಿ ವ್ಯಕ್ತಿಚಿತ್ರ ಕಟ್ಟುತ್ತಾರೆ. ಹಾಗಾಗಿ ಇದು ಒಂದು ಕಾಲಧರ್ಮದ ದಾಖಲೆಯೂ ಹೌದು. ಉದಾಃ ರಂಗಕರ್ಮಿ ರಘುನಂದನ ಅವರನ್ನು ಕುರಿತ ಬರಹದಲ್ಲಿ ರಘುನಂದನ ಅವರು ರಂಗಭೂಮಿ ಮತ್ತು ಸಮಕಾಲೀನ ಸಮಾಜದ ವೈರುಧ್ಯಗಳನ್ನು ತೆರೆದಿಟ್ಟ ರೀತಿಯನ್ನು ದಾಖಲಿಸುತ್ತಾರೆ. ಅವರು ಹೇಳುವಂತೆ ಸಮಕಾಲೀನ ರಂಗಭೂಮಿಯಲ್ಲಿ ರಾಜಕೀಯ ಪ್ರಜ್ಞೆ ಗಣನೀಯವಾಗಿ ಕಡಿಮೆಯಾಗಿದೆ ಮತ್ತು ರಂಗಭೂಮಿಯು ಕಾರ್ಪೊರೇಟ್ ಶಕ್ತಿಗಳ ಬಂಡವಾಳಕ್ಕೆ ಶರಣಾಗುತ್ತಿದೆ (ಪು-162). ಪುಸ್ತಕದುದ್ದಕ್ಕೂ ಈ ಬಗೆಯ ವ್ಯಕ್ತಿಗಳ ರಾಜಕೀಯ ಪ್ರಜ್ಞೆ, ಸಾಮಾಜಿಕ ಹಿನ್ನಲೆ, ಬೆಳೆದುಬಂದ ದಾರಿ ಹಾಗೂ ಎದುರಿಸಿದ ಸವಾಲುಗಳನ್ನು ದಾಖಲಿಸುವ ಕೃತಿ ಇದು. ಶ್ರೇಷ್ಠ ಸಂಗೀತಗಾರರಾದ ಪಂ.ರಾಜಗುರು, ಪಂ.ರಾಜೀವ ತಾರಾನಾಥರಿಂದ ಹಿಡಿದು ರೈತನಾಯಕ ಕಡಿದಾಳು ಶಾಮಣ್ಣ, ರಾಜಕಾರಣಿ ಬಾಬು ಜಗಜೀವನ ರಾಂ, ಪತ್ರಕರ್ತ ಖುಶ್ವಂತ್ ಸಿಂಗ್, ವಿಮರ್ಶಕರಾದ ಜಿ.ಎಚ್ ನಾಯಕ, ಪ್ರಕಾಶಕ ಡಿವಿಕೆ ಮೂರ್ತಿ, ಛಾಯಾಗ್ರಹಕ ಟಿ.ಎಸ್ ಸತ್ಯನ್ ಹೀಗೆ ಸಾಲು ಸಾಲು ಸಾಧಕರ ಜೀವನದ ಲಯಗಳು, ಸಾಧನೆಯ ಕಷ್ಟಗಳು ಇಲ್ಲಿ ದಾಖಲಾಗಿವೆ. ವ್ಯಕ್ತಿಗಳ ವೈಯಕ್ತಿಕ ವಿವರಗಳನ್ನು ವಿಶಾಲವಾದ ಸಾಮಾಜಿಕ ವಿನ್ಯಾಸದ ಹಿನ್ನಲೆಯಲ್ಲಿ ಬಹಳ ಮೆಚ್ಚುಗೆಯಿಂದ ನೋಡಲಾಗಿದೆ.

ಕೆಲವೊಂದು ಚಿತ್ರಣಗಳಲ್ಲಿ ಅತಿ ನಾಟಕೀಯತೆ ಹಾಗೂ ಸ್ವ ವ್ಯಕ್ತಿತ್ವ ಅಗತ್ಯಕ್ಕಿಂತ ಹೆಚ್ಚಾಗಿ ಮುನ್ನಲೆಗೆ ಬಂದಿದೆ. 'ಉಗ್ರ ಚಳವಳಿಯ ಸೌಮ್ಯ ನಾಯಕ' ಭಾಗದಲ್ಲಿ ರೈತನಾಯಕ ರುದ್ರಪ್ಪನವರು ಪತ್ರಕರ್ತ ವೈಎನ್‌ಕೆ ಅವರಿಗೆ ರೈತ ಚಳವಳಿಯ ಸಂದರ್ಭದಲ್ಲಿ ಬೆಂಗಳೂರಿಗೆ ಹೋಗಲು ಅನುವು ಮಾಡಿಕೊಟ್ಟ ಪ್ರಸಂಗದಲ್ಲಿ ಈ ಅಂಶವನ್ನು ಗಮನಿಸಬಹುದು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವ್ಯಕ್ತಿ ಚಿತ್ರಗಳ ಅಥವಾ ಸ್ಥಳ ಪುರಾಣಗಳ ದಾಖಲೆ ಹೊಸತೇನಲ್ಲ. ನವೋದಯ ಕಾಲಘಟ್ಟದಲ್ಲಿ ಡಿ.ವಿ ಗುಂಡಪ್ಪ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ತರಹದ ಲೇಖಕರು ಹಾಕಿದ ಪರಂಪರೆ ಇದು. ನವ್ಯರ ಉಬ್ಬರದ ದಿನಗಳಲ್ಲಿ ಈ ಬಗೆಯ ವ್ಯಕ್ತಿಚಿತ್ರಗಳ ದಾಖಲೆಯನ್ನು ಅದು ತೀರಾ ವೈಯಕ್ತಿಕ ಎಂಬ ನೆಲೆಯಲ್ಲಿ ಉಪೇಕ್ಷಿಸಿದರೆಂದೆ ಹೇಳಬಹುದು. ಆದರೆ ಇತ್ತೀಚಿನ ವಿಮರ್ಶಾ ಸಿದ್ಧಾಂತಗಳು ವ್ಯಕ್ತಿಚಿತ್ರ ಅಥವಾ ಆತ್ಮಕಥನಗಳಂತ ರಚನೆಗಳನ್ನು ಸಮುದಾಯದ ಕಥನಗಳನ್ನಾಗಿಸಿ ಅಥವಾ ಸಾಮಾಜಿಕ ದಾಖಲೆಗಳಾಗಿ ನೋಡುವ ದೃಷ್ಟಿಕೋನವನ್ನು ರೂಪಿಸಿವೆ. ಇಲ್ಲಿನ ವ್ಯಕ್ತಿಚಿತ್ರಗಳು ಶ್ರೇಷ್ಠತೆಯ ಮಾನದಂಡವನ್ನೇ ಅವಲಂಬಿಸಿಲ್ಲ. ಬದಲಾಗಿ ಪ್ರಧಾನಧಾರೆ ಪರಂಪರೆ ಅಥವಾ ಚರಿತ್ರೆ ಪ್ರಯತ್ನಪೂರ್ವಕವಾಗಿ ಮರೆತಿರುವ ಅಂಶವನ್ನು ಮುನ್ನಲೆಗೆ ತರುವ ಯತ್ನ ಮಾಡುತ್ತವೆ.

ಒಟ್ಟಾರೆಯಾಗಿ ಈ ಕೃತಿ ವ್ಯಕ್ತಿ, ಸಾಧನೆ ಹಾಗೂ ಸಮಕಾಲೀನ ಸಮಾಜದ ಚಿತ್ರಣವನ್ನು ದಾಖಲಿಸುವ ಕೆಲಸ ಮಾಡುತ್ತವೆ.

-ಅವಿನಾಶ್ ಟಿ

ತಿಂಗಳ ಸಾಲುಗಳು...



ಹೊಸ ನಾಗರೀಕತೆಯ ನಿರ್ಮಾಣಕ್ಕೆ ಹೊರಟವರು ಸೋಲಿಸಲಷ್ಟೇ ಅಲ್ಲ, ಸೋಲಲೂ ಸಿದ್ಧವಾಗಿರಬೇಕು. ಸೋತು ಹೋರಾಟವನ್ನು ಮುಂದುವರೆಸಲು ಕೂಡ.. ಅಂತಿಮ ವಿಜಯ ಸಮಾಜವಾದದೇ ಆಗಿರುತ್ತದೆ. ಏಕೆಂದರೆ ಅದು ಮಾನವತೆಯ ಚಿರಂತನ ಮೌಲ್ಯಗಳನ್ನು ತನ್ನ ಆಧಾರ ತತ್ವಗಳನ್ನಾಗಿ ಹೊಂದಿದೆ..

–ರಾಮಮನೋಹರ ಲೋಹಿಯಾ

ಎಂಟನೇ ವರ್ಷವನ್ನು ಯಶಸ್ವಿಯಾಗಿ ಪೂರೈಸುತ್ತಿರುವ
'ಹೊಸ ಮನುಷ್ಯ' ಮಾಸಪತ್ರಿಕೆಗೆ ಹಾರ್ದಿಕ ಶುಭಾಷಯಗಳು

Regd. Newspaper RNI No.KARKAN/2012/47568 Rgd. No. KA/SMG-1209/2019-21